
ಗುರುವಾರ, ಡಿಸೆಂಬರ್ 16, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 347 | ಪುಟ 14
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಸ್ಪರ್ಧಾ ವಾಣಿ
ಕೇಂದ್ರ ಲೋಕಸೇವಾ ಆಯೋಗದ ನಾಗರಿಕ ಸೇವೆಗಳ ಮುಖ್ಯಪರೀಕ್ಷೆ 2022ರ ಜನವರಿ 7 ರಿಂದ 16ರವರೆಗೆ ನಡೆಯಲಿದೆ. ಈ ಹಿನ್ನೆಲೆಯಲ್ಲಿ ಪರೀಕ್ಷೆ ಎದುರಿಸಲು ಬೇಕಾದ ಅಗತ್ಯ ಸಿದ್ಧತೆ ಕುರಿತ ವಿವರ ಇಲ್ಲಿದೆ.

ಆಳ-ಅಗಲ: ಬಾಂಗ್ಲಾ ವಿಮೋಚನೆಗಾಗಿ ಯುದ್ಧ ಗೆದ್ದ ಭಾರತ
ಬಿಚ್ಚಿಕೊಳ್ಳಲಿದೆ 'ಬಹುಭಾಷಿಕ ಜಗತ್ತು' 11
ರೈಲು ವಿಳಂಬದಿಂದ ತಪ್ಪಿದ ಪರೀಕ್ಷೆ: 29ರಂದು ಮರು ಪರೀಕ್ಷೆ 6

ಸೆನ್ಸೆಕ್ಸ್	ನಿಫ್ಟಿ	₹/$
57,788	17,221	76.32

ಓಮೈಕ್ರಾನ್: ಸೋಂಕಿತರ ಸಂಖ್ಯೆ 67ಕ್ಕೆ ಏರಿಕೆ

ನವದೆಹಲಿ: ಕೋವಿಡ್–19 ರೂಪಾಂತರ ತಳಿ 'ಓಮೈಕ್ರಾನ್' ವೈರಾಣು ದೃಢಪಟ್ಟವರ ಸಂಖ್ಯೆ ದೇಶದಲ್ಲಿ ಬುಧವಾರ 67ಕ್ಕೆ ಏರಿದೆ.

ಆದರೆ, ಕೋವಿಡ್–19 ಪರೀಕ್ಷೆ ದೇಶದಲ್ಲಿ ಗಣನೀಯ ಪ್ರಮಾಣದಲ್ಲಿ ಏರಿಕೆಯಾಗಿಲ್ಲ ಎಂದು ವಿಜ್ಞಾನಿಗಳು ಮತ್ತು ಆರೋಗ್ಯ ಅಧಿಕಾರಿಗಳು ಹೇಳಿದ್ದಾರೆ.

ಕರ್ನಾಟಕ ಸೇರಿದಂತೆ ದೇಶದ ಎಂಟು ರಾಜ್ಯಗಳಲ್ಲಿ ಓಮೈಕ್ರಾನ್ ವೈರಾಣು ಪತ್ತೆಯಾಗಿದೆ. ಈ ಪೈಕಿ ಮಹಾರಾಷ್ಟ್ರದಲ್ಲಿ 32, ರಾಜಸ್ಥಾನದಲ್ಲಿ 17 ಮತ್ತು ದೆಹಲಿಯಲ್ಲಿ ಆರು ಜನರಲ್ಲಿ ಈ ವೈರಾಣು ಇರುವುದು ದೃಢಪಟ್ಟಿದೆ.

ವಿಶ್ವದ 60ಕ್ಕೂ ಹೆಚ್ಚು ದೇಶಗಳಲ್ಲಿ ಈ ತಳಿಯ ವೈರಾಣು ಕಾಣಿಸಿಕೊಂಡಿದೆ.

ಚಿನಕುರಳಿ
ಪ್ರಕಾಶ್ ಶೆಟ್ಟಿ



ಪರಿಷತ್: ಸಚಿವರ ವಿರುದ್ಧ ಭೂಕಬಳಿಕೆ ಆರೋಪ • ಕಾಂಗ್ರೆಸ್ ಸದಸ್ಯರ ಧರಣಿ

15 ಸದಸ್ಯರ ಅಮಾನತು

ಪ್ರಜಾವಾಣಿ ವಾರ್ತೆ

ಬೆಳಗಾವಿ (ಸುವರ್ಣ ವಿಧಾನಸೌಧ): ರಾಜ್ಯದ ಸಚಿವ ಮತ್ತು ಶಾಸಕರೊಬ್ಬರು ಬೆಂಗಳೂರಿನಲ್ಲಿ ಬಹುಕೋಟಿ ಮೌಲ್ಯದ ಭೂ ಕಬಳಿಕೆ ಮಾಡಿರುವ ಪ್ರಕರಣದ ತನಿಖೆಗೆ ಆಗ್ರಹಿಸಿ ವಿಧಾನಪರಿಷತ್ತಿನಲ್ಲಿ ಕಾಂಗ್ರೆಸ್ ಸದಸ್ಯರು ಪಟ್ಟು ಹಿಡಿದು ಧರಣಿ ನಡೆಸಿದ್ದು ಕೋಲಾಹಲಕ್ಕೆ ಕಾರಣವಾಯಿತು.

ಧಿಕ್ಕಾರ, ವಾಗ್ವಾದಗಳಿಂದ ಕಲಾಪ ಗೊಂದಲದ ಗೂಡಾಯಿತು. ಸಭಾಪತಿ ಬಸವರಾಜ ಹೊರಟ್ಟಿ ಧರಣಿ ಕೈಬಿಡಲು ಕೋರಿದರು. ಕಾಂಗ್ರೆಸ್ ಸದಸ್ಯರು ಒಪ್ಪದೇ ಇದ್ದಾಗ ವಿರೋಧ ಪಕ್ಷದ ನಾಯಕ ಎಸ್.ಆರ್. ಪಾಟೀಲ ಸೇರಿದಂತೆ 15 ಸದಸ್ಯರನ್ನು ಒಂದು ದಿನ ಮಟ್ಟಿಗೆ ಸಭಾಪತಿ ಕಲಾಪದಿಂದ ಅಮಾನತು ಮಾಡಿದರು.

ಸಚಿವ ಹಾಗೂ ಶಾಸಕರೊಬ್ಬರು ಭೂಕಬಳಿಕೆ ಮಾಡಿದ್ದಾರೆ ಎಂಬ ಆರೋಪದ ಕುರಿತು ಬೆಂಗಳೂರಿನ ಮ್ಯಾಜಿಸ್ಟ್ರೇಟ್ ನ್ಯಾಯಾಲಯ ಕ್ರಿಮಿನಲ್ ಪ್ರಕರಣ ದಾಖಲು ಮಾಡಿಕೊಂಡು ವಿಚಾರಣೆಗೆ ಆದೇಶಿಸಿದೆ. ಬೆಳಿಗ್ಗೆ ಕಲಾಪ ಆರಂಭವಾಗುತ್ತಿದ್ದಂತೆ, ಈ ಪ್ರಕರಣದ ಕುರಿತು ಚರ್ಚೆಗೆ ಅವಕಾಶ ಕೋರಿ ನಿಲುವಳಿ ಸೂಚನೆ ಮಂಡಿಸಲು ವಿರೋಧ ಪಕ್ಷದ ಮುಖ್ಯ ಸಚೇತಕ ಎಂ. ನಾರಾಯಣ ಸ್ವಾಮಿ ಮುಂದಾದರು. ಆದರೆ, ಸಭಾಪತಿ ಅವಕಾಶ ನಿರಾಕರಿಸಿದರು. ಆಗ, ಕಾಂಗ್ರೆಸ್ ಸದಸ್ಯರು ಸಭಾಪತಿ ಪೀಠದ ಎದುರು ಧರಣಿಗೆ ಮುಂದಾದರು. ಪ್ರಶ್ನೋತ್ತರ ಅವಧಿಯ ಬಳಿಕ ಚರ್ಚೆಗೆ ಅವಕಾಶ ನೀಡುವುದಾಗಿ ಹೊರಟ್ಟಿ ಅವರು ಮನವೊಲಿಸಿದರು.

ಪ್ರಶ್ನೋತ್ತರದ ಬಳಿಕ ಮತ್ತೆ ವಿಷಯ ಪ್ರಸ್ತಾಪಿಸಲು ನಾರಾಯಣಸ್ವಾಮಿ ಯತ್ನಿಸಿದರು. ಆಗ ಮಧ್ಯಪ್ರವೇಶಿಸಿದ ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ. ಮಾಧುಸ್ವಾಮಿ, 'ಪ್ರಕರಣ ನ್ಯಾಯಾಲಯದಲ್ಲಿದೆ. ಆ ಬಗ್ಗೆ ಸದನದಲ್ಲಿ ಚರ್ಚಿಸುವುದು ನ್ಯಾಯಾಂಗ ನಿಂದನೆ ಯಾಗುತ್ತದೆ. ಚರ್ಚೆಗೆ ಅವಕಾಶ ನೀಡಬಾರದು' ಎಂದರು. ಬಿಜೆಪಿಯ ಹಲವು ಸದಸ್ಯರು ಅದಕ್ಕೆ ದನಿಗೂಡಿಸಿದರು.

ಕಾಂಗ್ರೆಸ್ ಮತ್ತ ಬಿಜೆಪಿ ಸದ ಸ್ಯರು ತಮ್ಮ ನಿಲುವುಗಳನ್ನು ಸಮರ್ಥಿಸಿಕೊಂಡು ಕೆಲಕಾಲ ಮಾತನಾಡಿದರು. ಎರಡೂ ಕಡೆಯ ವಾದ ಆಲಿಸಿದ ಸಭಾಪತಿ, 'ಪ್ರಕರಣ ನ್ಯಾಯಾಲಯದಲ್ಲಿ ಇರುವುದರಿಂದ ಚರ್ಚೆಗೆ ಅವಕಾಶ ನೀಡುವುದಿಲ್ಲ' ಎಂದು ನಿರ್ಣಯ ಪ್ರಕಟಿಸಿದರು. ಆ ಬಳಿಕ ಮಧ್ಯಾಹ್ನದ ಭೋಜನ ವಿರಾಮದವರೆಗೂ ಕಾರ್ಯಸೂಚಿಯಂತೆ ಕಲಾಪ ನಡೆಯಿತು.

ಚರ್ಚೆಗೆ ಪಟ್ಟು: ಮಧ್ಯಾಹ್ನ 3 ಗಂಟೆಗೆ ಮತ್ತೆ ಕಲಾಪ ಆರಂಭವಾಗುತ್ತಿದ್ದಂತೆ ಸಭಾಪತಿಯವರ ನಿರ್ಣಯ ಮರು ಪರಿಶೀಲನೆಗೆ ಆಗ್ರಹಿಸಿ ಕಾಂಗ್ರೆಸ್ ಸದಸ್ಯರು ಧರಣಿ ಆರಂಭಿಸಿದರು. ತೀರ್ಮಾನ ಬದಲಿಸಲು ಸಭಾಪತಿ ನಿರಾಕರಿಸಿದರು.

5ನೇ ಪುಟ ನೋಡಿ



ಭೂಕಬಳಿಕೆ ಪ್ರಕರಣದ ತನಿಖೆಗೆ ಪಟ್ಟು ಹಿಡಿದ ಕಾಂಗ್ರೆಸ್ ಸದಸ್ಯರು ವಿಧಾನಪರಿಷತ್ತಿನಲ್ಲಿ ಬುಧವಾರ ಧರಣಿ ನಡೆಸಿದರು. ಸಭಾಪತಿ ಬಸವರಾಜ ಹೊರಟ್ಟಿ ಅನುಪಸ್ಥಿತಿಯಲ್ಲಿ ತೇಜಸ್ವಿನಿಗೌಡ ಅವರು ಪೀಠದಲ್ಲಿದ್ದರು – ಪ್ರಜಾವಾಣಿ ಚಿತ್ರ

'ಮಾನನಷ್ಟ ಮೊಕದ್ದಮೆ ಹೂಡುವೆ'

'ನನ್ನ ವಿರುದ್ಧ ಸುಳ್ಳು ಆರೋಪ ಮಾಡಿರುವ ಎಂ. ನಾರಾಯಣಸ್ವಾಮಿ ಹಾಗೂ ಇತರರ ವಿರುದ್ಧ ನ್ಯಾಯಾಲಯದಲ್ಲಿ ಮಾನನಷ್ಟ ಮೊಕದ್ದಮೆ ಹೂಡುತ್ತೇನೆ' ಎಂದು ಸಚಿವ ಬೈರತಿ ಬಸವರಾಜ ಹೇಳಿದರು.
'ನಾರಾಯಣಸ್ವಾಮಿ ದ್ವೇಷದಿಂದ ಈ ಆರೋಪ ಮಾಡಿದ್ದಾರೆ. ಇದರ ಹಿಂದೆ ಯಾರದ್ದೋ ಷಡ್ಯಂತ್ರ ಇದೆ. ನನ್ನ ವರ್ಚಸ್ಸಿಗೆ ಧಕ್ಕೆ ತರಲು ಇದನ್ನು ಮಾಡಿದ್ದಾರೆ' ಎಂದು ಪ್ರತಿಕ್ರಿಯಿಸಿದರು.
ಈ ಆರೋಪ ನಿರಾಧಾರ ಎಂದು ಹೈಕೋರ್ಟ್ 2020ರ ಮಾರ್ಚ್ 10ರಂದು ಆದೇಶ ನೀಡಿದೆ. ವಿಧಿ ವಿಜ್ಞಾನದ ಪ್ರಯೋಗಾಲಯದ ವರದಿ ನಾನು ತಪ್ಪೆಸಗಿಲ್ಲ ಎಂದಿದೆ. ಅದನ್ನು ಮರೆಮಾಚಿ ಈಗ ಆರೋಪ ಮಾಡುತ್ತಿದ್ದಾರೆ ಎಂದರು.

ಅಮಾನತುಗೊಂಡವರು

- ಎಸ್.ಆರ್. ಪಾಟೀಲ
- ಎಂ. ನಾರಾಯಣಸ್ವಾಮಿ
- ಬಿ.ಕೆ. ಹರಿಪ್ರಸಾದ್
- ಕೆ. ಪ್ರತಾಪಚಂದ್ರ ಶೆಟ್ಟಿ
- ಸಿ.ಎಂ. ಇಬ್ರಾಹಿಂ
- ನಸೀರ್ ಅಹ್ಮದ್
- ಯು.ಬಿ. ವೆಂಕಟೇಶ್
- ಆರ್.ಬಿ. ತಿಮ್ಮಾಪೂರ
- ಬಸವರಾಜ ಪಾಟೀಲ ಇಟಗಿ
- ಅರವಿಂದ ಕುಮಾರ್ ಅರಳಿ
- ಪಿ.ಆರ್. ರಮೇಶ್
- ಸಿ.ಎಂ. ಲಿಂಗಪ್ಪ
- ಕೆ. ಹರೀಶ್ ಕುಮಾರ್
- ವೀಣಾ ಅಚ್ಚಯ್ಯ
- ಎಂ.ಎ. ಗೋಪಾಲಸ್ವಾಮಿ

ಮತಾಂತರ: ಹತ್ತು ವರ್ಷದವರೆಗೆ ಜೈಲು

ಮಾತೃಧರ್ಮಕ್ಕೆ ಮರಳುವವರಿಗೆ ಕಾಯ್ದೆ ಅನ್ವಯಿಸದು

• ರಾಜೇಶ್ ರೈ ಚಟ್ಲ

ಬೆಳಗಾವಿ (ಸುವರ್ಣ ವಿಧಾನಸೌಧ): ಮತಾಂತರ ನಿಷೇಧ ಕಾಯ್ದೆ ತರಲು ಮುಂದಾಗಿರುವ ರಾಜ್ಯ ಸರ್ಕಾರ, ಇಲ್ಲಿ ನಡೆಯುತ್ತಿರುವ ಅಧಿವೇಶನ ದಲ್ಲಿ 'ಧಾರ್ಮಿಕ ಸ್ವಾತಂತ್ರ್ಯ ಸಂರಕ್ಷಣೆ ಹಕ್ಕು ಕಾಯ್ದೆ- 2021' ಮಸೂದೆ ಮಂಡಿ ಸಲು ತಯಾರಿ ನಡೆ ಸಿದೆ. ಒತ್ತಾಯ, ಆಮಿಷ ಒಡ್ಡಿ ಮತಾಂತರ ಗಳನ್ನು ನಿಷೇಧಿಸುವ ಪ್ರಸ್ತಾವ ಈ ಮಸೂದೆ ಯಲ್ಲಿದೆ.

ಪ್ರಸ್ತಾವಿತ ಮಸೂದೆಯ ಪ್ರತಿ 'ಪ್ರಜಾವಾಣಿ'ಗೆ ಲಭ್ಯ ವಾಗಿದೆ. ಅದರ ಪ್ರಕಾರ, ಪರಿಶಿಷ್ಟ (ಎಸ್‌ಸಿ, ಎಸ್‌ಟಿ), ಅಪ್ರಾಪ್ತರು, ಮಹಿಳೆಯರು, ಬುದ್ಧಿಮಾಂದ್ಯರನ್ನು ಮತಾಂತರ ಮಾಡಿದವನಿಗೆ ಕನಿಷ್ಠ 3 ವರ್ಷದಿಂದ 10 ವರ್ಷದವರೆಗೆ ಜೈಲು, ₹ 50 ಸಾವಿರ ದಂಡ ವಿಧಿಸಲು ಅವಕಾಶ ಕಲ್ಪಿಸಲಾಗಿದೆ. ಇತರ ವರ್ಗದವರನ್ನು ಮತಾಂತರ ಮಾಡಿದರೆ ಕನಿಷ್ಠ 3 ವರ್ಷದಿಂದ 5 ವರ್ಷದವರೆಗೆ ಜೈಲು ಮತ್ತು ₹ 25 ಸಾವಿರ ದಂಡ, ಸಾಮೂಹಿಕ ಮತಾಂತರ ಮಾಡಿದವನಿಗೆ 3ರಿಂದ 10 ವರ್ಷದವರೆಗೆ ಜೈಲು ಶಿಕ್ಷೆ ಮತ್ತು ₹ 1 ಲಕ್ಷ ದಂಡ ವಿಧಿಸಲು ಅವಕಾಶವಿದೆ.

5ನೇ ಪುಟ ನೋಡಿ

ಮತಾಂತರ ನಿಷೇಧ ಮಸೂದೆ: 'ಕೈ' ವಿರೋಧ

ಬೆಳಗಾವಿ (ಸುವರ್ಣ ವಿಧಾನಸೌಧ): 'ಮತಾಂತರ ನಿಷೇಧ ಕಾಯ್ದೆ ಜಾರಿಗೆ ತರುವ ಉದ್ದೇಶದಿಂದ ರಾಜ್ಯ ಸರ್ಕಾರ ಮಂಡಿಸಲು ಉದ್ದೇಶಿಸಿರುವ ಮಸೂದೆಗೆ ತೀವ್ರ ವಿರೋಧ ವ್ಯಕ್ತಪಡಿಸಲು ಕಾಂಗ್ರೆಸ್ ನಿರ್ಧರಿಸಿದೆ.

ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ಬುಧವಾರ ಇಲ್ಲಿ ನಡೆದ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯಲ್ಲಿ ಈ ತೀರ್ಮಾನ ತೆಗೆದುಕೊಳ್ಳಲಾಗಿದೆ.

ಸಭೆಯಲ್ಲಿ ಮಾತನಾಡಿದ ಸಿದ್ದರಾಮಯ್ಯ, 'ಭಾವನಾತ್ಮಕ ವಿಚಾರಗಳನ್ನು ಮುಂದಿಟ್ಟುಕೊಂಡು ಜನರ ದಾರಿ ತಪ್ಪಿಸುವ ಕೆಲಸವನ್ನು ಬಿಜೆಪಿ ಮಾಡುತ್ತಿದೆ. ಒಂದು ಜಾತಿ ಹಾಗೂ ಧರ್ಮವನ್ನು ಗುರಿಯಾಗಿಟ್ಟುಕೊಂಡು, ರಾಜಕೀಯ ಕಾರಣಕ್ಕಾಗಿ ಕಾಯ್ದೆ ಜಾರಿಗೆ ತರಲು ಸರ್ಕಾರ ಮುಂದಾಗಿದೆ. ಇದು ಕೂಡಾ ಆ ಪಕ್ಷದ ರಹಸ್ಯ ಕಾರ್ಯಸೂಚಿಯಾಗಿದೆ. ಇದನ್ನು ವಿರೋಧಿಸಬೇಕಾಗಿದೆ' ಎಂದರು. ಅದಕ್ಕೆ ಸಭೆ ಸರ್ವಾನುಮತದಿಂದ ಒಪ್ಪಿಗೆ ಸೂಚಿಸಿತು.

5ನೇ ಪುಟ ನೋಡಿ

ಇಂದು, ನಾಳೆ ಬ್ಯಾಂಕ್ ನೌಕರರ ಮುಷ್ಕರ

ಬೆಂಗಳೂರು: ರಾಷ್ಟ್ರೀಕೃತ ಬ್ಯಾಂಕ್‌ಗಳ ಖಾಸಗೀಕರಣ ವಿರೋಧಿಸಿ ಬ್ಯಾಂಕ್ ಸಂಘಟನೆಗಳ ಸಂಯುಕ್ತ ವೇದಿಕೆಯು (ಯುಎಫ್‌ಬಿಯು) ಗುರುವಾರ ಮತ್ತು ಶುಕ್ರವಾರ ದೇಶದಾದ್ಯಂತ ಮುಷ್ಕರ ನಡೆಸಲಿದೆ. ಇದರಿಂದಾಗಿ ಈ ಎರಡು ದಿನ ರಾಷ್ಟ್ರೀಕೃತ ಬ್ಯಾಂಕ್ ಶಾಖೆಗಳಲ್ಲಿ ಹಣ ವರ್ಗಾವಣೆ, ಸ್ವೀಕೃತಿ, ಸಾಲ ಮಂಜೂರಾತಿ, ಚೆಕ್ ಕ್ಲಿಯರೆನ್ಸ್‌ನಂಥ ಸೇವೆಗಳಿಗೆ ಅಡ್ಡಿಯಾಗುವ ಸಾಧ್ಯತೆ ಇದೆ.

'ಎರಡು ಬ್ಯಾಂಕ್‌ಗಳ ಖಾಸಗೀಕರಣಕ್ಕೆ ಕೇಂದ್ರ ಸರ್ಕಾರ ಮುಂದಾಗಿದೆ. ಇದನ್ನು ವಿರೋಧಿಸಿ ಬ್ಯಾಂಕ್ ನೌಕರರು, ಅಧಿಕಾರಿಗಳು ಮುಷ್ಕರದಲ್ಲಿ ಭಾಗವಹಿಸಲಿದ್ದಾರೆ' ಎಂದು ಭಾರತೀಯ ರಾಷ್ಟ್ರೀಯ ಬ್ಯಾಂಕ್ ಉದ್ಯೋಗಿಗಳ ಒಕ್ಕೂಟದ (ಐಎನ್‌ಬಿಇಎಫ್) ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ನರಸಿಂಹಮೂರ್ತಿ ಎಂ.ಕೆ. ತಿಳಿಸಿದರು.

ದೇಶದಾದ್ಯಂತ 9 ಲಕ್ಷಕ್ಕೂ ಹೆಚ್ಚು ನೌಕರರು ಮುಷ್ಕರದಲ್ಲಿ ಪಾಲ್ಗೊಳ್ಳಲಿದ್ದಾರೆ ಎನ್ನಲಾಗಿದೆ. 'ಬ್ಯಾಂಕ್ ಖಾಸಗೀಕರಣದಿಂದಾಗಿ ಜನರ ಉಳಿ ತಾಯದ ಹಣ ಲೂಟಿಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ. ಶಾಖೆಗಳು ಮುಚ್ಚುವ, ಜನಸಾಮಾನ್ಯರು ಬ್ಯಾಂಕಿಂಗ್ ಸೇವೆಗಳಿಂದ ವಂಚನೆಗೆ ಒಳಗಾಗುವ ಸಾಧ್ಯತೆಗಳು ಹೆಚ್ಚಿವೆ' ಎಂದರು.

'ರಾಷ್ಟ್ರೀಕರಣಗೊಂಡ ನಂತರ ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಮುಳುಗಿಲ್ಲ. ಮುಳುಗಿದ್ದ ಖಾಸಗಿ ಬ್ಯಾಂಕ್‌ಗಳನ್ನು ತಮ್ಮ ತೆಕ್ಕೆಗೆ ಸೇರಿಸಿಕೊಂಡು ಠೇವಣಿದಾರರ ಹಿತಾಸಕ್ತಿಗಳನ್ನು ಸರ್ಕಾರಿ ಬ್ಯಾಂಕ್‌ಗಳು ಕಾಪಾಡಿವೆ. ಖಾಸಗೀಕರಣದ ಮೂಲಕ ಹಣಕಾಸು ಕ್ಷೇತ್ರವನ್ನು ಬಂಡವಾಳಶಾಹಿಗಳಿಗೆ ಒಪ್ಪಿಸುವ ಹುನ್ನಾರ ನಡೆಯುತ್ತಿದೆ' ಎಂದು ಆಕ್ಷೇಪಿಸಿದರು.

ಗ್ರೂಪ್ ಕ್ಯಾಪ್ಟನ್ ವರುಣ್ ಸಿಂಗ್ ನಿಧನ

ಬೆಂಗಳೂರು (ಪಿಟಿಐ): ತಮಿಳುನಾಡಿನ ಕೂನೂರಿನಲ್ಲಿ ಡಿ.8ರಂದು ಸಂಭವಿಸಿದ್ದ ಸೇನೆ ಹೆಲಿಕಾಪ್ಟರ್ ಪತನದಲ್ಲಿ ಬದುಕುಳಿದಿದ್ದ ಏಕೈಕ ಸೇನಾ ಸಿಬ್ಬಂದಿ, ಭಾರತೀಯ ವಾಯುಪಡೆಯ ಗ್ರೂಪ್ ಕ್ಯಾಪ್ಟನ್ ವರುಣ್ ಸಿಂಗ್ (39) ಬುಧವಾರ ಬೆಳಿಗ್ಗೆ ಬೆಂಗಳೂರಿನ ಸೇನಾ ಕಮಾಂಡ್ ಆಸ್ಪತ್ರೆಯಲ್ಲಿ ನಿಧನರಾಗಿದ್ದಾರೆ.

'ಗ್ರೂಪ್ ಕ್ಯಾಪ್ಟನ್ ವರುಣ್ ಸಿಂಗ್ ನಿಧನರಾಗಿದ್ದಾರೆ ಎಂದು ತಿಳಿಸಲು ನಾವು ವಿಷಾದಿಸುತ್ತೇವೆ. ಅವರ ನಿಧನಕ್ಕೆ ವಾಯುಪಡೆ ಸಂತಾಪ ಸೂಚಿಸುತ್ತದೆ' ಎಂದು ವಾಯುಪಡೆ ಟ್ವೀಟ್ ಮಾಡಿದೆ.



ವರುಣ್ ಸಿಂಗ್

ವೆಲ್ಲಿಂಗ್‌ಟನ್‌ನ ಸೇನಾ ಸಿಬ್ಬಂದಿ ತರಬೇತಿ ಕಾಲೇಜಿನಲ್ಲಿ ವರುಣ್ ಸಿಂಗ್ ಬೋಧಕರಾಗಿದ್ದರು. ವೆಲ್ಲಿಂಗ್‌ಟನ್ ಕಾಲೇಜಿಗೆ ಆಗಮಿಸುತ್ತಿದ್ದ ಸೇನಾಪಡೆಗಳ ಮುಖ್ಯಸ್ಥ ಜನರಲ್ ಬಿಪಿನ್ ರಾವತ್ ಅವರನ್ನು ಬರಮಾಡಿಕೊಳ್ಳಲು ಅವರು ಸೂಲೂರು ವಾಯುನೆಲೆಗೆ ತೆರಳಿದ್ದರು. ವೆಲ್ಲಿಂಗ್‌ಟನ್ ಮಾರ್ಗಮಧ್ಯೆ ಹೆಲಿಕಾಪ್ಟರ್ ಪತನವಾಗಿ ಜನರಲ್ ರಾವತ್, ಅವರ ಪತ್ನಿ ಮತ್ತು 11 ಸೇನಾ ಸಿಬ್ಬಂದಿ ಮರಣ ಹೊಂದಿದ್ದರು. ತೀವ್ರವಾಗಿ ಗಾಯಗೊಂಡಿದ್ದ ವರುಣ್ ಅವರನ್ನು ವೆಲ್ಲಿಂಗ್‌ಟನ್‌ನಲ್ಲಿನ ಸೇನಾ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಮರುದಿನ ಅವರನ್ನು ಬೆಂಗಳೂರಿನ ಸೇನಾ ಕಮಾಂಡ್ ಆಸ್ಪತ್ರೆಗೆ ದಾಖಲಿಸಲಾಯಿತು.

ಮತ್ತೊಂದು ಸುದ್ದಿ 11

ಮತದಾರರ ಚೀಟಿಗೆ ಆಧಾರ್ ಜೋಡಣೆ: ಸಂಪುಟ ಒಪ್ಪಿಗೆ

ನವದೆಹಲಿ (ಪಿಟಿಐ): ಮತದಾರರ ಗುರುತಿನ ಚೀಟಿಗೆ ಆಧಾರ್ ಸಂಖ್ಯೆ ಜೋಡಿಸಲು ಅನುವು ಮಾಡಿಕೊಡುವ ಮಸೂದೆಯನ್ನು ಸಂಸತ್ತಿನ ಪ್ರಸಕ್ತ ಅಧಿವೇಶನದಲ್ಲೇ ಮಂಡಿಸಲು ಕೇಂದ್ರ ಸಚಿವ ಸಂಪುಟ ಸಭೆಯು ಒಪ್ಪಿಗೆ ನೀಡಿದೆ ಎಂದು ಮೂಲಗಳು ಹೇಳಿವೆ.

ಇದರ ಜತೆಗೆ ಮತದಾರರ ಪಟ್ಟಿಗೆ ನೋಂದಣಿ, ಮತದಾನದ ಹಕ್ಕು ಮತ್ತು ಚುನಾ ವಣಾ ಆಯೋಗಕ್ಕೆ ಹೆಚ್ಚಿನ ಅಧಿಕಾರವನ್ನು ನೀಡಲು ಮಸೂದೆ ಯಲ್ಲಿ ಅವಕಾಶ ಕಲ್ಪಿಸಲಾಗುತ್ತದೆ ಎಂದು ಮೂಲಗಳು ತಿಳಿಸಿವೆ.

'ಪ್ಯಾನ್ ಕಾರ್ಡ್‌ಗೆ ಆಧಾರ್ ಸಂಖ್ಯೆ ಜೋಡಿಸಿದ ರೀತಿಯಲ್ಲಿಯೇ ಮತದಾರರ ಗುರುತಿನ ಚೀಟಿಗೂ ಆಧಾರ್ ಸಂಖ್ಯೆ ಜೋಡಿಸಲಾಗುತ್ತದೆ. ಇದು ಕಡ್ಡಾಯವಲ್ಲ. ಆದರೆ, ಆಧಾರ್ ಮಾಹಿತಿ ಮೂಲಕ ಮತದಾರರ ಗುರುತಿನ ಚೀಟಿಯ ಮಾಹಿತಿ ಕಳುವಾಗುವುದನ್ನು ತಡೆಯುವ ವ್ಯವಸ್ಥೆಯನ್ನು ಮಾಡಿಕೊಳ್ಳಲಾಗುತ್ತದೆ. ಆಧಾರ್ ಸಂಖ್ಯೆ ಜೋಡಣೆಯಿಂದ, ನಕಲಿ ಗುರುತಿನ ಚೀಟಿಗಳಿಗೆ ಕಡಿವಾಣ ಹಾಕಬಹುದು' ಎಂದು ಕಾನೂನು ಸಚಿವಾಲಯವು ಹೇಳಿದೆ.

'ಈವರೆಗೆ ಸೇನೆಯ ಪುರುಷ ಸಿಬ್ಬಂದಿಯ ಪತ್ನಿ ಮತದಾನ ಮಾಡಲು ಅವಕಾಶವಿತ್ತು. ಸೇನೆಯ ಮಹಿಳಾ ಸಿಬ್ಬಂದಿಯ ಪತಿ ಮತದಾನ ಮಾಡಲು ಅವಕಾಶ ಇರಲಿಲ್ಲ. ಈ ನಿಯಮಕ್ಕೆ ಬದಲಾವಣೆ ತರಲಾಗುತ್ತಿದೆ. ಈಗ ಪ್ರತಿ ವರ್ಷ ಜನವರಿ 1ಕ್ಕೂ ಮೊದಲು 18 ವರ್ಷ ತುಂಬಿದವರು ಮಾತ್ರ ಮತದಾರರ ಪಟ್ಟಿಗೆ ಹೆಸರು ನೋಂದಣಿ ಮಾಡಿಕೊಳ್ಳಲು ಅವಕಾಶವಿದೆ.

ಜನವರಿ 2ರ ನಂತರ 18 ವರ್ಷ ತುಂಬಿದವರು ಪಟ್ಟಿಗೆ ಹೆಸರು ಸೇರಿಸಲು ಮುಂದಿನ ವರ್ಷದ ಜನವರಿ 1ರವರೆಗೂ ಕಾಯ ಬೇಕಿತ್ತು. ಈಗ ಈ ನಿಯಮಕ್ಕೆ ಬದಲಾವಣೆ ತರಲಾಗುತ್ತಿದೆ. ಜನವರಿ 1, ಏಪ್ರಿಲ್ 1, ಜುಲೈ 1 ಮತ್ತು ಅಕ್ಟೋಬರ್ 1ರಂದು 18 ವರ್ಷ ತುಂಬಿದವರು ಮತದಾರರ ಪಟ್ಟಿಗೆ ಹೆಸರು ಸೇರಿಸಲು ಅವಕಾಶ ನೀಡಲಾಗುತ್ತದೆ' ಎಂದು ಸಚಿವಾಲಯವು ವಿವರಿಸಿದೆ.

'ಮತದಾನ ನಡೆಸಲು ಈಗ ಚುನಾವಣಾ ಆಯೋಗವು ಆಯ್ಕೆ ಮಾಡುವ ಶಾಲೆಗಳ ವಿಚಾರದಲ್ಲಿ ಆಕ್ಷೇಪಗಳು ವ್ಯಕ್ತವಾಗುತ್ತಿವೆ. ಶಾಲೆ ಅಥವಾ ಮತದಾನದ ಸ್ಥಳ ಆಯ್ಕೆ ವಿಚಾರದಲ್ಲಿ ಆಯೋಗಕ್ಕೆ ಹೆಚ್ಚಿನ ಅಧಿಕಾರ ನೀಡಲಾಗುತ್ತದೆ' ಎಂದು ಸಚಿವಾಲಯವು ಹೇಳಿದೆ.

ಪತ್ರಕರ್ತನ ಮೇಲೆ ಹಲ್ಲೆ, ಅವಾಚ್ಯ ಪದಗಳಿಂದ ನಿಂದನೆ

'ನಿನಗೆ ತಲೆ ಕೆಟ್ಟಿದೆಯಾ' ಸಚಿವ ಮಿಶ್ರಾ ಕಿರುಚಾಟ

ಪ್ರಜಾವಾಣಿ ವಾರ್ತೆ

ಲಖನೌ: ಕೇಂದ್ರ ಸಚಿವ ಅಜಯ್ ಮಿಶ್ರಾ ಅವರ ವಜಾಕ್ಕೆ ಆಗ್ರಹಿಸಿ ಪ್ರತಿಪಕ್ಷಗಳು ಸಂಸತ್ತಿನಲ್ಲಿ ಪಟ್ಟು ಹಿಡಿದಿವೆ. ಈ ಮಧ್ಯೆ ಮಿಶ್ರಾ ಅವರು ಪತ್ರಕರ್ತರೊಬ್ಬರನ್ನು ಥಳಿಸಿದ ಘಟನೆ ಉತ್ತರ ಪ್ರದೇಶದ ಲಖನೌದಲ್ಲಿ ಬುಧವಾರ ವರದಿಯಾಗಿದೆ.

ಲಖೀಂಪುರ–ಖೇರಿ ರೈತರ ಸಾವಿನ ಪ್ರಕರಣದಲ್ಲಿ ಪುತ್ರ ಆಶಿಶ್ ಮಿಶ್ರಾ ವಿರುದ್ಧ ಎಸ್‌ಐಟಿ ದಾಖಲಿಸಿರುವ ದೋಷಾರೋಪಪಟ್ಟಿ ಕುರಿತು ಪ್ರಶ್ನೆ ಕೇಳಿದ ಪತ್ರಕರ್ತನನ್ನು ಬೆದರಿಸಿದ ಸಚಿವ ಮಿಶ್ರಾ, ಅವರ ಮೇಲೆ ಹಲ್ಲೆ ನಡೆಸಿದ್ದಾರೆ ಎನ್ನಲಾಗಿದೆ. ಇದನ್ನು ಪುಷ್ಟೀಕರಿಸುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ.

ಸರ್ಕಾರಿ ಆಸ್ಪತ್ರೆಯಲ್ಲಿ ಸ್ಥಾಪಿಸಲಾದ ಆಮ್ಲಜನಕ ಘಟಕದ ಉದ್ಘಾಟನೆಗೆ ಬಂದಿದ್ದ ಮಿಶ್ರಾ ಅವರು ಪತ್ರಕರ್ತ ಕೇಳಿದ ಪ್ರಶ್ನೆಗೆ ತಾಳ್ಮೆ ಕಳೆದುಕೊಂಡರು. ಎಸ್‌ಐಟಿ ಆರೋಪದ ಬಗ್ಗೆ ಅಭಿಪ್ರಾಯ ಪಡೆಯಲು ಪತ್ರಕರ್ತ ಕೇಳಿದ ಪ್ರಶ್ನೆಗೆ ಕೆರಳಿದ ಮಿಶ್ರಾ, 'ನಿನಗೆ ತಲೆ ಕೆಟ್ಟಿದೆಯಾ. ಫೋನ್ ಬಂದ್ ಮಾಡು' ಎಂದು ಕಿರುಚಾಡಿದ್ದಾರೆ. ಪತ್ರಕರ್ತನ ಕೊರಳಪಟ್ಟಿ ಹಿಡಿದು ಎಳೆದಾಡಿ, ಅವಾಚ್ಯ ಶಬ್ದಗಳಿಂದ ನಿಂದಿಸುತ್ತಿರುವುದು ವಿಡಿಯೊದಲ್ಲಿ ದಾಖಲಾಗಿದೆ.

ಪತ್ರಕರ್ತರು ಕಳ್ಳರು ಎಂದು ಕರೆದ ಮಿಶ್ರಾ, ಪತ್ರಕರ್ತರೊಬ್ಬರ ಮೊಬೈಲ್ ಕಿತ್ತುಕೊಂಡರು. 'ಹುಚ್ಚರ ರೀತಿ ಪ್ರಶ್ನೆ ಕೇಳಬೇಡಿ. ನೀವು ಒಬ್ಬ ಅಮಾಯಕನನ್ನು ಆರೋಪಿಯನ್ನಾಗಿ ಬಿಂಬಿಸಿದ್ದೀರಿ. ನಿಮಗೆ ನಾಚಿಕೆಯಾಗುವುದಿಲ್ಲವೇ' ಎಂದು ಮಿಶ್ರಾ ಹೇಳಿದ್ದು ವಿಡಿಯೊದಲ್ಲಿದೆ. ಸಚಿವರ ವರ್ತನೆ ಖಂಡಿಸಿ ಜಿಲ್ಲಾಧಿಕಾರಿಗೆ ದೂರು ಸಲ್ಲಿಸಿದ ಪತ್ರಕರ್ತರ ನಿಯೋಗ, ಭದ್ರತೆ ಒದಗಿಸುವಂತೆ ಕೋರಿತು.


> **ಮಿಶ್ರಾ ಅವರನ್ನು ಸಂಪುಟದಿಂದ ತಕ್ಷಣ ವಜಾಗೊಳಿಸಬೇಕು. ಅವರು ಸಚಿವರಾಗಿ ಮುಂದುವರಿದರೆ, ನಿಷ್ಪಕ್ಷಪಾತ ತನಿಖೆ ಸಾಧ್ಯವಿಲ್ಲ**
> **ಪ್ರಮೋದ್ ತಿವಾರಿ**
> ಕಾಂಗ್ರೆಸ್ ಹಿರಿಯ ಮುಖಂಡ

ಸಂದಿಗ್ಧದಲ್ಲಿ ಬಿಜೆಪಿ

ಅಜಯ್ ಮಿಶ್ರಾ ವರ್ತನೆಗೆ ಪ್ರತಿಪಕ್ಷಗಳು ಕಿಡಿಕಾರಿವೆ. ಬಿಜೆಪಿ ಸ್ವತಃ ಇಕ್ಕಟ್ಟಿನಲ್ಲಿ ಸಿಲುಕಿದೆ ಎಂದು ಪಕ್ಷದ ಉತ್ತರ ಪ್ರದೇಶ ರಾಜ್ಯ ಘಟಕದ ಹಿರಿಯ ನಾಯಕರೊಬ್ಬರು ಹೇಳಿದ್ದಾರೆ. 'ಮಿಶ್ರಾ ಅವರನ್ನು ಈಗ ವಜಾಗೊಳಿಸುವುದರಿಂದ ಬ್ರಾಹ್ಮಣ ಸಮುದಾಯಕ್ಕೆ ತಪ್ಪು ಸಂದೇಶ ಹೋಗುತ್ತದೆ. ಇದೇ ವೇಳೆ ಅವರನ್ನು ಸಚಿವರನ್ನಾಗಿ ಮುಂದುವರಿಸುವ ನಿರ್ಧಾರವು ಪಕ್ಷಕ್ಕೆ ಮುಜುಗರ ತರುತ್ತದೆ' ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ರೈತರು ಹಾಗೂ ಪ್ರತಿಪಕ್ಷಗಳು ಮಿಶ್ರಾ ವಜಾಕ್ಕೆ ಪಟ್ಟು ಹಿಡಿದಿದ್ದರೂ, ಈ ಬೇಡಿಕೆಯನ್ನು ಒಪ್ಪಲು ಬಿಜೆಪಿ ಸಿದ್ಧವಿಲ್ಲ. ಚುನಾವಣೆಯಲ್ಲಿ ಪ್ರಭಾವಶಾಲಿಯಾಗಿರುವ ಬ್ರಾಹ್ಮಣ ಸಮುದಾಯದ ಮತಗಳನ್ನು ದೂರ ಮಾಡಿಕೊಳ್ಳಲು ಪಕ್ಷ ಸಿದ್ಧವಿಲ್ಲ. ಈಗಾಗಲೇ ಈ ಸಮುದಾಯಕ್ಕೆ ಪಕ್ಷದ ಮೇಲೆ ಸಿಟ್ಟಿದೆ ಎಂದು ವಿಶ್ಲೇಷಿಸಲಾಗಿದೆ.

ಸಿಒಎಸ್‌ಸಿ ಆಗಿ ಜ.ನರವಣೆ



ನವದೆಹಲಿ (ಪಿಟಿಐ): ಮೂರೂ ಸೇನಾಪಡೆಗಳ ಸಿಬ್ಬಂದಿ ಸಮಿತಿಯ ಮುಖ್ಯಸ್ಥರಾಗಿ (ಸಿಒಎಸ್‌ಸಿ) ಸೇನಾಪಡೆಯ ಮುಖ್ಯಸ್ಥ ಜನರಲ್ ಎಂ.ಎಂ. ನರವಣೆ ಅವರು ಬುಧವಾರ ಅಧಿಕಾರ ವಹಿಸಿಕೊಂಡಿದ್ದಾರೆ.

ಸೆಮಿಕಂಡಕ್ಟರ್ ವಲಯ ₹ 76 ಸಾವಿರ ಕೋಟಿ ನೆರವಿಗೆ ಅನುಮತಿ

ನವದೆಹಲಿ (ಪಿಟಿಐ): ಸೆಮಿಕಂಡಕ್ಟರ್ ಮತ್ತು ಡಿಸ್‌ಪ್ಲೆ ತಯಾರಿಕೆ ಉದ್ಯಮಕ್ಕೆ ನೆರವು ನೀಡುವ ಉದ್ದೇಶದಿಂದ ₹ 76 ಸಾವಿರ ಕೋಟಿ ವೆಚ್ಚದ ಯೋಜನೆಯನ್ನು ಕೇಂದ್ರ ಸರ್ಕಾರ ಬುಧವಾರ ಪ್ರಕಟಿಸಿದೆ. ಸೆಮಿಕಂಡಕ್ಟರ್‌ಗಳಿಗೆ ಜಾಗತಿಕ ಮಟ್ಟದಲ್ಲಿ ಉಂಟಾಗಿರುವ ಕೊರತೆಯ ನಡುವೆ ಕೇಂದ್ರವು ಈ ಕ್ರಮ ಕೈಗೊಂಡಿದೆ.

ಮತ್ತೊಂದು ಸುದ್ದಿ 10

ಘಟನೆಯ ವಿಡಿಯೊ, ಫೋಟೊಗಳು ಸಾಮಾಜಿಕ ಮಾಧ್ಯಮಗಳಲ್ಲಿ ವೈರಲ್

ಕೊಲ್ಹಾಪುರದಲ್ಲಿ ಕನ್ನಡ ಬಾವುಟಕ್ಕೆ ಬೆಂಕಿ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಮಹಾರಾಷ್ಟ್ರದ ಕೊಲ್ಹಾಪುರದಲ್ಲಿ ಶಿವಸೇನಾ ಕಾರ್ಯಕರ್ತರು ಕರ್ನಾಟಕ ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿ, ಕನ್ನಡ ಬಾವುಟವನ್ನು ಮಂಗಳವಾರ ಸುಟ್ಟು ಹಾಕಿದ್ದಾರೆ. ಈ ಘಟನೆಯ ವಿಡಿಯೊ ಹಾಗೂ ಫೋಟೊಗಳು ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿವೆ.

ವಿಧಾನಮಂಡಲ ಚಳಿಗಾಲದ ಅಧಿವೇಶನಕ್ಕೆ ಪರ್ಯಾಯವಾಗಿ ಮಹಾರಾಷ್ಟ್ರ ಏಕೀಕರಣ ಸಮಿತಿಯವರು (ಎಂಇಎಸ್) ಇಲ್ಲಿ ಹಮ್ಮಿಕೊಂಡಿದ್ದ 'ಮಹಾಮೇಳಾವ' ಸಂದರ್ಭದಲ್ಲಿ, ಆ ಸಂಘಟನೆಯ ಅಧ್ಯಕ್ಷ ದೀಪಕ ದಳವಿ ಅವರಿಗೆ ಕನ್ನಡ ಪರ ಹೋರಾಟಗಾರ ಸಂಪತ್‌ಕುಮಾರ್ ದೇಸಾಯಿ ಮಸಿ ಬಳಿದಿದ್ದನ್ನು ಖಂಡಿಸಿ ಪ್ರತಿಭಟನೆ ನಡೆಸಿದ ಶಿವಸೇನಾ ಕಾರ್ಯಕರ್ತರು ಕನ್ನಡ ಬಾವುಟವನ್ನು ಸುಟ್ಟು ಹಾಕಿದ್ದಾರೆ. ಕರ್ನಾಟಕದ ವಿರುದ್ಧ ಕ್ರಮ ಜರುಗಿಸಬೇಕು ಮತ್ತು ಗಡಿ ವಿವಾದವನ್ನು ಕೂಡಲೇ ಬಗೆಹರಿಸಬೇಕು ಎಂದು ಒತ್ತಾಯಿಸಿದ್ದಾರೆ.

ಈ ಕುರಿತು ಬುಧವಾರ ಪ್ರತಿಕ್ರಿಯಿಸಿದ ಗೃಹ ಸಚಿವ ಆರಗ ಜ್ಞಾನೇಂದ್ರ, 'ಮಹಾರಾಷ್ಟ್ರದಲ್ಲಿ ಶಿವಸೇನಾ ಕಾರ್ಯಕರ್ತರು ಕನ್ನಡ ಧ್ವಜ ಸುಟ್ಟಿದ್ದು ಸರಿಯಲ್ಲ' ಎಂದರು.

'ಗಡಿಯಲ್ಲಿ ಕನ್ನಡಿಗರು-ಮರಾಠಿಗರು ಒಂದಾಗಿ ಬದುಕು ನಡೆಸುತ್ತಿದ್ದಾರೆ. ಇಲ್ಲಿ ಗದ್ದಲ ಸೃಷ್ಟಿಸಿ, ಶಾಂತಿ ಕದಡಲು ಯತ್ನಿಸುವವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು' ಎಂದು ಎಚ್ಚರಿಕೆ ನೀಡಿದರು.



ಮಹಾರಾಷ್ಟ್ರದ ಕೊಲ್ಹಾಪುರದಲ್ಲಿ ಮಂಗಳವಾರ ಶಿವಸೇನಾ ಕಾರ್ಯಕರ್ತರು ಕನ್ನಡ ಬಾವುಟವನ್ನು ಸುಟ್ಟು ಹಾಕಿದ್ದಾರೆ.

> **ಮಹಾರಾಷ್ಟ್ರದಲ್ಲಿ ಶಿವಸೇನಾ ಕಾರ್ಯಕರ್ತರು ಕನ್ನಡ ಧ್ವಜ ಸುಟ್ಟಿದ್ದು ಸರಿಯಲ್ಲ**
> **ಆರಗ ಜ್ಞಾನೇಂದ್ರ,** ಗೃಹಸಚಿವ

'ಎಂಇಎಸ್ ಮುಖಂಡ ದೀಪಕ ದಳವಿ ಅವರಿಗೆ ಮಸಿ ಬಳಿದ ಪ್ರಕರಣ ಸಂಬಂಧ ಕನ್ನಡ ಹೋರಾಟಗಾರನ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಅನುಮತಿ ಪಡೆಯದಿದ್ದರೂ ಎಂಇಎಸ್ ಮುಖಂಡರು ಮಹಾಮೇಳಾವ ನಡೆಸಿದ್ದು, ಈ ಕುರಿತು ಪೊಲೀಸ್ ಅಧಿಕಾರಿಗಳಿಂದ ಮಾಹಿತಿ ಪಡೆಯುತ್ತೇನೆ. ಪರಿಶೀಲಿಸಿ, ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು' ಎಂದರು.

ಈ ನಡುವೆ, ಎಂಇಎಸ್ ಅಧ್ಯಕ್ಷಗೆ ಮಸಿ ಬಳಿದ ವ್ಯಕ್ತಿಯ ವಿರುದ್ಧ ದಾಖಲಿಸಿರುವ ಕೊಲೆ ಯತ್ನ ಪ್ರಕರಣ ವಾಪಸ್ ಪಡೆಯುವಂತೆ ಸಾಮಾಜಿಕ ಜಾಲತಾಣಗಳಲ್ಲಿ ಒತ್ತಾಯಿಸಲಾಗುತ್ತಿದೆ.

‘ಮೇಕೆದಾಟು: ಪಾದಯಾತ್ರೆ ಶೀಘ್ರ’

ಬೆಳಗಾವಿ: ‘ಮೇಕೆದಾಟು ಯೋಜನೆ ಜಾರಿಗೆ ತರುವಂತೆ ಸರ್ಕಾರವನ್ನು ಒತ್ತಾಯಿಸಿ ನಡೆಸಲು ಉದ್ದೇಶಿಸಿರುವ ಪಾದಯಾತ್ರೆ ಕುರಿತು ಶಾಸಕಾಂಗ ಸಭೆಯಲ್ಲಿ ಚರ್ಚಿಸಿದ್ದೇವೆ. ಶೀಘ್ರದಲ್ಲಿಯೇ ಪಾದಯಾತ್ರೆ ದಿನ ಘೋಷಿಸುತ್ತೇವೆ’ ಎಂದು ಡಿ.ಕೆ. ಶಿವಕುಮಾರ್ ಬುಧವಾರ ಹೇಳಿದರು.

‘ಶೇ 40 ಲಂಚ ಆರೋಪಿಸಿ ಪ್ರಧಾನಿಗೆ ಗುತ್ತಿಗೆದಾರರ ಸಂಘ ಬರೆದಿರುವ ಪತ್ರ ಕೂಡ ನಮ್ಮ ಹೋರಾಟದ ಆದ್ಯತೆ ಆಗಿದೆ. ಸರ್ಕಾರ ಉದ್ದೇಶಪೂರ್ವಕವಾಗಿ ಮತಾಂತರ ನಿಷೇಧ ಮಸೂದೆಯನ್ನು ಅಂತಿಮ ಗಳಿಗೆಯಲ್ಲಿ ಚರ್ಚೆಗೆ ತರುತ್ತದೆ. ಸದನದ ಒಳಗೆ, ಹೊರಗೆ ನಾವು ಇದರ ವಿರುದ್ಧ ಹೋರಾಡುತ್ತೇವೆ’ ಎಂದರು.

‘ಕನ್ನಡ ಹೋರಾಟಗಾರ ಬಿಡುಗಡೆಗೊಳಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಾರಾಷ್ಟ್ರ ಏಕೀಕರಣ ಸಮಿತಿ (ಎಂಇಎಸ್) ಅಧ್ಯಕ್ಷ ದೀಪಕ ದಳವಿ ಅವರ ಮುಖಕ್ಕೆ ಮಸಿ ಬಳಿದ ಪ್ರಕರಣಕ್ಕೆ ಸಂಬಂಧಿಸಿ ಬಂಧಿತ ಕನ್ನಡ ಪರ ಹೋರಾಟಗಾರರನ್ನು ಬಿಡುಗಡೆಗೊಳಿಸಬೇಕು ಎಂದು ಸಾಮಾಜಿಕ ಜಾಲತಾಣಗಳಲ್ಲಿ ಕೂಗೆಬ್ಬಿದೆ. ಹೋರಾಟಗಾರರ ಬಂಧಿಸಿದ ಪೊಲೀಸರ ನಡೆಯನ್ನೂ ಕನ್ನಡಿಗರು ಖಂಡಿಸಿದ್ದಾರೆ.

ಇದೇ 13ರಂದು ಬೆಳಗಾವಿಯಲ್ಲಿ ಕನ್ನಡ ಪರ ಸಂಘಟನೆಗಳ ಕಾರ್ಯಕರ್ತರು ದೀಪಕ ದಳವಿ ಮುಖಕ್ಕೆ ಮಸಿ ಬಳಿದಿದ್ದರು. ಈ ಘಟನೆಗೆ ಸಂಬಂಧಿಸಿದಂತೆ ಪೊಲೀಸರು ಕನ್ನಡ ಪರ ಹೋರಾಟಗಾರ ಸಂಪತ್ ಕುಮಾರ್ ಎಂಬುವರನ್ನು ಬಂಧಿಸಿದ್ದರು. ಇದನ್ನು ಖಂಡಿಸಿ ಕನ್ನಡ ಪರ ಹೋರಾಟಗಾರರು, ‘#ಕನ್ನಡ ಹೋರಾಟಗಾರರನ್ನು ಬಿಡುಗಡೆಗೊಳಿಸಿ’ ಮತ್ತು ‘#releasekannadaactivists’ ಎಂಬ ಶೀರ್ಷಿಕೆಯಡಿ ಟ್ವಿಟರ್‌ನಲ್ಲಿ ಅಭಿಯಾನ ಹಮ್ಮಿಕೊಂಡಿದ್ದಾರೆ.

ಮಂಗಳವಾರ ಸಂಜೆ ಪ್ರಾರಂಭವಾದ ಅಭಿಯಾನಕ್ಕೆ 25 ಸಾವಿರಕ್ಕೂ ಅಧಿಕ ಮಂದಿ ಬೆಂಬಲ ಸೂಚಿಸಿ, ಟ್ವೀಟ್ ಮಾಡಿದ್ದಾರೆ. ‘ಅಂದು ಬ್ರಿಟಿಷರ ದಬ್ಬಾಳಿಕೆಯ ವಿರುದ್ಧ ಸಿಡಿದೆದ್ದ ರಾಯಣ್ಣನ ಮೇಲೆ ಸುಳ್ಳು ಕೇಸ್ ದಾಖಲಿಸಿದ್ದರು. ಇಂದು ಎಂಇಎಸ್ ದಬ್ಬಾಳಿಕೆ ವಿರುದ್ಧ ಸಿಡಿದೆದ್ದ ಕನ್ನಡಿಗನ ಮೇಲೆ ಸುಳ್ಳು ಕೇಸ್ ದಾಖಲಿಸಿದ್ದಾರೆ’ ಎಂದು ಅನೇಕರು ಟ್ವೀಟ್ ಮಾಡಿದ್ದಾರೆ.

‘ಕನ್ನಡ ಬಾವುಟ ಸುಟ್ಟವರಿಗೆ ಮಸಿ ಬಳಿದ ಕನ್ನಡ ಹೋರಾಟಗಾರರ ವಿರುದ್ಧ ಕೊಲೆಯತ್ನ ಪ್ರಕರಣ ದಾಖಲಿಸಿ, ಬಂಧಿಸಲಾಗಿದೆ. ಅವರನ್ನು ಕೂಡಲೇ ಬಿಡುಗಡೆಗೊಳಿಸಿ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಕೆಲವರು ಒತ್ತಾಯಿಸಿದ್ದಾರೆ.

‘ಈ ಹಿಂದೆ ಕರ್ನಾಟಕ ರಾಜ್ಯೋತ್ಸವ ಮೆರವಣಿಗೆ ಮಾಡುತ್ತಿದ್ದ ಬೆಳಗಾವಿ ಕನ್ನಡಿಗರ ಮೇಲೆ ಪೆಟ್ರೋಲ್ ಬಾಂಬ್ ಹಾಕಿ, ಕೆಲವರ ಸಾವಿಗೆ ಕಾರಣರಾದ ಎಂಇಎಸ್ ಅವರ ಮೇಲೆ ಯಾವ ಪ್ರಕರಣ ದಾಖಲಿಸಿದ್ದೀರಿ ಎಂಬುದನ್ನು ನಿಮ್ಮ ಸರ್ಕಾರ ಬಹಿರಂಗಪಡಿಸಬಹುದೆ?’ ಎಂದು ಭೀಮಶಂಕರ್ ಪಾಟೀಲ್ ಎನ್ನುವವರು ಪ್ರಶ್ನಿಸಿದ್ದಾರೆ.

‘ಅಂದು ಬ್ರಿಟಿಷರು ಚೆನ್ನಮ್ಮ, ರಾಯಣ್ಣ ಅವರನ್ನು ಗಲ್ಲಿಗೇರಿಸಿದರು. ಇಂದು ಈ ಸರ್ಕಾರ ಪೊಲೀಸರ ಮೂಲಕ ಕನ್ನಡಿಗರನ್ನ ಹತ್ತಿಕ್ಕಲು ಹೊರಟಿದೆ. ಇಂತಹ ಗೊಡ್ಡು ಬೆದರಿಕೆ ಕನ್ನಡಿಗರ ಮುಂದೆ ನಡೆಯುವುದಿಲ್ಲ. ನಾಡದ್ರೋಹಿಗಳೆ ಎಚ್ಚರ’ ಎಂದು ಬಸವರಾಜ್ ಬಿ.ಆರ್ ಎನ್ನುವವರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

‘ಬ್ಯಾಂಕ್‌ಗಳ ಖಾಸಗೀಕರಣ ನಿಲ್ಲಿಸಿ’

ಬೆಂಗಳೂರು: ರಾಷ್ಟ್ರೀಕೃತ ಬ್ಯಾಂಕುಗಳ ಖಾಸಗೀಕರಣ ನಿಲ್ಲಿಸುವಂತೆ ಮತ್ತು ಸರ್ಕಾರಿ ಬ್ಯಾಂಕುಗಳನ್ನು ಬಲಪಡಿಸುವಂತೆ ಆಗ್ರಹಿಸಿ ಬ್ಯಾಂಕ್ ಸಂಘಟನೆಗಳು ಇದೇ 16 ಮತ್ತು 17ರಂದು ನಡೆಸುವ ಮುಷ್ಕರಕ್ಕೆ ಬ್ಯಾಂಕ್ ಸಂಘಟನೆಗಳ ಐಕ್ಯ ವೇದಿಕೆ–ಕರ್ನಾಟಕ (ಯುಎಫ್‌ಬಿಯು) ಸಂಘಟನೆಯು ಬೆಂಬಲ ವ್ಯಕ್ತಪಡಿಸಿದೆ.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಯುಎಫ್‌ಬಿಯು ಸಂಚಾಲಕ ಶ್ರೀನಿವಾಸ ಎಸ್.ಕೆ, ‘ನಗರದ ಕೆ.ಜಿ. ರಸ್ತೆಯಲ್ಲಿರುವ ಭಾರತೀಯ ಸ್ಟೇಟ್ ಬ್ಯಾಂಕ್ ಕಚೇರಿ ಬಳಿ ಮುಷ್ಕರದ ಪ್ರಯುಕ್ತ ಬೆಳಿಗ್ಗೆ 10.30ಕ್ಕೆ ಪ್ರತಿಭಟನೆಯನ್ನು ಹಮ್ಮಿಕೊಳ್ಳಲಾಗಿದೆ. ಬ್ಯಾಂಕ್‌ಗಳ ನೌಕರರು ಮತ್ತು ಅಧಿಕಾರಿಗಳು ಈ ಮುಷ್ಕರವನ್ನು ಯಶಸ್ವಿಗೊಳಿಸಬೇಕು’ ಎಂದು ಕೋರಿದರು.

‘ಸರ್ಕಾರಿ ಬ್ಯಾಂಕ್‌ಗಳ ಖಾಸಗೀಕರಣ, ಜೀವ ವಿಮಾ ನಿಗಮದಲ್ಲಿ ಬಂಡವಾಳ ಹಿಂತೆಗೆತ, ಸರ್ಕಾರಿ ವಿಮಾ ಕಂಪನಿಯ ಖಾಸಗೀಕರಣ ಹಾಗೂ ವಿಮಾ ಕ್ಷೇತ್ರದಲ್ಲಿ ಶೇ 74ರಷ್ಟು ವಿದೇಶಿ ನೇರ ಬಂಡವಾಳ ಹೂಡಿಕೆಗೆ ಅವಕಾಶ ನೀಡುವುದಾಗಿ ಸರ್ಕಾರ ತಿಳಿಸಿದೆ. ಇವೆಲ್ಲವೂ ಅಪಾಯಕಾರಿ ಕ್ರಮಗಳಾಗಿದ್ದು, ಖಾಸಗೀಕರಣದ ಮೂಲಕ ದೇಶದ ಹಣಕಾಸು ಕ್ಷೇತ್ರವನ್ನು ದೇಶಿ–ವಿದೇಶಿ ಬಂಡವಾಳಶಾಹಿಗಳ ಕೈಗೆ ಒಪ್ಪಿಸಲಾಗುತ್ತಿದೆ. ಇದರಿಂದ ಜನರ ಉಳಿತಾಯದ ಹಣದ ಲೂಟಿಗೆ ಅವಕಾಶ ಕಲ್ಪಿಸಿದಂತಾಗುತ್ತದೆ ಎಂದರು.

‘ವೈದ್ಯರ ಗ್ರಾಮೀಣ ಸೇವೆ 5 ವರ್ಷಕ್ಕೆ ಹೆಚ್ಚಿಸಿ’

ಬೆಂಗಳೂರು: ‘ವೈದ್ಯಕೀಯ ಶಿಕ್ಷಣ ಮುಗಿಸಿದವರು ಹಳ್ಳಿಗಳಲ್ಲಿ ಸೇವೆ ಸಲ್ಲಿಸುವುದನ್ನು ಐದು ವರ್ಷಗಳಿಗೆ ಹೆಚ್ಚಿಸಬೇಕು’ ಎಂದು ಭಾರತೀಯ ಜನ ರಕ್ಷಣಾ ಸೇನಾದ ರಾಷ್ಟ್ರೀಯ ಅಧ್ಯಕ್ಷ ಸಿದ್ದಯ್ಯ ಸಾಮಂತ ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು,‘ಖಾಸಗಿ ಆಸ್ಪತ್ರೆಗಳ ಚಿಕಿತ್ಸಾ ವೆಚ್ಚ ಭರಿಸಲು ಸಾಧ್ಯವಾಗದ ಕಾರಣ ಹಳ್ಳಿಗಳಲ್ಲಿನ ಶೇ 70ರಷ್ಟು ಜನ ಸರ್ಕಾರಿ ಆಸ್ಪತ್ರೆಯನ್ನೇ ಅವಲಂಭಿಸಿದ್ದಾರೆ. ಸರ್ಕಾರಿ ಆಸ್ಪತ್ರೆಗಳ ವೈದ್ಯರು ಬಡ ರೋಗಿಗಳ ಚಿಕಿತ್ಸೆಗೆ ಕಾಳಜಿ ವಹಿಸುತ್ತಿಲ್ಲ’ ಎಂದರು.

‘ಸರ್ಕಾರಿ ಆಸ್ಪತ್ರೆಗಳಲ್ಲಿ ಬಡರೋಗಿಗಳಿಗೆ ಉತ್ತಮ ಗುಣ ಮಟ್ಟದ ಉಚಿತ ಆಹಾರ ನೀಡಬೇಕು. ಬಡ ರೋಗಿಗಳಿಗೆ ಉಚಿತ ಸೇವೆಗಳನ್ನು ನೀಡಬೇಕು’ ಎಂದೂ ಒತ್ತಾಯಿಸಿದರು.

‘ವೈದ್ಯರು ಖಾಸಗಿಯಾಗಿ ಪ್ರಾಕ್ಟೀಸ್ ನಡೆಸಲು ಸರ್ಕಾರದ ಅನುಮತಿ ಪಡೆಯಬೇಕೆಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಆಯುಕ್ತರು 2018 ಮೇ 24ರಂದು ಹೊರಡಿಸಿದ್ದ ಆದೇಶವನ್ನು ಪರಿಷ್ಕರಿಸಲಾಗಿದೆ. ಕರ್ತವ್ಯದ ಅವಧಿ ಮುಗಿದ ನಂತರ ಖಾಸಗಿ ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸಬಹುದು ಎಂದು ಪರಿಷ್ಕೃತ ಆದೇಶ ಹೇಳುತ್ತದೆ. ದಿನದಲ್ಲಿ ಎರಡು ಮೂರು ಗಂಟೆ ಮಾತ್ರ ಸರ್ಕಾರಿ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ಸರ್ಕಾರಿ ಆಸ್ಪತ್ರೆಗಳಲ್ಲಿ ತುರ್ತು ಸಂದರ್ಭದಲ್ಲಿ ವೈದ್ಯರು ಸಿಗದ ಪರಿಸ್ಥಿತಿ ನಿರ್ಮಾಣವಾಗಿದೆ’ ಎಂದರು.

ಪರಿಸರ ಸ್ನೇಹಿ ಪ್ರಯತ್ನ: ಇಂಧನ ಉಳಿತಾಯಕ್ಕೂ ದಾರಿ • ಬ್ಯಾಟರಿ ಬದಲಾಯಿಸಲು ವಿವಿಧೆಡೆ ಸ್ಟೇಷನ್‌ಗಳು

ಹಳೆಯ ಸ್ಕೂಟರ್‌ಗೆ 'ಎಲೆಕ್ಟ್ರಿಕ್' ಸ್ವರೂಪ

• ಸಚ್ಚಿದಾನಂದ ಕುರಗುಂದ

ಹೊಸ ಬೆಳಕು

ಬೆಂಗಳೂರು: ಪರಿಸರ ಮಾಲಿನ್ಯ ತಡೆಯುವ ಪ್ರಯತ್ನಕ್ಕೆ 'ಬೌನ್ಸ್' ಮತ್ತೊಂದು ನವೋದ್ಯಮದ ಮೂಲಕ ಹೊಸ ಹೆಜ್ಜೆ ಇರಿಸಿದೆ. ಸುಸ್ಥಿರ ಸಂಚಾರ ಕ್ಷೇತ್ರದಲ್ಲಿ ತನ್ನದೇ ಆದ ಛಾಪು ಮೂಡಿಸಿರುವ ಈ ಕಂಪನಿ, ಪೆಟ್ರೋಲ್ ಚಾಲಿತ ದ್ವಿಚಕ್ರ ವಾಹನಗಳನ್ನು ವಿದ್ಯುತ್ (ಎಲೆಕ್ಟ್ರಿಕ್) ವಾಹನಗಳನ್ನಾಗಿ ಪರಿವರ್ತಿಸುವ ಮಹತ್ವಾಕಾಂಕ್ಷಿ ಯೋಜನೆ ಕೈಗೊಂಡಿದೆ.

ಭವಿಷ್ಯವು ಎಲೆಕ್ಟ್ರಿಕ್ ವಾಹನಗಳನ್ನು ಅವಲಂಬಿಸಿರಲಿದೆ ಎಂಬುದರ ಮೇಲೆ ನಂಬಿಕೆ ಇಟ್ಟಿರುವ ಸಂಸ್ಥೆಯು, ಈ ವಾಹನಗಳ ಉತ್ಪಾದನೆಯನ್ನು ಆರಂಭಿಸಿದೆ. 'ಝುಯಿಂಕ್ ರೆಟ್ರೊಫಿಟ್' ಹೆಸರಿನಲ್ಲಿ 'ಬೌನ್ಸ್' ಸಮೂಹ ತನ್ನದೇ ಆದ ಅಂಗಸಂಸ್ಥೆಯನ್ನು ಆರಂಭಿಸಿದೆ. ಸಾಂಪ್ರದಾಯಿಕ ಇಂಧನ ಬಳಸುವ ಸ್ಕೂಟರ್‌ಗಳನ್ನು ರೆಟ್ರೊ ಫಿಟ್ (ಎಲೆಕ್ಟ್ರಿಕ್) ಆಗಿ ಪರಿವರ್ತಿಸಬಹುದು.

ಪೆಟ್ರೋಲ್ ದರ ಏರಿಕೆಯಿಂದಾಗಿ ಇಂದು ಅನೇಕರು ಎಲೆಕ್ಟ್ರಿಕ್ ವಾಹನಗಳ ಮೊರೆ ಹೋಗುತ್ತಿದ್ದಾರೆ. ಹೀಗಾಗಿ, 'ಝುಯಿಂಕ್ ರೆಟ್ರೊಫಿಟ್' ವಾಹನ ಸವಾರರಿಗೆ ತನ್ನದೇ ಆದ ಯೋಜನೆಗಳ ಮೂಲಕ ನೆರವು ನೀಡಲು ಮುಂದಾಗಿದೆ. ಹಳೆಯ ದ್ವಿಚಕ್ರ ವಾಹನಗಳನ್ನೇ ವಿದ್ಯುತ್ ವಾಹನಗಳನ್ನಾಗಿ ಪರಿವರ್ತಿಸುತ್ತಿರುವುದು ಈ ನವೋದ್ಯಮದ ವಿಶೇಷ.



'ಝುಯಿಂಕ್ ರೆಟ್ರೊಫಿಟ್' ಸ್ಕೂಟರ್

ವಿಶೇಷಗಳು

- ಪ್ರತಿ ಗಂಟೆಗೆ 65 ಕಿ.ಮೀ. ವೇಗದಲ್ಲಿ ಚಲಾಯಿಸಬಹುದು
- ಬ್ಯಾಟರಿ ಶಕ್ತಿ ಕಡಿಮೆಯಾದರೆ ಎಚ್ಚರಿಕೆಯ ಸಂದೇಶ
- 'ರಿವರ್ಸ್ ಮೋಡ್' ಸೌಲಭ್ಯ

'ಪೆಟ್ರೋಲ್ ವಾಹನಕ್ಕೆ ಕಿಟ್ ಅಳವಡಿಸಲಾಗುತ್ತದೆ. ದ್ವಿಚಕ್ರ ವಾಹನದಲ್ಲಿನ ಎಂಜಿನ್ ತೆಗೆದು ಕಿಟ್ ಮತ್ತು ಹಬ್ ಮೋಟಾರ್ ಅಳವಡಿಸಲಾಗುತ್ತದೆ. ಇದಕ್ಕಾಗಿ ತಗಲುವ ವೆಚ್ಚವನ್ನು ಪ್ರತಿ ತಿಂಗಳು ಹಣ ಪಾವತಿಸುವ (ಇಎಂಐ) ವ್ಯವಸ್ಥೆಯೂ ಇದೆ. ಎಲೆಕ್ಟ್ರಿಕ್‌ಗೆ ಪರಿವರ್ತನೆ ಮಾಡುವುದರಿಂದ ಉಳಿತಾಯವೂ ಸಾಧ್ಯ. ದಿನದಲ್ಲಿ ಸರಾಸರಿ 100 ಕಿ.ಮೀ ವಾಹನ ಚಲಾಯಿಸುತ್ತಿರುವ ಗ್ರಾಹಕರಿಗೆ, ಎಲ್ಲ ವೆಚ್ಚವನ್ನೂ ಲೆಕ್ಕ ಹಾಕಿದಾಗ ₹500 ಉಳಿತಾಯವಾಗುತ್ತದೆ' ಎಂದು ಬೌನ್ಸ್ ಸಹ ಸ್ಥಾಪಕ ವಿವೇಕಾನಂದ ಹಳ್ಳಿಕೆರೆ ತಿಳಿಸಿದರು.

'ಸದ್ಯ ಹೊಂಡಾ ಆ್ಯಕ್ಟಿವಾ ಸ್ಕೂಟರ್ ಅನ್ನು ವಿದ್ಯುತ್ ವಾಹನವನ್ನಾಗಿ ಪರಿವರ್ತಿಸಲಾಗುತ್ತಿದೆ. ಒಂದೆರಡು ವಿವಿಧ ಬೈಕ್‌ಗಳ ಮೇಲೆ ಪ್ರಯೋಗ ಮಾಡಲಾಗಿದೆ. ಶೀಘ್ರದಲ್ಲೇ ಇತರ ಎಲ್ಲ ಬೈಕ್‌ಗಳನ್ನು ಪರಿವರ್ತಿಸುವ ಕಾರ್ಯ ಆರಂಭಿಸಲಾಗುವುದು. ಒಮ್ಮೆ ಎಲೆಕ್ಟ್ರಿಕ್ ಮಾದರಿಗೆ ಪರಿವರ್ತನೆಯಾದ ಸ್ಕೂಟರ್ ಅನ್ನು 1 ಲಕ್ಷ ಕಿ.ಮೀ ಓಡಿಸಬಹುದು' ಎಂದು ವಿವರಿಸಿದರು.

'ಕಡಿಮೆ ಬೆಲೆಯಲ್ಲಿ ವಾಹನ ಗಳನ್ನು ಎಲೆಕ್ಟ್ರಿಕಲ್‌ಗೆ ಪರಿವರ್ತಿಸಲಾಗುತ್ತಿದೆ. ಉದಾಹರಣೆಗೆ, ಏಳು ವರ್ಷದ ಸ್ಕೂಟರ್ ಮಾರಾಟ ಮಾಡಿ, ಹೊಸ ದ್ವಿಚಕ್ರ ವಾಹನ ಖರೀದಿಸುವುದಕ್ಕೆ ₹70 ಸಾವಿರದಿಂದ ₹1 ಲಕ್ಷವಾಗಬಹುದು. ಆದರೆ, ಇಲ್ಲಿ ಪ್ರತಿ ತಿಂಗಳು ₹899 ಪಾವತಿಸುವ ಮೂಲಕ ಹಳೆಯ ವಾಹನವನ್ನು ಎಲೆಕ್ಟ್ರಿಕಲ್‌ಗೆ ಪರಿವರ್ತಿಸಬಹುದು' ಎಂದು ಝುಯಿಂಕ್ ರೆಟ್ರೊಫಿಟ್‌ನ ಉಪಾಧ್ಯಕ್ಷ ಸಚಿನ್ ಶೆಣೈ ವಿವರಿಸಿದರು.

'ಎಲೆಕ್ಟ್ರಿಕ್ ಮಾದರಿಗೆ ಪರಿವರ್ತನೆ ಹೊಂದಿರುವ ಸ್ಕೂಟರ್‌ನಲ್ಲಿ ರಿವರ್ಸ್ ಮೋಡ್ ಸೌಲಭ್ಯ ಇದೆ. ವಾಹನವನ್ನು ಹಿಂದೆ ತಳ್ಳುವುದಕ್ಕೆ ಇದು ಪ್ರಯೋಜನಕಾರಿ' ಎಂದು ತಿಳಿಸಿದರು.

'ಪೆಟ್ರೋಲ್ ಬಳಸಿ ಚಲಾಯಿಸುವ ಸ್ಕೂಟರ್ ಅನ್ನು ಎಲೆಕ್ಟ್ರಿಕ್ ಮಾದರಿಗೆ ಪರಿವರ್ತಿಸಿದಾಗ, ತಿಂಗಳ ಇಂಧನದ ವೆಚ್ಚ ಶೇಕಡ 50ಕ್ಕಿಂತಲೂ ಕಡಿಮೆಯಾಗುತ್ತದೆ. ಪೆಟ್ರೋಲ್‌ಗಾಗಿ ಗ್ರಾಹಕರು ಪ್ರತಿ ಕಿಲೋ ಮೀಟರ್‌ಗೆ ಸರಾಸರಿ ₹3ರಿಂದ 3.5 ವೆಚ್ಚ ಮಾಡುತ್ತಾರೆ. ಇದನ್ನು ಎಲೆಕ್ಟ್ರಿಕ್‌ಗೆ ಪರಿವರ್ತಿಸಿದರೆ ₹1.5 ತಗಲುತ್ತದೆ' ಎಂದು ವಿವರಿಸಿದರು.

ಮಾಹಿತಿಗೆ www.zuink.in/retrofit, +91 89519 71198 ಸಂಪರ್ಕಿಸಬಹುದು.

ಇಂಗಾಲ ಸೂಸುವಿಕೆ ಕಡಿಮೆ

'ಆರೇಳು ವರ್ಷದ ಹೊಂಡಾ ಆ್ಯಕ್ಟಿವಾ ಅಥವಾ ಟಿವಿಎಸ್ ಸ್ಕೂಟಿ ಇದ್ದರೆ ಎಲೆಕ್ಟ್ರಿಕ್ ವಾಹನವನ್ನಾಗಿ ಪರಿವರ್ತಿಸಿದರೆ ಕಾರ್ಬನ್ ಹೊರಸೂಸುವಿಕೆಯೂ ಕಡಿಮೆಯಾಗುತ್ತದೆ. ಇದರಿಂದ, ವಾಯು ಮಾಲಿನ್ಯವನ್ನೂ ನಿಯಂತ್ರಿಸಿದಂತಾಗುತ್ತದೆ. ಪರಿವರ್ತನೆಯ ಸಂದರ್ಭದಲ್ಲಿ ಸ್ಕೂಟರ್ ಎಂಜಿನ್, ಇಂಧನ ಟ್ಯಾಂಕ್ ಮತ್ತು ಸೈಲೆನ್ಸರ್ ಅನ್ನು ತೆಗೆದು ಅವುಗಳ ಬದಲಿಗೆ ಎಲೆಕ್ಟ್ರಿಕ್ ಪವರ್‌ಟ್ರೈನ್ ಅಳವಡಿಸಲಾಗುತ್ತದೆ. ಜತೆಗೆ, ಕೆಲವು ಬದಲಾವಣೆಗಳನ್ನು ಮಾಡಲಾಗುತ್ತಿದೆ. ಗ್ರಾಹಕರ ಬೇಡಿಕೆಗಳನ್ನು ಗಮನದಲ್ಲಿರಿಸಿಕೊಂಡು ಈ ಪ್ರಯತ್ನ ಕೈಗೊಳ್ಳಲಾಗಿದೆ' ಎಂದು ಕಂಪನಿ ತಿಳಿಸಿದೆ.

ಒಮೈಕ್ರಾನ್: ಮೊದಲ ಸೋಂಕಿತ ಗುಣಮುಖ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊರೊನಾ ವೈರಾಣುವಿನ ರೂಪಾಂತರಿ ಒಮೈಕ್ರಾನ್ ಸೋಂಕಿಗೆ ಒಳಗಾಗಿದ್ದ ಇಲ್ಲಿನ 46 ವರ್ಷದ ವೈದ್ಯರು ಸಂಪೂರ್ಣ ಗುಣಮುಖರಾಗಿ, ಆಸ್ಪತ್ರೆಯಿಂದ ಬುಧವಾರ ಮನೆಗೆ ಮರಳಿದ್ದಾರೆ. ರಾಜ್ಯದಲ್ಲಿ ಹೊಸ ತಳಿಯ ವೈರಾಣು ಸೋಂಕಿಗೆ ಒಳಗಾದ ಮೊದಲಿಗರು ಇವರಾಗಿದ್ದರು.

ಅವರಿಗೆ ಒಮೈಕ್ರಾನ್ ಸೋಂಕು ತಗುಲಿರುವುದು ವೈರಾಣುವಿನ ವಂಶವಾಹಿ ಸಂರಚನಾ ವಿಶ್ಲೇಷಣೆಯಿಂದ (ಜೀನೋಮ್ ಸೀಕ್ವೆನ್ಸಿಂಗ್) ಡಿ.2ರಂದು ದೃಢಪಟ್ಟಿತ್ತು. ಅವರನ್ನು ಇಲ್ಲಿನ ಬೌರಿಂಗ್ ಆಸ್ಪತ್ರೆಯಲ್ಲಿ ಪ್ರತ್ಯೇಕವಾಸಕ್ಕೆ ಒಳಪಡಿಸಲಾಗಿತ್ತು. ಅವರ ಪತ್ನಿ ಮತ್ತು ಮಕ್ಕಳೂ ಕೋವಿಡ್ ಪೀಡಿತರಾಗಿದ್ದರು. ಅವರಿಗೆ ಹೊಸ ತಳಿಯ ವೈರಾಣು ತಗುಲಿರಲಿಲ್ಲ. ಆದರೂ ಅವರನ್ನ ಆಸ್ಪತ್ರೆಯಲ್ಲಿಯೇ ಪ್ರತ್ಯೇಕ ವಾಸಕ್ಕೆ ಒಳಪಡಿಸಲಾಗಿತ್ತು.

ಡಿ.6ರಂದು ವೈದ್ಯರನ್ನು ಮನೆಗೆ ಕಳುಹಿಸಲು ಆಸ್ಪತ್ರೆಯಲ್ಲಿ ಆರ್‌ಟಿ-ಪಿಸಿಆರ್ ಪರೀಕ್ಷೆ ನಡೆಸಲಾಗಿತ್ತು. ಆಗ ಅವರಲ್ಲಿ ಮತ್ತೆ ಕೊರೊನಾ ಸೋಂಕು ಕಾಣಿಸಿಕೊಂಡಿತ್ತು. ಹೀಗಾಗಿ, ಅವರಿಗೆ ಅಲ್ಲಿಯೇ ಚಿಕಿತ್ಸೆ ಮುಂದುವರಿಸಲಾಗಿತ್ತು. ಈಗ ಅವರನ್ನು ಮನೆಗೆ ಕಳುಹಿಸುವ ಮೊದಲು ಎರಡು ಬಾರಿ ಆರ್‌ಟಿ-ಪಿಸಿಆರ್ ಪರೀಕ್ಷೆ ನಡೆಸಲಾಗಿದ್ದು, ಪೂರ್ಣ ಪ್ರಮಾಣದಲ್ಲಿ ಗುಣಮುಖರಾಗಿರುವುದು ದೃಢಪಟ್ಟಿದೆ.

ಕೋವಿಡ್ ಮಾರ್ಗಸೂಚಿ ಅನುಸಾರ 7 ದಿನಗಳು ಮನೆಯಲ್ಲಿಯೇ ಪ್ರತ್ಯೇಕವಾಸಕ್ಕೆ ಒಳಗಾಗುವಂತೆ ಆಸ್ಪತ್ರೆ ವೈದ್ಯರು ಸೂಚಿಸಿದ್ದಾರೆ. ಕೋವಿಡ್ ಪೀಡಿತರಾಗಿದ್ದ ಅವರ ಪತ್ನಿ ಮತ್ತು ಮಕ್ಕಳು ಕೂಡ ಪೂರ್ಣ ಪ್ರಮಾಣದಲ್ಲಿ ಚೇತರಿಸಿಕೊಂಡು ಮನೆಗೆ ಮರಳಿದ್ದಾರೆ.

ಬೆಂಗಳೂರು ನಗರ ಜಿಲ್ಲಾ ಕೋವಿಡ್ ಅಂಕಿ–ಅಂಶ

12,59,388 ಒಟ್ಟು ಪ್ರಕರಣಗಳು ▲
(12,59,183 ನಿನ್ನೆಯ ವಿವರ)

5,570 ▲	12,37,445 ▲	16,372 ▲
ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	205 ▲
ಗುಣಮುಖ	139 ▼
ಸಾವು	02 ▲

ಆಧಾರ: ಆರೋಗ್ಯ ಇಲಾಖೆ

ಪ್ರಜಾವಾಣಿ ಗ್ರಾಫಿಕ್ಸ್

ಇಂಗ್ಲೆಂಡ್‌ನಿಂದ ಬಂದ ಮೂರು ಜನರಿಗೆ ಕೋವಿಡ್

ದೇವನಹಳ್ಳಿ: ಇಂಗ್ಲೆಂಡ್‌ನಿಂದ ಬುಧವಾರ ಮುಂಜಾನೆ ದೇವನಹಳ್ಳಿ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿದ್ದ ಪ್ರಯಾಣಿಕರ ಪೈಕಿ ಮೂವರಿಗೆ ಕೋವಿಡ್ ದೃಢಪಟ್ಟಿದೆ. ಸೋಂಕಿತರನ್ನು ಬೌರಿಂಗ್ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಬೆಂಗಳೂರು ಗ್ರಾಮಾಂತರ ಡಿಎಚ್‌ಒ ಡಾ.ತಿಪ್ಪೇಸ್ವಾಮಿ ತಿಳಿಸಿದ್ದಾರೆ. 25 ವರ್ಷದ ಪುರುಷ, 18 ವರ್ಷದ ಯುವಕ ಮತ್ತು 9 ವರ್ಷದ ಬಾಲಕನಿಗೆ ಕೋವಿಡ್ ದೃಢಪಟ್ಟಿದೆ.

19 ಜಿಲ್ಲೆಗಳಲ್ಲಿ ಕಡಿಮೆ ಪ್ರಕರಣ: ರಾಜ್ಯದಲ್ಲಿ ಕೋವಿಡ್ ಸಕ್ರಿಯ ಪ್ರಕರಣಗಳ ಸಂಖ್ಯೆ 7,179ಕ್ಕೆ ಇಳಿಕೆಯಾಗಿದ್ದು, 19 ಜಿಲ್ಲೆಗಳಲ್ಲಿ ಸೋಂಕಿತರ ಸಂಖ್ಯೆ 100ಕ್ಕಿಂತ ಕಡಿಮೆಯಿದೆ.

ಎಸ್–ವಂಶವಾಹಿ ಪರೀಕ್ಷೆಗೆ ಶಿಫಾರಸು

ಬೆಂಗಳೂರು: ವೈರಾಣುವಿನ ವಂಶವಾಹಿ ಸಂರಚನಾ ವಿಶ್ಲೇಷಣೆ (ಜೀನೋಮ್ ಸೀಕ್ವೆನ್ಸಿಂಗ್) ಪರೀಕ್ಷಾ ವರದಿ ವಿಳಂಬವಾಗುತ್ತಿರುವುದರಿಂದ ಓಮೈಕ್ರಾನ್ ಸೋಂಕು ಶಂಕಿತರಿಗೆ ಎಸ್‌-ವಂಶವಾಹಿ ಗುರಿ ವೈಫಲ್ಯ ಪರೀಕ್ಷೆ (ಎಸ್‌ಜಿಟಿಎಫ್) ನಡೆಸಬೇಕೆಂದು ಕೋವಿಡ್ ತಾಂತ್ರಿಕ ಸಲಹಾ ಸಮಿತಿ ಶಿಫಾರಸು ಮಾಡಿದೆ

ಸಮಿತಿಯು 139ನೇ ಸಭೆಯಲ್ಲಿ ಕೋವಿಡ್ ಪರೀಕ್ಷಾ ವಿಧಾನದ ಬಗ್ಗೆ ಚರ್ಚಿಸಿದೆ. 'ಓಮೈಕ್ರಾನ್ ಸೋಂಕು ಶಂಕಿತರು ಹೆಚ್ಚಿನ ಸಂಖ್ಯೆಯಲ್ಲಿ ವಿಮಾನ ನಿಲ್ದಾಣದಲ್ಲಿ ಪತ್ತೆಯಾಗುತ್ತಿದ್ದಾರೆ. ವೈರಾಣುವಿನ ವಂಶವಾಹಿ ಸಂರಚನಾ ವಿಶ್ಲೇಷಣೆ ವರದಿ ವಿಳಂಬವಾದಲ್ಲಿ ಆಸ್ಪತ್ರೆ ವಾಸದ ಅವಧಿಯೂ ಹೆಚ್ಚಾಗಲಿದೆ. ಹೀಗಾಗಿ, ವಿದೇಶದಿಂದ ಬಂದು, ಕೋವಿಡ್ ಪೀಡಿತರಾದವರಿಗೆ ಎಸ್‌ಜಿಟಿಎಫ್ ಪರೀಕ್ಷೆ ನಡೆಸಬೇಕು. ಈ ವಿಧಾನದ ಪರೀಕ್ಷೆಯಲ್ಲಿ 4 ಗಂಟೆಗಳಲ್ಲಿ ವರದಿ ಬರಲಿದೆ' ಎಂದು ಸಮಿತಿಯ ತಜ್ಞರು ಅಭಿಮತ ವ್ಯಕ್ತಪಡಿಸಿದ್ದಾರೆ.

'ವಿಮಾನ ನಿಲ್ದಾಣದಲ್ಲಿ ಸೋಂಕು ಶಂಕೆ ವ್ಯಕ್ತವಾದ ಕೂಡಲೇ ಬೌರಿಂಗ್ ಆಸ್ಪತ್ರೆಗೆ ರವಾನಿಸಬೇಕು. ಆಸ್ಪತ್ರೆಗೆ ಎಸ್‌ಜಿಟಿಎಫ್ ಪರೀಕ್ಷಾ ಕಿಟ್‌ಗಳನ್ನು ಪೂರೈಸಬೇಕು. ಈ ಕಿಟ್‌ಗಳ ನೆರವಿನಿಂದ ನಡೆಸಲಾಗುವ ಪರೀಕ್ಷೆಯಲ್ಲಿ ಎಸ್–ವಂಶವಾಹಿ ಪತ್ತೆಯಾದಲ್ಲಿ ಓಮೈಕ್ರಾನ್ ಎಂದು ಪರಿಗಣಿಸಿ, ಚಿಕಿತ್ಸೆ ನೀಡಬೇಕು' ಎಂದು ತಜ್ಞರು ಸಲಹೆ ನೀಡಿದ್ದಾರೆ.

'ನೆಗೆಟಿವ್ ಬಂದರೂ ಪ್ರತ್ಯೇಕ ವಾಸ'

ಬೆಂಗಳೂರು: 'ಓಮೈಕ್ರಾನ್ ಹರಡಿರುವ ಅತೀ ಅಪಾಯಕಾರಿ ದೇಶಗಳಿಂದ ಬರುವ ಪ್ರಯಾಣಿಕರಿಗೆ ಕೋವಿಡ್ ನೆಗೆಟಿವ್ ವರದಿ ಬಂದರೂ ಪ್ರತ್ಯೇಕ ವಾಸದಲ್ಲಿರಿಸುವ ಬಗ್ಗೆ ಚಿಂತನೆ ನಡೆಸಲಾಗುತ್ತಿದೆ' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ತಿಳಿಸಿದರು.

ಈ ವ್ಯವಸ್ಥೆಯನ್ನು ರಾಜ್ಯಮಟ್ಟದಲ್ಲಿ ಜಾರಿಗೆ ತರುವ ಪ್ರಸ್ತಾಪ ಇದೆ. ಪ್ರತ್ಯೇಕ ವಾಸಕ್ಕೆ ಎಲ್ಲಿ ವ್ಯವಸ್ಥೆ ಕಲ್ಪಿಸಬೇಕು ಎಂಬುದರ ಬಗ್ಗೆ ರೂಪುರೇಷೆಗಳನ್ನು ಸಿದ್ಧಪಡಿಸಲಾಗುತ್ತಿದೆ ಎಂದರು.

'ಐರೋಪ್ಯ ದೇಶಗಳಲ್ಲಿ ಓಮೈಕ್ರಾನ್ ವೇಗವಾಗಿ ಹರಡುತ್ತಿದೆ. ಡೆಲ್ಟಾ ಪ್ಲಸ್ ಬದಲು ಓಮೈಕ್ರಾನ್ ನಮ್ಮ ದೇಶದಲ್ಲೂ ಹರಡಬಹುದು. ಅದನ್ನು ಎದುರಿಸಲು ಬೇಕಿರುವ ಎಲ್ಲಾ ಸಿದ್ಧತೆಗಳನ್ನು ಮಾಡಿಕೊಂಡಿದ್ದೇವೆ' ಎಂದರು.

'ವಿದೇಶಗಳಿಂದ ಬರುವ ಪ್ರಯಾಣಿಕರಿಂದ ಆದಷ್ಟು ಜನ ಅಂತರ ಕಾಪಾಡಿಕೊಳ್ಳಬೇಕು. ಪ್ರಯಾಣಿಕರು ಸ್ವಯಂ ಪ್ರತ್ಯೇಕವಾಸ ಇರುವುದು ಸೂಕ್ತ' ಎಂದು ಅವರು ಹೇಳಿದರು.

'ಪ್ರತಿದಿನ ಸರಾಸರಿ 300 ಜನ ಕೋವಿಡ್ ಸೋಂಕಿತರು ಆಸ್ಪತ್ರೆಯಲ್ಲಿದ್ದಾರೆ. 3 ಸಾವಿರ ಹಾಸಿಗೆಗಳನ್ನು ಕೋವಿಡ್ ಸೋಂಕಿತರಿಗಾಗಿ ಮೀಸಲಿಡಲಾಗಿದೆ. ಸೋಂಕಿತರ ಸಂಖ್ಯೆ 300 ದಾಟಿದರೆ ಇನ್ನಷ್ಟು ಹಾಸಿಗೆ ಮೀಸಲಿಡಲಾಗುವುದು' ಎಂದು ಸ್ಪಷ್ಟಪಡಿಸಿದರು.

'ಲಸಿಕೆ ಪಡೆಯುವ ಅಗತ್ಯದ ಬಗ್ಗೆ ಆಂದೋಲನ ಆರಂಭಿಸಿದ್ದೇವೆ. ಈಗ 6 ವಾಹನಗಳನ್ನು ಸಿಎಸ್‌ಆರ್ ನಿಧಿಯಲ್ಲಿ ಕಾರ್ಪೊರೇಟ್ ಕಂಪನಿಗಳು ಒದಗಿಸಿವೆ' ಎಂದರು.

ಕ್ಯಾನ್ಸರ್ ರೋಗಿಗೆ ವಿದ್ಯಾರ್ಥಿನಿ ಆಕರ ಕೋಶ ದಾನ

ಬೆಂಗಳೂರು: ರಕ್ತ ಕ್ಯಾನ್ಸರ್‌ನಿಂದ ಬಳಲುತ್ತಿದ್ದ ನಗರದ ರೋಗಿಯೊಬ್ಬರಿಗೆ 23 ವರ್ಷದ ವೈದ್ಯಕೀಯ ವಿದ್ಯಾರ್ಥಿನಿಯೊಬ್ಬರು ರಕ್ತದ ಆಕರ ಕೋಶಗಳನ್ನು ದಾನ ಮಾಡುವ ಮೂಲಕ ಅವರು ಚೇತರಿಸಿಕೊಳ್ಳಲು ನೆರವಾಗಿದ್ದಾರೆ.

ವಿದ್ಯಾರ್ಥಿನಿ ಸ್ಮಿತಾ ಅವರು ರಕ್ತದ ಆಕರಕೋಶ ದಾನಿಗಳ ನೋಂದಣಿ ಸೇವಾ ಸಂಸ್ಥೆ ‘ಡಿಕೆಎಂಎಸ್-ಬಿಎಂಎಸ್‌ಟಿ ಫೌಂಡೇಷನ್’ನಲ್ಲಿ ಹೆಸರು ನೋಂದಾಯಿಸಿದ್ದರು. 9 ತಿಂಗಳ ಬಳಿಕ ಅವರ ರಕ್ತದ ಆಕರ ಕೋಶ ರೋಗಿಯೊಬ್ಬರಿಗೆ ಹೊಂದಾಣಿಕೆಯಾಗಿದೆ.

‘ರಕ್ತದ ಆಕರ ಕೋಶ ದಾನದ ಬಗ್ಗೆ ಬಹುತೇಕರಿಗೆ ಮಾಹಿತಿ ಕೊರತೆಯಿದೆ. ದಾನ ಮಾಡಲು ನಾನು ನಿರ್ಧರಿಸಿದಾಗ ಕುಟುಂಬದ ಸದಸ್ಯರು ಆತಂಕ ವ್ಯಕ್ತಪಡಿಸಿದ್ದರು. ಪ್ರಕ್ರಿಯೆ ಬಗ್ಗೆ ವಿವರಿಸಿದ ಬಳಿಕ ಬೆಂಬಲಿಸಿದರು’ ಎಂದು ವಿದ್ಯಾರ್ಥಿನಿ ಸ್ಮಿತಾ ತಿಳಿಸಿದ್ದಾರೆ.

‘ರಕ್ತ ಕ್ಯಾನ್ಸರ್‌ನಿಂದ ಬಳಲುತ್ತಿರುವ ರೋಗಿಗಳನ್ನು ಕಾಪಾಡಲು ರಕ್ತದ ಆಕರ ಕೋಶ ಸಹಾಯಕ. ದಾನಿಗಳ ರಕ್ತದಿಂದ ಆಕರ ಕೋಶಗಳನ್ನು ಪಡೆದು, ಅಸ್ಥಿಮಜ್ಜೆ ಹಾಳಾಗಿರುವಂತಹ ರೋಗಿಗಳಿಗೆ ಕಸಿ ಮಾಡಲಾಗುತ್ತದೆ. ಇದು ಅಗತ್ಯವಿರುವಂತಹ ರೋಗಿಗಳ ಕುಟುಂಬದಲ್ಲಿ ಹೊಂದಾಣಿಕೆಯಾಗಬಲ್ಲ ದಾನಿಗಳು ಸಿಗುವುದು ಕಷ್ಟ’ ಎಂದು ಡಿಕೆಎಂಎಸ್-ಬಿಎಂಎಸ್‌ಟಿ ಫೌಂಡೇಷನ್ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಪ್ಯಾಟ್ರಿಕ್ ಪಾಲ್ ಹೇಳಿದ್ದಾರೆ.

ಹಾಪ್‌ಕಾಮ್ಸ್: ಸಂಸ್ಥೆಯ ವಾಹನದಲ್ಲೇ ಉತ್ಪನ್ನ ಪೂರೈಕೆ

ಶುಭ ಸಮಾರಂಭಗಳಿಗೆ ರಿಯಾಯಿತಿ ದರ

• ಮನೋಹರ್ ಎಂ.

ಬೆಂಗಳೂರು: ಮದುವೆ, ನಾಮಕರಣ, ನಿಶ್ಚಿತಾರ್ಥ ಸೇರಿದಂತೆ ವಿವಿಧ ಶುಭ ಸಮಾರಂಭಗಳಿಗೆ ರಿಯಾಯಿತಿ ದರದಲ್ಲಿ ಉತ್ಪನ್ನಗಳನ್ನು ಸರಬರಾಜು ಮಾಡುವ ಹೊಸ ಸೇವೆಯನ್ನು ತೋಟದ ಬೆಳೆಗಾರರ ಸಹಕಾರಿ ಮಾರಾಟ ಮತ್ತು ಸಂಸ್ಕರಣಾ ಸಂಘವು (ಹಾಪ್‌ಕಾಮ್ಸ್) ಪರಿಚಯಿಸಿದೆ.



ಸಾಂದರ್ಭಿಕ ಚಿತ್ರ

ಸಮಾರಂಭಗಳಿಗೆ ಅಗತ್ಯವಿರುವ ತರಕಾರಿ, ಹಣ್ಣು ಮತ್ತು ಭೋಜನ ತಯಾರಿಗೆ ಬೇಕಾಗುವ ದಿನಸಿ ಪದಾರ್ಥಗಳು, ಸೊಪ್ಪು ಸೇರಿದಂತೆ ಹಾಪ್‌ಕಾಮ್ಸ್‌ನಲ್ಲಿ ಲಭ್ಯವಿರುವ ಉತ್ಪನ್ನಗಳನ್ನು ಒಂದೇ ಸೂರಿನಡಿ ಖರೀದಿಸಲು ಅನುಕೂಲವಾಗುವಂತೆ ಈ ವ್ಯವಸ್ಥೆ ಕಲ್ಪಿಸಲಾಗಿದೆ.


ಉಮೇಶ್ ಎಸ್. ಮಿರ್ಜಿ

ಖರೀದಿಸುವ ಉತ್ಪನ್ನಗಳಿಗೆ ಹಾಪ್‌ಕಾಮ್ಸ್ ವತಿಯಿಂದ ಶೇ 10ರಷ್ಟು ರಿಯಾಯಿತಿ ಸಿಗಲಿದೆ. ಕಾರ್ಯಕ್ರಮ ನಡೆಯುವ ಸ್ಥಳಕ್ಕೆ ಉತ್ಪನ್ನಗಳನ್ನು ಸಂಸ್ಥೆಯ ವಾಹನದಲ್ಲೇ ಉಚಿತವಾಗಿ ಪೂರೈಕೆಯೂ ಮಾಡಲಿದೆ.

‘ಮದುವೆಯಂತಹ ಶುಭ ಸಮಾರಂಭಗಳಿಗೆ ಉತ್ಪನ್ನಗಳನ್ನು ಖರೀದಿಸಲು ಜನರು ಮಾರುಕಟ್ಟೆಗಳಿಗೆ ತೆರಳಿ ಮಳಿಗೆಗಳಿಗೆ ಅಲೆದಾಡಬೇಕಾದ ಸ್ಥಿತಿ ಇದೆ. ಗುಣಮಟ್ಟದ ಉತ್ಪನ್ನಗಳನ್ನು ಆರಿಸಿ ಕೊಂಡೊಯ್ಯುವಷ್ಟರಲ್ಲಿ ಸಮಾರಂಭದ ಆಯೋಜಕರು ಬಸವಳಿಯುತ್ತಾರೆ. ಈ ಪರದಾಟ ತಪ್ಪಿಸಲು ಹಾಗೂ ಒಂದೇ ಜಾಗದಿಂದ ಗುಣಮಟ್ಟದ ಉತ್ಪನ್ನಗಳನ್ನು ಒದಗಿಸಲು ಸಂಸ್ಥೆಯು ಅವಕಾಶ ಕಲ್ಪಿಸಲಿದೆ’ ಎಂದು ಬೆಂಗಳೂರು ಹಾಪ್‌ಕಾಮ್ಸ್‌ನ ಅಧ್ಯಕ್ಷ ಎನ್.ದೇವರಾಜ್ ‘ಪ್ರಜಾವಾಣಿ’ಗೆ ತಿಳಿಸಿದರು.

‘ಸಂಸ್ಥೆಯು ಕಾರ್ಯಕ್ರಮಗಳಿಗೆ ಗುಣಮಟ್ಟದ ಉತ್ಪನ್ನಗಳನ್ನು ಪೂರೈಕೆ ಮಾಡುತ್ತದೆ. ಈಗಾಗಲೇ ಹಲವಾರು ಸಮಾರಂಭಗಳಿಗೆ ಸಂಸ್ಥೆ ಉತ್ಪನ್ನಗಳನ್ನು ಪೂರೈಸಿದ್ದು, ಈ ಸೇವೆಗೆ ಮೆಚ್ಚುಗೆಯೂ ವ್ಯಕ್ತವಾಗಿದೆ. ನಾವು ರಿಯಾಯಿತಿ ದರದಲ್ಲಿ ಗುಣಮಟ್ಟದ ಉತ್ಪನ್ನಗಳನ್ನು ಸಮಾರಂಭ ನಡೆಯುವ ತಾಣಕ್ಕೇ ತಲುಪಿಸುವುದರಿಂದ ಗ್ರಾಹಕರ ಹಣ ಮತ್ತು ಸಮಯಗಳೆರಡೂ ಉಳಿಯಲಿದೆ. ನಿಶ್ಚಿಂತೆಯಿಂದ ಕಾರ್ಯಕ್ರಮ ನಡೆಸಲೂ ಸಹಕಾರಿ’ ಎಂದರು. ‘ಸಮಾರಂಭಗಳಿಗೆ ಸಂಸ್ಥೆ ಉತ್ಪನ್ನಗಳನ್ನು ಪೂರೈಸುವ ಮಾಹಿತಿ ಜನರಿಗೆ ಅಷ್ಟಾಗಿ ತಿಳಿದಿಲ್ಲ. ಸದ್ಯ ಬೆಂಗಳೂರಿನಾದ್ಯಂತ ಈ ಸೇವೆ ಲಭ್ಯವಿದೆ. ತಿಂಗಳಿಗೆ 10ಕ್ಕೂ ಹೆಚ್ಚು ಸಮಾರಂಭಗಳಿಗೆ ಉತ್ಪನ್ನಗಳನ್ನು ಪೂರೈಸುತ್ತಿದ್ದೇವೆ. ಭಾರಿ ಪ್ರಮಾಣದಲ್ಲಿ ಖರೀದಿಸುವವರಿಗೆ ಬೇರೆ ಜಿಲ್ಲೆಗಳಿಗೂ ಬೆಂಗಳೂರಿನಿಂದ ಉತ್ಪನ್ನಗಳನ್ನು ತಲುಪಿಸಲಿದ್ದೇವೆ’ ಎಂದರು.

ಮುಂಗಡ ಪಾವತಿಸಿ ಕಾಯ್ದಿರಿಸಿ

‘ಸಮಾರಂಭಗಳಿಗೆ ₹20 ಸಾವಿರಕ್ಕೂ ಮೇಲ್ಪಟ್ಟು ಖರೀದಿಸುವವರಿಗೆ ಮಾತ್ರ ಉಚಿತವಾಗಿ ಉತ್ಪನ್ನಗಳನ್ನು ಸರಬರಾಜು ಮಾಡಲಾಗುವುದು. ಅದಕ್ಕಿಂತ ಕಡಿಮೆ ಮಿತಿಯಲ್ಲಿ ಉಚಿತ ಸೇವೆ ನೀಡಿದರೆ ಸಂಸ್ಥೆಗೂ ನಷ್ಟ’ ಎಂದು ಹಾಪ್‌ಕಾಮ್ಸ್‌ನ ವ್ಯವಸ್ಥಾಪಕ ನಿರ್ದೇಶಕ ಉಮೇಶ್ ಎಸ್.ಮಿರ್ಜಿ ತಿಳಿಸಿದರು.

‘ಹಾಪ್‌ಕಾಮ್ಸ್‌ನಿಂದ ಉತ್ಪನ್ನಗಳನ್ನು ಖರೀದಿಸುವವರು ಸಮಾರಂಭಕ್ಕೂ ಮುನ್ನವೇ ಸಂಸ್ಥೆಗೆ ತಿಳಿಸಬಹುದು. ಆಗ ಗುಣಮಟ್ಟದ ತರಕಾರಿ ಮತ್ತು ಹಣ್ಣನ್ನು ರೈತರಿಂದ ನೇರವಾಗಿ ತರಿಸಿ, ಸಮಾರಂಭ ನಡೆಯುವ ತಾಣಗಳಿಗೆ ತಲುಪಿಸಬಹುದು’ ಎಂದರು.

‘ಉತ್ಪನ್ನಗಳನ್ನು ಖರೀದಿಸಲು ಇಚ್ಛಿಸುವವರು ಲಾಲ್‌ಬಾಗ್ ಬಳಿ ಇರುವ ಹಾಪ್‌ಕಾಮ್ಸ್ ಕೇಂದ್ರ ಕಚೇರಿಯನ್ನು ಸಂಪರ್ಕಿಸಬಹುದು ಅಥವಾ 9845529370 ಸಂಖ್ಯೆಗೆ ಕರೆ ಮಾಡಬಹುದು’ ಎಂದೂ ಅವರು ತಿಳಿಸಿದರು.


ವಿಜಯಪುರದಲ್ಲಿ ಬುಧವಾರ ನಡೆದ ಕರ್ನಾಟಕ ರಾಜ್ಯ ಲಲಿತಕಲಾ ಅಕಾಡೆಮಿಯ 49ನೇ ವಾರ್ಷಿಕ ಕಲಾಪ್ರದರ್ಶನದಲ್ಲಿ ವಾರ್ಷಿಕ ಕಲಾ ಪ್ರದರ್ಶನ ಪ್ರಶಸ್ತಿಯನ್ನು ತುಮಕೂರಿನ ರೇಣುಕಾ ಕೇಸರಮಡು, ಸಂತೋಷ ರಾಠೋಡ (ಕಲಬುರಗಿ), ಕಿರಣ ಶೇರ್ಖಾನೆ (ಹುಬ್ಬಳ್ಳಿ), ದಸ್ತಗಿರಿ ಮಸ್ತಾನಸಾಬ್ (ಕಲಬುರಗಿ), ಮೈನು ವೈ (ಬೆಂಗಳೂರು), ಉಮೇಶ ವಿ.ಎಂ (ಮಂಗಳೂರು), ಮಂಜುನಾಥ ಬಿ. (ಶಿವಮೊಗ್ಗ), ಭರತ್ ಕಂದಕೂರ (ಕೊಪ್ಪಳ), ಅಲ್ಕಾ ಚಂದ್ವಾನಿ (ಬೆಂಗಳೂರು), ಚಂದ್ರಶೇಖರ್ ಪಾಟೀಲ (ಕಲಬುರಗಿ) ಅವರಿಗೆ ಪ್ರದಾನ ಮಾಡಲಾಯಿತು. ಹಿರಿಯ ಕಲಾವಿದರಾದ ವಾಸುದೇವ ಕಾಮತ್, ವಿಜಯ ಸಿಂಧೂರ, ಲಲಿತಕಲಾ ಅಕಾಡೆಮಿ ಅಧ್ಯಕ್ಷ ಮಹೇಂದ್ರ ಡಿ., ಅಕಾಡೆಮಿ ಸದಸ್ಯ ರಮೇಶ ಚವ್ಹಾಣ, ಆರ್.ಚಂದ್ರಶೇಖರ್ ಇದ್ದಾರೆ–ಪ್ರಜಾವಾಣಿ ಚಿತ್ರ

ಎಸ್.ಜಿ. ಸಿದ್ಧರಾಮಯ್ಯಗೆ ಬಸವ ಪ್ರತಿಷ್ಠಾನ ಪ್ರಶಸ್ತಿ

ಬೆಂಗಳೂರು: ಲಂಡನ್‌ನ ಬಸವ ಅಂತರರಾಷ್ಟ್ರೀಯ ಪ್ರತಿಷ್ಠಾನ ನೀಡುವ ‘ಡಾ.ಎಂ.ಎಂ.ಕಲಬುರ್ಗಿ ಪ್ರಗತಿಪರ ಚಿಂತಕ ಪ್ರಶಸ್ತಿ’ಗೆ ಸಾಹಿತಿ ಪ್ರೊ.ಎಸ್.ಜಿ. ಸಿದ್ಧರಾಮಯ್ಯ ಆಯ್ಕೆಯಾಗಿದ್ದಾರೆ.



ಜಾನಪದ ವಿದ್ವಾಂಸ ಗೊ.ರು. ಚನ್ನಬಸಪ್ಪ ನೇತೃತ್ವದ ಸಮಿತಿ ಈ ಆಯ್ಕೆ ಮಾಡಿದೆ. ಮೂಢ ನಂಬಿಕೆ ಮತ್ತು ಮೌಢ್ಯತೆ ವಿರುದ್ಧ ಕೆಲಸ ಮಾಡುತ್ತಿರುವವರಿಗೆ ಪ್ರಶಸ್ತಿ ನೀಡಲಾಗುತ್ತಿದೆ. ಪ್ರಶಸ್ತಿಯು ₹ 25 ಸಾವಿರ ನಗದು, ತಾಮ್ರಪತ್ರ ಒಳಗೊಂಡಿದೆ.

ಇದೇ 27ರಂದು ನಗರದ ಚಿತ್ರಕಲಾ ಪರಿಷತ್ತಿನಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ. ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಚಿತ್ರಕಲಾ ಪರಿಷತ್ತಿನ ಅಧ್ಯಕ್ಷ ಬಿ.ಎಲ್. ಶಂಕರ್ ಅಧ್ಯಕ್ಷತೆ ವಹಿಸಲಿದ್ದಾರೆ. ಪ್ರತಿಷ್ಠಾನದ ಅಧ್ಯಕ್ಷ ಎಸ್. ಮಹಾದೇವಯ್ಯ ಉಪಸ್ಥಿತರಿರುತ್ತಾರೆ. ವಿಮರ್ಶಕಿ ಪ್ರೊ. ಎಂ.ಎಸ್.ಆಶಾದೇವಿ ಮುಖ್ಯ ಅತಿಥಿಯಾಗಿ ಭಾಗವಹಿಸುತ್ತಾರೆ ಎಂದು ಪ್ರತಿಷ್ಠಾನದ ಪ್ರಧಾನ ಕಾರ್ಯದರ್ಶಿ ಕೆ.ವಿ. ನಾಗರಾಜ ಮೂರ್ತಿ ತಿಳಿಸಿದ್ದಾರೆ.

ಪ್ರತಿಷ್ಠೆಯ ಕಣವಾಗಿದ್ದ ಚುನಾವಣೆ • ತಡರಾತ್ರಿವರೆಗೆ ನಡೆದ ಎಣಿಕೆ

ಒಕ್ಕಲಿಗರ ಸಂಘ: ಫಲಿತಾಂಶ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಒಕ್ಕಲಿಗರ ಸಂಘದ 35 ನಿರ್ದೇಶಕ ಸ್ಥಾನಗಳಿಗೆ ನಡೆದ ಚುನಾವಣೆಯ ಮತ ಎಣಿಕೆ ಬುಧವಾರ ನಡೆದಿದ್ದು, ಎಲ್ಲಾ ಸ್ಥಾನಗಳ ಫಲಿತಾಂಶ ತಡರಾತ್ರಿ ಪ್ರಕಟವಾಗಿದೆ.

ಪ್ರತಿಷ್ಠೆಯ ಕಣವಾಗಿದ್ದ ಈ ಚುನಾವಣೆಯಲ್ಲಿ ಕೆಂಪೇಗೌಡ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ವೈದ್ಯ ಡಾ. ಆಂಜನಪ್ಪ ಮತ್ತು ಕೆಂಚಪ್ಪ ಗೌಡ ಅವರ ಗುಂಪಿನ ಅಭ್ಯರ್ಥಿಗಳೇ ಹೆಚ್ಚಿನ ಸಂಖ್ಯೆಯಲ್ಲಿ ಜಯಗಳಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ವಿಧಾನ ಪರಿಷತ್ ಬಿಜೆಪಿ ಸದಸ್ಯ ಅ. ದೇವೇಗೌಡ, ನಿವೃತ್ತ ಕುಲಪತಿ ಕೆ. ನಾರಾಯಣಗೌಡ, ಡಾ. ಆಂಜನಪ್ಪ, ಒಕ್ಕಲಿಗರ ಸಂಘದ ಮಾಜಿ ಅಧ್ಯಕ್ಷ ಕೆಂಚಪ್ಪಗೌಡ, ಸಂಘದ ಮಾಜಿ ನಿರ್ದೇಶಕ ಪ್ರೊ. ನಾಗರಾಜ್, ನಿವೃತ್ತ ಪೊಲೀಸ್ ಅಧಿಕಾರಿ ಎಸ್.ಕೆ. ಉಮೇಶ್, ವಕೀಲ ಎನ್.ಎಂ. ಸೊಣ್ಣೇಗೌಡ ಮೊದಲಾದವರು ತಮ್ಮದೇ ಗುಂಪು ಕಟ್ಟಿಕೊಂಡು ಸ್ಪರ್ಧೆಯಲ್ಲಿದ್ದರು.



ಮತ ಎಣಿಕೆ ವೇಳೆ ಅರಮನೆ ಮೈದಾನದಲ್ಲಿ ಸೇರಿದ್ದ ಜನ – ಪ್ರಜಾವಾಣಿ ಚಿತ್ರ

ಬೆಂಗಳೂರು ನಗರ, ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆ ಹಾಗೂ ತಮಿಳುನಾಡಿನ ಹೊಸೂರು ಜಿಲ್ಲಾ ಕ್ಷೇತ್ರಗಳನ್ನು ಒಳಗೊಂಡ 15 ಸ್ಥಾನಗಳಿಗೆ ಡಾ. ಎಚ್.ಟಿ. ಅಂಜನಪ್ಪ(68,398 ಮತ), ಎಚ್.ಎನ್. ಅಶೋಕ್(61,892), ಬಿ.ಕೆಂಚಪ್ಪಗೌಡ(58,066), ಆರ್. ಪ್ರಕಾಶ್(56,694), ಎಚ್‌ಸಿ. ಜಯಮುತ್ತು (56,254), ಸಿ.ದೇವರಾಜು ಹಾಪ್‌ಕಾಮ್ಸ್(55,903), ಎಚ್. ಶ್ರೀನಿವಾಸ್(49,217), ಸಿ.ಎಂ. ಮಾರೇಗೌಡ(48,492), ಬಿ.ವಿ. ರಾಜಶೇಖರಗೌಡ(46,180), ಕೆ.ಎಸ್. ಸುರೇಶ್(45,601), ಎಂ.ಎಸ್. ಉಮಾಪತಿ(44,709), ವೆಂಕಟ ರಾಮೇಗೌಡ(43,022), ಡಿ. ಹನುಮಂತಯ್ಯ ಚೋಳನಾಯಕನಹಳ್ಳಿ(41,687), ಎಂ. ಪುಟ್ಟಸ್ವಾಮಿ (41,165), ಡಾ. ವಿ. ನಾರಾಯಣ ಸ್ವಾಮಿ(40,728) ಆಯ್ಕೆಯಾಗಿದ್ದಾರೆ.

ಈ ಮೂರೂ ಜಿಲ್ಲೆಗಳಿಂದ ಒಟ್ಟು 141 ಅಭ್ಯರ್ಥಿಗಳು ಕಣದಲ್ಲಿದ್ದರು. ಈ ಹಿಂದಿನ ಅವಧಿಯಲ್ಲಿ 3-4 ಬಾರಿ ಸಮಿತಿಯಲ್ಲಿ ಇದ್ದವರ ಜೊತೆಗೆ, ಈ ಬಾರಿ ಹೊಸಬರು, ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಸ್ಪರ್ಧಿಸಿದ್ದರು. ಅನೇಕ ಬಣಗಳಿದ್ದುದರಿಂದ ಭಾರಿ ಜಿದ್ದಾಜಿದ್ದಿ ಏರ್ಪಟ್ಟಿತ್ತು. ಅಭ್ಯರ್ಥಿಗಳು ಮತದಾರರ ಮನಗೆಲ್ಲಲು ನಾನಾ ತಂತ್ರಗಳ ಮೊರೆ ಹೋಗಿದ್ದರು. ಆರೋಪ- ಪ್ರತ್ಯಾರೋಪಗಳ ಸುರಿಮಳೆಗೂ ಈ ಚುನಾವಣೆ ಸಾಕ್ಷಿಯಾಗಿತ್ತು.

ಉಳಿದ ಜಿಲ್ಲೆಗಳ ಫಲಿತಾಂಶ:

- ಮೈಸೂರು; ಕೆ.ವಿ.ಶ್ರೀಧರ್, ಎಂ.ಬಿ. ಮಂಜೇಗೌಡ, ಸಿ.ಜಿ. ಗಂಗಾಧರ್
- ಮಂಡ್ಯ; ಅಶೋಕ್ ಜಯರಾಮ್, ಮೂಡ್ಯಾ ಚಂದ್ರು, ರಾಘವೇಂದ್ರ, ನಲ್ಲಿಗೆರೆ ಬಾಲು
- ಹಾಸನ; ಸಿ.ಎನ್. ಬಾಲಕೃಷ್ಣ, ಬಾಗೂರು ಮಂಜೇಗೌಡ, ರಘುಗೌಡ
- ತುಮಕೂರು; ಹನುಮಂತರಾಯಪ್ಪ, ಲೋಕೇಶ್ ನಾಗರಾಜಯ್ಯ
- ಕೋಲಾರ; ಡಾ.ರಮೇಶ್, ಕೋನಪ್ಪರೆಡ್ಡಿ, ಯಲವಳ್ಳಿ ರಮೇಶ್
- ಕೊಡಗು; ಹರಪಳ್ಳಿ ರವೀಂದ್ರ
- ಚಿಕ್ಕಮಗಳೂರು; ಪೂರ್ಣೇಶ್
- ದಕ್ಷಿಣ ಕನ್ನಡ; ಡಾ. ರೇಣುಕಾಪ್ರಸಾದ್
- ಶಿವಮೊಗ್ಗ; ಸಿರಿಬೈಲ್ ಧರ್ಮೇಶ್
- ಚಿತ್ರದುರ್ಗ; ಜೆ. ರಾಜು

ಕೆರೆ ಮಧ್ಯದ ರಸ್ತೆ ತೆರವು:ಮಾಧುಸ್ವಾಮಿ

ಬೆಳಗಾವಿ (ಸುವರ್ಣ ವಿಧಾನಸೌಧ): 'ಬೆಂಗಳೂರು ನಗರ ಜಿಲ್ಲೆಯ ಉತ್ತರ ತಾಲ್ಲೂಕು ಜಾಲ ಹೋಬಳಿ ಚಾಗಲಟ್ಟಿ ಗ್ರಾಮದ ಕೆರೆಯ ಮಧ್ಯಭಾಗದಲ್ಲಿ ನಿರ್ಮಿಸಿರುವ ರಸ್ತೆಯನ್ನು ಸರ್ಕಾರ ತೆರವುಗೊಳಿಸಲಿದೆ' ಎಂದು ಸಣ್ಣ ನೀರಾವರಿ ಸಚಿವ ಜೆ.ಸಿ. ಮಾಧುಸ್ವಾಮಿ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಬಿಜೆಪಿಯ ವೈ.ಎ. ನಾರಾಯಣಸ್ವಾಮಿ, 'ಕೆರೆಯ ಮಧ್ಯಭಾಗದಲ್ಲಿ ಕೆಲವು ಭೂ ಕಬಳಿಕೆದಾರರು, ರಸ್ತೆಯನ್ನು ನಿರ್ಮಿಸಿ, ಕೆರೆಯ ಸ್ವರೂಪವನ್ನೇ ಬದಲಿಸಿದ್ದಾರೆ. ಅಲ್ಲದೆ, ತಮ್ಮ ಸ್ವಂತ ಜಮೀನಿಗೆ ಹೋಗಲು ಈ ರಸ್ತೆಯನ್ನು ಉಪಯೋಗಿಸುತ್ತಿದ್ದಾರೆ. ರಸ್ತೆಯನ್ನು ತೆರವುಗೊಳಿಸಿ, ಕೆರೆಯನ್ನು ಉಳಿಸಬೇಕು' ಎಂದು ಮನವಿ ಮಾಡಿದರು.

'ತಾಂತ್ರಿಕ ಪರಿಣಿತರಿಂದ ಕೆರೆಯನ್ನು ಪರಿಶೀಲಿಸಿದ ಬಳಿಕ ಅನಧಿಕೃತವಾಗಿ 220 ಮೀಟರ್ ಉದ್ದದ ರಸ್ತೆಯನ್ನು ನಿರ್ಮಿಸಿದ್ದು, ಇದರಿಂದ ಕೆರೆ ಅಂಗಳ 4,400 ಚ.ಮೀ ಒತ್ತುವರಿ ಆಗಿರುವುದು ಗೊತ್ತಾಗಿದೆ' ಎಂದರು.

ಸಿದ್ದರಾಮಯ್ಯ ವೇಸ್ಟ್ ಬಾಡಿ; ರಮೇಶ ಜಾರಕಿಹೊಳಿ

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಸಿದ್ದರಾಮಯ್ಯ ವೇಸ್ಟ್ ಬಾಡಿ' ಎಂದು ಹೀಗಳೆದ ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ, ವಿರೋಧ ಪಕ್ಷದ ನಾಯಕರನ್ನು ಏಕವಚನದಲ್ಲಿ ಟೀಕಿಸಿದರು.

'ಬಿಜೆಪಿಗೆ ಧಮ್ ಇದ್ದರೆ ರಮೇಶ ಜಾರಕಿಹೊಳಿ ವಿರುದ್ಧ ಕ್ರಮ ಕೈಗೊಳ್ಳಲಿ' ಎಂದು ಸಿದ್ದರಾಮಯ್ಯ ಮಂಗಳವಾರ ಹೇಳಿದ್ದರು.

ಗೋಕಾಕದಲ್ಲಿ ಸುದ್ದಿಗಾರರ ಜತೆ ಬುಧವಾರ ಮಾತನಾಡಿದ ರಮೇಶ, ಈ ಹೇಳಿಕೆಗೆ ಪ್ರತಿಕ್ರಿಯಿಸಿ, 'ಒಬ್ಬ ಹಿಂದುಳಿದ ವರ್ಗದ ನಾಯಕ ಬೆಳೆಯುತ್ತಿರುವುದಕ್ಕೆ ಆತ ಹೆದರುತ್ತಿದ್ದಾನೆ. ಮುಂದೆ ಸೋಲುತ್ತಾನೆ. ಸೋಲುವ ಹಾಗೂ ಹಳ್ಳಕ್ಕೆ ಬಿದ್ದಿರುವ ವ್ಯಕ್ತಿ ಬಗ್ಗೆ ಮಾತನಾಡಿ ಪ್ರಯೋಜನವಿಲ್ಲ' ಎಂದು ವಾಗ್ದಾಳಿ ನಡೆಸಿದರು.

'ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಬಗ್ಗೆ ಬಹಳ ಕಠೋರವಾಗಿ ಹೇಳುವವನಿದ್ದೆ. ಆದರೆ, ನಮ್ಮ ದೊಡ್ಡ ನಾಯಕರು ಆ ಬಗ್ಗೆ ಈಗಲೇ ಏನನ್ನೂ ಮಾತನಾಡಬೇಡಿ ಎಂದು ಸಲಹೆ ನೀಡಿದ್ದಾರೆ. ಮುಂದಿನ ದಿನಗಳಲ್ಲಿ ಎಲ್ಲದರ ಬಗ್ಗೆಯೂ ವಿವರವಾಗಿ ಮಾತನಾಡುತ್ತೇನೆ' ಎಂದರು.

'ರಮೇಶಗೆ ಸಂಸ್ಕೃತಿಯೇ ಇಲ್ಲ'

ಬೆಳಗಾವಿ (ಸುವರ್ಣ ವಿಧಾನಸೌಧ): 'ರಮೇಶ ಜಾರಕಿಹೊಳಿ ಹೇಳಿಕೆಗೆ ಕಿಮ್ಮತ್ತು ಕೊಡುವ ಅಗತ್ಯವೇ ಇಲ್ಲ' ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

ಸುದ್ದಿಗಾರರ ಮಾತನಾಡಿದ ಅವರು, 'ನಾನು ರಾಜಕೀಯಕ್ಕೆ ಬಂದು 50 ವರ್ಷ ಆಗಿದೆ. ಇಂಥ ಬಹಳ ಜನರನ್ನು ನೋಡಿದ್ದೇನೆ. ಒಂದು ಕಡೆ ಗುರು ಅಂತಾರೆ, ಇನ್ನೊಂದು ಕಡೆ ಈ ರೀತಿ ಅಂತಾರೆ. ಅದಕ್ಕೆಲ್ಲ ಏನು ಬೆಲೆ ಇದೆ' ಎಂದು ತಿರುಗೇಟು ನೀಡಿದರು.

'ಅವರಿಗೆ ರಾಜಕೀಯ ಭಾಷೆ ಇಲ್ಲ. ಸಂಸ್ಕೃತಿ ಇಲ್ಲ. ಸಿದ್ದರಾಮಯ್ಯ ಏನು ಅಂಥ ರಾಜ್ಯದ ಜನರಿಗೆ ಗೊತ್ತಿದೆ. ಇಂಥ ಬಹಳಷ್ಟು ಜನರನ್ನು ನೋಡಿದ್ದೇನೆ. ಯಾರೋ ಒಬ್ಬ ಪದೇ ಪದೆ ಮಾತನಾಡುತ್ತಾನೆಂದು ಅದಕ್ಕೆ ಉತ್ತರ ಕೊಡುವುದಕ್ಕೆ ಆಗುತ್ತಾ? ಹೀಗೆ ಗುರಿ ಮಾಡುವವರನ್ನು, ಟೀಕೆ ಮಾಡುವವರನ್ನು ಬಹಳಷ್ಟು ಜನ ನೋಡಿದ್ದೇನೆ' ಎಂದರು.

'ಹಳ್ಳಿಗಳಲ್ಲಿ ಶಾಲೆಗಳ ಹತ್ತಿರವೇ ಮದ್ಯದ ಅಂಗಡಿಗಳು'

ಬೆಳಗಾವಿ (ಸುವರ್ಣ ವಿಧಾನಸೌಧ): ಹಳ್ಳಿಗಳಲ್ಲಿ ಅಂಗಡಿಗಳ ಮೂಲಕ ಮದ್ಯ ಮಾರಾಟ ಮಾಡಲಾಗುತ್ತಿದ್ದು, ಇದರಿಂದ ಜನರ ನೆಮ್ಮದಿ ಹಾಳಾಗಿದೆ ಎಂದು ಕಾಂಗ್ರೆಸ್‌ನ ಹಲವು ಸದಸ್ಯರು ದೂರಿದರು.

ವಿಧಾನಸಭೆಯಲ್ಲಿ ಬುಧವಾರ ಪ್ರಶ್ನೋತ್ತರ ಅವಧಿಯಲ್ಲಿ ಕಾಂಗ್ರೆಸ್‌ನ ಬಸನಗೌಡ ದದ್ದಲ ಅವರ ಪ್ರಶ್ನೆಗೆ ಅಬಕಾರಿ ಸಚಿವ ಕೆ.ಗೋಪಾಲಯ್ಯ ಉತ್ತರ ನೀಡಿದ ವೇಳೆ ಹಲವು ಸದಸ್ಯರು ಗಮನ ಸೆಳೆದರು.

'ಹಳ್ಳಿಗಳಲ್ಲಿ ಶಾಲೆಗಳ ಹತ್ತಿರ ಮದ್ಯದ ಅಂಗಡಿಗಳು ಆರಂಭವಾಗಿವೆ' ಎಂದು ರೂಪಕಲಾ ಶಶಿಧರ್ ಹೇಳಿದರು. 'ಅಬಕಾರಿ ಆದಾಯದ ಗುರಿ ಮುಟ್ಟಲು ಹಳ್ಳಿಗಳಲ್ಲಿ ಅಂಗಡಿಗಳ ಮೂಲಕ ಮದ್ಯ ಮಾರಲಾಗುತ್ತಿದೆ. ಇದರ ಬದಲು ಎಂಎಸ್‌ಐಎಲ್‌ಗೆ ಅನುಮತಿ ನೀಡುವುದು ಉತ್ತಮ' ಎಂದು ಕೆ.ವೈ. ನಂಜೇಗೌಡ ಹೇಳಿದರು.

'ಹಳ್ಳಿಗಳಲ್ಲಿ 7–8 ಅಂಗಡಿಗಳು ತಲೆ ಎತ್ತುತ್ತಿವೆ. ಇದರಿಂದ ಜನರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿದೆ. ದಾಂಪತ್ಯ ಜೀವನದಲ್ಲಿ ಬಿರುಕು ಮೂಡುತ್ತಿದೆ' ಎಂದು ಇ.ತುಕಾರಾಂ ಗಮನ ಸೆಳೆದರು.

ಜೆಡಿಎಸ್‌ನ ಎಚ್.ಕೆ.ಕುಮಾರಸ್ವಾಮಿ, 'ಮೂರು ವರ್ಷಗಳಲ್ಲಿ 568 ಸಿಎಲ್7 ಅಂಗಡಿಗಳಿಗೆ ಪರವಾನಗಿ ನೀಡಲಾಗಿದೆ ಎಂದು ಸಚಿವರೇ ಉತ್ತರ ನೀಡಿದ್ದಾರೆ.

ಪಿಎಫ್ ವಂತಿಗೆಗೆ ಟಿಟಿಎಂಸಿ ಅಡವು

ಪ್ರಜಾವಾಣಿ ವಾರ್ತೆ

ಬೆಳಗಾವಿ: ಭವಿಷ್ಯ ನಿಧಿಯ ವಂತಿಗೆ ಪಾವತಿಗಾಗಿ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು ಶಾಂತಿನಗರದ ಟಿಟಿಎಂಸಿಯನ್ನು ಅಡಮಾನಕ್ಕೆ ಇಟ್ಟು 2019–20ನೇ ಸಾಲಿನಲ್ಲಿ ₹160 ಕೋಟಿ ಹಾಗೂ 2020–21ನೇ ಸಾಲಿನಲ್ಲಿ ₹230 ಕೋಟಿ ಸಾಲ ಪಡೆದಿದೆ.

ವಿಧಾನಸಭೆಯಲ್ಲಿ ಬುಧವಾರ ಪ್ರಶ್ನೋತ್ತರ ಅವಧಿಯಲ್ಲಿ ಶರತ್ ಬಚ್ಚೇಗೌಡ ಪ್ರಶ್ನೆಗೆ ಉತ್ತರಿಸಿದ ಸಾರಿಗೆ ಸಚಿವ ಬಿ.ಶ್ರೀರಾಮುಲು ಈ ವಿಷಯ ತಿಳಿಸಿದರು. ಭವಿಷ್ಯ ನಿಧಿ ವಂತಿಗೆ ಪಾವತಿಸಲು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮವು ಕಲಬುರಗಿ ಕೇಂದ್ರ ಬಸ್ ನಿಲ್ದಾಣದ 6 ಎಕರೆ 28 ಗುಂಟೆ ನಿವೇಶನವನ್ನು ಅಡಮಾನ ಇಡಲಾಗಿದೆ ಎಂದೂ ಹೇಳಿದರು.

ಸಾರಿಗೆ ನಿಗಮಗಳ ವರಮಾನ
ವರಮಾನ (₹ಕೋಟಿಗಳಲ್ಲಿ)

ವರ್ಷ	ವರಮಾನ
2018-19	9,835
2019-20	9,703
2020-21	6,021
2021-22	4,000

ರಾಜ್ಯದ ನಾಲ್ಕು ಸಾರಿಗೆ ಸಂಸ್ಥೆಗಳ ಆರ್ಥಿಕ ಸ್ವಾವಲಂಬನೆ ಹಾಗೂ ಸಂಪನ್ಮೂಲ ಕ್ರೋಡೀಕರಣಗಳ ಅಧ್ಯಯನ ನಡೆಸಿ ವರದಿ ನೀಡಲು ನಿವೃತ್ತ ಐಎಎಸ್ ಅಧಿಕಾರಿ ಎಂ.ಆರ್.ಶ್ರೀನಿವಾಸಮೂರ್ತಿ ನೇತೃತ್ವದಲ್ಲಿ ಸಮಿತಿ ರಚಿಸಲಾಗಿದೆ ಎಂದೂ ತಿಳಿಸಿದರು.

ಶರತ್ ಬಚ್ಚೇಗೌಡ, 'ಟೋಲ್‌ಗಳಲ್ಲಿ ಕೆಎಸ್‌ಆರ್‌ಟಿಸಿ ಬಸ್‌ಗಳಿಂದ ಶುಲ್ಕ ಸಂಗ್ರಹ ಮಾಡಲಾಗುತ್ತಿದೆ. ಇದರಿಂದ ಪ್ರತಿ ಪ್ರಯಾಣಿಕರ ಮೇಲೆ ₹3 ಹೊರೆ ಬೀಳುತ್ತಿದೆ. ಈ ಬಸ್ ಗಳಿಂದ ಶುಲ್ಕ ಸಂಗ್ರಹ ನಿಲ್ಲಿಸಬೇಕು' ಎಂದು ಆಗ್ರಹಿಸಿದರು. ಈ ಬಗ್ಗೆ ಮುಖ್ಯಮಂತ್ರಿ ಅವರೊಂದಿಗೆ ಸಮಾಲೋಚನೆ ನಡೆಸಿ ಕ್ರಮ ಕೈಗೊಳ್ಳುವುದಾಗಿ ಶ್ರೀರಾಮುಲು ಭರವಸೆ ನೀಡಿದರು.

ಹಳ್ಳಿಗಳಿಗೆ ಬಸ್ ಬರುತ್ತಿಲ್ಲ: ಲಾಕ್‌ಡೌನ್ ತೆರವಾದ ನಂತರ ಶಾಲಾ ಕಾಲೇಜುಗಳು ಪೂರ್ಣ ಪ್ರಮಾಣದಲ್ಲಿ ಚಟುವಟಿಕೆ ಆರಂಭಿಸಿವೆ. ಆದರೆ, ಗ್ರಾಮೀಣ ಭಾಗಕ್ಕೆ ಬಸ್‌ಗಳು ಪೂರ್ಣ ಪ್ರಮಾಣದಲ್ಲಿ ಓಡಾಟ ಆರಂಭಿಸದೆ ಇರುವುದರಿಂದ ವಿದ್ಯಾರ್ಥಿಗಳಿಗೆ ಹಾಗೂ ಸಾರ್ವಜನಿಕರಿಗೆ ತೊಂದರೆ ಆಗಿದೆ ಎಂದು ಸದಸ್ಯರಾದ ಎಚ್.ಡಿ.ರಂಗನಾಥ್, ಅಂಜಲಿ ನಿಂಬಾಳ್ಕರ್, ಬಸನಗೌಡ ದದ್ದಲ್, ಟಿ.ಡಿ.ರಾಜೇಗೌಡ, ನಾರಾಯಣಸ್ವಾಮಿ ಸೇರಿ ಹಲವು ಸದಸ್ಯರು ಗಮನಸೆಳೆದರು.

ಗ್ರಾಮೀಣ ಪ್ರದೇಶಗಳ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳ ಹಾಗೂ ಸಾರ್ವಜನಿಕರ ಒತ್ತಡಕ್ಕೆ ಅನುಗುಣವಾಗಿ ಕೋವಿಡ್ ಪೂರ್ವದಲ್ಲಿ ಇದ್ದಂತೆ ಸಾರಿಗೆ ಸೌಲಭ್ಯ ಕಲ್ಪಿಸಲಾಗಿದೆ ಎಂದು ಸಚಿವ ಬಿ.ಶ್ರೀರಾಮುಲು ತಿಳಿಸಿದರು.

ಬೇಡಿಕೆಗೆ ಅನುಗುಣವಾಗಿ ಬಸ್‌ಗಳು ಬರುತ್ತಿಲ್ಲ' ಎಂದು ಸದಸ್ಯರು ದೂರಿದರು. 'ಈ ಬಗ್ಗೆ ಪರಿಶೀಲನೆ ನಡೆಸುತ್ತೇನೆ' ಎಂದು ಸಚಿವರು ಭರವಸೆ ನೀಡಿದರು.

ಪಂಚಾಯತ್ ರಾಜ್ ಸಚಿವ ಕೆ.ಎಸ್.ಈಶ್ವರಪ್ಪ

39 ಬಹುಗ್ರಾಮ ಕುಡಿಯುವ ಯೋಜನೆ ಸ್ಥಗಿತ

ಪ್ರಜಾವಾಣಿ ವಾರ್ತೆ

ಬೆಳಗಾವಿ (ಸುವರ್ಣ ವಿಧಾನಸೌಧ): ಸುಸ್ಥಿರ ನೀರಿನ ಲಭ್ಯತೆ ಬಗ್ಗೆ ಅಧ್ಯಯನ ನಡೆಸದೆ ಬಹು ಗ್ರಾಮ ಕುಡಿಯುವ ನೀರಿನ ಯೋಜನೆಗಳನ್ನು ಅನುಷ್ಠಾನಗೊಳಿಸಿದ್ದರಿಂದ ಸಾವಿರಾರು ಕೋಟಿ ನಷ್ಟ ಉಂಟಾಗಿದ್ದು, 39 ಯೋಜನೆಗಳು ಸ್ಥಗಿತಗೊಂಡಿವೆ ಎಂದು ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್‌ರಾಜ್ ಸಚಿವ ಕೆ.ಎಸ್. ಈಶ್ವರಪ್ಪ ತಿಳಿಸಿದರು.

ವಿಧಾನಸಭೆಯಲ್ಲಿ ಬುಧವಾರ ಪ್ರಶ್ನೋತ್ತರ ಅವಧಿಯಲ್ಲಿ ಬಿಜೆಪಿಯ ದುರ್ಯೋದನ ಐಹೊಳೆ ಪ್ರಶ್ನೆಗೆ ಉತ್ತರಿಸಿದ ಸಚಿವರು, 'ಯೋಜನೆಗಳ ತಾಂತ್ರಿಕ ಕಾರ್ಯಸಾಧ್ಯತೆಗಳ ಪರಿಶೀಲಿಸದೆ ಪೈಪ್‌ಲೈನ್ ಸೇರಿದಂತೆ ಎಲ್ಲ ಕಾಮಗಾರಿಗಳನ್ನು ನಡೆಸಲಾಗಿದೆ' ಎಂದರು.

ಸರ್ವರ್‌ಗಳ ಸಂಗ್ರಹ ಸಾಮರ್ಥ್ಯ ದ್ವಿಗುಣ: ಬಿಜೆಪಿಯ ಯು. ರಾಜೇಶ್ ನಾಯಕ್ ಪ್ರಶ್ನೆಗೆ ಉತ್ತರಿಸಿದ ಸಚಿವರು, 'ಇ-ಸ್ವತ್ತು ತಂತ್ರಾಂಶದ ಸರ್ವರ್‌ಗಳಿಗೆ ಒಂದು ಸಾಫ್ಟ್‌ವೇರ್ ಅನ್ನು ಸಕ್ರಿಯಗೊಳಿಸಿದ್ದರಿಂದ ಒಂದು ತಿಂಗಳಿಂದ ಸರ್ವರ್ ಸಮಸ್ಯೆ ಉಂಟಾಗಿತ್ತು. ಈಗ ಆ ಸಮಸ್ಯೆಯನ್ನು ಬಗೆಹರಿಸಲಾಗಿದೆ' ಎಂದರು.

ರಾಜ್ಯ ದತ್ತಾಂಶ ಕೇಂದ್ರದಲ್ಲಿರುವ ಇ- ಸ್ವತ್ತು ತಂತ್ರಾಂಶಕ್ಕೆ ಸಂಬಂಧಿಸಿದ ನಾಲ್ಕು ಸರ್ವರ್‌ಗಳ ಸಂಗ್ರಹ ಸಾಮರ್ಥ್ಯವನ್ನು ದ್ವಿಗುಣಗೊಳಿಸಲಾಗಿದೆ. ಭವಿಷ್ಯದಲ್ಲಿ ಸರ್ವರ್ ಸಮಸ್ಯೆ ಉಂಟಾಗದಂತೆ ಕ್ರಮ ಕೈಗೊಳ್ಳಲಾಗಿದೆ ಎಂದರು.

ರಾಜೇಶ್ ನಾಯಕ್ ಮಾತನಾಡಿ, 'ಆಸ್ತಿ ಖರೀದಿಗೆ ಬ್ಯಾಂಕ್‌ಗಳಲ್ಲಿ ಸಾಲ ತೆಗೆಯುವಾಗ ಮಾಲೀಕನ ಹೆಸರಿನ ಜಾಗದಲ್ಲಿ ಬ್ಯಾಂಕ್ ಹೆಸರು ಬರುತ್ತಿದೆ. ಇದಕ್ಕೆ ಸರ್ವರ್ ಸಮಸ್ಯೆ ಕಾರಣ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸರ್ವರ್ ಸಮಸ್ಯೆ ಈಗಲೂ ಇದೆ' ಎಂದು ಗಮನ ಸೆಳೆದರು. ಈ ಬಗ್ಗೆ ಪರಿಶೀಲನೆ ನಡೆಸುವುದಾಗಿ ಈಶ್ವರಪ್ಪ ಭರವಸೆ ನೀಡಿದರು.

ವಿದ್ಯಾರ್ಥಿ ನಿಲಯಕ್ಕೆ ಅನುದಾನ: ಬೊಮ್ಮಾಯಿ

ಬೆಳಗಾವಿ (ಸುವರ್ಣ ವಿಧಾನಸೌಧ): ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವಿದ್ಯಾರ್ಥಿಗಳು ವಸತಿ ನಿಲಯಗಳಿಲ್ಲದೆ ಸಂಕಷ್ಟ ಅನುಭವಿಸುತ್ತಿರುವುದು ಗಮನಕ್ಕೆ ಬಂದಿದೆ. ಈ ಬಗ್ಗೆ ಶೀಘ್ರ ಸಭೆ ನಡೆಸಿ ಮುಂದಿನ ಬಜೆಟ್‌ನಲ್ಲಿ ಹೆಚ್ಚುವರಿ ಅನುದಾನ ನೀಡಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ತಿಳಿಸಿದರು.

ವಿಧಾನಸಭೆಯಲ್ಲಿ ಬುಧವಾರ ಪ್ರಶ್ನೋತ್ತರ ಅವಧಿಯಲ್ಲಿ ಬಿಜೆಪಿಯ ಎಲ್.ನಾಗೇಂದ್ರ ಪ್ರಶ್ನೆಗೆ ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ಉತ್ತರಿಸುತ್ತಿದ್ದ ವೇಳೆ ಮಧ್ಯಪ್ರವೇಶಿಸಿದ ಮುಖ್ಯಮಂತ್ರಿ ಈ ಭರವಸೆ ನೀಡಿದರು.

ಮತಾಂತರ ನಿಷೇಧ ಮಸೂದೆ: ಶಾಸಕರ ಚರ್ಚೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಮತಾಂತರ ನಿಷೇಧ ಮಸೂದೆ ಇದೇ ಅಧಿವೇಶನದಲ್ಲಿ ಮಂಡಿಸುವ ಬಗ್ಗೆ ಬುಧವಾರ ನಡೆದ ಬಿಜೆಪಿ ಶಾಸಕಾಂಗ ಪಕ್ಷದ ಸಭೆಯಲ್ಲಿ ಚರ್ಚೆ ನಡೆಯಿತು.

ಈ ವಿಷಯವನ್ನು ಸಾರ್ವಜನಿಕ ವಲಯದಲ್ಲಿ ಚರ್ಚೆಗೆ ಬಿಟ್ಟು ನಂತರ ಮಂಡಿಸುವುದು ಸೂಕ್ತ ಎಂಬ ಅಭಿಪ್ರಾಯ ಸಭೆಯಲ್ಲಿ ಕೇಳಿ ಬಂದಿತು. ಇನ್ನು ಕೆಲವು ಶಾಸಕರು ಸಾರ್ವಜನಿಕ ಚರ್ಚೆ ನಡೆಸದೇ ಮಂಡಿಸುವುದು ಸೂಕ್ತ ಎಂಬ ವಾದವನ್ನೂ ಮುಂದಿಟ್ಟರು. ಆ ರೀತಿ ಮಾಡುವುದೇ ಆದರೆ, ಕೆಲವು ತಿದ್ದುಪಡಿಗಳನ್ನು ಮಾಡಬೇಕು ಎಂಬ ಅಭಿಪ್ರಾಯ ಕೇಳಿ ಬಂದಿತು ಎಂದು ಮೂಲಗಳು ತಿಳಿಸಿವೆ.

ಮಸೂದೆ ಮಂಡಿಸುವುದೇ ಆದರೆ, ಮುಂದಿನ ವಾರ ವಿಧಾನಸಭೆಯಲ್ಲಿ ಮಂಡಿಸುವ ಸಾಧ್ಯತೆ ಇದೆ ಎಂದು ಬಿಜೆಪಿ ಮೂಲಗಳು ಹೇಳಿವೆ. ಈ ಮಸೂದೆಯ ಅಂಗೀಕಾರಕ್ಕೆ ವಿರೋಧ ಪಕ್ಷಗಳು ಅಡ್ಡಿ ಉಂಟು ಮಾಡುವ ಸಾಧ್ಯತೆ ಇದ್ದು, ವಿಧಾನಪರಿಷತ್ತಿನಲ್ಲಿ ಬಹುಮತ ಇಲ್ಲದ ಕಾರಣ ಜೆಡಿಎಸ್ ಅನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವ ಬಗ್ಗೆಯೂ ಚರ್ಚಿಸಲಾಯಿತು.

ಅಲ್ಲದೆ, ಗುತ್ತಿಗೆ ನೀಡಿಕೆಯಲ್ಲಿ ಶೇ 40 ರಷ್ಟು ಕಮಿಷನ್ ಬಗ್ಗೆ ಕಾಂಗ್ರೆಸ್ ದೊಡ್ಡ ಮಟ್ಟದಲ್ಲಿ ಗದ್ದಲ ಎಬ್ಬಿಸಲಿದೆ, ಇದಕ್ಕೆ ಸಚಿವರು ಮತ್ತು ಶಾಸಕರು ತಕ್ಕ ಉತ್ತರ ನೀಡಲು ಸಿದ್ಧರಾಗಬೇಕು. ಯಾವುದೇ ಕಾರಣಕ್ಕೂ ಸರ್ಕಾರ ಮತ್ತು ಮುಖ್ಯಮಂತ್ರಿಯವರನ್ನು ಬಿಟ್ಟು ಕೊಡಬಾರದು. ಕಾಂಗ್ರೆಸ್ ಅವಧಿಯಲ್ಲಿ ಕಮಿಷನ್ ಪಡೆಯುತ್ತಿದ್ದ ಬಗ್ಗೆಯೂ ಪ್ರಸ್ತಾಪಿಸಬೇಕು. ಅದಕ್ಕೆ ಪೂರಕ ದಾಖಲೆಗಳನ್ನು ಇಟ್ಟುಕೊಳ್ಳಬೇಕು ಎಂಬ ಸಲಹೆ ನೀಡಲಾಯಿತು ಎಂದು ಮೂಲಗಳು ಹೇಳಿವೆ.

ಕೆಲವು ಶಾಸಕರು ತಮ್ಮ ಕ್ಷೇತ್ರಗಳಿಗೆ ತಲಾ ₹ 50 ಕೋಟಿ ಅನುದಾನ ಮತ್ತು ದೇವಸ್ಥಾನಗಳ ಅಭಿವೃದ್ಧಿಗೆ ತಲಾ ₹ 2 ಕೋಟಿ ನೀಡಬೇಕು ಎಂಬ ಬೇಡಿಕೆ ಮುಂದಿಟ್ಟರು.

ಪ್ರಮುಖ ಇಲಾಖೆಗಳ ಉನ್ನತ ಅಧಿಕಾರಿಗಳ ಬದಲಾವಣೆಗೆ ಕೆಲವು ಶಾಸಕರು ಆಗ್ರಹಿಸಿದೆ, ಇನ್ನೂ ಕೆಲವು ಶಾಸಕರು ಸಚಿವರ ಕಾರ್ಯವೈಖರಿ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದರು. ಸರ್ಕಾರ ನಿಂತಿರುವುದು ನಿಮ್ಮಿಂದಲೇ ಅಲ್ಲ. ವರ್ತನೆಯನ್ನು ಸರಿ ಮಾಡಿಕೊಳ್ಳಿ, ಕನಿಷ್ಠ ದೂರವಾಣಿ ಕರೆಯನ್ನು ಸ್ವೀಕರಿಸುವ ಸೌಜನ್ಯ ತೋರಿ ಎಂದು ಹೇಳಿದ್ದಾಗಿ ಮೂಲಗಳು ತಿಳಿಸಿವೆ.

ಮಂಜೂರಾಗಿದ್ದರೂ ಹಂಚಿಕೆಗೆ ಭೂಮಿ ಇಲ್ಲ– ಅಶೋಕ

ಬೆಳಗಾವಿ (ಸುವರ್ಣ ವಿಧಾನಸೌಧ): 'ಗೋಮಾಳದಲ್ಲಿ ಲಭ್ಯವಿದ್ದ ಭೂಮಿಗಿಂತಲೂ ಹೆಚ್ಚಿನ ಭೂಮಿಯನ್ನು ತಹಶೀಲ್ದಾರ್‌ಗಳು ಮಂಜೂರು ಮಾಡಿದ್ದಾರೆ. ಹೀಗಾಗಿ ಬಹಳಷ್ಟು ಮಂದಿಗೆ ಮಂಜೂರಾಗಿದ್ದರೂ ಹಂಚಿಕೆ ಮಾಡಲು ಭೂಮಿ ಇಲ್ಲ. ಇಂಥ ಪ್ರಕರಣಗಳನ್ನು ಇತ್ಯರ್ಥಪಡಿಸುವುದು ಕಷ್ಟ ಸಾಧ್ಯವಾಗಿದೆ' ಎಂದು ಕಂದಾಯ ಸಚಿವ ಆರ್. ಅಶೋಕ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಸದಸ್ಯ ಮರಿತಿಬ್ಬೆಗೌಡ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, 'ಮಂಜೂರಾತಿ ವೇಳೆ ಕೆರೆ ಕಟ್ಟೆಗಳ ಬಗ್ಗೆ ಪಹಣಿಯಲ್ಲಿ ನಮೂದಿಸಿಲ್ಲ. ಹೀಗಾಗಿ ಸಾಕಷ್ಟು ಗೊಂದಲಗಳಾಗಿವೆ. ಹಲವು ವರ್ಷಗಳಿಂದ ಸಮಸ್ಯೆ ಬಗೆಹರಿದಿಲ್ಲ. ಯಾರು ಮೊದಲು ಅರ್ಜಿ ಹಾಕಿರುತ್ತಾರೋ ಅವರಿಗೆ ಮೊದಲು ಭೂಮಿ ನೀಡಬೇಕು ಎಂಬ ವೈಯಕ್ತಿಕ ಅಭಿಪ್ರಾಯ ನನ್ನದು' ಎಂದರು.

'ಪೋಡಿಯನ್ನು ಸಕಾಲದ ವ್ಯಾಪ್ತಿಗೆ ತರಲು ಸಾಧ್ಯವಿಲ್ಲ' ಎಂದ ಸಚಿವರು, 'ರಾಜ್ಯದಲ್ಲಿ ಏಕವ್ಯಕ್ತಿ ಪ್ರಕರಣಗಳಡಿ ಪೋಡಿಗೆ ರಾಜ್ಯದಲ್ಲಿ 33,331 ಪ್ರಕರಣಗಳು ಬಾಕಿ ಇವೆ' ಎಂದು ಹೇಳಿದರು.

ಹಕ್ಕುಚ್ಯುತಿ ಮಂಡಿಸಿದ ಕಾಂಗ್ರೆಸ್ ಶಾಸಕ ತುಕಾರಾಂ

ಸಂಡೂರು ತಹಶೀಲ್ದಾರ್ ವರ್ಗ, ಶಿಸ್ತುಕ್ರಮ

ಪ್ರಜಾವಾಣಿ ವಾರ್ತೆ

ಬೆಳಗಾವಿ (ಸುವರ್ಣ ವಿಧಾನಸೌಧ): 'ಸಂಡೂರು ಕ್ಷೇತ್ರದ ಕಾಂಗ್ರೆಸ್ ಶಾಸಕ ಇ.ತುಕಾರಾಂ ಅವರಿಗೆ ಅಗೌರವ ತೋರಿದ ಅಲ್ಲಿನ ತಹಶೀಲ್ದಾರ್ ಎಚ್. ಜೆ.ರಶ್ಮಿ ಅವರನ್ನು ಕೂಡಲೇ ವರ್ಗಾವಣೆ ಮಾಡಲಾಗುವುದು. ಅವರ ವಿರುದ್ಧ ವಿಚಾರಣೆ ನಡೆಸಿ ತಿಂಗಳಲ್ಲಿ ಶಿಸ್ತುಕ್ರಮ ಕೈಗೊಳ್ಳಲಾಗುವುದು' ಎಂದು ಕಂದಾಯ ಸಚಿವ ಆರ್.ಅಶೋಕ ಪ್ರಕಟಿಸಿದರು.

ವಿಧಾನಸಭೆಯಲ್ಲಿ ಬುಧವಾರ ತುಕಾರಾಂ ಅವರ ಹಕ್ಕುಚ್ಯುತಿ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, 'ವಿಚಾರಣೆ ಮುಗಿಯುವ ತನಕ ಈ ಅಧಿಕಾರಿಗೆ ಯಾವುದೇ ಹುದ್ದೆ ನೀಡುವುದಿಲ್ಲ' ಎಂದರು.

'ತಹಶೀಲ್ದಾರ್ ಹಲವು ಸಂದರ್ಭದಲ್ಲಿ ಅಗೌರವ ತೋರಿದ್ದಾರೆ. ಏಕವಚನದಿಂದ ಮಾತನಾಡಿ ಹಕ್ಕುಚ್ಯುತಿ ಮಾಡಿದ್ದಾರೆ. ಈ ಬಗ್ಗೆ ಕಳೆದ ಸದನದಲ್ಲಿ ಪ್ರಸ್ತಾಪ ಮಾಡಿದ್ದೆ. ಅಧಿಕಾರಿ ವಿರುದ್ಧ ಕ್ರಮ ಕೈಗೊಳ್ಳುವುದಾಗಿ ಸರ್ಕಾರ ಭರವಸೆ ನೀಡಿತ್ತು. ಆದರೆ, ಈವರೆಗೆ ಕ್ರಮ ಕೈಗೊಂಡಿಲ್ಲ' ಎಂದು ತುಕಾರಾಂ ಹೇಳಿದರು.

ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ.ಮಾಧುಸ್ವಾಮಿ, 'ಅಧಿಕಾರಿಯ ವರ್ಗಾವಣೆ ಮಾಡುವಂತೆ ಸೂಚಿಸಲಾಗಿದೆ. ಈ ಬಗ್ಗೆ ಪ್ರಕ್ರಿಯೆ ನಡೆಯುತ್ತಿದೆ' ಎಂದರು. ಇದಕ್ಕೆ ಕಾಂಗ್ರೆಸ್ ಸದಸ್ಯರು ಆಕ್ಷೇಪ ವ್ಯಕ್ತಪಡಿಸಿದರು. 'ಅಧಿಕಾರಿ ವಿರುದ್ಧ ಕ್ರಮ ಕೈಗೊಳ್ಳುವಂತೆ ಮಾಧುಸ್ವಾಮಿ ಅವರೇ ಪತ್ರ ಬರೆದು ಒಂದು ತಿಂಗಳಾಯಿತು. ಅಧಿಕಾರಿಯನ್ನು ಅಮಾನತು ಮಾಡಬೇಕು. ಈ ಮೂಲಕ ಅಧಿಕಾರಿಗಳಿಗೆ ಸಂದೇಶ ರವಾನಿಸಬೇಕು' ಎಂದರು.

ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, 'ಮಾಧುಸ್ವಾಮಿಯವರೇ, ನಿಮ್ಮ ಕ್ಷೇತ್ರದಲ್ಲಿ ಅಧಿಕಾರಿಗಳು ಈ ರೀತಿ ವರ್ತಿಸಿದ್ದರೆ ನೀವು ಸುಮ್ಮನೆ ಇರುತ್ತಿದ್ದೀರಾ. ಯಾವ ರೀತಿ ಪಾಠ ಕಲಿಸುತ್ತಿದ್ದೀರಿ ಎಂಬುದು ಗೊತ್ತಿದೆ. ಅದೇ ರೀತಿ, ಸಂಡೂರು ತಹಶೀಲ್ದಾರ್ ಅವರನ್ನು ಅಮಾನತು ಮಾಡಬೇಕು ಹಾಗೂ ಪ್ರಕರಣವನ್ನು ಹಕ್ಕುಚ್ಯುತಿ ಸಮಿತಿಗೆ ಒಪ್ಪಿಸಬೇಕು' ಎಂದು ಆಗ್ರಹಿಸಿದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, 'ಅಧಿಕಾರಿ ಸೌಜನ್ಯ ಮೀರಿ ವರ್ತಿಸಿದ್ದಾರೆ. ಅದನ್ನು ಗಂಭೀರವಾಗಿ ಪರಿಗಣಿಸಲಾಗಿದೆ. ಅವರನ್ನು ಕೂಡಲೇ ವರ್ಗಾವಣೆ ಮಾಡುತ್ತೇವೆ. ಅವರ ವಿರುದ್ಧ ವಿಚಾರಣೆ ನಡೆಸಲಾಗುವುದು' ಎಂದರು. ವರ್ಗ ಮಾಡಿದರೆ ಶಿಕ್ಷಿಸಿದಂತೆ ಆಗುವುದಿಲ್ಲ ಎಂದು ಸಿದ್ದರಾಮಯ್ಯ ಪ್ರತಿಪಾದಿಸಿದರು. ಈ ಪ್ರಕರಣವನ್ನು ಹಕ್ಕುಚ್ಯುತಿ ಸಮಿತಿಗೆ ಒಪ್ಪಿಸುವುದಾಗಿ ವಿಧಾನಸಭಾ ಅಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಪ್ರಕಟಿಸಿದರು.

ಬಸವರಾಜ ಬೊಮ್ಮಾಯಿ, 'ಹಕ್ಕುಚ್ಯುತಿ ಸಮಿತಿಗೆ ಒಪ್ಪಿಸಿದರೆ ವರ್ಗಾವಣೆ ಮಾಡುವುದಿಲ್ಲ. ಸಮಿತಿ ವರದಿ ನೀಡಿದ ಬಳಿಕ ಕ್ರಮ ಕೈಗೊಳ್ಳಲಾಗುವುದು' ಎಂದರು.

ಅಧಿಕಾರಿಯನ್ನು ಅಮಾನತು ಮಾಡಬೇಕು ಎಂದು ಕಾಂಗ್ರೆಸ್ ಸದಸ್ಯರು ಪಟ್ಟು ಹಿಡಿದರು. ಇದಕ್ಕೆ ಮುಖ್ಯಮಂತ್ರಿ ಒಪ್ಪಲಿಲ್ಲ. ಸರ್ಕಾರದ ತೀರ್ಮಾನವನ್ನು ಖಂಡಿಸಿ ಕಾಂಗ್ರೆಸ್ ಸದಸ್ಯರು ಧರಣಿ ನಡೆಸಿದರು. 'ಜುಜುಬಿ ತಹಶೀಲ್ದಾರ್ ಅಮಾನತು ಮಾಡಲು ಸರ್ಕಾರ ಇಷ್ಟೇಕೆ ಹಟ ಹಿಡಿಯುತ್ತಿದೆ ಎಂಬುದು ಗೊತ್ತಾಗುತ್ತಿಲ್ಲ' ಎಂದು ಸಿದ್ದರಾಮಯ್ಯ ಹೇಳಿದರು. ಈ ವಿಷಯದಲ್ಲಿ ಮುಖ್ಯಮಂತ್ರಿ ಅಸಹಾಯಕರಾಗಿದ್ದಾರೆ ಎಂದು ಪ್ರಿಯಾಂಕ್ ಖರ್ಗೆ ಕಾಲೆಳೆದರು.

'ಶಾಸಕರಿಗೆ ಜ್ಞಾನ ಪರಿಜ್ಞಾನ ಇದ್ದರೆ ಈ ರೀತಿ ಹೇಳಿಕೆ ನೀಡುವುದಿಲ್ಲ' ಎಂದು ಬಸವರಾಜ ಬೊಮ್ಮಾಯಿ ತಿರುಗೇಟು ನೀಡಿದರು. ಕಾಗೇರಿ ಅವರು ಕಲಾಪವನ್ನು 10 ನಿಮಿಷ ಮುಂದೂಡಿ ಆಡಳಿತ ಪಕ್ಷ ಹಾಗೂ ವಿರೋಧ ಪಕ್ಷದ ನಾಯಕರ ಜತೆಗೆ ಸಂಧಾನ ನಡೆಸಿದರು. ಬಳಿಕ ಕಲಾಪ ಆರಂಭವಾಗುತ್ತಿದ್ದಂತೆ ಅಶೋಕ ಅವರು ಸರ್ಕಾರದ ನಿರ್ಧಾರ ಪ್ರಕಟಿಸಿದರು. ಕಾಂಗ್ರೆಸ್ ಸದಸ್ಯರು ಧರಣಿ ಕೈಬಿಟ್ಟರು.

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ
ನಂ. 333/1, 1ನೇ ಮಹಡಿ, ವಿ.ಜೆ. ಕಾಂಪ್ಲೆಕ್ಸ್, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ–562 110.

ಸಂ: ಬಿಐಎಪಿಎ/ಟಿಪಿ/ಭೂಉಬ/52/2021–22/1414 ದಿನಾಂಕ : 15–12–2021

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14 (ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ಭೂವಲಯಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ ದೇವನಹಳ್ಳಿ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗು	ಮಹಾ ಯೋಜನೆಯ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1.	ಶ್ರೀ ಜಿ.ಎನ್. ವೇಣುಗೋಪಾಲ್ ಬಿನ್ ಲೇ॥ ನಾರಾಯಣಸ್ವಾಮಿ	ದೇವನಹಳ್ಳಿ	ಕಸಬಾ	ಲಾಲಗೊಂಡನಹಳ್ಳಿ	26/1	1–11	ವ್ಯವಸಾಯ	ವಸತಿ
		ದೇವನಹಳ್ಳಿ	ಕಸಬಾ	ಲಾಲಗೊಂಡನಹಳ್ಳಿ	27/3	0–25	ವ್ಯವಸಾಯ	ವಸತಿ

ಷರಾ :– ಪ್ರಸ್ತಾವನೆಯಲ್ಲಿನ ಅರ್ಜಿದಾರರು ಪ್ರಶ್ನಿತ ಜಮೀನಿನಲ್ಲಿ ವ್ಯವಸಾಯ ಉಪಯೋಗಕ್ಕೆ ಬಳಸಿಕೊಳ್ಳಲು ಸಾಧ್ಯವಾಗುತ್ತಿಲ್ಲವೆಂದೂ, ಹಾಗೂ ಪರಿಸರದಲ್ಲಿ ವಾಸದ ಬೆಳವಣಿಗೆಗೆ ಅತಿ ಹೆಚ್ಚು ಬೇಡಿಕೆ ಇದ್ದು, ಉದ್ದೇಶಿತ ಜಮೀನಿನಲ್ಲಿ ಯೋಜಿತ ಬೆಳವಣಿಗೆಯ ಅಭಿವೃದ್ಧಿಯನ್ನು ಅಭಿವೃದ್ಧಿಪಡಿಸುವುದರಿಂದ ಸುತ್ತಮುತ್ತಲ ಗ್ರಾಮಸ್ಥರಿಗೆ ಉದ್ಯೋಗಾವಕಾಶ ಕಲ್ಪಿಸಿದಂತಾಗುವುದೆಂದೂ ಸದರಿ ಜಮೀನು ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ ಭೂಉಪಯೋಗ ಬದಲಾವಣೆಗೊಂಡ ನಂತರ ವಸತಿ ಉದ್ದೇಶಕ್ಕೆ ಭೂಪರಿವರ್ತಿಸಿ, ಪ್ರಾಧಿಕಾರದಿಂದ ಅನುಮೋದನೆ ಪಡೆದು, ಯೋಜನಾ ಬದ್ಧ ಅಭಿವೃದ್ಧಿ ಕಾರ್ಯಗಳಿಂದ ಸ್ಥಳೀಯರಿಗೆ ಉದ್ಯೋಗಾವಕಾಶ ಸೃಷ್ಟಿ ಹಾಗೂ ಮೂಲ ಸೌಕರ್ಯ ಅಭಿವೃದ್ಧಿಯಾಗುವುದರಿಂದ ಸಾರ್ವಜನಿಕ ಹಿತಾಶಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು 'ವ್ಯವಸಾಯ ವಲಯ' ದಿಂದ 'ವಸತಿ ವಲಯ' ಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ವಾಸಾಸಂಇ/ಉನಿಕ/ಬೆಂಗ್ರಾಜಿ/302/2021–22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಸಹಿ/–
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿಗಳು,
ಬಿ.ಐ.ಎ.ಎ.ಪಿ.ಎ, ದೇವನಹಳ್ಳಿ.

ಐಐಎಸ್ಸಿ; ಆತ್ಮಹತ್ಯೆ ತಡೆಗಾಗಿ ಸೀಲಿಂಗ್ ಫ್ಯಾನ್ ತೆರವು

ಬೆಂಗಳೂರು: ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ (ಐಐಎಸ್ಸಿ) ಇತ್ತೀಚೆಗೆ ವಿದ್ಯಾರ್ಥಿಗಳ ಆತ್ಮಹತ್ಯೆ ಪ್ರಕರಣಗಳ ಸಂಖ್ಯೆ ಹೆಚ್ಚಾಗುತ್ತಿದ್ದು, ಇದರ ತಡೆಗಾಗಿ ಆಡಳಿತ ಮಂಡಳಿ ಹಲವು ಮುಂಜಾಗ್ರತಾ ಕ್ರಮಗಳನ್ನು ಜಾರಿಗೆ ತಂದಿದೆ. ವಸತಿಗೃಹಗಳ ಕೊಠಡಿಗಳಲ್ಲಿ ಸೀಲಿಂಗ್ ಫ್ಯಾನ್ ಬಳಕೆಯನ್ನು ನಿಷೇಧಿಸಲಾಗಿದ್ದು, ಅದೇ ಜಾಗದಲ್ಲಿ ಗೋಡೆಯಲ್ಲಿ ಫ್ಯಾನ್ ಅಳವಡಿಸಲಾಗುತ್ತಿದೆ. ಈ ಬಗ್ಗೆ ವಿದ್ಯಾರ್ಥಿಗಳ ಪ್ರತಿನಿಧಿಗಳಿಗೆ ಆಡಳಿತ ಮಂಡಳಿಯು ಇ-ಮೇಲ್ ಕಳುಹಿಸಿದೆ.

ವೋಲ್ವೊ ಬಸ್: ನಾಳೆಯಿಂದ ರಸ್ತೆಗಿಳಿಯಲಿವೆ 173 ಬಸ್‌ಗಳು

ಪ್ರಯಾಣ ದರ ಶೇ 34ರಷ್ಟು ಇಳಿಕೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಕೋವಿಡ್ ಅಲೆಗಳ ಅಬ್ಬರದಲ್ಲಿ ಪ್ರಯಾಣಿಕರ ಕೊರತೆಯಿಂದ ಮೂಲೆ ಸೇರಿದ್ದ ವೋಲ್ವೊ ಬಸ್‌ಗಳನ್ನು ರಸ್ತೆಗಿಳಿಸಲು ನಿರ್ಧರಿಸಿರುವ ಬಿಎಂಟಿಸಿ, ಪ್ರಯಾಣ ದರವನ್ನು ಶೇ 34ರಷ್ಟು ಕಡಿಮೆ ಮಾಡಿದೆ.

ವೋಲ್ವೊ ಬಸ್‌ಗಳನ್ನು ಮೂಲೆಗೆ ನಿಲ್ಲಿಸುವ ಬದಲು 'ರಸ್ತೆಗಿಳಿಸಿ–ಪ್ರಯಾಣ ದರವನ್ನೂ ಇಳಿಸಿ' ಎಂಬ ಶೀರ್ಷಿಕೆಯಡಿ 'ಪ್ರಜಾವಾಣಿ' ಡಿ.12ರ ಸಂಚಿಕೆಯಲ್ಲಿ ವಿಶೇಷ ವರದಿಯನ್ನು ಪ್ರಕಟಿಸಿತ್ತು. ಇದರ ಬೆನ್ನಲ್ಲೇ ಬಿಎಂಟಿಸಿ ಈ ಕ್ರಮ ಕೈಗೊಂಡಿದೆ.

ಸದ್ಯ 9 ಮಾರ್ಗಗಳಲ್ಲಿ 83 ವೋಲ್ವೊ (ವಜ್ರ) ಬಸ್‌ಗಳು ಕಾರ್ಯಚರಣೆಯಲ್ಲಿದ್ದವು. ಹೊಸದಾಗಿ ಇನ್ನೂ 12 ಮಾರ್ಗಗಳಲ್ಲಿ 90 ಬಸ್‌ಗಳನ್ನು 627 ಸುತ್ತುವಳಿಗಳಲ್ಲಿ ರಸ್ತೆಗೆ ಇಳಿಸಲು ಬಿಎಂಟಿಸಿ ತೀರ್ಮಾನಿಸಿದೆ. ಶುಕ್ರವಾರದಿಂದ ಒಟ್ಟು 173 ವೋಲ್ವೊ ಬಸ್‌ಗಳು ರಸ್ತೆಗೆ ಇಳಿಯಲಿವೆ.

₹35 ಇದ್ದ ದರ ₹30ಕ್ಕೆ, ₹75 ಇದ್ದ ದರ ₹45ಕ್ಕೆ ಹೀಗೆ ಸರಾಸರಿ ಶೇ 34ರಷ್ಟು ಕಡಿತಗೊಳಿಸಲಾಗಿದೆ. ವಜ್ರ ಬಸ್‌ನ ದಿನದ ಪಾಸ್ ದರ ಈ ಹಿಂದೆ ಜಿಎಸ್‌ಟಿ ಸೇರಿ ₹120 ಇತ್ತು, ಈಗ ಅದನ್ನು ₹100ಕ್ಕೆ ಇಳಿಸಲಾಗಿದೆ. ಮಾಸಿಕ ಪಾಸ್ ದರ ₹2,000 ಇತ್ತು, ಈಗ ₹1,500ಕ್ಕೆ ಇಳಿಕೆ ಮಾಡಲಾಗಿದೆ. ಕನಿಷ್ಠ ದರ ₹ 10 ಹಾಗೂ ಗರಿಷ್ಠ ದರ ₹ 50 ಇರಲಿದೆ ಎಂದು ಬಿಎಂಟಿಸಿಮಾಹಿತಿ ನೀಡಿದೆ.



ಬಿಎಂಟಿಸಿ ಪ್ರಯಾಣಿಕರ ಹಕ್ಕೊತ್ತಾಯ • ಬಸ್ ಸಂಚಾರ ನಿಲ್ಲಿಸಿ ನಷ್ಟ ಮಾಡುವ ಬದಲು ಕಾರ್ಯಾಚರಣೆ ನಡೆಸಲು ಹೆಚ್ಚಿದ ಬೇಡಿಕೆ
'ವೋಲ್ವೊ ರಸ್ತೆಗಿಳಿಸಿ–ಪ್ರಯಾಣ ದರವನ್ನೂ ಇಳಿಸಿ'
860
150
2
'ಹಳೆ ಬಸ್ ಬದಲು ವೋಲ್ವೊ ಓಡಿಸಿ'
'ಲಾಭ-ನಷ್ಟದ ಲೆಕ್ಕಾಚಾರ ಇಲ್ಲದಾರದು'
'ಪ್ರಾಯೋಗಿಕ ಸಂಚಾರ ಆರಂಭಿಸಬಹುದು'
'ಬಸ್‌ಗಳನ್ನು ರಸ್ತೆಗೆ ಇಳಿಸಬೇಕು'

ಇದೇ 13ರಂದು 'ಪ್ರಜಾವಾಣಿ'ಯಲ್ಲಿ ಪ್ರಕಟವಾದ ವರದಿ

ಸಾಮಾನ್ಯ ಬಸ್‌ಗಳು ಮತ್ತು ವಾಯುವಜ್ರ (ವಿಮಾನ ನಿಲ್ದಾಣಕ್ಕೆ ಹೋಗುವ) ಬಸ್‌ಗಳ ಪ್ರಯಾಣ ದರದಲ್ಲಿ ಯಾವುದೇ ವ್ಯತ್ಯಾಸ ಮಾಡಿಲ್ಲ ಎಂದು ಬಿಎಂಟಿಸಿ ಸ್ಪಷ್ಟಪಡಿಸಿದೆ.

'ಸಂಸ್ಥೆಯಲ್ಲಿ ಇನ್ನೂ 500ಕ್ಕೂ ಹೆಚ್ಚು ವೋಲ್ವೊ ಬಸ್‌ಗಳಿದ್ದು, ಹಂತ ಹಂತವಾಗಿ ರಸ್ತೆಗಿಳಿಸಲು ಉದ್ದೇಶಿಸಲಾಗಿದೆ. ದರ ಕಡಿಮೆ ಮಾಡಿರುವುದರಿಂದ ಪ್ರಯಾಣಿಕರು ಈ ಬಸ್‌ಗಳನ್ನು ಹತ್ತುವ ನಿರೀಕ್ಷೆ ಇದೆ. ಜನರಿಂದ ಬರುವ ಪ್ರತಿಕ್ರಿಯೆ ಆಧರಿಸಿ ವಜ್ರ ಬಸ್‌ಗಳ ಸಂಖ್ಯೆಯನ್ನು ಹೆಚ್ಚಿಸಲಾಗುವುದು 'ಎಂದು ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕ ವಿ. ಅನ್ಬುಕುಮಾರ್ 'ಪ್ರಜಾವಾಣಿ'ಗೆ ತಿಳಿಸಿದರು.

'ದರ ಕಡಿಮೆ ಮಾಡಿರುವುದರಿಂದ ಸಾಮಾನ್ಯ ಬಸ್ ಪ್ರಯಾಣ ದರಕ್ಕೂ, ಹವಾನಿಯಂತ್ರಿತ ವಜ್ರ ಬಸ್ ಪ್ರಯಾಣ ದರಕ್ಕೂ ₹10 ಮಾತ್ರ ವ್ಯತ್ಯಾಸ ಇದೆ. ಆರಾಮದಾಯಕ ಪ್ರಯಾಣಕ್ಕೆ ಈ ಬಸ್‌ಗಳನ್ನು ಬಳಸಿಕೊಳ್ಳಬೇಕು' ಎಂದು ಅವರು ಮನವಿ ಮಾಡಿದರು.

ಸಿದ್ಧರಬೆಟ್ಟ: ಹನುಮ ಜಯಂತಿಗೆ ಹೈಕೋರ್ಟ್ ಅನುಮತಿ

ಬೆಂಗಳೂರು: ನೆಲಮಂಗಲ ತಾಲ್ಲೂಕಿನ ಸೋಂಪುರ ಹೋಬಳಿಯ ಸಿದ್ಧರಬೆಟ್ಟದಲ್ಲಿ ಗುರುವಾರ (ಡಿ.16) ಹನುಮ ಜಯಂತಿ ಆಚರಿಸಲು ನಿಜಗಲ್ಲು ಸಿದ್ಧರಬೆಟ್ಟ ದೇವಸ್ಥಾನ ಸೇವಾ ಸಮಿತಿಗೆ ಹೈಕೋರ್ಟ್ ಅನುಮತಿ ನೀಡಿದೆ.

ಸಿದ್ಧರಬೆಟ್ಟದಲ್ಲಿ ಹನುಮ ಜಯಂತಿ ಆಚರಣೆಗೆ ಅನುಮತಿ ನಿರಾಕರಿಸಿದ್ದ ನೆಲಮಂಗಲ ವಲಯ ಅರಣ್ಯಾಧಿಕಾರಿಯ ಕ್ರಮ ಪ್ರಶ್ನಿಸಿ ದೇವಸ್ಥಾನ ಸೇವಾ ಸಮಿತಿ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ಪುರಸ್ಕರಿಸಿ, ಈ ಆದೇಶ ನೀಡಿತು.

ನಿಜಗಲ್ಲು ಸಿದ್ಧರಬೆಟ್ಟ: ಹನುಮ ಜಯಂತಿ

ದಾಬಸ್ ಪೇಟೆ: ನಿಜಗಲ್ಲು ಸಿದ್ಧರಬೆಟ್ಟ ಸೇವಾ ಸಮಿತಿಯು ನೆಲಮಂಗಲ ತಾಲ್ಲೂಕಿನ ಇತಿಹಾಸ ಪ್ರಸಿದ್ಧ ನಿಜಗಲ್ಲು ಸಿದ್ಧರ ಬೆಟ್ಟದಲ್ಲಿ ಗುರುವಾರ ಹನುಮ ಜಯಂತಿ ಕಾರ್ಯಕ್ರಮ ಹಮ್ಮಿಕೊಂಡಿದೆ.

ನಾಲ್ಕು ದಿಕ್ಕುಗಳಲ್ಲಿನ ಆಂಜನೇಯ ಮೂರ್ತಿಗಳು ಹಾಗೂ ಹಲವು ದೇವರುಗಳಿಗೆ ಹೋಮ, ಅಭಿಷೇಕ ಸೇರಿದಂತೆ ವಿವಧ ಪೂಜೆ ನಡೆಯಲಿವೆ.

ಆರ್‌ಜಿಯುಎಚ್‌ಎಸ್ ಕಾಯ್ದೆ ತಿದ್ದುಪಡಿಗೆ ಪ್ರಸ್ತಾವ ಸಿದ್ಧ

ರಾಜೀವ್ ಗಾಂಧಿ ವಿ.ವಿ ನಿಧಿಯ ₹1,500 ಕೋಟಿ ಮೇಲೆ ಕಣ್ಣು

• ರಶ್ಮಿ ಬೇಲೂರು

ಬೆಂಗಳೂರು: ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ (ಆರ್‌ಜಿಯುಎಚ್‌ಎಸ್) ₹1,500 ಕೋಟಿ ನಿಧಿಯ ಮೇಲೆ ಕಣ್ಣಿಟ್ಟಿರುವ ರಾಜ್ಯ ಸರ್ಕಾರ, ಬೆಳಗಾವಿ ಅಧಿವೇಶನದಲ್ಲೇ ಕಾಯ್ದೆ ತಿದ್ದುಪಡಿಗೆ ಪ್ರಸ್ತಾವ ಸಿದ್ಧಪಡಿಸಿದೆ.

ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ. ಸುಧಾಕರ್ ಅವರು ಕಾಯ್ದೆಗೆ ಅಗತ್ಯ ತಿದ್ದುಪಡಿ ತರಲು ವೈದ್ಯಕೀಯ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗೆ ಸೂಚನೆ ರವಾನಿಸಿದ್ದು, ಇದರ ಪ್ರತಿ 'ಪ್ರಜಾವಾಣಿ'ಗೆ ದೊರೆತಿದೆ.

ಸಚಿವರ ಟಿಪ್ಪಣಿ ಪ್ರತಿಯ ಪ್ರಕಾರ, 'ವಿಶ್ವವಿದ್ಯಾಲಯದ ನಿಧಿ ಬಳಕೆ, ನಿರ್ವಹಣೆ ಮತ್ತು ಲೆಕ್ಕಪರಿಶೋಧನೆ ಬಗ್ಗೆ ಆರ್‌ಜಿಯುಎಚ್‌ಎಸ್ ಕಾಯ್ದೆಯ ಅಧ್ಯಾಯ 6ರಲ್ಲಿ ವಿವರಿಸಲಾಗಿದೆ. ನಿಧಿ ಬಳಕೆಗೆ ರಾಜ್ಯ ಸರ್ಕಾರ ನೀಡುವ ನಿರ್ದೇಶನಗಳೇ ಅಂತಿಮ. ಆದಾಗ್ಯೂ, ನಿಧಿಯ ಬಳಕೆಗೆ ಸಂಬಂಧಿಸಿದಂತೆ ಸರ್ಕಾರಕ್ಕೆ ಮಿತಿ ವಿಧಿಸಿದರೆ, ಕಾಯ್ದೆಗೆ ಸೂಕ್ತ ತಿದ್ದುಪಡಿ ತರಬೇಕಾಗುತ್ತದೆ. ಸಾಮಾನ್ಯ ಜನರಿಗೆ ಉತ್ತಮ ಆರೋಗ್ಯ ಸೌಕರ್ಯಗಳನ್ನು ವಿಸ್ತರಿಸುವ ಹಿತದೃಷ್ಟಿಯಿಂದ ಈ ಹಣವನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಲು ಅವಕಾಶ ಸಿಗುವಂತೆ ನೋಡಿಕೊಳ್ಳಬೇಕಾಗುತ್ತದೆ' ಎಂದು ಸಚಿವರು ತಿಳಿಸಿದ್ದಾರೆ. ಈ ಸಲುವಾಗಿ ಚಳಿಗಾಲದ ಅಧಿವೇಶನದಲ್ಲೇ ಈ ಕಾಯ್ದೆಗೆ ತಿದ್ದುಪಡಿ ತರಲು ತಯಾರಿ ನಡೆಸುವಂತೆ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ನಿಧಿಯನ್ನು ಅನ್ಯ ಕಾರ್ಯಗಳಿಗೆ ಬಳಸಿಕೊಳ್ಳುವ ಈ ಕ್ರಮಕ್ಕೆ ವಿಶ್ವವಿದ್ಯಾಲಯದ ಅಧಿಕಾರಿಗಳಿಂದ ಮತ್ತು ಸಿಂಡಿಕೇಟ್ ಸದಸ್ಯರಿಂದ ಅಸಮಾಧಾನ ವ್ಯಕ್ತವಾಗಿದೆ.

'ಹಲವಾರು ವರ್ಷಗಳಿಂದ ಶುಲ್ಕ ರೂಪದಲ್ಲಿ ವಿದ್ಯಾರ್ಥಿಗಳಿಂದ ಹಣ ಸಂಗ್ರಹಿಸಲಾಗಿದೆ. ಸರ್ಕಾರವು ಅದನ್ನು ಆರೋಗ್ಯ ಸೇವೆಗಳನ್ನು ಕಲ್ಪಿಸಲು ಹೇಗೆ ಖರ್ಚು ಮಾಡುತ್ತದೆ' ಎಂದು ಸಿಂಡಿಕೇಟ್ ಸದಸ್ಯರೊಬ್ಬರು ಪ್ರಶ್ನಿಸಿದರು.

'ವಿಶ್ವವಿದ್ಯಾಲಯದಲ್ಲಿನ ಈ ಹಣ ಸಂಪೂರ್ಣವಾಗಿ ವಿದ್ಯಾರ್ಥಿಗಳಿಂದ ಸಂಗ್ರಹಿಸಿದ್ದಾಗಿದೆ. ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿನ ವೈದ್ಯಕೀಯ ಶಿಕ್ಷಣದ ಗುಣಮಟ್ಟ ಸುಧಾರಿಸಲು ಇದನ್ನು ಬಳಸಿಕೊಳ್ಳಬೇಕು' ಎಂದು ಆರ್‌ಜಿಯುಎಚ್‌ಎಸ್‌ನ ವಿಶ್ರಾಂತ ಕುಲಪತಿ ಡಾ.ಕೆ. ಎಸ್.ರವೀಂದ್ರನಾಥ್ ಅಭಿಪ್ರಾಯಪಟ್ಟರು.

'ಶಾಶ್ವತ ಪ್ರಾಂಗಣವನ್ನು ಹೊಂದಲು ಆರ್‌ಜಿಎಚ್‌ಎಸ್‌ಯುಗೆ ಇದುವರೆಗೂ ಸಾಧ್ಯವಾಗಿಲ್ಲ. ಇದರತ್ತ ಗಮನ ಹರಿಸುವ ಬದಲು, ಈ ಹಣವನ್ನು ಅನ್ಯ ಉದ್ದೇಶಕ್ಕೆ ಬಳಸುವುದು ತರವಲ್ಲ' ಎಂದು ಸಿಂಡಿಕೇಟ್ ಇನ್ನೊಬ್ಬ ಸದಸ್ಯರೊಬ್ಬರು ತಿಳಿಸಿದರು.

ಈ ಪ್ರಸ್ತಾವ ವಿರೋಧಿಸಿ ಸರ್ಕಾರಕ್ಕೆ ಪತ್ರ ಬರೆಯುವುದಾಗಿ ವಿಶ್ವವಿದ್ಯಾಲಯದ ಅಧಿಕಾರಿಯೊಬ್ಬರು ತಿಳಿಸಿದರು.

'ಆ ಬಳಿಕವೂ ಸರ್ಕಾರ ಈ ಪ್ರಸ್ತಾವ ಕೈಬಿಡದಿದ್ದರೆ ಕಾನೂನು ಹೋರಾಟಕ್ಕೂ ಸಿದ್ಧ' ಎಂದು ಸಿಂಡಿಕೇಟ್‌ನ ಸದಸ್ಯರು ತಿಳಿಸಿದರು.

'ಸರ್ಕಾರದಿಂದ ನಮಗೆ ಪತ್ರ ಬಂದಿದೆ. ನಿರ್ಧಾರ ತಳೆಯುವ ಸಲುವಾಗಿ ಇದನ್ನು ಸಿಂಡಿಕೇಟ್ ಮುಂದೆ ಮಂಡಿಸಲಿದ್ದೇವೆ' ಎಂದು ಹಂಗಾಮಿ ಕುಲಪತಿ ಡಾ.ಎಸ್.ಎಂ.ಜಯಕರ್ ತಿಳಿಸಿದರು.

ಈ ಹಿಂದೆ ಡಿ.ಕೆ. ಶಿವಕುಮಾರ್ ಅವರು ವೈದ್ಯಕೀಯ ಶಿಕ್ಷಣ ಸಚಿವರಾಗಿದ್ದ ಅವಧಿಯಲ್ಲೂ ನಿಧಿ ಬಳಿಕೆಗೆ ಪ್ರಯತ್ನ ನಡೆದಿತ್ತು. ಸಿಂಡಿಕೇಟ್ ಮತ್ತು ಸೆನೆಟ್ ಸದಸ್ಯರು ಹೈಕೋರ್ಟ್ ಮೆಟ್ಟಿಲೇರಿದ್ದರಿಂದ ಅದಕ್ಕೆ ತಡೆ ಬಿದ್ದಿತ್ತು.

'ಮಹಾರಾಷ್ಟ್ರ: ಸ್ಥಳೀಯ ಸಂಸ್ಥೆಗಳಲ್ಲಿ ಒಬಿಸಿಯ ಶೇ 27 ಸ್ಥಾನ ಸಾಮಾನ್ಯ ವರ್ಗಕ್ಕೆ'

ನವದೆಹಲಿ: ಸ್ಥಳೀಯ ಸಂಸ್ಥೆಗಳಲ್ಲಿ ಇತರ ಹಿಂದುಳಿದ ವರ್ಗಗಳಿಗೆ (ಒಬಿಸಿ) ಮೀಸಲಿಟ್ಟಿದ್ದ ಶೇ 27ರಷ್ಟು ಸ್ಥಾನಗಳನ್ನು ಸಾಮಾನ್ಯ ವರ್ಗವೆಂದು ಪರಿಗಣಿಸಿ ಚುನಾವಣಾ ಪ್ರಕ್ರಿಯೆಯನ್ನು ಮುಂದುವರಿಸುವಂತೆ ಮಹಾರಾಷ್ಟ್ರ ರಾಜ್ಯ ಚುನಾವಣಾ ಆಯೋಗಕ್ಕೆ (ಎಸ್‌ಇಸಿ) ಸುಪ್ರೀಂ ಕೋರ್ಟ್ ಬುಧವಾರ ನಿರ್ದೇಶನ ನೀಡಿದೆ.

ಒಬಿಸಿಗಳಿಗೆ ಮೀಸಲಾದ ಸ್ಥಾನಗಳ ಕುರಿತು ಮಹಾರಾಷ್ಟ್ರದ ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನು ಮುಂದಿನ ಆದೇಶದವರೆಗೆಸುಪ್ರೀಂಕೋರ್ಟ್‌ಡಿ.6ರಂದು ತಡೆಹಿಡಿದಿತ್ತು ಮತ್ತು ಇತರ ಸ್ಥಾನಗಳಿಗೆ ಚುನಾವಣಾ ಪ್ರಕ್ರಿಯೆಯು ಮುಂದುವರಿಯಲಿದೆ ಎಂದೂ ಸ್ಪಷ್ಟಪಡಿಸಿತ್ತು.

ಕಳೆದ ವಾರದ ಆದೇಶವನ್ನು ಮಾರ್ಪಾಡು ಮಾಡುವಂತೆ ಕೋರಿ ಮಹಾರಾಷ್ಟ್ರ ಸರ್ಕಾರವು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಎ.ಎಂ. ಖಾನ್ವಿಲ್ಕರ್ ಮತ್ತು ಸಿ.ಟಿ. ರವಿಕುಮಾರ್ ಅವರನ್ನೊಳಗೊಂಡ ನ್ಯಾಯಪೀಠವು, ವಾರದೊಳಗೆ ಶೇ 27ರಷ್ಟು ಸೀಟುಗಳಿಗೆ ಹೊಸದಾಗಿ ಅಧಿಸೂಚನೆ ಹೊರಡಿಸುವಂತೆ ಎಸ್‌ಇಸಿಗೆ ಸೂಚಿಸಿದೆ.

ಪ್ರಾಣಿ ದತ್ತು ಸ್ವೀಕಾರ ದರ ಹೆಚ್ಚಳ

ಮೈಸೂರು: ಮೃಗಾಲಯದ ಪ್ರಾಣಿ–ಪಕ್ಷಿಗಳ ದತ್ತು ಸ್ವೀಕಾರ ದರವನ್ನು ಹೆಚ್ಚಿಸಲು ಕರ್ನಾಟಕ ಮೃಗಾಲಯ ಪ್ರಾಧಿಕಾರದ 149ನೇ ಆಡಳಿತ ಮಂಡಳಿ ಸಭೆಯಲ್ಲಿ ಅನುಮೋದನೆ ನೀಡಲಾಗಿದೆ.

ಮೈಸೂರು ಮೃಗಾಲಯದ ಕೂರ್ಗಳ್ಳಿ ಪುನರ್ವಸತಿ ಮತ್ತು ರಕ್ಷಣಾ ಕೇಂದ್ರ ಆವರಣದಲ್ಲಿ ಬುಧವಾರ ಪ್ರಾಧಿಕಾರದ ಅಧ್ಯಕ್ಷ ಎಲ್.ಆರ್. ಮಹಾದೇವಸ್ವಾಮಿ ನೇತೃತ್ವದಲ್ಲಿ ಸಭೆ ನಡೆಯಿತು.

ಬನ್ನೇರುಘಟ್ಟ ಜೈವಿಕ ಉದ್ಯಾನದಲ್ಲಿನ ಸಫಾರಿ ದರವನ್ನೂ ಹೆಚ್ಚಿಸಲಾಗಿದೆ.

ಕಾರಿನ ಮೇಲೆ 'ಕರ್ನಾಟಕ ಸರ್ಕಾರ' ಲಾಂಛನ

ಮುಖ್ಯಮಂತ್ರಿ ನಕಲಿ ವಿಶೇಷ ಅಧಿಕಾರಿ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿಯವರ ವಿಶೇಷ ಅಧಿಕಾರಿ ಎಂಬುದಾಗಿ ಹೇಳಿಕೊಂಡು ನಾನಾ ರೀತಿಯ ಆಮಿಷವೊಡ್ಡಿ ಜನರನ್ನು ವಂಚಿಸುತ್ತಿದ್ದ ಆರೋಪದಡಿ ಪಿ. ಉದಯಪ್ರಭು (34) ಎಂಬಾತನನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

'ಮೈಲಸಂದ್ರದ ಆರೋಪಿ ಉದಯ ಪ್ರಭು, ರಾಜರಾಜೇಶ್ವರಿನಗರದಲ್ಲಿ ವಾಸವಿದ್ದ. ತನ್ನ ಕಾರಿನ ಮೇಲೆ 'ಕರ್ನಾಟಕ ಸರ್ಕಾರ' ಎಂಬ ಲಾಂಛನ ಹಾಕಿಸಿಕೊಂಡಿದ್ದ. ಆತನಿಂದ ₹ 1.20 ಲಕ್ಷ ನಗದು, ಇನ್ನೋವಾ ಕಾರು, ಲ್ಯಾಪ್ ಟಾಪ್, ಮೂರು ಐಫೋನ್‌ಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.



ಉದಯ ಪ್ರಭು

'ಕಾಟನ್‌ಪೇಟೆಯಲ್ಲಿ ಬಾಳೆಹಣ್ಣು ಹೋಲ್ ಸೇಲ್ ಮಾರಾಟ ಮಳಿಗೆ ನಡೆಸುತ್ತಿರುವ ಆರೋಪಿ, ಬಿಳಿ ಬಣ್ಣದ ಇನ್ನೋವಾ ಕಾರು) ಇಟ್ಟುಕೊಂಡಿದ್ದ. ಕಾರಿನ ಮುಂಭಾಗ, ಹಿಂಭಾಗದಲ್ಲಿ ಕರ್ನಾಟಕ ಸರ್ಕಾರ ಲಾಂಛನ ಹಾಕಿಸಿದ್ದ. ನೋಂದಣಿ ಫಲಕದಲ್ಲೂ 'ಕರ್ನಾಟಕ ಸರ್ಕಾರ' ಎಂಬುದಾಗಿ ಕನ್ನಡ ಹಾಗೂ ಇಂಗ್ಲಿಷ್‌ನಲ್ಲಿ ಬರೆಸಿದ್ದ. ಆರೋಪಿ ಕಾರಿನ ಬಗ್ಗೆ ಅನುಮಾನಗೊಂಡಿದ್ದ ಸಾರ್ವಜನಿಕರೊಬ್ಬರು ಮಾಹಿತಿ ನೀಡಿದ್ದರು. ಕಾರು ಪತ್ತೆಗಾಗಿ ಸಿಸಿಬಿ ಇನ್‌ಸ್ಪೆಕ್ಟರ್ ಎಂ.ಎಂ. ಭರತ್ ನೇತೃತ್ವದ ತಂಡ ಕಾರ್ಯಾಚರಣೆಗೆ ಇಳಿದಿತ್ತು'

'ತಾನೊಬ್ಬ ಸಚಿವಾಲಯದ ವಿಶೇಷ ಅಧಿಕಾರಿ ಎಂದಿದ್ದ. ಆರೋಪಿ ಗುರುತಿನ ಚೀಟಿ ಸಹ ತೋರಿಸಿದ್ದ. ಅದನ್ನು ಪರಿಶೀಲಿಸಿದಾಗ ನಕಲಿ ಎಂಬುದು ತಿಳಿಯಿತು. ನಂತರವೇ ಆರೋಪಿಯನ್ನು ಬಂಧಿಸಲಾಯಿತು' ಎಂದೂ ಅಧಿಕಾರಿ ತಿಳಿಸಿದರು.

'ವಿಶೇಷ ಅಧಿಕಾರಿ ಸೋಗಿನಲ್ಲಿ ಸರ್ಕಾರದಿಂದ ಟೆಂಡರ್ ಕೊಡಿಸುವ ಹಾಗೂ ಸರ್ಕಾರಿ ಕೆಲಸ ಕೊಡಿಸುವ ಆಮಿಷವೊಡ್ಡುತ್ತಿದ್ದ. ಅದಕ್ಕೆಂದು ಲಕ್ಷ ಲಕ್ಷ ಹಣ ಪಡೆಯುತ್ತಿದ್ದನೆಂಬ ಮಾಹಿತಿ ಇದೆ' ಎಂದೂ ಪೊಲೀಸ್ ಅಧಿಕಾರಿ ಹೇಳಿದರು.

ನಗರದಲ್ಲಿ ಇಂದು


ವಿಜಯ ದಿವಸ್ ಅಂಗವಾಗಿ 'ಸ್ವಚ್ಛ ಬೀದಿ' ಓಟ: ಆಯೋಜನೆ–ಪಾಲಿಕೆ, ಸ್ಥಳ–ವಿಧಾನ ಸೌಧದ ಪೂರ್ವ ದ್ವಾರ, ಬೆಳಿಗ್ಗೆ 6.30

ಹನುಮ ಜಯಂತಿ ಮಹೋತ್ಸವ: ಬೆಳಿಗ್ಗೆ 7.30ಕ್ಕೆ ಅಭಿಷೇಕ, 10 ಗಂಟೆಗೆ ಮಹಾಮಂಗಳಾರತಿ, ಆಯೋಜನೆ ಮತ್ತು ಸ್ಥಳ–ಕೋಟೆ ಆಂಜನೇಯಸ್ವಾಮಿ ದೇವಸ್ಥಾನ, ಕೆ.ಆರ್.ರಸ್ತೆ

'ಸಿವಿಲ್, ಏರೋನಾಟಿಕಲ್ ಮತ್ತು ಮೆಕ್ಯಾನಿಕಲ್ ಎಂಜಿನಿಯರಿಂಗ್‌ನಲ್ಲಿ ಉದಯೋನ್ಮುಖ ಸಂಶೋಧನೆ' ಕುರಿತು ಅಂತರರಾಷ್ಟ್ರೀಯ ಸಮ್ಮೇಳನ: ಅತಿಥಿಗಳು–ಐಎಸ್‌ಟಿಆರ್‌ಎಸಿ ನಿರ್ದೇಶಕ ವಿ.ವಿ.ಶ್ರೀನಿವಾಸನ್, ನ್ಯಾಷನಲ್ ಏರೋಸ್ಪೇಸ್ ಲ್ಯಾಬೊರೇಟರೀಸ್ (ಎನ್‌ಎಎಲ್) ನಿರ್ದೇಶಕ ಜಿತೇಂದ್ರ ಜೆ.ಜಾಧವ್, ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಕುಲಾಧಿಪತಿ ಎನ್. ಆರ್.ಶೆಟ್ಟಿ, ಆಯೋಜನೆ ಮತ್ತು ಸ್ಥಳ–ನಿಟ್ಟೆ ಮೀನಾಕ್ಷಿ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಸಮ್ಮೇಳನ ಸಭಾಂಗಣ, ಪಿಜಿಡಿಎಂ ಬ್ಲಾಕ್, ಯಲಹಂಕ, ಬೆಳಿಗ್ಗೆ 9

'ಡಿಸೈನೂರು' ವಿನ್ಯಾಸ ಉತ್ಸವ: ವಿನ್ಯಾಸ ಮತ್ತು ಪರಿಸರ ವಿಜ್ಞಾನ ಕುರಿತು ಚರ್ಚೆ–ಸಂದೀಪ್ ಉಮಾಪತಿ, ಆಯೋಜನೆ–ಇನ್‌ಸ್ಟಿಟ್ಯೂಟ್ ಆಫ್ ಇಂಡಿಯನ್ ಇಂಟೀರಿಯರ್ ಡಿಸೈನರ್ಸ್ (ಐಐಐಡಿ), ಸ್ಥಳ–ರಂಗೋಲಿ ಕೇಂದ್ರ, ಎಂ.ಜಿ.ರಸ್ತೆ, ಬೆಳಿಗ್ಗೆ 9

'ಕಂಪನ ಎಂಜಿನಿಯರಿಂಗ್ ಮತ್ತು ಯಂತ್ರಗಳ ತಂತ್ರಜ್ಞಾನ' ಸಮ್ಮೇಳನ: ಅತಿಥಿಗಳು–ನೀತಿ ಆಯೋಗದ ಸದಸ್ಯ ವಿ.ಕೆ.ಸಾರಸ್ವತ್, ವಾರಾಣಸಿಯ ಐಐಟಿ (ಬಿಎಚ್‌ಯು) ಆಡಳಿತ ಮಂಡಳಿ ಅಧ್ಯಕ್ಷ ಕೋಟ ಹರಿನಾರಾಯಣ, ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ (ಎಐಸಿಟಿಇ) ಅಧ್ಯಕ್ಷ ಅನಿಲ್ ಡಿ.ಸಹಸ್ರಬುಧೆ, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ (ವಿಟಿಯು) ಕುಲಪತಿ ಕರಿಸಿದ್ದಪ್ಪ, ಬಿಎಂಎಸ್‌ಇಟಿಯ ಪಿ.ದಯಾನಂದ ಪೈ, ಅವಿರಾಂ ಶಾರ್ಮ್, ಇಂದಿರಾ ರಾವ್, ಅಧ್ಯಕ್ಷತೆ–ಬಿಎಂಎಸ್ ಶಿಕ್ಷಣ ಟ್ರಸ್ಟ್‌ನ (ಬಿಎಂಎಸ್‌ಇಟಿ) ದಾನಿ ಟ್ರಸ್ಟಿ ಮತ್ತು ಸದಸ್ಯ ಕಾರ್ಯದರ್ಶಿ ಬಿ.ಎಸ್. ರಾಗಿಣಿ ನಾರಾಯಣ್, ಆಯೋಜನೆ–ಬಿಎಂಎಸ್ ಕಾಲೇಜ್ ಆಫ್ ಎಂಜಿನಿಯರಿಂಗ್ ಹಾಗೂ ವೈಬ್ರೇಷನ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ, ಸ್ಥಳ–ಬಿಎಂಎಸ್‌ಸಿಇ ಕಾಲೇಜು ಸಭಾಂಗಣ, ಬಸವನಗುಡಿ, ಬೆಳಿಗ್ಗೆ 10



ವಿ.ಕೆ.ಸಾರಸ್ವತ್

ಎಸ್.ಜಿ.ರಾಧಾ ಮತ್ತು ಹೇಮಂತ್ ವಾಮನಶಂಕರ್ ಅವರ ಚಿತ್ರಕಲಾ ಪ್ರದರ್ಶನ: ಸ್ಥಳ–ವೆಂಕಟಪ್ಪ ಆರ್ಟ್ ಗ್ಯಾಲರಿ, ಕಸ್ತೂರಬಾ ರಸ್ತೆ, ಬೆಳಿಗ್ಗೆ 11ರಿಂದ ಸಂಜೆ 6.30 (ಡಿ.19ರವರೆಗೆ ಪ್ರದರ್ಶನ ಇರಲಿದೆ)

ಮಾರ್ಗಶೀರ್ಷೋತ್ಸವ: ಪ್ರವೀಣ್ ಗೋಡ್ಖಿಂಡಿ ಮತ್ತು ತಂಡದಿಂದ ಕೊಳಲು ಸ್ವರಮೇಳ, ಆಯೋಜನೆ ಮತ್ತು ಸ್ಥಳ–ಸುರಭಾರತೀ ಸಂಸ್ಕೃತ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನ, ಎಚ್‌ಆರ್‌ಬಿಆರ್ ಬಡಾವಣೆ, ಸಂಜೆ 6.30



ಪ್ರವೀಣ್ ಗೋಡ್ಖಿಂಡಿ

'ಕನ್ನಡದಲ್ಲಿ ಸಣ್ಣ ಕಥೆಗಳ ಒಂದು ನೋಟ' ಉಪನ್ಯಾಸ: ಆನಂದ ದೇವರಾಜ್, ಆಯೋಜನೆ ಮತ್ತು ಸ್ಥಳ–ಕನ್ನಡ ಯುವಜನ ಸಂಘ, ವಿಲ್ಸನ್ ಗಾರ್ಡನ್, ಹೊಂಬೇಗೌಡ ನಗರ, ಸಂಜೆ 6.45

ನೆರೆ ಪರಿಹಾರಕ್ಕೆ ರಾಜ್ಯ ಬೊಕ್ಕಸದಿಂದಲೇ ಹಣ ಬಿಡುಗಡೆ ಮಾಡಿ: ಯಡಿಯೂರಪ್ಪ ಒತ್ತಾಯ

‘ಅನುದಾನಕ್ಕೆ ಕಾಯದೇ ರೈತರ ರಕ್ಷಣೆಗೆ ಧಾವಿಸಿ’

ಪ್ರಜಾವಾಣಿ ವಾರ್ತೆ

ಬೆಳಗಾವಿ(ಸುವರ್ಣ ವಿಧಾನಸೌಧ): ಕೇಂದ್ರದ ಅನುದಾನಕ್ಕೆ ಕಾಯುವುದು ಬೇಡ. ಅತಿವೃಷ್ಟಿಯಿಂದ ತೊಂದರೆಗೊಳಗಾಗಿರುವ ರೈತರ ರಕ್ಷಣೆಗೆ ಮುಖ್ಯಮಂತ್ರಿ ಮುಂದಾಗಬೇಕು ಎಂದು ಬಿಜೆಪಿ ಶಾಸಕ ಬಿ.ಎಸ್. ಯಡಿಯೂರಪ್ಪ ಆಗ್ರಹಿಸಿದರು.

ನರೇಗಾ ಕಾರ್ಯಕ್ರಮದಡಿ ಕೆಲಸ ಮಾಡಿದವರಿಗೆ ಎರಡು ತಿಂಗಳ ವೇತನ ಪಾವತಿ ಮಾಡದ ಬಗ್ಗೆ ಯಡಿಯೂರಪ್ಪ ಅವರು ಪರೋಕ್ಷವಾಗಿ ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್.ಈಶ್ವರಪ್ಪ ಅವರನ್ನು ತರಾಟೆಗೆ ತೆಗೆದುಕೊಂಡರು.

ವಿಧಾನಸಭೆಯಲ್ಲಿ ನಿಯಮ 69 ರಡಿ ಕಾಂಗ್ರೆಸ್‌ನ ಆರ್.ವಿ.ದೇಶಪಾಂಡೆ ಮಾತನಾಡುವಾಗ ಮಧ್ಯ ಪ್ರವೇಶಿಸಿದ ಯಡಿಯೂರಪ್ಪ, ‘ಮುಖ್ಯಮಂತ್ರಿಯವರ ಬಳಿ ಹಣಕಾಸು ಖಾತೆಯೂ ಇದೆ. ನೆರೆ ಪರಿಹಾರಕ್ಕೆ ರಾಜ್ಯ ಬೊಕ್ಕಸದಿಂದಲೇ ಹಣ ಬಿಡುಗಡೆ ಮಾಡಿ ರೈತರ ಸಂಕಷ್ಟ ಪರಿಹರಿಸಬೇಕು’ ಎಂದು ಒತ್ತಾಯಿಸಿದರು.

‘ದೇಶಪಾಂಡೆ ಅವರು ವಾಸ್ತವಿಕ ಸಂಗತಿಯನ್ನೇ ಮುಂದಿಟ್ಟಿದ್ದಾರೆ. 40– 50 ವರ್ಷಗಳಲ್ಲೇ ದೊಡ್ಡ

> **ಡಬಲ್ ಎಂಜಿನ್ ಸರ್ಕಾರ ಎಂದು ಹೇಳುತ್ತೀರಿ, ಏಕೆ ಕಣ್ಣು ತೆರೆಯುತ್ತಿಲ್ಲ. ಈ ಡಬಲ್ ಎಂಜಿನ್‌ಗೆ ಪೆಟ್ರೋಲ್ ಹಾಕಿ ಓಡಿಸುತ್ತೀರೋ, ಡೀಸೆಲ್ ಹಾಕಿ ಓಡಿಸುತ್ತೀರೋ**
> **ಬಂಡೆಪ್ಪ ಕಾಶೆಂಪುರ್**
> ಜೆಡಿಎಸ್ ಉಪ ನಾಯಕ

ಪ್ರಮಾಣದ ಅತಿವೃಷ್ಟಿಯಿಂದಾಗಿ ರೈತ ಬೀದಿಪಾಲಾಗಿದ್ದಾನೆ. ಮುಖ್ಯಮಂತ್ರಿಯವರು ಕೇಂದ್ರದ ಹಣಕ್ಕಾಗಿ ಕಾದು ಕೂರುವುದು ಬೇಡ. ನರೇಗಾ ಅಡಿ ಕೆಲಸ ಮಾಡಿದವರಿಗೆ ಕೂಲಿ ಕೊಡದೇ ಇದ್ದರೆ ಆ ಬಡವ ಜೀವನ ಮಾಡುವುದಾದರೂ ಹೇಗೆ’ ಎಂದು ಅವರು ಪ್ರಶ್ನಿಸಿದರು.

‘ಬಿತ್ತನೆ ಬೀಜ ಖರೀದಿಸಲು ರೈತನ ಜೇಬಿನಲ್ಲಿ ಹತ್ತು ರೂಪಾಯಿಯೂ ಇಲ್ಲ. ಈ ಸಂದರ್ಭದಲ್ಲಿ ಮುಖ್ಯಮಂತ್ರಿಯವರು ವಾಸ್ತವಿಕ ಸ್ಥಿತಿಯನ್ನು ಅರಿತುಕೊಳ್ಳಬೇಕು. ರಾಜ್ಯದ 224 ಕ್ಷೇತ್ರಗಳಲ್ಲೂ ಇದೇ ಸ್ಥಿತಿ ಇದೆ. ಎಲ್ಲ ಶಾಸಕರ ಅಭಿಪ್ರಾಯವೂ ಒಂದೇ’ ಎಂದು ಹೇಳಿದರು.

ಆರ್.ವಿ.ದೇಶಪಾಂಡೆ ಮಾತನಾಡಿ, ರಾಜ್ಯದಲ್ಲಿ ನರೇಗಾ ಅಡಿ ಕೆಲಸ ಮಾಡಿದವರಿಗೆ ಹಲವು ತಿಂಗಳಿಂದ



ಬಿ.ಎಸ್‌ಯಡಿಯೂರಪ್ಪ

ವೇತನ ಪಾವತಿ ಆಗುತ್ತಿಲ್ಲ. ಹೀಗಾದರೆ ರೈತ– ಕೂಲಿಕಾರ್ಮಿಕರು ಏನು ಮಾಡಬೇಕು ಎಂದು ಪ್ರಶ್ನಿಸಿದರು.

ಆಗ ಮಧ್ಯಪ್ರವೇಶಿಸಿ ಮಾತನಾಡಿದ ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್. ಈಶ್ವರಪ್ಪ, ‘ಕೇಂದ್ರದಿಂದ ₹1,000 ಕೋಟಿ ಬಿಡುಗಡೆ ಆಗಿದ್ದು, ಹಳೇ ಬಾಕಿ ಪಾವತಿ ಮಾಡಲಾಗಿದೆ. ಎರಡು ತಿಂಗಳ ವೇತನ ಪಾವತಿ ಆಗಬೇಕಾಗಿದೆ. ಆದಷ್ಟು ಬೇಗ ಪಾವತಿ ಮಾಡುತ್ತೇವೆ’ ಎಂದು ಭರವಸೆ ನೀಡಿದರು.

‘ನೀವು ಕೊಟ್ಟಿದ್ದು ಕಣ್ಣಿಗೆ ಕಾಣುತ್ತಿಲ್ಲ. ನಿರಂತರವಾಗಿ ರೈತರು ಸಂಕಷ್ಟದಲ್ಲಿದ್ದಾರೆ. ಸಹಕಾರಿ ಸಾಲವನ್ನಾದರೂ ಮನ್ನಾ ಮಾಡಿ. ರೈತರ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಕಲ್ಪಿಸಬೇಕು. ಅನ್ನದಾತನ ನೆರವಿಗೆ ಬರುವುದು ನಮ್ಮೆಲ್ಲರ ಕರ್ತವ್ಯ. ಪ್ರಧಾನಿ ಬಳಿ ಕರೆದೊಯ್ದು ರಾಜ್ಯದ ರೈತರ ಪರವಾಗಿ ವಿಶೇಷ ಪ್ಯಾಕೇಜ್ ಕೇಳೋಣ. ನಾವು ನಿಮ್ಮ ಜತೆ ಬರಲು ಸಿದ್ಧ’ ಎಂದು ದೇಶಪಾಂಡೆ ತಿಳಿಸಿದರು.

ಅತಿವೃಷ್ಟಿ ಕುರಿತು ಜೆಡಿಎಸ್‌ನ ಎಚ್‌.ಕೆ.ಕುಮಾರಸ್ವಾಮಿ, ಲಿಂಗೇಶ್, ಕಾಂಗ್ರೆಸ್‌ನ ಮಹಾಂತೇಶ ಕೌಜಲಗಿ, ಟಿ.ಡಿ.ರಾಜೇಗೌಡ, ಆನಂದ ನ್ಯಾಮಗೌಡ, ಬಿಜೆಪಿಯ ಎ.ಎಸ್. ಪಾಟೀಲ ನಡಹಳ್ಳಿ ಮತ್ತು ಇತರರು ಮಾತನಾಡಿದರು.

‘ಸರ್ಕಾರಕ್ಕೆ ಕಣ್ಣು–ಕಿವಿ ಇಲ್ಲಾಂದ್ರೆ ಎಲ್ಲಿ ಸಾಯಬೇಕು?’

‘ಈ ಸರ್ಕಾರಕ್ಕೆ ಕಣ್ಣು– ಕಿವಿ ಇಲ್ಲ ಅಂದ್ರೆ ನಾವು ಎಲ್ಲಿ ಹೋಗಿ ಸಾಯಬೇಕು’– ಹೀಗೆಂದು ಪ್ರಶ್ನಿಸಿದ್ದು ಕಾಂಗ್ರೆಸ್‌ನ ಅಂಜಲಿ ನಿಂಬಾಳ್ಕರ್.

ಅತಿವೃಷ್ಟಿಯ ಮೇಲಿನ ಚರ್ಚೆಯಲ್ಲಿ ಭಾಗವಹಿಸಿದ್ದ ಅವರು, ‘ನಮ್ಮ ಕ್ಷೇತ್ರದ ರೈತರು ಸರ್ಕಾರದ ಗಮನ ಸೆಳೆಯಲು ಖಾನಾಪುರದಿಂದ ಬೆಳಗಾವಿಗೆ ಪಾದಯಾತ್ರೆ ಮಾಡಿದ್ದಾರೆ. ಈಗಲೂ ಏನೂ ಮಾಡದಿದ್ದರೆ ಬೆಂಗಳೂರಿಗೂ ಪಾದಯಾತ್ರೆ ಮಾಡಲು ಸಿದ್ಧರಿದ್ದೇವೆ’ ಎಂದರು.

ಭಾರಿ ಮಳೆಯಿಂದ 3,632 ಹೆಕ್ಟೇರ್ ಪ್ರದೇಶದಲ್ಲಿದ್ದ ಭತ್ತದ ಬೆಳೆ ನಾಶವಾಗಿ ಹೋಗಿದೆ. ಎನ್‌ಡಿಆರ್‌ಎಫ್ ನೀಡುವ ಪರಿಹಾರ ಒಂದು ಗುಂಟೆಗೆ ₹68 ಮಾತ್ರ. ಇದು ಎಲ್ಲಿಗೆ ಸಾಲುತ್ತದೆ? ಅಷ್ಟೇ ಅಲ್ಲ ಇತ್ತೀಚಿನ ವರ್ಷಗಳಲ್ಲಿ 16 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇದಕ್ಕೆ ಜವಾಬ್ದಾರರು ಯಾರು ಎಂದು ಅವರು ಪ್ರಶ್ನಿಸಿದರು.

ಎಲ್ಲಿದ್ದೀರಿ ಶಾಸಕರೇ....?

‘ಮಳೆ ಬಂದು ಹೊಲ, ಮನೆಗಳಿಗೆ ನೀರು ನುಗ್ಗಿದರೆ, ಅದರ ಚಿತ್ರ ಹಾಕಿ ಎಲ್ಲಿದ್ದೀರಿ ಶಾಸಕರೇ ಎಂದು ಪ್ರಶ್ನಿಸುತ್ತಾರೆ’ ಎಂದು ಅಳಲು ತೋಡಿಕೊಂಡವರು ಜೆಡಿಎಸ್‌ನ ಕೆ.ಎಂ.ಶಿವಲಿಂಗೇಗೌಡ.

‘ಜನ ನಮ್ಮನ್ನೇ ಟಾರ್ಗೆಟ್ ಮಾಡ್ತಾರೆ. ಕೇಂದ್ರದಿಂದ ಅನುದಾನ ಪಡೆದು ಕೆಲಸ ಮಾಡದೇ ಇದ್ದರೆ, ಇವರಿಂದ(ಶಾಸಕರು) ಏನೂ ಆಗಲ್ಲ ಎಂದು ಜನ ಹೇಳುತ್ತಾರೆ. ಶಾಸಕರ ಘನತೆ– ಗೌರವ ಹೋಗುತ್ತದೆ’ ಎಂದರು.

‘ಅತಿವೃಷ್ಟಿಯಿಂದ ನಮ್ಮ ಭಾಗದಲ್ಲಿ, ಚಾಪೆ ಹಾಕಿ ಮಲಗಿಸಿದ ಹಾಗೆ ರಾಗಿ ಮತ್ತು ಜೋಳದ ಪೈರುಗಳು ಮಲಗಿ ಹೋಗಿವೆ. ನೆಲದಲ್ಲೇ ಮೊಳಕೆಯೊಡೆದಿವೆ’ ಎಂದು ಗಮನ ಸೆಳೆದರು.

ಮತಾಂತರ: ಹತ್ತು ವರ್ಷದವರೆಗೆ ಜೈಲು

ಒಂದನೇ ಪುಟದಿಂದ...

ಯಾವುದು ಕಾನೂನುಬಾಹಿರ: ಮಸೂದೆಯ ಪ್ರಕಾರ, ಯಾವುದೇ ರೀತಿಯ ವಸ್ತು, ಹಣದ ರೂಪದ ಉಡುಗೊರೆ, ಯಾವುದೇ ಧರ್ಮದ ಪ್ರತಿಷ್ಠಿತ ಸಂಸ್ಥೆಯಲ್ಲಿ ಉದ್ಯೋಗ, ಉಚಿತ ಶಿಕ್ಷಣ, ವಿವಾಹವಾಗುವುದಾಗಿ ಆಮಿಷ ಅಥವಾ ಉತ್ತಮ ಜೀವನಶೈಲಿ, ಭಾವನಾತ್ಮಕವಾಗಿ ಸೆಳೆದು ಬಲವಂತವಾಗಿ ಮತಾಂತರ ಮಾಡುವುದು ಕಾನೂನುಬಾಹಿರ.

ಅಲ್ಲದೆ, ಶಿಕ್ಷಣ ಸಂಸ್ಥೆಗಳು, ಅನಾಥಾಶ್ರಮಗಳು, ವೃದ್ಧಾಶ್ರಮಗಳು, ಆಸ್ಪತ್ರೆ, ಧಾರ್ಮಿಕ ಮಿಷನರಿಗಳು, ಸರ್ಕಾರೇತರ ಸಂಸ್ಥೆಗಳು (ಎನ್‌ಜಿಒ) ಸೇರಿದಂತೆ ನಿರ್ದಿಷ್ಟ ಸಂಸ್ಥೆಗಳು ಇಬ್ಬರು ಅಥವಾ ಹೆಚ್ಚು ಮಂದಿಯ ಸಾಮೂಹಿಕ ಮತಾಂತರ ಪ್ರಕ್ರಿಯೆಯಲ್ಲಿ ಭಾಗಿಯಾದರೆ ಅಂಥ ಸಂಸ್ಥೆಗಳಿಗೆ ಸರ್ಕಾರದಿಂದ ಅನುದಾನ ನಿಲ್ಲಿಸುವ ಪ್ರಸ್ತಾವವೂ ಇದೆ.

ಮತಾಂತರಗೊಳಿಸಿರುವುದು ನ್ಯಾಯಾಲಯದಲ್ಲಿ ಸಾಬೀತಾದರೆ, ಮತಾಂತರಕ್ಕೆ ಒಳಗಾದವನಿಗೆ ಮತಾಂತರ ಮಾಡಿದವನು ಸೂಕ್ತ ಪರಿಹಾರ ನೀಡಲು ಕೂಡಾ ಈ ಕಾಯ್ದೆಯಲ್ಲಿ ಅವಕಾಶ ಕಲ್ಪಿಸಲು ಮಸೂದೆಯಲ್ಲಿ ಉಲ್ಲೇಖಿಸಲಾಗಿದೆ. ಮತಾಂತರಕ್ಕೆ ಒಳಗಾದವನಿಗೆ ಗರಿಷ್ಠ ₹ 5 ಲಕ್ಷ ಪರಿಹಾರ ನೀಡಬೇಕು. ಅಲ್ಲದೆ, ಹೆಚ್ಚುವರಿಯಾಗಿ ದಂಡ ನೀಡಬೇಕು. ಈ ಹಿಂದೆಯೂ ಮತಾಂತರ ಮಾಡಿದ್ದರೆ, ಅಂಥವರಿಗೆ ಎರಡು ಪಟ್ಟು ಶಿಕ್ಷೆ ವಿಧಿಸಲು ಕೂಡಾ ಮಸೂದೆಯಲ್ಲಿ ಅವಕಾಶ ಕಲ್ಪಿಸಲಾಗಿದೆ.

ಆಮಿಷ ಒಡ್ಡಿ ಮತಾಂತರಗೊಂಡು ವಿವಾಹ ಆಗಿದ್ದರೆ ಅಂಥ ವಿವಾಹವನ್ನು ಅಸಿಂಧು ಎಂದು ಘೋಷಿಸಲು ಕುಟುಂಬ ನ್ಯಾಯಾಲಯಕ್ಕೆ ಅವಕಾಶ ನೀಡಲಾಗಿದೆ. ಅಲ್ಲದೆ, ಮತಾಂತರ ಅಪರಾಧವನ್ನು ಜಾಮೀನುರಹಿತ ಮತ್ತು ಸಂಜ್ಞೆಯ ಅಪರಾಧ (ನೇರವಾಗಿ ವಿಚಾರಣೆಗೆ ಕೈಗೆತ್ತಿಕೊಳ್ಳಬಹುದು) ಎಂದು ಪರಿಗಣಿಸಬಹುದು. ಒತ್ತಾಯಪೂರ್ವವಾಗಿ ಮತಾಂತರ ಮಾಡುತ್ತಿದ್ದರೆ ಪೊಲೀಸರಿಗೆ ಮಾಹಿತಿ ನೀಡಬಹುದು. ಒತ್ತಾಯದ ಮತಾಂತರ ಅಸಿಂಧುವಾಗುತ್ತದೆ ಎಂದೂ ಮಸೂದೆಯಲ್ಲಿದೆ.

ಕಾನೂನು ಆಯೋಗ ಶಿಫಾರಸು: ಸಂವಿಧಾನದ ಅನುಚ್ಛೇದ 25ರಲ್ಲಿ ಎಲ್ಲರಿಗೂ ಅವರವರ ಧರ್ಮವನ್ನು ಅನುಸರಿಸಲು ಮತ್ತು ಪ್ರಚಾರ ಮಾಡಲು ಅವಕಾಶ ನೀಡಲಾಗಿದೆ. ಆದರೆ, ರೆವರೆಂಡ್ ಸ್ಟ್ಯಾನಿಸ್ಲಾಸ್ ವರ್ಸಸ್ ಮಧ್ಯಪ್ರದೇಶ ಸರ್ಕಾರ ಪ್ರಕರಣದಲ್ಲಿ ತೀರ್ಪು ನೀಡಿರುವ ಸುಪ್ರೀಂ ಕೋರ್ಟ್, ಧರ್ಮದ ಪ್ರಚಾರ ಮಾಡಬಹುದು ಎಂಬ ಕಾರಣಕ್ಕೆ ಮತಾಂತರಕ್ಕೆ ಅವಕಾಶ ಇದೆಯೆಂದು ಹೇಳಲಾಗದು ಎಂದು ಸ್ಪಷ್ಟವಾಗಿ ಹೇಳಿದೆ. ಇತ್ತೀಚಿನ ದಿನಗಳಲ್ಲಿ ಸಂವಿಧಾನದ ಅನುಚ್ಛೇದ 25ನ್ನು ದುರ್ಬಳಕೆ ಮಾಡಿಕೊಂಡು ಮತಾಂತರ ಮಾಡಿರುವ ಹಲವು ಪ್ರಕರಣಗಳು ನಡೆದಿವೆ. ಅದನ್ನು ನಿಲ್ಲಿಸುವುದು ಈ ಕಾನೂನಿನ ಉದ್ದೇಶವಾಗಿದೆ. ಸಾಮಾಜಿಕ ಸುವ್ಯವಸ್ಥೆ ಧಕ್ಕೆ ಬರುವಂತೆ ವರ್ತಿಸಿದರೆ ಅವುಗಳನ್ನು ನಿಯಂತ್ರಿಸಲು ಅವಕಾಶವಿದೆ. ರಾಜ್ಯ ಕಾನೂನು ಆಯೋಗ ಕೂಡಾ ಈ ಬಗ್ಗೆ ಅಧ್ಯಯನ ಮಾಡಿ, ತನ್ನ 30ನೇ ವರದಿಯಲ್ಲಿ ಸೂಕ್ತ ಕಾನೂನು ರೂಪಿಸುವಂತೆ ಶಿಫಾರಸು ಮಾಡಿದೆ ಎಂದು ಮಸೂದೆಯಲ್ಲಿ ಉಲ್ಲೇಖಿಸಲಾಗಿದೆ.

ಮತಾಂತರಕ್ಕೂ ಪ್ರಕ್ರಿಯೆ

ಯಾವುದೇ ವ್ಯಕ್ತಿ ಧರ್ಮ ಬದಲಿಸುವುದಾದರೆ ಜಿಲ್ಲಾಧಿಕಾರಿಗಳಿಗೆ 60 ದಿನಗಳ ಮೊದಲು ನಮೂನೆ 1ರಲ್ಲಿ ಅರ್ಜಿ ಸಲ್ಲಿಸಬೇಕು. ಮತಾಂತರ ಮಾಡುವ ವ್ಯಕ್ತಿಯು ನಮೂನೆ ಎರಡರಲ್ಲಿ ಅರ್ಜಿ ಸಲ್ಲಿಸಬೇಕು. ಬಳಿಕ ಜಿಲ್ಲಾಧಿಕಾರಿಯು ಮತಾಂತರಗೊಳ್ಳುವವನನ್ನು ಮತ್ತು ಮತಾಂತರ ಮಾಡುವವನನ್ನು ಪೊಲೀಸರ ನೆರವಿನಿಂದ ವಿಚಾರಣೆ ನಡೆಸಬೇಕು. ನಮೂನೆ 3ರಲ್ಲಿ ಮಾಹಿತಿಯನ್ನು ಪಡೆದುಕೊಳ್ಳಬೇಕು. ಬಳಿಕ ಜಿಲ್ಲಾಧಿಕಾರಿಗಳು ಮತಾಂತರಗೊಂಡ ವ್ಯಕ್ತಿಯ ಶಾಲೆ, ಕಾಲೇಜುಗಳ ಸಕ್ಷಮ ಪ್ರಾಧಿಕಾರಕ್ಕೆ ಮತ ಬದಲಾವಣೆಗೆ ಸೂಚಿಸಬೇಕು. ಆ ಮೂಲಕ, ಮತಾಂತರಗೊಂಡ ಪರಿಶಿಷ್ಟರಿಗೆ ಸಿಗುವ ಜಾತಿ ಮೀಸಲಾತಿ ಮತ್ತು ಇತರ ಸೌಲಭ್ಯಗಳು ಸ್ಥಗಿತಗೊಳ್ಳಲಿವೆ.

ಮತಾಂತರ ಮಾಡುವವರು ಎಂದರೆ?: ಒಂದು ಧರ್ಮದಿಂದ ಇನ್ನೊಂದು ಧರ್ಮಕ್ಕೆ ಮತಾಂತರ ಮಾಡುವವರು. ಅವರು ಫಾದರ್‌ಗಳು, ಧಾರ್ಮಿಕ ಗುರುಗಳು, ಪುರೋಹಿತರು, ಪಂಡಿತರು, ಮೌಲ್ವಿಗಳು, ಮುಲ್ಲಾಗಳು... ಹೀಗೆ ಯಾವುದೇ ಹೆಸರಿನಲ್ಲಿ ಕರೆಸಿಕೊಂಡಿರಬಹುದು ಎಂದು ಮತಾಂತರ ಮಾಡುವವರನ್ನು ಗುರುತಿಸಲಾಗುವುದು ಎಂದು ಮಸೂದೆ ವಿವರಿಸಿದೆ.

15 ಸದಸ್ಯರ ಅಮಾನತು

ಒಂದನೇ ಪುಟದಿಂದ...

ಕಾಂಗ್ರೆಸ್ ಸದಸ್ಯರು ಸಭಾಪತಿಯವರ ಪೀಠದ ಎದುರು ನಿಂತು ಸರ್ಕಾರದ ವಿರುದ್ಧ ಘೋಷಣೆ ಕೂಗಲಾರಂಭಿಸಿದರು.

ಸಚಿವರಾದ ವಿ. ಸೋಮಣ್ಣ, ಸಭಾ ನಾಯಕ ಕೋಟ ಶ್ರೀನಿವಾಸ ಪೂಜಾರಿ ಧರಣಿ ಕೈಬಿಡುವಂತೆ ಕಾಂಗ್ರೆಸ್ ಸದಸ್ಯರ ಮನವೊಲಿಸಲು ನಡೆಸಿದ ಯತ್ನ ಫಲ ನೀಡಲಿಲ್ಲ. ಧರಣಿನಿರತರ ವಿರುದ್ಧ ಕ್ರಮ ಜರುಗಿಸುವಂತೆ ಬಿಜೆಪಿಯ ಎನ್. ರವಿಕುಮಾರ್, ಆಯನೂರು ಮಂಜುನಾಥ್ ಆಗ್ರಹಿಸಿದರು. ಕೋಟ ಶ್ರೀನಿವಾಸ ಪೂಜಾರಿ ಕೂಡ ಈ ಬೇಡಿಕೆ ಮಂಡಿಸಿದರು.

ಸದಸ್ಯರ ಅಮಾನತು: ‘ಧರಣಿ ನಿರತರನ್ನು ದಿನದ ಮಟ್ಟಿಗೆ ಸದನದಿಂದ ಅಮಾನತು ಮಾಡಲಾಗಿದೆ’ ಎಂಬ ಆದೇಶ ಪ್ರಕಟಿಸಿದ ಬಸವರಾಜ ಹೊರಟ್ಟಿ, ತೇಜಸ್ವಿನಿ ಗೌಡ ಅವರನ್ನು ಪೀಠದಲ್ಲಿ ಕೂರಿಸಿ, ನಿರ್ಗಮಿಸಿದರು. ಅಷ್ಟರಲ್ಲಿ ಸದನಕ್ಕೆ ಬಂದ ಮಾಧುಸ್ವಾಮಿ ಕಾಂಗ್ರೆಸ್ ಸದಸ್ಯರ ವಿರುದ್ಧ ಹರಿಹಾಯ್ದರು.

ಬಳಿಕ ಕಾಂಗ್ರೆಸ್ ಸದಸ್ಯರು ಏರು ದನಿಯಲ್ಲಿ ಘೋಷಣೆ ಕೂಗಲಾರಂಭಿಸಿದರು. ಪ್ರತಿಪಕ್ಷ ನಾಯಕರೂ ಸೇರಿದಂತೆ 15 ಸದಸ್ಯರ ಹೆಸರನ್ನು ಪ್ರಕಟಿಸಿದ ತೇಜಸ್ವಿನಿ ಗೌಡ, ‘ಪೀಠಕ್ಕೆ ಅಗೌರವ ತೋರಿದ ಮತ್ತು ಕಲಾಪಕ್ಕೆ ಅಡ್ಡಿಪಡಿಸಿದ ಕಾರಣದಿಂದ ಈ ಎಲ್ಲರನ್ನೂ ದಿನದ ಮಟ್ಟಿಗೆ ಅಮಾನತು ಮಾಡಲಾಗಿದೆ’ ಎಂದರು.

ಕಾಂಗ್ರೆಸ್ ಸದಸ್ಯರನ್ನು ಮಾರ್ಷಲ್‌ಗಳನ್ನು ಬಳಸಿ ಹೊರಹಾಕಬೇಕೆಂದು ಬಿಜೆಪಿ ಸದಸ್ಯರು ಒತ್ತಾಯಿಸಿದರು. ಮಾರ್ಷಲ್‌ಗಳು ಸದನದ ಒಳಕ್ಕೆ ಪ್ರವೇಶಿಸಲು ತಯಾರಾಗುತ್ತಿದ್ದಂತೆಯೇ ಕಾಂಗ್ರೆಸ್‌ನ ಬಿ.ಕೆ. ಹರಿಪ್ರಸಾದ್ ವಿರೋಧ ವ್ಯಕ್ತಪಡಿಸಿದರು. ನಂತರವೂ ಧರಣಿ ಮುಂದುವರಿಯಿತು. 4.30ಕ್ಕೆ ಪೀಠಕ್ಕೆ ಹಿಂದಿರುಗಿದ ಹೊರಟ್ಟಿ, 4.35ರ ವೇಳೆಗೆ ಕಲಾಪವನ್ನು ಗುರುವಾರಕ್ಕೆ ಮುಂದೂಡಿದರು.

‘ಬೈರತಿ, ಶಂಕರ್‌ರಿಂದ 35 ಎಕರೆ ಭೂಕಬಳಿಕೆ’

ಬೆಳಗಾವಿ (ಸುವರ್ಣ ವಿಧಾನಸೌಧ): ‘ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜ ನಕಲಿ ದಾಖಲೆ ಸೃಷ್ಟಿಸಿ 35 ಎಕರೆ ಜಮೀನು ಕಬಳಿಸಿದ್ದಾರೆ. ತಕ್ಷಣ ಅವರನ್ನು ಸಂಪುಟದಿಂದ ಕೈಬಿಡಬೇಕು’ ಎಂದು ಕಾಂಗ್ರೆಸ್‌ನ ಎಂ. ನಾರಾಯಣ ಸ್ವಾಮಿ ಆಗ್ರಹಿಸಿದರು.

ಬಿ.ಕೆ. ಹರಿಪ್ರಸಾದ್ ಮತ್ತು ಪಿ.ಆರ್. ರಮೇಶ್ ಜತೆ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಬೈರತಿ ಬಸವರಾಜು ಮತ್ತು ವಿಧಾನಪರಿಷತ್‌ನ ಬಿಜೆಪಿ ಸದಸ್ಯ ಆರ್. ಶಂಕರ್ ಮತ್ತು ಇತರ ಮೂರು ಮಂದಿ ಕೆ.ಆರ್. ಪುರ ವ್ಯಾಪ್ತಿಯಲ್ಲಿ ಅಣ್ಣಯ್ಯಪ್ಪ ಮತ್ತು ಇತರರಿಗೆ ಸೇರಿದ ನೂರಾರು ಕೋಟಿ ಮೌಲ್ಯದ 35 ಎಕರೆ ಜಮೀನನ್ನು ನಕಲಿ ದಾಖಲೆ ಮತ್ತು ನಕಲಿ ಮಾಲೀಕರನ್ನು ಸೃಷ್ಟಿಸಿ ತಮ್ಮ ಹೆಸರಿಗೆ ನೋಂದಣಿ ಮಾಡಿಸಿಕೊಂಡಿದ್ದಾರೆ’ ಎಂದು ಆರೋಪಿಸಿದರು.

ಈ ಪ್ರಕರಣದಲ್ಲಿ ಸಚಿವರು, ವಿಧಾನ ಪರಿಷತ್ ಸದಸ್ಯ ಮತ್ತು ಇತರ ಮೂವರ ವಿರುದ್ಧ ಜಮೀನಿನ ಮಾಲೀಕರು ಸಲ್ಲಿಸಿದ ದೂರನ್ನು ಆಧರಿಸಿ ಬೆಂಗಳೂರಿನ ಮುಖ್ಯ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯ ನವೆಂಬರ್ 25ರಂದು ವಿಚಾರಣೆ ಆರಂಭಿಸಿದೆ. ಕ್ರಿಮಿನಲ್ ಪ್ರಕರಣ ದಾಖಲಿಸಿಕೊಂಡು ಸಚಿವರು ಸೇರಿದಂತೆ ಎಲ್ಲ ಆರೋಪಿಗಳಿಗೂ ಸಮನ್ಸ್ ಜಾರಿಗೊಳಿಸಲು ಆದೇಶಿಸಿದೆ ಎಂದು ನ್ಯಾಯಾಲಯದ ಆದೇಶದ ಪ್ರತಿಯನ್ನು ಪ್ರದರ್ಶಿಸಿದರು.

‘ಕೆ.ಆರ್. ಪುರದ ಕಲ್ಕೆರೆ ಗ್ರಾಮದ ಹಲವು ಸರ್ವೆ ನಂಬರ್‌ಗಳಲ್ಲಿ ಅಣ್ಣಯ್ಯಪ್ಪ ಹೊಂದಿದ್ದ ಜಮೀನಿಗೆ ಬೇರೆ ಮಾಲೀಕರನ್ನು ತೋರಿಸಿ ನಕಲಿ ದಾಖಲೆಗಳನ್ನು ಸೃಷ್ಟಿಸಲಾಗಿದೆ. ಜಮೀನು ಕಳೆದುಕೊಂಡಿರುವುದು ಗೊತ್ತಾಗುತ್ತಿದ್ದಂತೆ ಅಣ್ಣಯ್ಯಪ್ಪ ಅವರು ನ್ಯಾಯಾಲಯದ ಮೊರೆ ಹೋಗಿದ್ದರು. 2003ರಿಂದ ಇತ್ತೀಚಿನವರೆಗೂ ಪ್ರಕರಣದ ವಿಚಾರಣೆ ನಡೆದಿದೆ. ನ.25ರಂದು ನ್ಯಾಯಾಲಯ ಆದೇಶ ಪ್ರಕಟಿಸಿದೆ’ ಎಂದರು.

ಬೈರತಿ ಬಸವರಾಜ ಮತ್ತು ಆರ್. ಶಂಕರ್ ಸೇರಿ ಐದು ಮಂದಿಯ ವಿರುದ್ಧ ಭಾರತೀಯ ದಂಡ ಸಂಹಿತೆಯ ಸೆಕ್ಷನ್ 120ಬಿ, 420, 427, 465, 467 ಮತ್ತು 471 ಅಡಿ ಕ್ರಿಮಿನಲ್ ಮೊಕದ್ದಮೆ ದಾಖಲಿಸಿಕೊಂಡು, ವಿಚಾರಣೆ ಆರಂಭಿಸಿದೆ. ಈ ವಿಷಯವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಈ ಪ್ರದೇಶದಲ್ಲಿ ಒಂದು ಎಕರೆ ಭೂಮಿಯ ಮೌಲ್ಯ ಸರಿಸುಮಾರು ₹24 ಕೋಟಿಯಷ್ಟಿದೆ.

‘ದೇವಸ್ಥಾನಗಳ ದುರಸ್ತಿ: ಡಿ.ಸಿಗಳಿಗೆ ಅನುಮತಿ ಅಧಿಕಾರ’

ಬೆಳಗಾವಿ (ಸುವರ್ಣ ವಿಧಾನಸೌಧ): ‘ರಾಜ್ಯದಲ್ಲಿ ಭಾರಿ ಮಳೆಯಿಂದ ಹಾನಿಗೆ ಒಳಗಾದ ದೇವಸ್ಥಾನಗಳ ದುರಸ್ತಿಗೆ ಜಿಲ್ಲಾಧಿಕಾರಿಗಳೇ ಅನುಮತಿ ನೀಡಲು ಅವಕಾಶವಿದೆ’ ಎಂದು ಮುಜರಾಯಿ ಸಚಿವರ ಪರ ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ಹೇಳಿದರು.

ವಿಧಾನಪರಿಷತ್‌ನಲ್ಲಿ ಕಾಂಗ್ರೆಸ್‌ನ ಯು.ಬಿ. ವೆಂಕಟೇಶ್ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ‘ರಾಜ್ಯದಾದ್ಯಂತ 34,653 ದೇವಸ್ಥಾನಗಳು ಮುಜರಾಯಿ ಇಲಾಖೆ ವ್ಯಾಪ್ತಿಯಲ್ಲಿವೆ. ಇತ್ತೀಚೆಗೆ ಸುರಿದ ಮಳೆಯಿಂದ ಒಂಬತ್ತು ಜಿಲ್ಲೆಗಳಲ್ಲಿ ದೇವಸ್ಥಾನಗಳು ಹಾನಿಗೊಳಗಾಗಿವೆ. ದೇವಸ್ಥಾನಗಳ ದುರಸ್ತಿಗೆ ಧಾರ್ಮಿಕ ದತ್ತಿ ಇಲಾಖೆಯಿಂದ ನ. 26ರಂದು ಜಿಲ್ಲಾಧಿಕಾರಿಗಳಿಗೆ ಪತ್ರ ಬರೆಯಲಾಗಿದೆ’ ಎಂದರು.

‘ದೇವಸ್ಥಾನದಲ್ಲಿ ಸಂಗ್ರಹವಾಗುವ ಹಣ ಮತ್ತು ಸರ್ಕಾರದ ಹಣದಲ್ಲಿ ದುರಸ್ತಿ ಮಾಡಲು ಅವಕಾಶವಿದೆ. ದೇವಸ್ಥಾನದ ವ್ಯವಸ್ಥಾಪನ ಮಂಡಳಿ ಅಧಿಕಾರಿಗಳ ಮೂಲಕ ಪ್ರಸ್ತಾವನೆ ಸಲ್ಲಿಸಿದರೆ ಯೋಜನಾ ವರದಿ ಆಧರಿಸಿ ಜಿಲ್ಲಾಧಿಕಾರಿಗಳ ಮಟ್ಟದಲ್ಲಿ ₹ 1 ಕೋಟಿ ವೆಚ್ಚದವರೆಗೆ ಕಾಮಗಾರಿಗೆ ಅನುಮತಿ ನೀಡಲಾಗುವುದು’ ಎಂದರು.

ಮತಾಂತರ ನಿಷೇಧ ಮಸೂದೆ: ‘ಕೈ’ ವಿರೋಧ

ಒಂದನೇ ಪುಟದಿಂದ...

‘ಮಳೆಗೆ 23 ಜಿಲ್ಲೆಗಳಲ್ಲಿ ಬೆಳೆ ಹಾನಿಗೆ ಒಳಗಾಗಿದೆ. ಲಕ್ಷಾಂತರ ಮನೆಗಳು ಕುಸಿದಿವೆ. ಆದರೆ, ಸರ್ಕಾರ ಪರಿಹಾರ ನೀಡುವಲ್ಲಿ ವಿಳಂಬ ಧೋರಣೆ ಅನುಸರಿಸುತ್ತಿದೆ. ₹ 18 ಸಾವಿರ ಕೋಟಿಗಳಷ್ಟು ಹಾನಿಯಾಗಿದ್ದರೂ ಕೇಂದ್ರ ಸರ್ಕಾರ ರಾಜ್ಯಕ್ಕೆ ನಯಾಪೈಸೆ ಪರಿಹಾರ ಕೊಟ್ಟಿಲ್ಲ. ಈ ಬಗ್ಗೆಯೂ ಹೋರಾಟ ಕೈಗೆತ್ತಿಕೊಳ್ಳಬೇಕಿದೆ. ಸತ್ಯಾಂಶವನ್ನು ಜನರ ಮುಂದಿಡುವ ಕೆಲಸವನ್ನು ಪಕ್ಷದ ಶಾಸಕರು ಮಾಡಬೇಕು’ ಎಂದರು.

ಎಪಿಎಂಸಿ, ಭೂ ಸುಧಾರಣೆ ಮತ್ತು ಜಾನುವಾರು ನಿಷೇಧ ಹತ್ಯೆಗೆ ಸಂಬಂಧಿಸಿದ ಕಾಯ್ದೆಗಳನ್ನು ವಾಪಸ್ ಪಡೆಯುವಂತೆ ಸರ್ಕಾರವನ್ನು ಒತ್ತಾಯಿಸಲು ಕೂಡಾ ಸಭೆ ತೀರ್ಮಾನಿಸಿದೆ. ಈ ಕುರಿತು ನಿಲುವಳಿ ಸೂಚನೆ ಮಂಡಿಸುವುದಾಗಿ ಸಿದ್ದರಾಮಯ್ಯ ತಿಳಿಸಿದರು.

ವಿಧಾನ ಪರಿಷತ್‌ಗೆ ಹೊಸತಾಗಿ ಚುನಾಯಿತರಾದ ಸಲೀಂ ಅಹಮದ್ ಮತ್ತು ಚನ್ನರಾಜ ಹಟ್ಟಿಹೊಳಿ ಅವರನ್ನು ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಅಭಿನಂದಿಸಿದರು.

ಲಾಂಛನ ವಿನ್ಯಾಸಕ್ಕೆ ಅರ್ಜಿ ಆಹ್ವಾನ

ಬೆಂಗಳೂರು: ಆರೋಗ್ಯ ಇಲಾಖೆಯು ಲಾಂಛನ (ಲೋಗೊ) ಸಿದ್ಧಪಡಿಸಲು ಅರ್ಜಿ ಆಹ್ವಾನಿಸಿದ್ದು, ಆಯ್ಕೆಯಾಗುವ ಲಾಂಛನಕ್ಕೆ ₹ 50 ಸಾವಿರ ಬಹುಮಾನ ಘೋಷಿಸಿದೆ.

‘ಅಗತ್ಯ ಆರೋಗ್ಯ ಸೇವೆಯನ್ನು ತ್ವರಿತವಾಗಿ ಹಾಗೂ ಸುಲಭವಾಗಿ ಒದಗಿಸಲು ಲಾಂಛನ ರೂಪಿಸಲಾಗುತ್ತಿದೆ. ಎಲ್ಲರಿಗೂ ಅರ್ಥವಾಗುವ ಮತ್ತು ಸಂಪರ್ಕಿಸಲು ಸಾಧ್ಯವಾಗುವ ರೀತಿಯಲ್ಲಿ ಲಾಂಛನ ಇರಬೇಕು. ವಿನ್ಯಾಸವು ವೆಕ್ಟರ್‌ಗಳ ರೂಪದಲ್ಲಿ ಇರಬೇಕಾಗಿದ್ದು, 8x8 ಇಂಚು ಅಳತೆ ಹೊಂದಿರಬೇಕು. ಸಿದ್ಧಪಡಿಸಿದ ಲಾಂಛನವನ್ನು ಇದೇ 30ರೊಳಗೆ jdieckar@gmail.comಗೆ ಕಳುಹಿಸಬೇಕು’ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

‘ಐದು ಲಕ್ಷ ಮನೆಗಳ ನಿರ್ಮಾಣ ಗುರಿ’

ಬೆಳಗಾವಿ (ಸುವರ್ಣ ವಿಧಾನಸೌಧ): ‘ವಸತಿ ಯೋಜನೆಗಳಡಿ ರಾಜ್ಯದಲ್ಲಿ ಐದು ಲಕ್ಷ ಮನೆಗಳ ನಿರ್ಮಾಣದ ಗುರಿ ಹೊಂದಿದ್ದು, ಶೀಘ್ರದಲ್ಲೇ ಪಂಚಾಯಿತಿವಾರು ಪಟ್ಟಿ ಬಿಡುಗಡೆ ಮಾಡಲಾಗುವುದು’ ಎಂದು ವಸತಿ ಸಚಿವ ವಿ. ಸೋಮಣ್ಣ ತಿಳಿಸಿದರು.

ವಿಧಾನ ಪರಿಷತ್ತಿನಲ್ಲಿ ಕಾಂಗ್ರೆಸ್ಸಿನ ಕೆ. ಹರೀಶ್ ಕುಮಾರ್ ಪ್ರಶ್ನೆಗೆ ಉತ್ತರಿಸಿದ ಅವರು, ‘ಎಸ್‌ಸಿ, ಎಸ್‌ಟಿ ಸೇರಿದಂತೆ ಎಲ್ಲ ವರ್ಗದ ಜನರಿಗೆ ಮನೆ ಹಂಚಿಕೆಗೆ ಸರ್ಕಾರ ನಿರ್ಧಾರ ಕೈಗೊಂಡಿದ್ದು, ಈಗಾಗಲೇ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಜೊತೆ ಚರ್ಚೆ ನಡೆಸಿದ್ದೇನೆ’ ಎಂದರು.

ವಿಶೇಷ ಅನುದಾನ: ‘ಬುಡಕಟ್ಟು ಸಮುದಾಯದ ಸದಸ್ಯರಿಗೆ ಸೂರು ಅಥವಾ ಇನ್ನಿತರ ಸೌಲಭ್ಯಕ್ಕಾಗಿ ವಿಶೇಷ ಅನುದಾನದಡಿ ನೀಡುವ ಮೊತ್ತವನ್ನು ಹೆಚ್ಚಿಸಲಾಗುವುದು’ ಎಂದೂ ಸೋಮಣ್ಣ ತಿಳಿಸಿದರು.

ಬಿಜೆಪಿಯ ಶಾಂತರಾಮ್ ಸಿದ್ದಿ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ‘ಈಗಾಗಲೇ ಬುಡಕಟ್ಟು ಸಮುದಾಯದ ಸದಸ್ಯರಿಗೆ ಸೂರು ಅಥವಾ ಇನ್ನಿತರ ಸೌಲಭ್ಯಕ್ಕಾಗಿ ವಿಶೇಷ ಅನುದಾನದಡಿ ₹ 1.20 ಬಿಡುಗಡೆ ಮಾಡಲಾಗುತ್ತಿದೆ. ಆದರೆ, ಮುಖ್ಯಮಂತ್ರಿ ಜೊತೆ ಚರ್ಚಿಸಿ ಈ ಮೊತ್ತವನ್ನು 1.50 ಲಕ್ಷಕ್ಕೆ ಏರಿಸಲಾಗುವುದು’ ಎಂದು ತಿಳಿಸಿದರು.

ನಗರ ಸ್ಥಳೀಯ ಸಂಸ್ಥೆಗಳ ಸಂಪನ್ಮೂಲ ಹೆಚ್ಚಳಕ್ಕೆ ಅವಕಾಶ

ಕೈಗಾರಿಕಾ ಕಟ್ಟಡಗಳ ತೆರಿಗೆ ಇಳಿಕೆ

ಪ್ರಜಾವಾಣಿ ವಾರ್ತೆ

ಬೆಳಗಾವಿ (ಸುವರ್ಣ ವಿಧಾನಸೌಧ): ರಾಜ್ಯದಲ್ಲಿ ಕೈಗಾರಿಕೆಗಳ ಸ್ಥಾಪನೆ ಉತ್ತೇಜಿಸಲು ಪಾಲಿಕೆಗಳು ಮತ್ತು ಇತರ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯ ಕೈಗಾರಿಕಾ ಕಟ್ಟಡಗಳಿಗೆ ವಿಧಿಸಬೇಕಾದ ಸ್ವತ್ತು ತೆರಿಗೆಗೆ ಪ್ರತ್ಯೇಕ ದರ ನಿಗದಿ ಮಾಡುವ ‘ಕರ್ನಾಟಕ ನಗರ ಪಾಲಿಕೆಗಳ ಮತ್ತು ಕೆಲವು ಇತರ ಕಾನೂನು ಮಸೂದೆ’ಯನ್ನು ವಿಧಾನಸಭೆಯಲ್ಲಿ ಬುಧವಾರ ಮಂಡಿಸಲಾಯಿತು.

ಈ ಮಸೂದೆಯನ್ನು ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜ್ ಮಂಡಿಸಿದರು.

ನಗರ ಸ್ಥಳೀಯ ಸಂಸ್ಥೆಗಳಲ್ಲಿನ ಕೈಗಾರಿಕೆಗಳಿಗೆ ಪ್ರತ್ಯೇಕ ಆಸ್ತಿ ತೆರಿಗೆ ದರವನ್ನು ನಿಗದಿಪಡಿಸಲು ಅನುಕೂಲವಾಗುವಂತೆ 1964ರ ಕರ್ನಾಟಕ ಪೌರಸಭೆಗಳ ಕಾಯ್ದೆಯ ಕಲಂ 94 ಮತ್ತು 1976ರ ಕರ್ನಾಟಕ ಮಹಾನಗರ ಪಾಲಿಕೆಗಳ ಕಾಯ್ದೆಯ ಕಲಂ 108ಕ್ಕೆ ತಿದ್ದುಪಡಿ ಮಾಡಿದ್ದು, ಇದಕ್ಕೆ ವಿಧಾನಸಭೆಯಲ್ಲಿ ಅಂಗೀಕಾರ ಪಡೆಯಬೇಕಾಗಿದೆ.

ಇದರಿಂದಾಗಿ, ವಾಣಿಜ್ಯ ಕಟ್ಟಡಗಳ ಮೂಲ ದರ ಶೇ 0.5 ಕ್ಕಿಂತ ಕಡಿಮೆ ಇರುವಂತೆ, ಶೇ 3 ಕ್ಕಿಂತ ಹೆಚ್ಚಿಲ್ಲದಂತೆ, ವಾಣಿಜ್ಯೇತರ ಕಟ್ಟಡಗಳಿಗೆ ಕಟ್ಟಡದ ಮೂಲ ದರ ಶೇ 0.02 ಕ್ಕಿಂತ ಕಡಿಮೆ ಇಲ್ಲದಂತೆ ಹಾಗೂ ಶೇ 1.5 ಕ್ಕಿಂತ ಹೆಚ್ಚಿಲ್ಲದಂತೆ ನಿಗದಿ ಮಾಡಲಾಗಿದೆ. ಖಾಲಿ ಭೂಮಿಗಳಿಗೆ ಮೂಲ ಬೆಲೆಯ ಶೇ 0.2 ಕ್ಕಿಂತ ಕಡಿಮೆ ಇಲ್ಲದಂತೆ ಹಾಗೂ ಶೇ 0.5 ಕ್ಕಿಂತ ಹೆಚ್ಚಿಲ್ಲದಂತೆ ನಗರ ಸ್ಥಳೀಯ ಸಂಸ್ಥೆಗಳ ಆಸ್ತಿ ತೆರಿಗೆಯನ್ನು ನಿಗದಿಪಡಿಸಲು ಮಸೂದೆಯಲ್ಲಿ ಅವಕಾಶ ನೀಡಲಾಗಿದೆ. ಕೈಗಾರಿಕಾ ಆಸ್ತಿ ತೆರಿಗೆಯನ್ನು ವಾಣಿಜ್ಯ ಕಟ್ಟಡಗಳಿಗಿಂತ ಕಡಿಮೆ ವಿಧಿಸಿದರೆ ನಗರ ಸ್ಥಳೀಯ ಸಂಸ್ಥೆಗಳಿಗೆ ಹೊರೆಯಾದರೂ ಹೆಚ್ಚಿನ ಆಸ್ತಿ ತೆರಿಗೆ ಸಂಗ್ರಹವಾಗುವುದರಿಂದ ಆರ್ಥಿಕ ಸ್ಥಿತಿ ಸುಧಾರಿಸುತ್ತದೆ. ಇದರಿಂದ ಸ್ವಂತ ಸಂಪನ್ಮೂಲಗಳನ್ನು ಹೆಚ್ಚಿಸಿಕೊಂಡು ಮೂಲಸೌಕರ್ಯಗಳನ್ನು ಒದಗಿಸಲು ಈ ಕಾಯ್ದೆ ಸಹಕಾರಿಯಾಗಲಿದೆ ಎಂದು ನಿರೀಕ್ಷಿಸಲಾಗಿದೆ.

ಸರ್ಕಾರಿ ಭೂಮಾಪಕರಿಗೂ ಅವಕಾಶ: ಜಮೀನು ಗುರುತಿಸಲು ಅಗತ್ಯವಿರುವ ವಿವರಣೆ, ಪೋಡಿ, ಭೂಪರಿವರ್ತನೆ ನಕ್ಷೆ, ಇ–ಸ್ವತ್ತು ಮುಂತಾದವುಗಳ ಸಂದರ್ಭದಲ್ಲಿ ಅರ್ಜಿಗಳ ಶೀಘ್ರ ವಿಲೇವಾರಿಗಾಗಿ ಸರ್ಕಾರಿ ಭೂಮಾಪಕರಿಗೂ ನೀಡಲು ಅವಕಾಶ ಒದಗಿಸುವ ‘ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ಮಸೂದೆ’ ಮಂಡಿಸಲಾಯಿತು. ಸದ್ಯದ ವ್ಯವಸ್ಥೆಯಲ್ಲಿ ಪರವಾನಗಿ ಪಡೆದ ಭೂಮಾಪಕರು ಮಾತ್ರ 11 ಇ ಅಡಿ ಸ್ಕೆಚ್ ನೀಡಬಹುದಾಗಿತ್ತು. ಕಾಯ್ದೆಗೆ ತಿದ್ದುಪಡಿ ಮೂಲಕ ಸರ್ಕಾರಿ ಭೂಮಾಪಕರಿಗೂ ಈ ಅವಕಾಶ ನೀಡಲಾಗುವುದು. ಈ ಮಸೂದೆಯನ್ನು ಕಂದಾಯ ಸಚಿವ ಆರ್. ಅಶೋಕ ಪರವಾಗಿ ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ ಮಂಡಿಸಿದರು.

ಇನಾಂ ಜಮೀನು: ಅರ್ಜಿ ಸಲ್ಲಿಕೆಗೆ ಇನ್ನೂ ಒಂದು ವರ್ಷ ಅವಕಾಶ

ರಾಜ್ಯ ವಿವಿಧೆಡೆ ಇನಾಂ ಜಮೀನು ಸಾಗುವಳಿ ಮಾಡುತ್ತಿರುವ ರೈತರು ಪಹಣಿಗಾಗಿ ಅರ್ಜಿ ಸಲ್ಲಿಸುವ ಅವಧಿಯನ್ನು ಇನ್ನೂ ಒಂದು ವರ್ಷ ಮುಂದುವರಿಸುವುದಕ್ಕೆ ಅವಕಾಶ ನೀಡುವ ‘ಕರ್ನಾಟಕ ಇನಾಮು ರದ್ದತಿ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ಮಸೂದೆ’ಯನ್ನು ಮಂಡಿಸಲಾಯಿತು.

ಭೂಮಿಯ ಹಕ್ಕನ್ನು ರೈತರಿಗೆ ನೀಡುವುದರಿಂದ ಅವರು ಬ್ಯಾಂಕ್‌ಗಳಿಂದ ಸಾಲ ಪಡೆಯಲು, ಸರ್ಕಾರಿ ಉದ್ದೇಶಕ್ಕೆ ಭೂಸ್ವಾದೀನ ಮಾಡಿಕೊಂಡಾಗ ಪರಿಹಾರ ಪಡೆದುಕೊಳ್ಳಲು ಅನುಕೂಲವಾಗುತ್ತದೆ ಎಂಬ ಕಾರಣಕ್ಕೆ ಮಸೂದೆ ಮಂಡಿಸಲಾಗಿದೆ.

ರಾಜ್ಯದ ಲಕ್ಷಾಂತರ ಎಕರೆ ಇನಾಂ ಭೂಮಿಯನ್ನು ಕಳೆದ 50– 60 ವರ್ಷಗಳಿಂದ ರೈತರು ಉಳುಮೆ ಮಾಡುತ್ತಿದ್ದಾರೆ. ಬಳ್ಳಾರಿ ಜಿಲ್ಲೆಯೊಂದರಲ್ಲೇ 30 ಸಾವಿರ ಎಕರೆ ಇನಾಂ ಭೂಮಿಯಿದೆ. ರಾಜ್ಯದಲ್ಲಿ ಒಟ್ಟು 1 ಲಕ್ಷ ಎಕರೆಗೂ ಹೆಚ್ಚು ಇನಾಂ ಭೂಮಿ ಇದೆ.

ರೈಲು ವಿಳಂಬದಿಂದ ತಪ್ಪಿದ ಪರೀಕ್ಷೆ: 29ರಂದು ಮರು ಪರೀಕ್ಷೆ

ಕಲಬುರಗಿ: ಕಲಬುರಗಿಯಲ್ಲಿ ಇದೇ 14ರಂದು ಕರ್ನಾಟಕ ಲೋಕಸೇವಾ ಆಯೋಗ ನಡೆಸಿದ ಲೋಕೋಪಯೋಗಿ ಇಲಾಖೆಯ ಸಹಾಯಕ ಎಂಜಿನಿಯರ್ ನೇಮಕಾತಿ ಪರೀಕ್ಷೆಗೆ ರೈಲು ವಿಳಂಬದಿಂದಾಗಿ ಹಾಜರಾಗಲು ಸಾಧ್ಯವಾಗದ ಅಭ್ಯರ್ಥಿಗಳಿಗೆ, ಇದೇ 29ರಂದು ಬೆಂಗಳೂರಿನಲ್ಲಿ ಮರು ಪರೀಕ್ಷೆ ನಡೆಸಲಾಗುತ್ತದೆ.

ಜೋಡಿ ರೈಲು ಮಾರ್ಗ ಕಾಮಗಾರಿಯಿಂದಾಗಿ ಹಾಸನ–ಸೊಲ್ಲಾಪುರ ಹಾಗೂ ಉದ್ಯಾನ್ ಎಕ್ಸ್‌ಪ್ರೆಸ್ ರೈಲುಗಳು ತಡವಾಗಿ ಕಲಬುರಗಿ ತಲುಪಿದ್ದವು. ಇದರಿಂದಾಗಿ ತಮಗೆ ಪರೀಕ್ಷೆ ಬರೆಯಲು ಸಾಧ್ಯವಾಗಿಲ್ಲ ಎಂದು ಸಾವಿರಾರು ಅಭ್ಯರ್ಥಿಗಳು ರಾಯಚೂರು ನಿಲ್ದಾಣದಲ್ಲಿ ಪ್ರತಿಭಟನೆ ನಡೆಸಿದ್ದರು. ನಂತರ ಕಲಬುರಗಿ ತಲುಪಿ ಮಧ್ಯಾಹ್ನದ ಪರೀಕ್ಷೆಯನ್ನು ಬರೆದಿದ್ದರು.

'ಆ ರೈಲುಗಳಲ್ಲಿದ್ದ ಅಭ್ಯರ್ಥಿಗಳಿಗೆ ಮಾತ್ರ 29ರಂದು ಪರೀಕ್ಷೆ ನಡೆಸಲಾಗುವುದು. ಇದಕ್ಕಾಗಿ ಅಭ್ಯರ್ಥಿಗಳು ಮನವಿಪತ್ರ, ರೈಲ್ವೆ ಟಿಕೆಟ್ ಪ್ರತಿ, ಆಯೋಗವು ನೀಡಿದ ಪ್ರವೇಶ ಪತ್ರದ ಪ್ರತಿಯನ್ನು ಆಯೋಗಕ್ಕೆ ಇದೇ 22ರೊಳಗೆ ಸ್ಪೀಡ್ ಪೋಸ್ಟ್ ಮೂಲಕ, ಖುದ್ದಾಗಿ ಅಥವಾ kpsc-ka@nic.in ಗೆ ಇ- ಮೇಲ್ ಮಾಡಬೇಕು' ಎಂದು ಕರ್ನಾಟಕ ಲೋಕಸೇವಾ ಆಯೋಗದ ಕಾರ್ಯದರ್ಶಿ ತಿಳಿಸಿದ್ದಾರೆ.

ಪಕ್ಷ ವಿರೋಧಿ ಚಟುವಟಿಕೆ– ಶೀಘ್ರದಲ್ಲೇ ಕ್ರಮ: ಸಾ.ರಾ.ಮಹೇಶ್

ಪ್ರಜಾವಾಣಿ ವಾರ್ತೆ

ಮೈಸೂರು: 'ವಿಧಾನ ಪರಿಷತ್ ಚುನಾವಣೆಯಲ್ಲಿ ಪಕ್ಷ ವಿರೋಧಿ ಚಟುವಟಿಕೆ ನಡೆಸಿದವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಪಕ್ಷದ ವರಿಷ್ಠರು ತೀರ್ಮಾನಿಸಿದ್ದಾರೆ' ಎಂದು ಜೆಡಿಎಸ್ ಶಾಸಕ ಸಾ.ರಾ.ಮಹೇಶ್ ಹೇಳಿದರು.

ನಗರದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 'ಹಿಂದಿನ ಚುನಾವಣೆಗಳಲ್ಲಿ ಮಾಡಿದಂತೆ ಮೇಲ್ಮನೆ ಚುನಾವಣೆಯಲ್ಲೂ ಒಬ್ಬರು ಪಕ್ಷದ ವಿರುದ್ಧ ಕೆಲಸ ಮಾಡಿದ್ದಾರೆ. ಜೆಡಿಎಸ್ ಕಾರ್ಯಕರ್ತರು, ಮತದಾರರಿಂದ ಗೆದ್ದು ಬೇರೆ ಪಕ್ಷದ ಅಭ್ಯರ್ಥಿ ಪರ ಪ್ರಚಾರ ನಡೆಸಿರುವುದನ್ನು ಪಕ್ಷ ಗಂಭೀರವಾಗಿ ಪರಿಗಣಿಸಿದೆ' ಎಂದು ಹೆಸರು ಹೇಳದೆಯೇ ಶಾಸಕ ಜಿ.ಟಿ. ದೇವೇಗೌಡರ ವಿರುದ್ಧ ಶಿಸ್ತುಕ್ರಮದ ಸುಳಿವು ನೀಡಿದರು.

ಮತಾಂತರ ನಿಷೇಧ ಮಸೂದೆಗೆ ಲೇಖಕರ, ಚಿಂತಕರ ವಿರೋಧ

'ಮುಸ್ಲಿಂ, ಕ್ರೈಸ್ತರನ್ನು ಖಳರೆಂದು ಬಿಂಬಿಸುವ ಹುನ್ನಾರ'

ಪ್ರಜಾವಾಣಿ ವಾರ್ತೆ



ರಫಾಯಲ್ ರಾಜ್, ಬಂಜಗೆರೆ ಜಯಪ್ರಕಾಶ್, ಎಲ್.ಎನ್.ಮುಕುಂದರಾಜ್, ಎಸ್.ಜಿ.ಸಿದ್ಧರಾಮಯ್ಯ, ಜಾಣಗೆರೆ ವೆಂಕಟರಾಮಯ್ಯ, ನಗರಗೆರೆ ರಮೇಶ್, ಫಾದರ್ ಸೈಮನ್ ಬಾರ್ತಲೋಮಿಯ ಹಾಗೂ ಪಾರ್ವತೀಶ ಬಿಳಿದಾಳೆ ಅವರು ಮತಾಂತರ ನಿಷೇಧದ ಕುರಿತಾದ ಭಿತ್ತಿಪತ್ರ ಹಿಡಿದು ಪ್ರತಿಭಟಿಸಿದರು – ಪ್ರಜಾವಾಣಿ ಚಿತ್ರ

ಬೆಂಗಳೂರು: ರಾಜ್ಯ ಸರ್ಕಾರ ತರಲು ಉದ್ದೇಶಿಸಿರುವ ಮತಾಂತರ ನಿಷೇಧ ಕಾಯ್ದೆಗೆ ಚಿಂತಕರು, ಸಾಹಿತಿಗಳು, ವಿದ್ವಾಂಸರು ವಿರೋಧ ವ್ಯಕ್ತಪಡಿಸಿದ್ದಾರೆ.

ಅಖಿಲ ಕರ್ನಾಟಕ ಕ್ಯಾಥೋಲಿಕ್ ಕ್ರೈಸ್ತರ ಕನ್ನಡ ಸಂಘವು ನಗರದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಪ್ರತಿಭಟನಾ ಸಭೆಯಲ್ಲಿ ಪ್ರಮುಖರು ಸರ್ಕಾರದ ನಡೆಯನ್ನು ಖಂಡಿಸಿದರು.

ಕವಿ ಬಂಜಗೆರೆ ಜಯಪ್ರಕಾಶ್, 'ಜನರ ದೃಷ್ಟಿಯಲ್ಲಿ ಮುಸ್ಲಿಂ ಮತ್ತು ಕ್ರೈಸ್ತರನ್ನು ಖಳರೆಂದು ಬಿಂಬಿಸಲು ರಾಜ್ಯ ಸರ್ಕಾರ ಮತಾಂತರ ನಿಷೇಧ ಮಸೂದೆಯ ಅಸ್ತ್ರ ಪ್ರಯೋಗಿಸುತ್ತಿದೆ' ಎಂದು ಟೀಕಿಸಿದರು.

'ಬಲವಂತದ ಮತಾಂತರಗಳು ನಡೆದಿದ್ದರೆ ಸ್ವಾತಂತ್ರ್ಯ ನಂತರದಲ್ಲಿ ಮುಸ್ಲಿಂ ಹಾಗೂ ಕ್ರೈಸ್ತರ ಸಂಖ್ಯೆ ಏರಿಕೆಯಾಗಿರಬೇಕಿತ್ತು. ನೋಡಿದರೆ, ಹಿಂದೂಗಳ ಸಂಖ್ಯೆಯೇ ಹೆಚ್ಚಾಗಿದೆ. ಹಿಂದೂ ಧರ್ಮದ ಪರಿಚಯವೇ ಇಲ್ಲದ ಬುಡಕಟ್ಟು ಜನರನ್ನು ಹಿಂದೂ ಧರ್ಮದವರೆಂದು ವ್ಯಾಖ್ಯಾನಿಸಲಾಗಿದೆ. ವಿದೇಶಿಯರು ದೊಡ್ಡ ಸಂಖ್ಯೆಯಲ್ಲಿ ಹಿಂದೂ ಧರ್ಮಕ್ಕೆ ಮತಾಂತರಗೊಳ್ಳುತ್ತಿದ್ದಾರೆ. ಅದನ್ನೇಕೆ ತಡೆಯುತ್ತಿಲ್ಲ' ಎಂದರು.

'ವಿಚಾರ ಮತ್ತು ವ್ಯಕ್ತಿ ಸ್ವಾತಂತ್ರ್ಯ ನಿರ್ಬಂಧಿಸುವುದು ಸಂವಿಧಾನ ವಿರೋಧಿ ನಡೆ. ಪ್ರತಿಯೊಬ್ಬರೂ ಸ್ವಂತ ಆಲೋಚನೆಯೊಂದಿಗೆ ತಮಗೆ ಬೇಕಾದ ಮತ, ಆಚಾರ–ವಿಚಾರ ಪಾಲಿಸಲು ಅವಕಾಶ ನೀಡಬೇಕು. ಮತಾಂತರ ನಿಷೇಧ ಸಂಬಂಧ ಸಂವಿಧಾನದಲ್ಲಿ ಈಗಾಗಲೇ ಹಲವು ನಿಯಮಗಳಿವೆ. ಹೀಗಿರುವಾಗ ಮತ್ತೊಂದು ಮಸೂದೆ ಮಂಡಿಸುವ ಅಗತ್ಯವಾದರೂ ಏನು' ಎಂದು ಪ್ರಶ್ನಿಸಿದರು.

ಪತ್ರಕರ್ತ ಜಾಣಗೆರೆ ವೆಂಕಟರಾಮಯ್ಯ, 'ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ಮನುಷ್ಯತ್ವವೇ ಇಲ್ಲ. ಶೋಷಿತರು, ಬಡವರು, ಅಸಹಾಯಕರನ್ನು ಹಿಂದೂಗಳೆಂದು ಪರಿಗಣಿಸಿಲ್ಲ. ಅಸ್ಪೃಶ್ಯರ ಹಣೆಪಟ್ಟಿ ಕಟ್ಟಿ ದೂರ ಇಡಲಾಗಿದೆ. ಅಂಬೇಡ್ಕರ್ ಕೂಡ ಮತಾಂತರಗೊಂಡಿದ್ದರು. ಅದನ್ನೇಕೆ ಖಂಡಿಸುತ್ತಿಲ್ಲ. ಆ ಧೈರ್ಯ ಏಕಿಲ್ಲ' ಎಂದು ಕಿಡಿಕಾರಿದರು.

'ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಪ್ರತಿನಿಧಿಸುವ ಸಮುದಾಯದವು 12ನೇ ಶತಮಾನಕ್ಕಿಂತಲೂ ಹಿಂದೆ ಯಾವ ಸ್ಥಿತಿಯಲ್ಲಿತ್ತು. ಅವರ ತಾತ, ಮುತ್ತಾತಂದಿರು ಆಗ ವೈದಿಕ ಪರಂಪರೆಯ ಶೋಷಣೆ, ದಬ್ಬಾಳಿಕೆಯಿಂದ ನರಳುತ್ತಿದ್ದರು. ಇದರ ವಿರುದ್ಧ ಬಸವಣ್ಣನವರು ಗಟ್ಟಿ ಧ್ವನಿ ಎತ್ತಿ, ಅವರಿಗೂ ಸಾಮಾಜಿಕ ಸ್ಥಾನಮಾನ ಕಲ್ಪಿಸಿದ್ದರು. ಮತಾಂತರ ನಿಷೇಧ ಕಾಯ್ದೆಯನ್ನು ಮಂಡಿಸಿಯೇ ತೀರುತ್ತೇವೆ ಎಂದು ಹೇಳುತ್ತಿರುವ ಮುಖ್ಯಮಂತ್ರಿ ಅವರಿಗೆ ಅವರ ಮೂಲ ನೆನಪಿಲ್ಲವೇ' ಎಂದು ಪ್ರಶ್ನಿಸಿದರು.

ಕವಿ ಎಲ್.ಎನ್.ಮುಕುಂದರಾಜ್, 'ದಲಿತರು, ಶೂದ್ರರು ಹಾಗೂ ಮಹಿಳೆಯರು ವಿದ್ಯೆ ಹಾಗೂ ಉದ್ಯೋಗ ಪಡೆಯುವುದನ್ನು ಕೆಲವರಿಗೆ ಸಹಿಸಲು ಆಗುತ್ತಿಲ್ಲ. ಅವರನ್ನು ಹಣಿಯುವ ಉದ್ದೇಶದಿಂದ ಮತಾಂತರ ನಿಷೇಧ ಮಸೂದೆ ಮಂಡಿಸಲಾಗುತ್ತಿದೆ. ನೇರವಾಗಿ ಅವರ ಮೇಲೆ ದಾಳಿ ನಡೆಸಿದರೆ ಮತ ವಿಭಜನೆಯಾಗಬಹುದು ಎಂಬ ಕಾರಣದಿಂದ ಮುಸ್ಲಿಂ ಮತ್ತು ಕ್ರೈಸ್ತರ ಮೇಲೆ ಈ ಅಸ್ತ್ರ ಪ್ರಯೋಗಿಸುತ್ತಿದ್ದಾರೆ' ಎಂದು ಅವರು ಅಭಿಪ್ರಾಯಪಟ್ಟರು.

> **ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದರೆ ಕ್ರೈಸ್ತರಿಗೆ ಅನುಕೂಲವಾಗುತ್ತದೆ ಎಂದು ನಂಬಿ ಸಮುದಾಯದವರೆಲ್ಲಾ ಆ ಪಕ್ಷವನ್ನು ಬೆಂಬಲಿಸಿದ್ದರು**
> **ರಫಾಯಲ್ ರಾಜ್**, ಅಖಿಲ ಕರ್ನಾಟಕ ಕ್ಯಾಥೋಲಿಕ್ ಕ್ರೈಸ್ತರ ಕನ್ನಡ ಸಂಘದ ಅಧ್ಯಕ್ಷ

> **ಗ್ರಾಮೀಣ ಭಾಗದಲ್ಲಿ ಸಂಕಷ್ಟದ ಬದುಕು ನಡೆಸುತ್ತಿರುವವರಿಗೆ ಕ್ರೈಸ್ತರು ನೆರವಿನ ಹಸ್ತ ಚಾಚಿದಾಗ ಸ್ವ–ಇಚ್ಛೆಯಿಂದ ಆ ಧರ್ಮಕ್ಕೆ ಮತಾಂತರಗೊಳ್ಳುತ್ತಾರೆ**
> **ಬಿ.ಟಿ.ಲಲಿತಾ ನಾಯಕ್**, ಲೇಖಕಿ

'ಲಿಂಗಾಯತರೂ ಹಿಂದೂಗಳಲ್ಲ'

'ಮತಾಂತರ ನಿಷೇಧ ಮಸೂದೆಯು ಶೋಷಿತ ಸಮುದಾಯಗಳಿಗೆ ಮಾಡುವ ದ್ರೋಹ. ಚಾತುರ್ವರ್ಣ ವ್ಯವಸ್ಥೆ ದೇಶಕ್ಕೆ ದೊಡ್ಡ ಶಾಪ. ಶ್ರೇಷ್ಠತೆಯ ವ್ಯಸನದಲ್ಲಿರುವ ಶೇ 3.5ರಷ್ಟು ಮಂದಿ ಆ ಕಾಲದಿಂದಲೂ ಈ ದೇಶದ ರಾಜಕೀಯ ಮತ್ತು ಜನಜೀವನವನ್ನು ನಿಯಂತ್ರಿಸುತ್ತಿದ್ದಾರೆ. ರಾಜರ ಕಾಲದಲ್ಲಿ ಅವರದ್ದೇ ಶಾಸನಗಳು ನಡೆಯುತ್ತಿದ್ದವು. ಅವರಿಗೆ ಕಾಲಾಳುಗಳಾಗಿದ್ದವರು ಶೂದ್ರರು' ಎಂದು ಪ್ರೊ. ಎಸ್.ಜಿ.ಸಿದ್ಧರಾಮಯ್ಯ ಹೇಳಿದರು.

'ಜೈನರು, ಸಿಖ್ಖರು, ಲಿಂಗಾಯತರು ಹಿಂದೂಗಳಲ್ಲ. ವೈದಿಕ ಧರ್ಮಕ್ಕೆ ಪರ್ಯಾಯವಾಗಿ ಹುಟ್ಟಿಕೊಂಡಿರುವ ಈ ಧರ್ಮದಲ್ಲಿರುವವರೆಲ್ಲರೂ ಮತಾಂತರಗೊಂಡವರೇ. ಅವರ ತಲೆಯಲ್ಲಿ ಬ್ರಾಹ್ಮಣ್ಯದ ಕಸ ತುಂಬಿಸಲಾಗಿದೆ. ದಲಿತನಿಗೆ ತರಬೇತಿ ನೀಡಿ ಮಠಾಧೀಶರನ್ನಾಗಿ ನೇಮಿಸಲಿ. ದೇವಸ್ಥಾನಗಳಿಗೆ ಪೂಜಾರಿಗಳನ್ನಾಗಿ ನೇಮಿಸಲು ಸಾಧ್ಯವೇ' ಎಂದು ಪ್ರಶ್ನಿಸಿದರು.

'ಸಿದ್ದರಾಮಯ್ಯ ನಾಲಿಗೆಗೆ ಲಂಗು–ಲಗಾಮು, ಸಂಸ್ಕಾರ ಇಲ್ಲ'

ಪ್ರಜಾವಾಣಿ ವಾರ್ತೆ



ಬಿ ಎಲ್ ಸಂತೋಷ್

ಉಡುಪಿ: 'ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಅವರ ನಾಲಿಗೆಗೆ ಲಂಗು–ಲಗಾಮು, ಸಂಸ್ಕಾರ ಇಲ್ಲ' ಎಂದು ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್ ವಾಗ್ದಾಳಿ ನಡೆಸಿದರು.

ನಗರದ ಪುರಭವನದಲ್ಲಿ ಬುಧವಾರ ಬಿಜೆಪಿ ಜಿಲ್ಲಾ ಮಟ್ಟದ ಶಕ್ತಿ ಕೇಂದ್ರ ಪ್ರಮುಖರ ಸಮಾವೇಶದಲ್ಲಿ ಮಾತನಾಡಿ, 'ಕಾಂಗ್ರೆಸ್ ಆಡಳಿತದಲ್ಲಿ ದೇಶದೊಳಗೆ ಅಪರಿಮಿತ ನಾಯಕರ ಅಸಹಜ ಸಾವುಗಳು ಸಂಭವಿಸಿವೆ. ಮೃತರಲ್ಲಿ ಶ್ಯಾಮಪ್ರಸಾದ್ ಮುಖರ್ಜಿ ಪ್ರಮುಖರು. ಆದರೂ, 'ದೇಶಕ್ಕೋಸ್ಕರ ಯಾವ ಬಿಜೆಪಿ ನಾಯಕರು ಬಲಿದಾನ ಮಾಡಿದ್ದಾರೆ' ಎಂದು ಪ್ರತಿಪಕ್ಷ ನಾಯಕರು ಪದೇಪದೇ ಪ್ರಶ್ನಿಸುತ್ತಾರೆ' ಎಂದು ಕುಟುಕಿದರು.

'ಶ್ಯಾಮಪ್ರಸಾದ್ ಮುಖರ್ಜಿ ಯಾರು, ಯಾವ ಕಾರಣಕ್ಕೆ ಮೃತಪಟ್ಟರು, ಕಾಂಗ್ರೆಸ್ ಆಡಳಿತವಿದ್ದರೂ ಅವರ ಸಾವಿನ ತನಿಖೆ ಏಕೆ ನಡೆಯಲಿಲ್ಲ ಎಂದು ಸಿದ್ದರಾಮಯ್ಯ ಆತ್ಮಸಾಕ್ಷಿಯನ್ನು ಪ್ರಶ್ನಿಸಿದರೆ ಉತ್ತರ ಸಿಗಬಹುದು' ಎಂದರು.

'ಸಿದ್ದರಾಮಯ್ಯನವರ ಟೀಕೆಗಳಿಗೆ ಉತ್ತರಿಸಲು ರಾಜ್ಯದ ಜನರು ಬಿಜೆಪಿ ಸರ್ಕಾರವನ್ನು ಅಧಿಕಾರದಲ್ಲಿ ಕೂರಿಸಿಲ್ಲ. 'ಕಾಂಗ್ರೆಸ್ 70 ವರ್ಷ ಏನೂ ಮಾಡಲಿಲ್ಲ. ನೀವು ಮಾಡಿ ತೋರಿಸಿ' ಎಂದು ಅಧಿಕಾರ ನೀಡಿದ್ದಾರೆ. ಟೀಕೆಗಳಿಗೆ ಉತ್ತರ ಕೊಡುತ್ತಾ ಹೋದರೆ ಕೊಚ್ಚೆಯ ಮೇಲೆ ಕಲ್ಲು ಎಸೆದಂತಾಗುತ್ತದೆ. ಸಿದ್ದರಾಮಯ್ಯ ಈಗಾಗಲೇ ಕಸದಬುಟ್ಟಿಗೆ ಬಿದ್ದಿದ್ದು, ಮುಂದೆ ದೊಡ್ಡ ಕಸದಬುಟ್ಟಿಗೆ ಬೀಳಲಿದ್ದಾರೆ' ಎಂದು ಸಂತೋಷ್ ಹೇಳಿದರು.

'ಈಚೆಗೆ ರಾಜ್ಯದ ಮತ್ತೊಬ್ಬ ನಾಯಕರು ಅಪರೂಪಕ್ಕೆ ಪುಸ್ತಕವೊಂದನ್ನು ಓದಿ, 15 ದಿನ ಪುಂಖಾನುಪುಂಖವಾಗಿ ಆರ್‌ಎಸ್‌ಎಸ್ ವಿರುದ್ಧ ಟೀಕೆ ಮಾಡಿದರು. ಇಂತಹ ಟೀಕೆಗಳಿಗೆ ಉತ್ತರ ಕೊಡುವ ಅಗತ್ಯವಿಲ್ಲ' ಎಂದು ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ವಿರುದ್ಧ ಪರೋಕ್ಷವಾಗಿ ವಾಗ್ದಾಳಿ ನಡೆಸಿದರು.

'ಬುದ್ಧಿಜೀವಿಗಳಲ್ಲ, ಲದ್ದಿಜೀವಿಗಳು'

ಪ್ರಜಾವಾಣಿ ವಾರ್ತೆ



ಅಡ್ಡಂಡ ಕಾರ್ಯಪ್ಪ

ಮಡಿಕೇರಿ: 'ಮೈಸೂರಿನ ರಂಗಾಯಣದ ವಿರುದ್ಧ ಎಡಪಂಥೀಯರ ಗುಂಪು ನಿರಂತರವಾಗಿ ಪಿತೂರಿ ನಡೆಸುತ್ತಿದೆ. ಅಲ್ಲಿ ಒಳ್ಳೆಯ ಕಾರ್ಯಕ್ರಮಕ್ಕೆ ಅಡ್ಡಗಾಲು ಹಾಕುವ ಸಣ್ಣ ಗುಂಪಿದೆ. ತಮ್ಮನ್ನು ತಾವೇ ಬುದ್ಧಿಜೀವಿಗಳು, ಪ್ರಗತಿಪರರು ಎಂದು ಕರೆದುಕೊಂಡಿರುವವರು ಬುದ್ಧಿಜೀವಿಗಳಲ್ಲ, ಲದ್ದಿಜೀವಿಗಳು' ಎಂದು ರಂಗಾಯಣದ ನಿರ್ದೇಶಕ ಅಡ್ಡಂಡ ಕಾರ್ಯಪ್ಪ ಕಿಡಿಕಾರಿದರು.

'ನಾನು ನಿರ್ದೇಶಕನಾಗಿ ನೇಮಕವಾದಾಗ ಟಿಪ್ಪು ಸುಲ್ತಾನ್ ವಿಷಯವನ್ನು ಮುಂದಿಟ್ಟುಕೊಂಡು ಒಂದು ಗುಂಪು ಗಲಾಟೆ ನಡೆಸಿತ್ತು. ಈಗ ರಂಗಾಯಣದ ಬಹುರೂಪಿ ನಾಟಕೋತ್ಸವಕ್ಕೆ ಮಾಳವಿಕಾ ಅವಿನಾಶ್ ಹಾಗೂ ಚಕ್ರವರ್ತಿ ಸೂಲಿಬೆಲೆ ಅವರನ್ನು ಆಹ್ವಾನಿಸಿರುವುದಕ್ಕೆ ಕೆಲವರು ಗಲಾಟೆ ನಡೆಸುತ್ತಿದ್ದಾರೆ. ಬುದ್ಧಿಯಿರುವವರು ಗಲಾಟೆ ಮಾಡುವುದಿಲ್ಲ. ಯೋಧ ಪರಂಪರೆಯ ಕೊಡಗು ಜಿಲ್ಲೆಯವನಾದ ನಾನು ಯಾರಿಗೂ ಹೆದರುವುದಿಲ್ಲ. ಪುಟಗೋಸಿಗಳಿಗೆ ಹೆದರದೇ ಧೈರ್ಯವಾಗಿ ನನ್ನ ಕೆಲಸವನ್ನು ಮಾಡುತ್ತೇನೆ' ಎಂದು ನಗರದಲ್ಲಿ ಬುಧವಾರ ಸುದ್ದಿಗಾರರಿಗೆ ತಿಳಿಸಿದರು.

'ಬಿಜೆಪಿ ಸರ್ಕಾರದಿಂದ ನೇಮಕವಾದವನು, ಆರ್ ಎಸ್ ಎಸ್ ಹಿನ್ನೆಲೆಯುಳ್ಳವನು ಎಂದು ಕೆಲವರಿಗೆ ಕಿರಿಕಿರಿಯಾಗಿದೆ. ಅವರಿಗೆ ಲಸಿಕೆ ಕಂಡು ಹಿಡಿಯುತ್ತೇವೆ. 32 ವರ್ಷಗಳ ಕಾಲ ಎಡಪಂಥೀಯ ಚಿಂತನೆಯಿದ್ದಾಗ ಆರ್‌ಎಸ್‌ಎಸ್ ಹಾಗೂ ಬಿಜೆಪಿಯವರು ಹೋಗಿ ತಡೆ ಹಾಕಿದ್ದರೇ? ರಂಗಭೂಮಿಯಲ್ಲಿ ಎಡ–ಬಲ ಎಂಬುದು ಇಲ್ಲ. 'ಆಹ್ವಾನಿಸಿರುವ ಅತಿಥಿಗಳನ್ನು ಯಾವ ಕಾರಣಕ್ಕೂ ಬದಲಾವಣೆ ಮಾಡುವುದಿಲ್ಲ' ಎಂದು ಪ್ರತಿಪಾದಿಸಿದರು.

ಮೈಸೂರಿನ ರಂಗಾಯಣವು ಭಾರತದ ಅದ್ಭುತ, ಪ್ರತಿಷ್ಠಿತ ರಂಗಸಂಸ್ಥೆ. ನಿರ್ದೇಶಕನಾಗಿ ನೇಮಕವಾದ ಎರಡು ವರ್ಷದಿಂದ ಅನೇಕ ರಂಗ ಚಟುವಟಿಕೆ ನಡೆಸಿದ್ದೇನೆ. ಎಸ್.ಎಲ್.ಭೈರಪ್ಪ ಅವರ ಪರ್ವ ಕಾದಂಬರಿ ಆಧರಿಸಿ ರೂಪಿಸಿದ ನಾಟಕಕ್ಕೆ ದೇಶದಾದ್ಯಂತ ಉತ್ತಮ ಪ್ರತಿಕ್ರಿಯೆ ದೊರಕಿದೆ. ಎಲ್ಲವೂ ಚೆನ್ನಾಗಿ ನಡೆಯುತ್ತಿರುವಾಗ ಒಂದು ಗುಂಪು ಪಿತೂರಿ ನಡೆಸುತ್ತಿದೆ' ಎಂದು ದೂರಿದರು.

ನಿಧನ ವಾರ್ತೆ

ನೇಮಿಚಂದ್ರ



ಬೆಳಗಾವಿ: ಇಲ್ಲಿನ ವಡಗಾವಿಯ ಲಕ್ಷ್ಮಿ ನಗರದ ನಿವಾಸಿ, ಹಲವು ಜನಪರ ಚಳವಳಿಗಳಲ್ಲಿ ಸಕ್ರಿಯವಾಗಿ ಗುರುತಿಸಿಕೊಂಡಿದ್ದ ನೇಮಿಚಂದ್ರ (27) ಅನಾರೋಗ್ಯದಿಂದ ಜಿಲ್ಲಾಸ್ಪತ್ರೆಯಲ್ಲಿ ನಿಧನರಾದರು.

ಅವರಿಗೆ ತಂದೆ, ತಾಯಿ ಹಾಗೂ ಇಬ್ಬರು ಅಕ್ಕಂದಿರು ಇದ್ದಾರೆ.

ಸ್ತ್ರೀವಾದಿ ಚಿಂತಕಿ ಹಾಗೂ ಸಾಹಿತಿ ನೇಮಿಚಂದ್ರ ಅವರ ಬರಹಗಳನ್ನು ಇಷ್ಟಪಡುತ್ತಿದ್ದ ತಂದೆ ಮಾರುತಿ ಢಗೆಣ್ಣವರ ಅವರು ಪುತ್ರಿಗೆ ನೇಮಿಚಂದ್ರ ಎಂದೇ ಹೆಸರಿಟ್ಟಿದ್ದರು. ಕಾನೂನು ಪದವಿ ವ್ಯಾಸಂಗ ಮಾಡುತ್ತಿದ್ದ ಅವರು ಕರ್ನಾಟಕ ಜನಶಕ್ತಿ, ಕರ್ನಾಟಕ ವಿದ್ಯಾರ್ಥಿ ಸಂಘಟನೆ, ಭೂಮಿ ಮತ್ತು ವಸತಿ ಹಕ್ಕು ವಂಚಿತರ ಹೋರಾಟ ಸಮಿತಿ, ಗೌರಿ ಬಳಗ ಮೊದಲಾದ ಪ್ರಗತಿಪರ ಸಂಘಟನೆಗಳಲ್ಲಿ ಮತ್ತು ಹೋರಾಟಗಳಲ್ಲಿ ಸಕ್ರಿಯರಾಗಿದ್ದರು. ಸಮ ಸಮಾಜದ ಕನಸು ಹೊತ್ತು ಜನ ಚಳವಳಿಗೆ ತಮ್ಮನ್ನು ಸಮರ್ಪಿಸಿಕೊಂಡಿದ್ದರು.

ನ್ಯುಮೋನಿಯಾ ಮೊದಲಾದ ಆರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದ ಅವರು, ಚಿಕಿತ್ಸೆಗೆ ಸ್ಪಂದಿಸಲಿಲ್ಲ. ಅಂತ್ಯಕ್ರಿಯೆ ಡಿ.16ರಂದು ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಸಂಪರ್ಕಕ್ಕೆ ಮೊ.ಸಂಖ್ಯೆ: 9241473804.

ಸ್ಪರ್ಧಾ ವಾಣಿ



ಗ್ರೂಪ್-ಸಿ (ತಾಂತ್ರಿಕೇತರ) ಹುದ್ದೆ

ಕರ್ನಾಟಕದ ಭೂಗೋಳ

ಕರ್ನಾಟಕ ಲೋಕಸೇವಾ ಆಯೋಗವು ಗ್ರೂಪ್ 'ಸಿ' ವೃಂದದ ತಾಂತ್ರಿಕೇತರ ಹುದ್ದೆಗಳಿಗೆ ಡಿಸೆಂಬರ್ 19ರಂದು ಸ್ಪರ್ಧಾತ್ಮಕ ಪರೀಕ್ಷೆ ನಡೆಸುತ್ತಿದೆ. ಪರೀಕ್ಷೆಗೆ ಸಿದ್ಧತೆ ನಡೆಸುವವರಿಗಾಗಿ 'ಸಾಮಾನ್ಯ ಜ್ಞಾನ' ವಿಭಾಗದಲ್ಲಿ 'ಕರ್ನಾಟಕಕ್ಕೆ ಸಂಬಂಧಿಸಿದ ಭಾರತದ ಭೂಗೋಳ' ವಿಷಯದ ಕುರಿತಾದ ಬಹುಆಯ್ಕೆ ಮಾದರಿ ಪ್ರಶ್ನೋತ್ತರಗಳನ್ನು ಇಲ್ಲಿ ನೀಡಲಾಗಿದೆ.

1) ಭಾರತದ ಮೇಲ್ಮೈ ಜಲಸಂಪನ್ಮೂಲ ಪ್ರಮಾಣ 1.7 ಲಕ್ಷ ಮಿಲಿಯನ್ ಘನ ಮೀಟರ್‌ಗಳು. ಇದರಲ್ಲಿ ಕರ್ನಾಟಕದ ಪಾಲು ಎಷ್ಟು?
ಎ) ಶೇ 6 ಬಿ) ಶೇ 9 ಸಿ) ಶೇ 12 ಡಿ) ಶೇ 3

ಉತ್ತರ: ಎ

2) ನಮ್ಮ ರಾಜ್ಯದ ಒಟ್ಟು ವಿಸ್ತೀರ್ಣ 1,91,791 ಚದರ ಕಿಲೋಮೀಟರ್. ಇದು ಭಾರತದ ಒಟ್ಟು ಭೌಗೋಳಿಕ ವಿಸ್ತೀರ್ಣದ ಶೇ 5.83 ಭಾಗ. ಹಾಗಾದರೆ ನಮ್ಮ ರಾಜ್ಯದ ವಿಸ್ತೀರ್ಣವನ್ನು ಮೈಲುಗಳಲ್ಲಿ ತಿಳಿಸಿ.
ಎ) 74,122 ಚದರ ಮೈಲಿಗಳು ಬಿ) 84,822 ಚದರ ಮೈಲಿಗಳು
ಸಿ) 94,822 ಚದರ ಮೈಲಿಗಳು ಡಿ) 64,722 ಚದರ ಮೈಲಿಗಳು

ಉತ್ತರ:ಎ

3) ಕರ್ನಾಟಕವು ಎಷ್ಟು ರಾಜ್ಯಗಳೊಂದಿಗೆ ತನ್ನ ಗಡಿಯನ್ನು ಹೊಂದಿದೆ?
ಎ) 6 ಬಿ) 8 ಸಿ) 5 ಡಿ) 7

ಉತ್ತರ: ಎ

4) ಕರ್ನಾಟಕದಲ್ಲಿ ಮೊದಲು ಎಲ್ಲಿ ಸೂರ್ಯೋದಯವನ್ನು ನೋಡಬಹುದು?
ಎ) ಕಾರವಾರ ಬಿ) ಉಡುಪಿ ಸಿ) ಮುಳಬಾಗಿಲು ಡಿ) ಔರಾದ್

ಉತ್ತರ:ಸಿ

5) ಹೊಂದಿಸಿ ಬರೆಯಿರಿ.

ಪಟ್ಟಿ-1	ಪಟ್ಟಿ-2
ಎ) ಛಾಯಾ ಭಗವತಿ ಜಲಪಾತ	1) ವೇದಾವತಿ ನದಿ
ಬಿ) ಮುಳಾ, ಮುಠಾ ಉಪನದಿಗಳು	2) ಕಾವೇರಿ ನದಿ
ಸಿ) ಮಾರಿಕಣಿವೆ/ವಾಣಿವಿಲಾಸ ಸಾಗರ	3) ಭೀಮಾ ನದಿ
ಡಿ) ಗಗನಚುಕ್ಕಿ/ಭರಚುಕ್ಕಿ ಜಲಪಾತಗಳು	4) ಕೃಷ್ಣಾ ನದಿ

ಉತ್ತರ ಸಂಕೇತಗಳು:-
ಎ) ಎ-1 ಬಿ-3 ಸಿ-4 ಡಿ-2 ಬಿ) ಎ-4 ಬಿ-1 ಸಿ-3 ಡಿ-2
ಸಿ) ಎ-3 ಬಿ-1 ಸಿ-4 ಡಿ-2 ಡಿ) ಎ-4 ಬಿ-3 ಸಿ-1 ಡಿ-2

ಉತ್ತರ: ಡಿ. (ವಿವರಣೆ: ಕಾವೇರಿ ನದಿಯು ಶಿವನಸಮುದ್ರ ದ್ವೀಪದ ಎರಡೂ ಕಡೆಯಿಂದ ಹರಿದು ಬಂದು ಸುಮಾರು 100 ಮೀಟರ್ ಎತ್ತರದಿಂದ ಧುಮ್ಮಿಕ್ಕುತ್ತದೆ. ಪಶ್ಚಿಮದಿಂದ ಧುಮ್ಮಿಕ್ಕಿ ಸೃಷ್ಟಿಸುವ ಜಲಪಾತಕ್ಕೆ ಗಗನಚುಕ್ಕಿ ಎಂತಲೂ ಪೂರ್ವದಿಂದ ಧುಮ್ಮಿಕ್ಕಿ ಹರಿಯುವ ಜಲಪಾತಕ್ಕೆ ಭರಚುಕ್ಕಿ ಎಂತಲೂ ಕರೆಯುತ್ತಾರೆ. ಚಿತ್ರದುರ್ಗ ಜಿಲ್ಲೆಯ ಹಿರಿಯೂರಿನ ಸಮೀಪ ವೇದಾವತಿ ನದಿಗೆ ಅಡ್ಡಲಾಗಿ ಮಾರಿಕಣಿವೆ ಅಣೆಕಟ್ಟನ್ನು ಕಟ್ಟಲಾಗಿದೆ. ಆ ಅಣೆಕಟ್ಟಿನ ನಿಜವಾದ ಹೆಸರು ವಾಣಿವಿಲಾಸ ಸಾಗರ. ಇದು ಸರ್ ಎಂ. ವಿಶ್ವೇಶ್ವರಯ್ಯನವರು ಕಟ್ಟಿದ ಮೊದಲ ಅಣೆಕಟ್ಟು)

6) ಹೊಂದಿಸಿ ಬರೆಯಿರಿ.

ಪಟ್ಟಿ-1	ಪಟ್ಟಿ-2
ಎ) ಲಿಟ್ಟೋರಲ್ ಸಸ್ಯವರ್ಗ(Littoral)	1) ದಾವಣಗೆರೆ, ಬಳ್ಳಾರಿ, ಬೀದರ್
ಬಿ) ದಕ್ಷಿಣ ಉಷ್ಣವಲಯದ ಮೌಂಟೇನ್ ಸಸ್ಯವರ್ಗ	2) ಕರಾವಳಿ ಭಾಗ
ಸಿ) ಕುರುಚಲು ಸಸ್ಯವರ್ಗ	3) ಕುದುರೆಮುಖ, ಬಿಳಿಗಿರಿ ರಂಗನ ಬೆಟ್ಟ
ಡಿ) ನಿತ್ಯ ಹರಿದ್ವರ್ಣ ಸಸ್ಯವರ್ಗ	4) ಪಶ್ಚಿಮ ಘಟ್ಟಗಳು

ಉತ್ತರ ಸಂಕೇತಗಳು:-
ಎ) ಎ-1 ಬಿ-3 ಸಿ-4 ಡಿ-2 ಬಿ) ಎ-2 ಬಿ-3 ಸಿ-1 ಡಿ-4
ಸಿ) ಎ-3 ಬಿ-1 ಸಿ-4 ಡಿ-2 ಡಿ) ಎ-2 ಬಿ-1 ಸಿ-3 ಡಿ-4

ಉತ್ತರ:ಬಿ

7) ಈ ಕೆಳಗಿನ ಯಾವ ಭಾಗದಲ್ಲಿ ಅತಿ ಹೆಚ್ಚು (ಹತ್ತಿ ಬೆಳೆಯುವ) ಕಪ್ಪು ಮಣ್ಣಿನ ಭೂಮಿ ಇದೆ?
ಎ) ಉತ್ತರ ಕರ್ನಾಟಕದ ಪ್ರಸ್ಥಭೂಮಿ ಬಿ) ದಕ್ಷಿಣ ಕರ್ನಾಟಕದ ಪ್ರಸ್ಥಭೂಮಿ
ಸಿ) ಕರಾವಳಿ ಪ್ರದೇಶ ಡಿ) ಮೇಲಿನ ಎಲ್ಲಿಯೂ ಕಪ್ಪು ಮಣ್ಣನ್ನು ನೋಡಲು ಸಾಧ್ಯವಿಲ್ಲ

ಉತ್ತರ:ಎ

8) ಕರ್ನಾಟಕದಲ್ಲಿ ಶೇಷ ಬೆಟ್ಟ(ರೆಸಿಡ್ಯೂಯಲ್ ಮೌಂಟೇನ್)ಗಳನ್ನು ಎಲ್ಲಿ ನೋಡಲು ಸಾಧ್ಯ?
ಎ) ಉತ್ತರ ಕರ್ನಾಟಕದ ಪ್ರಸ್ಥಭೂಮಿ ಬಿ) ದಕ್ಷಿಣ ಕರ್ನಾಟಕದ ಪ್ರಸ್ಥಭೂಮಿ
ಸಿ) ಕರಾವಳಿ ಪ್ರದೇಶ ಡಿ) ಮಧ್ಯ ಕರ್ನಾಟಕದ ಪ್ರಸ್ಥಭೂಮಿ

ಉತ್ತರ: ಡಿ

9) ಕರ್ನಾಟಕದಲ್ಲಿ ಯಾವ ಜಿಲ್ಲೆಯನ್ನು ಜಲಪಾತಗಳ ಜಿಲ್ಲೆ ಎಂದು ಕರೆಯಲಾಗಿದೆ?
ಎ) ದಕ್ಷಿಣ ಕನ್ನಡ ಬಿ) ಉತ್ತರ ಕನ್ನಡ ಸಿ) ಕೊಡಗು ಡಿ) ಚಾಮರಾಜನಗರ

ಉತ್ತರ: ಬಿ

10) ದೇಶದ ಮೊದಲ ಚಿಟ್ಟೆ ಉದ್ಯಾನವನ್ನು ಎಲ್ಲಿ ಸ್ಥಾಪಿಸಲಾಯಿತು?
ಎ) ನಂದನ ಕಾನನ ರಾಷ್ಟ್ರೀಯ ಉದ್ಯಾನ ಬಿ) ಬಂಡಿಪುರ ರಾಷ್ಟ್ರೀಯ ಉದ್ಯಾನ
ಸಿ) ಗಿರ್ ರಾಷ್ಟ್ರೀಯ ಉದ್ಯಾನ ಡಿ) ಕಾಜೀರಂಗ ರಾಷ್ಟ್ರೀಯ ಉದ್ಯಾನವನ

ಉತ್ತರ:ಬಿ

11) ಕೆಳಗಿನ ಹೇಳಿಕೆಗಳನ್ನು ಗಮನಿಸಿ
1) ನಮ್ಮ ರಾಜ್ಯದ ಒಟ್ಟು ವಿಸ್ತೀರ್ಣ 1,91,791 ಚದರ ಕಿಲೋಮೀಟರ್. ಇದು ಭಾರತದ ಒಟ್ಟು ಭೌಗೋಳಿಕ ವಿಸ್ತೀರ್ಣದ ಶೇ 5.83 ಭಾಗ.
2) ಕರ್ನಾಟಕವು ದೇಶದಲ್ಲಿನ ರಾಜ್ಯವಾರು ಜನಸಂಖ್ಯೆಯಲ್ಲಿ ಒಂಬತ್ತನೆಯ ಸ್ಥಾನದಲ್ಲಿದೆ. ನಮ್ಮ ರಾಜ್ಯದಲ್ಲಿ ಒಟ್ಟು 30 ಜಿಲ್ಲೆಗಳಿವೆ.
3) ನಮ್ಮ ದೇಶದಲ್ಲಿರುವ ಒಟ್ಟು ಆನೆಗಳ ಪೈಕಿ ಶೇ 25ರಷ್ಟು ನಮ್ಮ ರಾಜ್ಯದಲ್ಲಿವೆ. 2017ರ ಸಾಲಿನಲ್ಲಿ ಕೈಗೊಂಡ ಆನೆ ಗಣತಿಯ ಪ್ರಕಾರ ಕರ್ನಾಟಕದಲ್ಲಿ 6049 ಆನೆಗಳಿವೆ.
4) ದೇಶದಲ್ಲಿ ಹೆಚ್ಚಿನ ಸಂಖ್ಯೆಯ ಹುಲಿಗಳನ್ನು ಹೊಂದಿರುವ 2ನೇ ರಾಜ್ಯ ಕರ್ನಾಟಕ. 2017ರ ಹುಲಿ ಗಣತಿಯ ಪ್ರಕಾರ ನಮ್ಮ ರಾಜ್ಯದಲ್ಲಿ 524 ಹುಲಿಗಳಿವೆ. ನಮ್ಮ ರಾಜ್ಯವು 5 ಹುಲಿ ಸಂರಕ್ಷಣಾ ಪ್ರದೇಶಗಳನ್ನು (Tiger Reserves)ಹೊಂದಿದೆ.
ಮೇಲಿನ ಹೇಳಿಕೆಗಳಲ್ಲಿ ಯಾವೆಲ್ಲಾ ಹೇಳಿಕೆಗಳು ಸರಿಯಾಗಿವೆ?
ಎ) ಹೇಳಿಕೆ 1 ರಿಂದ 4ರತನಕ ಎಲ್ಲವೂ ಸರಿಯಾಗಿದೆ
ಬಿ) ಹೇಳಿಕೆ 1, 3 ಮತ್ತು 4 ಮಾತ್ರ ಸರಿಯಾಗಿದೆ
ಸಿ) ಹೇಳಿಕೆ 1 ರಿಂದ 3ರ ತನಕ ಮಾತ್ರ ಸರಿಯಾಗಿದೆ
ಡಿ) ಮೇಲಿನ ಯಾವ ಹೇಳಿಕೆಯೂ ಸರಿಯಾಗಿಲ್ಲ

ಉತ್ತರ:ಬಿ

12) ಹೊಂದಿಸಿ ಬರೆಯಿರಿ.

ಪಟ್ಟಿ-1	ಪಟ್ಟಿ-2
ಎ) ಕ್ಯಾಸಲ್ ರಾಕ್ ಸಂರಕ್ಷಿತ ಅರಣ್ಯ	1) ಜೊಯಿಡಾ (ಉ.ಕ)
ಬಿ) ಬಡಾಳ ಸಂರಕ್ಷಿತ ಅರಣ್ಯ	2) ಕುಮಟಾ (ಉ.ಕ)
ಸಿ) ಚೊರ್ಲಾ ಸಂರಕ್ಷಿತ ಅರಣ್ಯ	3) ಕೊಡಗು
ಡಿ) ಪುಷ್ಪಗಿರಿ	4) ಖಾನಾಪುರ (ಬೆಳಗಾವಿ)

ಉತ್ತರ ಸಂಕೇತಗಳು:-
ಎ) ಎ-1 ಬಿ-3 ಸಿ-4 ಡಿ-2 ಬಿ) ಎ-2 ಬಿ-3 ಸಿ-1 ಡಿ-4
ಸಿ) ಎ-1 ಬಿ-2 ಸಿ-4 ಡಿ-3 ಡಿ) ಎ-2 ಬಿ-1 ಸಿ-3 ಡಿ-4

ಉತ್ತರ: ಸಿ

13) ಇವುಗಳಲ್ಲಿ ಯಾವುದು ಕಾಳಿ ನದಿಯ ಉಪನದಿಯಾಗಿಲ್ಲ?
ಎ) ಪಾಂಡರಿ ಬಿ) ಕಾನೇರಿ ಸಿ) ವಾಕಿ ಡಿ) ತಾರಕ

ಉತ್ತರ: ಡಿ(ವಿವರಣೆ: ತಾರಕ ಇದು ಕಪಿಲಾ ನದಿಯ ಉಪನದಿಯಾಗಿದೆ)

14) ಕರ್ನಾಟಕವು ಯಾವ ಅಕ್ಷಾಂಶ ಮತ್ತು ರೇಖಾಂಶದ ನಡುವೆ ಬರುತ್ತದೆ?
ಎ) $11^0 35'$ ನಿಂದ $18^0 30'$ ಉತ್ತರ ಅಕ್ಷಾಂಶ
$74^0 5'$ ನಿಂದ $78^0 40'$ ಪೂರ್ವ ರೇಖಾಂಶ
ಬಿ) $21^0 35'$ ನಿಂದ $28^0 30'$ ದಕ್ಷಿಣ ಅಕ್ಷಾಂಶ ಮತ್ತು
$79^0 5'$ ನಿಂದ $82^0 40'$ ಪಶ್ಚಿಮ ರೇಖಾಂಶ
ಸಿ) $12^0 35'$ ನಿಂದ $19^0 30'$ ಉತ್ತರ ಅಕ್ಷಾಂಶ
$79^0 5'$ ನಿಂದ $88^0 40'$ ಪೂರ್ವ ರೇಖಾಂಶ
ಡಿ) $11^0 35'$ ನಿಂದ $18^0 30'$ ಪೂರ್ವ ಅಕ್ಷಾಂಶ ಮತ್ತು
$74^0 5'$ ನಿಂದ $78^0 40'$ ಉತ್ತರ ರೇಖಾಂಶ

ಉತ್ತರ:ಎ

15) ಓಂ ಬೀಚ್, ರವೀಂದ್ರನಾಥ ಟ್ಯಾಗೋರ್ ಸಮುದ್ರ ತೀರ(ಬೀಚ್), ಕೂಡ್ಲೆ ಬೀಚ್, ಮುರ್ಡೇಶ್ವರ ಬೀಚ್ ಮತ್ತಿತರ ಬೀಚ್‌ಗಳು ಯಾವ ಜಿಲ್ಲೆಯಲ್ಲಿವೆ?
ಎ) ಉತ್ತರ ಕನ್ನಡ ಬಿ) ದಕ್ಷಿಣ ಕನ್ನಡ ಜಿಲ್ಲೆ
ಸಿ) ಉಡುಪಿ ಜಿಲ್ಲೆ ಡಿ) ಮೇಲಿನ ಯಾವುದರಲ್ಲಿಯೂ ಇಲ್ಲ.

ಉತ್ತರ:ಎ

16) ಕೆಳಗಿನ ಹೇಳಿಕೆಗಳನ್ನು ಗಮನಿಸಿ
1) ಭಾರತದಲ್ಲಿ ಚಿನ್ನ ತೆಗೆಯುವ ರಾಜ್ಯ ಕರ್ನಾಟಕ. ರಾಜ್ಯದ ಕೋಲಾರದ ಸುತ್ತಮುತ್ತ 53 ಪುರಾತನ ಚಿನ್ನದ ಗುಂಡಿಗಳು ಪತ್ತೆಯಾಗಿತ್ತು. ಅಂದರೆ ಪ್ರಾಚೀನ ಕಾಲದಿಂದಲೂ ಕರ್ನಾಟಕ ಚಿನ್ನ ತೆಗೆಯಲಾಗುತ್ತಿತ್ತು.
2) ಈವರೆಗೆ ಕೋಲಾರದ ಗೋಲ್ಡ್ ಫೀಲ್ಡ್‌ನಿಂದ 800 ಟನ್ ಚಿನ್ನ ತೆಗೆಯಲಾಗಿದೆ. ಆದರೆ ಪ್ರಸ್ತುತ ಕೋಲಾರದಲ್ಲಿ ಚಿನ್ನ ತೆಗೆಯುತ್ತಿಲ್ಲ.
3) ಕರ್ನಾಟಕದ ರಾಯಚೂರು ಜಿಲ್ಲೆಯಲ್ಲಿರುವ ಹಟ್ಟಿ ಚಿನ್ನದ ಗಣಿಯಲ್ಲಿ ಚಿನ್ನವನ್ನು ತೆಗೆಯಲಾಗುತ್ತದೆ. 5.5 ಲಕ್ಷ ಟನ್ ಚಿನ್ನದ ಅದಿರನ್ನು ಮೇಲಕ್ಕೆತ್ತಿ ಸುಮಾರು 1500 ಕೆ.ಜಿ ಚಿನ್ನ ತೆಗೆಯಲಾಗುತ್ತಿದೆ. ಕೋವಿಡ್‌ಗಿಂತ ಮೊದಲು 2018-19ರಲ್ಲಿ ಹಟ್ಟಿ ಗೋಲ್ಡ್ ಮೈನ್ಸ್ ₹ 70 ಕೋಟಿ ಲಾಭ ಮಾಡಿತ್ತು.
4) ಮುಂದಿನ 60 ವರ್ಷಗಳ ಕಾಲ ಕೆಲಸ ಮಾಡುವಷ್ಟು ಚಿನ್ನದ ಸಂಗ್ರಹ ರಾಯಚೂರು ಜಿಲ್ಲೆಯ ಹಟ್ಟಿ ಸುತ್ತಮುತ್ತ ಇದೆ.
ಮೇಲಿನ ಹೇಳಿಕೆಗಳಲ್ಲಿ ಯಾವೆಲ್ಲಾ ಹೇಳಿಕೆಗಳು ಸರಿಯಾಗಿವೆ?
ಎ) ಹೇಳಿಕೆ 1 ರಿಂದ 4ರತನಕ ಎಲ್ಲವೂ ಸರಿಯಾಗಿದೆ
ಬಿ) ಹೇಳಿಕೆ 1, 2 ಮತ್ತು 4 ಮಾತ್ರ ಸರಿಯಾಗಿದೆ
ಸಿ) ಹೇಳಿಕೆ 1, 2, 3ರ ಮಾತ್ರ ಸರಿಯಾಗಿದೆ
ಡಿ) ಮೇಲಿನ ಯಾವ ಹೇಳಿಕೆಯೂ ಸರಿಯಾಗಿಲ್ಲ.

ಉತ್ತರ:ಎ

17) ದೇಶದಲ್ಲಿಯೇ ಎರಡನೇ ಸ್ಕೂಲ್ ಆಫ್ ಮೈನಿಂಗ್ ಎಲ್ಲಿ ಆರಂಭವಾಗಲಿದೆ?
ಎ) ಕಲಬುರಗಿ ಬಿ) ಬಳ್ಳಾರಿ ಸಿ) ಚಾಮರಾಜನಗರ ಡಿ) ಕೋಲಾರ

ಉತ್ತರ: ಬಿ (ವಿವರಣೆ: ದೇಶದ ಎರಡನೇ ಸ್ಕೂಲ್ ಆಫ್ ಮೈನಿಂಗ್ ಬಳ್ಳಾರಿಯಲ್ಲಿ ಸುಮಾರು 50 ಎಕರೆ ಜಮೀನಿನಲ್ಲಿ ತೆರೆಯಲು ತೀರ್ಮಾನಿಸಲಾಗಿದೆ. ಈಗಾಗಲೇ ವಿಸ್ತೃತ ಯೋಜನಾ ವರದಿಯೂ(ಡಿಪಿಆರ್)ಸಿದ್ಧವಾಗಿದೆ. ಇಲ್ಲಿ ಗಣಿಗಾರಿಕೆ ನಿರ್ವಹಣೆ, ಮಾಲೀಕರು ಮತ್ತು ಕಾರ್ಮಿಕರಿಗೆ ತರಬೇತಿ ಹಾಗೂ ಭವಿಷ್ಯದಲ್ಲಿ ಉಂಟಾಗಬಹುದಾದ ಅನಾಹುತಗಳನ್ನು ತಪ್ಪಿಸಲು ಅಂತರರಾಷ್ಟ್ರೀಯ ಮಟ್ಟದ ತರಬೇತಿಯನ್ನು ನೀಡಲಾಗುವುದು)

ಮಾಹಿತಿ: **Spardha Bharati UPSC,** ಯೂಟ್ಯೂಬ್ ಚಾನೆಲ್

ನಾಗರಿಕ ಸೇವಾ ಮುಖ್ಯ ಪರೀಕ್ಷೆ



ಅಧ್ಯಯನ- ಅಭ್ಯಾಸ ಮುಖ್ಯ

ಪ್ರಶಾಂತ್ ಶ್ರೀನಿವಾಸ್

ದೇಶದ ಪ್ರತಿಷ್ಠಿತ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಕೇಂದ್ರ ಲೋಕಸೇವಾ ಆಯೋಗ ನಡೆಸುವ ನಾಗರಿಕ ಸೇವಾ ಪರೀಕ್ಷೆ ಪ್ರಮುಖವಾದದ್ದು. ಪ್ರತಿ ವರ್ಷ ಆಯೋಗ ನಡೆಸುವ ಈ ಪರೀಕ್ಷೆಯಲ್ಲಿ ಲಕ್ಷಾಂತರ ಆಕಾಂಕ್ಷಿಗಳು ತಮ್ಮ ಅದೃಷ್ಟ ಪರೀಕ್ಷೆ ಮಾಡುತ್ತಾರೆ. ಮೂರು ಹಂತಗಳಲ್ಲಿ ನಡೆಯುವ ಈ ಪರೀಕ್ಷೆಯಲ್ಲಿ ಎರಡನೇ ಹಂತವೇ ಮುಖ್ಯ ಪರೀಕ್ಷೆ. ಇದು ನಿರ್ಣಾಯಕ ಹಂತವೂ ಹೌದು. ಇದು, ಸಂದರ್ಶನಕ್ಕೆ ಅರ್ಹತೆ ನೀಡುವುದಷ್ಟೇ ಅಲ್ಲದೇ, ಐಎಎಸ್/ಐಪಿಎಸ್‌ನಂತಹ ಉನ್ನತ ಹುದ್ದೆಯನ್ನೂ ನಿರ್ಧಾರ ಮಾಡುವ ಮಹತ್ವಪೂರ್ಣ ಹಂತವೂ ಹೌದು.

ಈ ಮೊದಲು ಲೋಕಸೇವಾ ಆಯೋಗ ನಡೆಸಿದ್ದ ಪೂರ್ವಭಾವಿ ಪರೀಕ್ಷೆಯಲ್ಲಿ ತೇರ್ಗಡೆಯಾದ ಅಭ್ಯರ್ಥಿಗಳು ಮುಖ್ಯ ಪರೀಕ್ಷೆಗೆ ಹಾಜರಾಗಲು ಅರ್ಹತೆ ಪಡೆದಿರುತ್ತಾರೆ. ಈ ಅಭ್ಯರ್ಥಿಗಳು ಒಟ್ಟು 9 ಪತ್ರಿಕೆಗಳನ್ನು ಎದುರಿಸಬೇಕು. ಅವುಗಳೆಂದರೆ;

- ಎರಡು ಕಡ್ಡಾಯ ಭಾಷಾ ಪತ್ರಿಕೆ. ಅದರಲ್ಲಿ ಒಂದು ಇಂಗ್ಲಿಷ್ ಮತ್ತು ಮತ್ತೊಂದು ಪ್ರಾದೇಶಿಕ ಭಾಷೆ (ತಲಾ 300 ಅಂಕ). (ಕಡ್ಡಾಯ ಭಾಷೆ ಕೇವಲ ಅರ್ಹತಾ ಪತ್ರಿಕೆಗಳಾಗಿದ್ದು ಅವುಗಳ ಅಂಕಗಳನ್ನು ಅಂತಿಮವಾಗಿ ಪರಿಗಣಿಸುವುದಿಲ್ಲ)
- ಪ್ರಬಂಧ (250 ಅಂಕ)
- ಸಾಮಾನ್ಯ ಅಧ್ಯಯನ- ಒಟ್ಟು 4 ಪತ್ರಿಕೆಗಳು (ತಲಾ 250 ಅಂಕ)
- ಐಚ್ಛಿಕ ವಿಷಯ- 2 ಪತ್ರಿಕೆಗಳು (ತಲಾ 250 ಅಂಕ)

ಪರಿಗಣನೆಗೆ ಇರುವ ಒಟ್ಟು ಅಂಕಗಳು - 1750

ಎಲ್ಲಾ 9 ಪತ್ರಿಕೆಗಳು ವಿವರಣಾತ್ಮಕ ಪತ್ರಿಕೆಗಳಾಗಿದ್ದು, ಇವು ಅಭ್ಯರ್ಥಿಗಳ ಬುದ್ಧಿಶಕ್ತಿಯನ್ನು ಅವರ ಬರವಣಿಗೆಯ ಸಾಮರ್ಥ್ಯದ ಮೂಲಕ ಅಳೆಯಲಾಗುತ್ತದೆ. ಹಾಗಾಗಿ ಈ ಹಂತವನ್ನು ಜಯಿಸಬೇಕಾದರೆ ಕೇವಲ ಅಧ್ಯಯನದಿಂದ ಮಾತ್ರ ಸಾಧ್ಯವಾಗದು. ಬದಲಿಗೆ ಸುದೀರ್ಘ ಬರವಣಿಗೆಯ ಅಭ್ಯಾಸವೂ ಬೇಕು.

> ಕೇಂದ್ರ ಲೋಕಸೇವಾ ಆಯೋಗದ ನಾಗರಿಕ ಸೇವೆಗಳ ಮುಖ್ಯಪರೀಕ್ಷೆ 2022ರ ಜನವರಿ 7 ರಿಂದ 16ರವರೆಗೆ ನಡೆಯಲಿದೆ. ಈ ಹಿನ್ನೆಲೆಯಲ್ಲಿ ಪರೀಕ್ಷೆ ಎದುರಿಸಲು ಬೇಕಾದ ಅಗತ್ಯ ಸಿದ್ಧತೆ ಕುರಿತ ವಿವರ ಇಲ್ಲಿದೆ.

ಪ್ರಬಂಧ


ಮೂರು ಗಂಟೆಗಳಲ್ಲಿ 1000 ದಿಂದ 1200 ಪದಗಳ ಮಿತಿಯಲ್ಲಿ ತಲಾ ಎರಡು ಪ್ರಬಂಧಗಳನ್ನು ಬರೆಯಬೇಕು. ಪ್ರಬಂಧ ಪ್ರಶ್ನೆಪತ್ರಿಕೆ ಅಭ್ಯರ್ಥಿಯ ಆಲೋಚನಾ ಕ್ರಮವನ್ನು ಇಡಿಯಾಗಿ ಮತ್ತು ಬಿಡಿಯಾಗಿ ಅಳೆಯುವ ಪ್ರಮುಖ ಪತ್ರಿಕೆ. ಪ್ರಬಂಧ ರಚನೆಗೆ ಪ್ರಬುದ್ಧ ವಿಚಾರಗಳನ್ನು, ಸುಲಲಿತವಾಗಿ ಮಂಡಿಸುವ ಚಾಕಚಕ್ಯತೆ ಅಗತ್ಯ. ಮುಂದೊಂದು ದಿನ ದೇಶದ ಉನ್ನತ ಹುದ್ದೆಯನ್ನು ಅಲಂಕರಿಸುವ ಅಭ್ಯರ್ಥಿಗಳ ಮನೋಧೋರಣೆ, ನಾವೀನ್ಯತೆ, ಹೊಣೆಗಾರಿಕೆ, ವಿಚಾರ ಸ್ಪಷ್ಟತೆಯಂತಹ ಗುಣಗಳನ್ನು ಪ್ರಬಂಧ ನಿರೀಕ್ಷಿಸುತ್ತದೆ ಮತ್ತು ಪರೀಕ್ಷಿಸುತ್ತದೆ. ಅಭ್ಯರ್ಥಿಗಳು ಪ್ರಬಂಧ ರಚನೆಗೆ ತನ್ನದೇ ಆದ ಕೌಶಲವನ್ನು ಬೆಳೆಸಿಕೊಳ್ಳಬೇಕು. ಪ್ರಬಂಧಕ್ಕೆಂದೇ ಪ್ರತ್ಯೇಕವಾದ ಅಣಕು ಪರೀಕ್ಷೆಗಳನ್ನು ಬರೆದು ಅಭ್ಯಸಿಸುವುದು ಬಹಳ ಮುಖ್ಯ.

ಸಾಮಾನ್ಯ ಅಧ್ಯಯನ

ಹೆಸರೇ ಸೂಚಿಸುವ ಹಾಗೆ ಇಲ್ಲಿಯ ವಿಷಯಗಳಿಗೆ ಸಾಮಾನ್ಯ ಅಧ್ಯಯನಕ್ಕೆ ತಕ್ಕುದಾದ ಅರ್ಥೈಸುವಿಕೆ ಮಾತ್ರ ಬೇಕಿದೆ. ವಿಷಯದ ಆಳಕ್ಕಿಂತ ಇಲ್ಲಿ ವಿಸ್ತಾರ ಹಾಗೂ ವಿಭಿನ್ನ ಆಯಾಮಗಳು ಮುಖ್ಯ. ಇತಿಹಾಸ, ಭೂಗೋಳ, ಸಮಾಜಶಾಸ್ತ್ರ, ರಾಜಕೀಯ ಮತ್ತು ಆಡಳಿತ, ಅಂತರರಾಷ್ಟ್ರೀಯ ಸಂಬಂಧಗಳು, ಆರ್ಥಿಕತೆ, ಪರಿಸರ, ಭದ್ರತೆ, ವಿಜ್ಞಾನ ಮತ್ತು ತಂತ್ರಜ್ಞಾನ ಇವು ಸಾಮಾನ್ಯ ಅಧ್ಯಯನದ ಮೊದಲ 3 ಪತ್ರಿಕೆಗಳಲ್ಲಿರುವ ವಿಷಯಗಳು.

ಸಾಮಾನ್ಯ ಅಧ್ಯಯನದ ಪತ್ರಿಕೆ-4ರಲ್ಲಿ 'ನೈತಿಕತೆ ಮತ್ತು ಸಮಗ್ರತೆ'ಯ ವಿಷಯಗಳಿರುತ್ತವೆ. ಇದು ಅಭ್ಯರ್ಥಿಗಳಲ್ಲಿ ಸಕಾರಾತ್ಮಕ ಮೌಲ್ಯಗಳು ಹಾಗೂ ತಮಗೆ ಸಿಗುವ ಉನ್ನತ ಹುದ್ದೆಗಳನ್ನು ಸಮರ್ಥವಾಗಿ, ನ್ಯಾಯಬದ್ಧವಾಗಿ ನಡೆಸಿಕೊಂಡು ಹೋಗುವ ಸಾಮರ್ಥ್ಯವಿದೆಯೇ ಎಂಬುದನ್ನು ಒರೆಗೆ ಹಚ್ಚಿ ನೋಡುತ್ತದೆ. ನಾಗರಿಕ ಸೇವೆ, ಅಭ್ಯರ್ಥಿಯಲ್ಲಿ ಪ್ರಾಮಾಣಿಕತೆ, ಹೊಣೆಗಾರಿಕೆ, ಪಾರದರ್ಶಕತೆಯಂತಹ ಗುಣಗಳನ್ನು ಬಯಸುತ್ತದೆ. ಇಂಥ ವಿಷಯಗಳನ್ನು ಅಭ್ಯರ್ಥಿಗಳಲ್ಲಿ ಹುಡುಕುವ ಪ್ರಯತ್ನ ಮಾಡುತ್ತದೆ ಈ ಪತ್ರಿಕೆ.

ಒಟ್ಟಾರೆ ಸಾಮಾನ್ಯ ಅಧ್ಯಯನ ಪತ್ರಿಕೆಗಳು ಅಭ್ಯರ್ಥಿಗಳ ಗ್ರಹಿಕೆ ಹಾಗೂ ಗ್ರಹಿಸಿದ್ದನ್ನು ಸ್ಪಷ್ಟವಾಗಿ ಅಳವಡಿಸಿಕೊಂಡು ನಡೆಯುವ ಅವರ ಮನೋ ಇರಾದೆಯನ್ನು ಸೂಕ್ಷ್ಮವಾಗಿ ಅಳೆಯುತ್ತವೆ. ಇಲ್ಲಿ ಅಭ್ಯರ್ಥಿಗಳಿಗೆ ವಿಷಯ ಗ್ರಹಿಕೆಯ ಜೊತೆಗೆ ಬಹು ದೊಡ್ಡ ಸಮಸ್ಯೆ ಎಂದರೆ ಸಮಯದ ಅಭಾವ. ಪ್ರತಿ ಪತ್ರಿಕೆಗೂ 3 ಗಂಟೆ ಮೀಸಲಿದ್ದು 150 ರಿಂದ 250 ಪದಗಳ ಮಿತಿಯಲ್ಲಿ 20 ಪ್ರಶ್ನೆಗಳನ್ನು ಸುಮಾರು 4,000 ಪದಗಳಲ್ಲಿ ಉತ್ತಮವಾಗಿ ವಿಷಯವನ್ನು ಮಂಡಿಸಬೇಕು. ಇದು ಅಷ್ಟು ಸುಲಭದ ಕೆಲಸವಲ್ಲ. ಇಲ್ಲಿಯೂ ಅಭ್ಯರ್ಥಿಗಳ ಕೈ ಹಿಡಿಯುವುದು ಅಣಕು ಪರೀಕ್ಷೆಗಳು. ಪ್ರತಿ ಪತ್ರಿಕೆಗೆ ಕನಿಷ್ಠ 6 ರಿಂದ 8 ಅಣಕು ಪರೀಕ್ಷೆ ಬರೆದು ಅಭ್ಯಸಿಸದೆ ಹೋದರೆ, ಯುಪಿಎಸ್‌ಸಿ ಪರಿಕ್ಷಾ ಸಿದ್ಧತೆ ಅಪೂರ್ಣವಾಗುತ್ತದೆ.



ಐಚ್ಛಿಕ ವಿಷಯ

ಸಾಮಾನ್ಯ ಅಧ್ಯಯನ ಪತ್ರಿಕೆಗಳು ಹಲವು ವಿಷಯಗಳ ವಿಸ್ತಾರದ ಪರಿಚಯವನ್ನು ಮಾಡಿಕೊಟ್ಟರೆ, ಐಚ್ಛಿಕ ವಿಷಯವು ಆಯಾ ಕ್ಷೇತ್ರದ ಆಳವನ್ನು ಪರಿಚಯಿಸುತ್ತದೆ. ಕೇಂದ್ರ ಲೋಕಸೇವಾ ಆಯೋಗವು ಇತಿಹಾಸ, ಭೌತಶಾಸ್ತ್ರ, ಕಾನೂನು, ಸಾಹಿತ್ಯ ಹೀಗೆ ಸುಮಾರು 26 ವಿಷಯಗಳನ್ನು ಐಚ್ಛಿಕ ವಿಷಯವನ್ನಾಗಿ ಆರಿಸಿಕೊಳ್ಳಲು ಅವಕಾಶ ಮಾಡಿಕೊಡುತ್ತದೆ. ಅಭ್ಯರ್ಥಿಗಳು ಪದವಿಯ ವಿಷಯವನ್ನೇ ಆರಿಸಿಕೊಳ್ಳಬೇಕೆಂದಿಲ್ಲ. ಉದಾಹರಣೆಗೆ ಮೆಕ್ಯಾನಿಕಲ್ ಎಂಜಿನಿಯರ್ ಪದವೀಧರರು ಆಸಕ್ತಿ ಇದ್ದರೆ ಕನ್ನಡ ಸಾಹಿತ್ಯವನ್ನು ಆರಿಸಿಕೊಂಡು ಬರೆಯಬಹುದು. ಒಂದೇ ಐಚ್ಛಿಕ ವಿಷಯದ 2 ಪತ್ರಿಕೆಗಳನ್ನು ಅಭ್ಯರ್ಥಿಗಳು ಎದುರಿಸಬೇಕು. ಇಲ್ಲಿಯೂ ಅಭ್ಯರ್ಥಿಗಳು ಅಧ್ಯಯನ ನಡೆಸುವುದರ ಜೊತೆಗೆ ದೊಡ್ಡಮಟ್ಟದಲ್ಲಿ ಅಣುಕು ಪರೀಕ್ಷೆಯನ್ನು ಬರೆದೇ ಅಭ್ಯಾಸ ಮಾಡಬೇಕಿದೆ.

ಐದು ದಿನಗಳ ಕಾಲ ನಡೆಯುವ 9 ಪತ್ರಿಕೆಗಳ ಮುಖ್ಯ ಪರೀಕ್ಷೆಯು ಅಭ್ಯರ್ಥಿಯ ಬುದ್ಧಿಗಷ್ಟೇ ಅಲ್ಲದೇ, ಅವರ ದೈಹಿಕ, ಮಾನಸಿಕ ಹಾಗೂ ಭಾವನಾ ಶಕ್ತಿಗಳಿಗೂ ದೊಡ್ಡ ಸವಾಲಾಗಿರುತ್ತದೆ. ಹಾಗಾಗಿ ಇವೆಲ್ಲವನ್ನೂ ಎದುರಿಸಿ ಮುನ್ನುಗ್ಗುವವರು ಮಾತ್ರ ಸಂದರ್ಶನದ ಹಂತಕ್ಕೆ ತಲುಪುವಲ್ಲಿ ಯಶಸ್ವಿಯಾಗುತ್ತಾರೆ.

(ಲೇಖಕರು: ಡೈರೆಕ್ಟರ್ ಅಕಾಡೆಮಿಕ್, ಇಂಡಿಯಾ ಫಾರ್ ಐಎಎಸ್ ಅಕಾಡೆಮಿ, ಬೆಂಗಳೂರು)

ಅಭ್ಯರ್ಥಿಗಳಿಗೆ ಟಿಪ್ಸ್

- ಪಠ್ಯಕ್ರಮದ ಮೇಲೆ ಹಿಡಿತ
- ಹಿಂದಿನ ವರ್ಷಗಳ ಪ್ರಶ್ನೆಗಳ ಪರಿಚಯ ಅತ್ಯಗತ್ಯ
- ಪ್ರತಿದಿನದ ವಿದ್ಯಮಾನವನ್ನು ಗಮನಿಸುವುದು. ಈ ಕಾರ್ಯಕ್ಕೆ ದಿನಪತ್ರಿಕೆ ಓದುವುದು ಅತ್ಯಂತ ಸೂಕ್ತ
- ಪಠ್ಯಕ್ರಮದ ಎಲ್ಲಾ ವಿಷಯಗಳಿಗೂ ಅಚ್ಚುಕಟ್ಟಾಗಿ ಟಿಪ್ಪಣಿ ಮಾಡಿಟ್ಟುಕೊಳ್ಳಬೇಕು.
- ಸಾಧ್ಯವಾದಷ್ಟು ಹೆಚ್ಚು ಅಣಕು ಪರೀಕ್ಷೆಗಳನ್ನು ಬರೆಯುವುದು ಒಳ್ಳೆಯದು.
- ಆಗಾಗ ಸೂಕ್ತ ಮಾರ್ಗದರ್ಶಕರ ಸಲಹೆಗಳನ್ನು ಪಡೆಯಬೇಕು.
- ನಿರಂತರ ಅಧ್ಯಯನ/ಪುನರ್‌ಮನನ ಬಹಳ ಮುಖ್ಯ.
- ನಕಾರಾತ್ಮಕ ಆಲೋಚನೆಗಳಿಂದ ದೂರ ಇರುವುದು
- ಸಾಮಾಜಿಕ ಮಾಧ್ಯಮಗಳ ಸೀಮಿತ ಬಳಕೆ
- ಎಲ್ಲದಕ್ಕಿಂತ ಹೆಚ್ಚಾಗಿ ಆರೋಗ್ಯದ ಮೇಲಿನ ಗಮನ- ಯೋಗ, ಧ್ಯಾನ ಮುಂತಾದ ಚಟುವಟಿಕೆ ಸಿದ್ಧತೆಯ ಭಾಗವಾಗಬೇಕು.

ಪ್ರಜಾವಾಣಿ ಉದ್ಯೋಗ ವಾರ್ತೆ

ಎಸ್‌ಬಿಐನಲ್ಲಿ ಸಿಬಿಒ ಹುದ್ದೆಗಳು

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ) ದಲ್ಲಿ ಖಾಲಿ ಇರುವ 1226 ಸರ್ಕಲ್ ಬೇಸ್ಡ್ ಆಫೀಸರ್ (ಸಿಬಿಒ) ಹುದ್ದೆಗಳ ನೇಮಕಾತಿಗೆ ಅರ್ಜಿ ಆಹ್ವಾನಿಸಲಾಗಿದೆ. ಕರ್ನಾಟಕದಲ್ಲಿ 278 ಹುದ್ದೆಗಳು ಖಾಲಿ ಇವೆ. ಆಸಕ್ತರು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು.

- **ಹುದ್ದೆ:** ಸರ್ಕಲ್ ಬೇಸ್ಡ್ ಆಫೀಸರ್
- **ಹುದ್ದೆಗಳ ಸಂಖ್ಯೆ:** 1226
- **ವಿದ್ಯಾರ್ಹತೆ:** ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಯಾವುದೇ ವಿಷಯದಲ್ಲಿ ಪದವಿ ಪಡೆದಿರಬೇಕು.
- **ವಯೋಮಿತಿ:** ಅರ್ಜಿ ಸಲ್ಲಿಸ ಬಯಸುವ ಅಭ್ಯರ್ಥಿಗಳಿಗೆ ಕನಿಷ್ಠ 21 ವರ್ಷ, ಗರಿಷ್ಠ 30 ವರ್ಷ ಮೀರಿರಬಾರದು. ಎಸ್‌ಸಿ, ಎಸ್‌ಟಿ ಅಭ್ಯರ್ಥಿಗಳಿಗೆ 5 ವರ್ಷ, ಇತರೆ ಹಿಂದುಳಿದ ವರ್ಗದ ಅಭ್ಯರ್ಥಿಗಳಿಗೆ 3 ವರ್ಷ, ಅಂಗವಿಕಲರಿಗೆ 10 ವರ್ಷಗಳ ವಯೋಮಿತಿ ಸಡಿಲಿಕೆ ಇದೆ.
- **ಅರ್ಜಿ ಶುಲ್ಕ:** ಪರಿಶಿಷ್ಟ ಜಾತಿ ಮತ್ತು ಪಂಗಡದ ಅಭ್ಯರ್ಥಿಗಳಿಗೆ ಶುಲ್ಕದಿಂದ ವಿನಾಯ್ತಿ ನೀಡಲಾಗಿದೆ. ಇತರೆ ಅಭ್ಯರ್ಥಿಗಳಿಗೆ ₹ 750 ಅರ್ಜಿ ಶುಲ್ಕ ನಿಗದಿಪಡಿಸಲಾಗಿದೆ.
- **ನೇಮಕಾತಿ ಪ್ರಕ್ರಿಯೆ:** ಲಿಖಿತ ಪರೀಕ್ಷೆ ಮೂಲಕ ನೇಮಕಾತಿ ನಡೆಯಲಿದೆ. ಪರೀಕ್ಷೆಗೆ ಸಂಬಂಧಿಸಿದ ಮಾಹಿತಿಗಾಗಿ ಎಸ್‌ಬಿಐ ಹೊರಡಿಸಿರುವ ಅಧಿಸೂಚನೆಯನ್ನು ಗಮನಿಸಿ.
- **ಅರ್ಜಿ ಸಲ್ಲಿಕೆ ವಿಧಾನ:** ಆಸಕ್ತ ಅಭ್ಯರ್ಥಿಗಳು ಆನ್‌ಲೈನ್ ಮೂಲಕವೇ ಅರ್ಜಿಗಳನ್ನು ಸಲ್ಲಿಸಬೇಕು. ಅಧಿಕೃತ ವೆಬ್‌ಸೈಟ್ **https://www.sbi.co.in/web/careers** ಲಾಗಿನ್ ಆಗಿ ಅರ್ಜಿಗಳನ್ನು ಸಲ್ಲಿಸಬಹುದು.
- **ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:** ಡಿಸೆಂಬರ್ 29, 2021
- **ಹೆಚ್ಚಿನ ಮಾಹಿತಿಗೆ: https://www.sbi.co.in/web/careers**



ಸಿಐಎಸ್‌ಎಫ್‌ನಲ್ಲಿ ಸಹಾಯಕ ಕಮಾಂಡರ್ ಹುದ್ದೆಗಳಿಗೆ ಅರ್ಜಿ

ಕೇಂದ್ರ ಕೈಗಾರಿಕಾ ಭದ್ರತಾ ಪಡೆಯಲ್ಲಿ(ಸಿಐಎಸ್‌ಎಫ್) ಖಾಲಿ ಇರುವ ಸಹಾಯಕ ಕಮಾಂಡರ್ ಹುದ್ದೆಗಳ ನೇಮಕಾತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ. ಒಟ್ಟು 29 ಹುದ್ದೆಗಳನ್ನು ನೇಮಕ ಮಾಡಿಕೊಳ್ಳಲಾಗುವುದು. ಆಸಕ್ತರು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು.

- **ಹುದ್ದೆಗಳ ಸಂಖ್ಯೆ:** 29
- **ವಿದ್ಯಾರ್ಹತೆ:** ಸರ್ಕಾರದಿಂದ ಮಾನ್ಯತೆ ಪಡೆದ ವಿದ್ಯಾಸಂಸ್ಥೆಯಿಂದ ಪದವಿ ಅಥವಾ ತತ್ಸಮಾನ ವಿದ್ಯಾರ್ಹತೆ ಹೊಂದಿರಬೇಕು.
- **ವಯೋಮಿತಿ:** ಹುದ್ದೆಗಳಿಗೆ ಅನುಸಾರ ಕೇಂದ್ರ ಕೈಗಾರಿಕಾ ಭದ್ರತಾ ಪಡೆ ಪ್ರಕಟಿಸಿರುವ ವಯೋಮಿತಿಯ ಅರ್ಹತೆ ಪಡೆದಿರಬೇಕು. ಇದರ ಮಾಹಿತಿಗೆ ವೆಬ್‌ಸೈಟ್ ಗಮನಿಸಿ.
- **ನೇಮಕಾತಿ ಪ್ರಕ್ರಿಯೆ:** ಕಂಪ್ಯೂಟರ್ ಆಧಾರಿತ ಪರೀಕ್ಷೆ ಹಾಗೂ ದೈಹಿಕ ಕ್ಷಮತೆ ಪರೀಕ್ಷೆ ಮೂಲಕ ಆಯ್ಕೆ ನಡೆಯಲಿದೆ. ಕಂಪ್ಯೂಟರ್ ಆಧಾರಿತ ಪರೀಕ್ಷೆಯಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳನ್ನು ದೈಹಿಕ ಪರೀಕ್ಷೆಗೆ ಕರೆಯಲಾಗುವುದು.
- **ಅರ್ಜಿ ಸಲ್ಲಿಕೆ ವಿಧಾನ:** ಅಭ್ಯರ್ಥಿಗಳು ಅರ್ಜಿಯನ್ನು ಕೇಂದ್ರ ಲೋಕಸೇವಾ ಆಯೋಗದ ಆನ್‌ಲೈನ್ ಮೂಲಕವೇ ಸಲ್ಲಿಸಬೇಕು. ನಂತರ ಅರ್ಜಿಯನ್ನು ಡೌನ್‌ಲೋಡ್ ಮಾಡಿಕೊಂಡು ಕೇಂದ್ರ ಕೈಗಾರಿಕಾ ಭದ್ರತಾ ಪಡೆಗೆ ಅಂಚೆ ಮೂಲಕ ಸಲ್ಲಿಸಬೇಕು.
- **ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:** ಡಿಸೆಂಬರ್ 21, 2021
- **ಹೆಚ್ಚಿನ ಮಾಹಿತಿಗೆ: https://upsc.gov.in**

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ



❦ ಸುಭಾಷಿತ ❦

ಮನದಲ್ಲಿನ ಕಲ್ಮಶವನ್ನು ತೊಡೆದುಕೊಂಡು ನಿಮ್ಮನ್ನು ನೀವು ಶುದ್ಧೀಕರಿಸಿಕೊಳ್ಳದಿದ್ದರೆ ದೀರ್ಘಾವಧಿಯಲ್ಲಿ ಸಬಲರಾಗಿ ಉಳಿಯಲಾರಿರಿ.

-ನಿರ್ಮಲ್ಯ ಕುಮಾರ್

ಪರೀಕ್ಷೆಯಲ್ಲಿ ಅರ್ಥಹೀನ ಪ್ರಶ್ನೆಗಳು ಸಿಬಿಎಸ್‌ಇಗೆ ಬೇಕು ಎಚ್ಚರ

ಭಾರತವು ಬಹುತ್ವದ ದೇಶ. ಜೊತೆಗೆ, ಅಸಮಾನತೆಯನ್ನೂ ಒಡಲೊಳಗೆ ಇರಿಸಿಕೊಂಡಿರುವ ದೇಶ. ಇಲ್ಲಿನ ಸಂಸ್ಕೃತಿ, ಸಂಪ್ರದಾಯಗಳು, ಸಮುದಾಯದ ಆಚರಣೆಗಳು ಬಹುತ್ವವನ್ನು ಸಲಹುವ ಜೊತೆಯಲ್ಲೇ ಒಂದಿಷ್ಟು ಅಸಮಾನತೆಗಳನ್ನೂ ತಮ್ಮೊಂದಿಗೆ ಇರಿಸಿಕೊಂಡಿವೆ. ಬಹುತ್ವವನ್ನು ಸಂಭ್ರಮಿಸುವುದು, ಅಸಮಾನತೆಯನ್ನು ಖಂಡಿಸುವುದು ಜೊತೆಜೊತೆಗೆ ಸಾಗಬೇಕಿರುವ ಸಂಕೀರ್ಣ ಸಮಾಜ ನಮ್ಮದು. ತರತಮ ಪ್ರಜ್ಞೆಯನ್ನು ತೊಡೆಯುವ ಕೆಲಸ ಮನೆಗಳಿಂದಲೂ ಶಾಲೆಗಳಿಂದಲೂ ಆಗಬೇಕು. ಸಮಾಜದ ಎಲ್ಲ ವರ್ಗಗಳೂ ಈ ಕಾರ್ಯದಲ್ಲಿ ಕೈಜೋಡಿಸಬೇಕು. ಆದರೆ, ಲಿಂಗ ಆಧಾರಿತ ಅಸಮಾನತೆಯಂತಹ ಹುಳುಕುಗಳ ನಿವಾರಣೆಗೆ ಶಾಲೆಗಳ ಹಂತದಲ್ಲಿಯೇ ಪ್ರಯತ್ನ ಆರಂಭವಾಗದಿದ್ದರೆ, ಅವುಗಳನ್ನು ಸಮುದಾಯದಿಂದ ತೊಡೆಯುವುದು ಕಷ್ಟಸಾಧ್ಯ ಕೆಲಸವಾಗುತ್ತದೆ. ಈ ಹಿನ್ನೆಲೆಯಲ್ಲಿ ಗಮನಿಸಿದಾಗ, ಸಿಬಿಎಸ್‌ಇ 10ನೇ ತರಗತಿ ವಿದ್ಯಾರ್ಥಿಗಳಿಗೆ ಪ್ರಶ್ನೆಪತ್ರಿಕೆಯಲ್ಲಿ ಅಳವಡಿಸಿದ್ದ ಕೆಲವು ಸಾಲುಗಳು ತೀರಾ ಪ್ರತಿಗಾಮಿಯಾಗಿದ್ದವು, ಕೀಳು ಅಭಿರುಚಿಯಿಂದ ಕೂಡಿದ್ದವು ಎಂಬುದು ಗೊತ್ತಾಗುತ್ತದೆ. ಹತ್ತನೆಯ ತರಗತಿ ವಿದ್ಯಾರ್ಥಿಗಳಿಗೆ ನಡೆಸಿದ ಇಂಗ್ಲಿಷ್ ಪರೀಕ್ಷೆಯ ಪ್ರಶ್ನೆಪತ್ರಿಕೆಯಲ್ಲಿ, ವಿದ್ಯಾರ್ಥಿಗಳು ಒಂದು ಪ್ಯಾರಾವನ್ನು ಓದಿ, ಉತ್ತರ ಬರೆಯಬೇಕಿತ್ತು. 'ಪತ್ನಿಗೆ ಸ್ವಾತಂತ್ರ್ಯ ನೀಡಿದ್ದರಿಂದಾಗಿ ಮಕ್ಕಳ ಮೇಲೆ ಪಾಲಕರಿಗೆ ನಿಯಂತ್ರಣ ತಪ್ಪಿಹೋಯಿತು...', 'ಹಲವು ಸಾಮಾಜಿಕ ಮತ್ತು ಕೌಟುಂಬಿಕ ಸಮಸ್ಯೆಗಳಿಗೆ ಮಹಿಳೆಯರು ಸ್ವಾತಂತ್ರ್ಯ ಪಡೆಯುತ್ತಿರುವುದೇ ಮುಖ್ಯ ಕಾರಣ...', 'ಪತ್ನಿಯು, ಪತಿಯ ಮಾತು ಕೇಳುವುದನ್ನು ನಿಲ್ಲಿಸಿದ್ದು ಮಕ್ಕಳು ಹಾಗೂ ಕೆಲಸದವರಲ್ಲಿನ ಅಶಿಸ್ತಿಗೆ ಮುಖ್ಯ ಕಾರಣ...' ಎಂಬ ಸಾಲುಗಳು ಈ ಪ್ಯಾರಾದಲ್ಲಿ ಇದ್ದವು. 'ಪತಿಯ ಹಾದಿಯನ್ನು ಒಪ್ಪಿಕೊಳ್ಳುವ ಮೂಲಕ ಮಾತ್ರವೇ ತಾಯಿಯು ಚಿಕ್ಕವರ ವಿಧೇಯತೆಗೆ ಪಾತ್ರಳಾಗಬಹುದು' ಎನ್ನುವ ಮಾತುಗಳೂ ಅದರಲ್ಲಿ ಇದ್ದವು. ಈ ಪ್ಯಾರಾವನ್ನು ಓದಿ ವಿದ್ಯಾರ್ಥಿಗಳು, ಅದರ ಬಗ್ಗೆ ಕೇಳಿದ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ನೀಡಬೇಕಿತ್ತು.



ಲಿಂಗ ಆಧಾರಿತ ತಾರತಮ್ಯ ತಪ್ಪು ಎಂಬ ಲೋಕದೃಷ್ಟಿ ಮಕ್ಕಳಲ್ಲಿ ಬೆಳೆಯಬೇಕು. ಈ ಎಚ್ಚರವು ಸಿಬಿಎಸ್‌ಇಯಲ್ಲಿ ಸದಾ ಕಾಲ ಇರಬೇಕು

ಈ ಸಾಲುಗಳಿಗೆ ದೇಶದ ಬಹುತೇಕ ಕಡೆಗಳಲ್ಲಿ ವಿರೋಧ ವ್ಯಕ್ತವಾದ ನಂತರದಲ್ಲಿ ಸಿಬಿಎಸ್‌ಇ ವಿಷಾದ ವ್ಯಕ್ತಪಡಿಸಿದೆ, ಅದಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಕೈಬಿಡುವುದಾಗಿ ಹೇಳಿದೆ. ಈ ವಿಚಾರವನ್ನು ಸಂಸತ್ತಿನಲ್ಲಿ ಪ್ರಸ್ತಾಪಿಸಿದ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ, ವಿವರಣೆಯನ್ನು ಕೇಳಿದರು. ಪ್ರಶ್ನೆಗಳನ್ನು ಸಿದ್ಧಪಡಿಸುವ ಪ್ರಕ್ರಿಯೆಯನ್ನು ಪುನರ್ ಪರಿಶೀಲನೆಗೆ ಒಳಪಡಿಸಲು, ಪ್ರಕ್ರಿಯೆಯನ್ನು ಇನ್ನಷ್ಟು ಗಟ್ಟಿಗೊಳಿಸಲು ತಜ್ಞರ ಸಮಿತಿಯನ್ನು ರಚಿಸುವುದಾಗಿ ಸಿಬಿಎಸ್‌ಇ ಭರವಸೆ ನೀಡಿದೆ. ಪ್ರಶ್ನೆಗಳನ್ನು ತಜ್ಞರ ಮೂಲಕವೇ ಸಿದ್ಧಪಡಿಸಬೇಕು. ಪ್ರಶ್ನೆಗಳನ್ನು ಸಿದ್ಧಪಡಿಸುವವರಿಗೆ ಅವುಗಳ ಅರ್ಥ ಗೊತ್ತಿರಬೇಕು, ಉತ್ತರಗಳ ಅರ್ಥ ಮತ್ತು ಪರಿಣಾಮಗಳೂ ತಿಳಿದಿರಬೇಕು. ಎಳೆಯ ವಯಸ್ಸಿನ ವಿದ್ಯಾರ್ಥಿಗಳು ಈ ಪ್ರಶ್ನೆಗಳಿಗೆ ಉತ್ತರ ಬರೆಯುತ್ತಾರೆ. ಈ ಪ್ಯಾರಾದಲ್ಲಿ ಇದ್ದಂತಹ ಸಾಲುಗಳು ಪುರುಷ ಪ್ರಾಧಾನ್ಯವನ್ನೇ ಆತ್ಯಂತಿಕ ಸತ್ಯವೆಂಬ ರೀತಿಯಲ್ಲಿ ಬಿಂಬಿಸುತ್ತವೆ. ಈ ಪ್ಯಾರಾ ತನ್ನ ಮಾರ್ಗಸೂಚಿಗಳಿಗೆ ಅನುಗುಣವಾಗಿ ಇರಲಿಲ್ಲ ಎಂದು ಸಿಬಿಎಸ್‌ಇ ಒಪ್ಪಿಕೊಂಡಿದೆ.

ನಮ್ಮ ಸಮಾಜದ ಪ್ರಜ್ಞೆಯಲ್ಲಿ ಆಳವಾಗಿ ಬೇರೂರಿರುವ ಕೆಲವು ಆಲೋಚನೆಗಳು, ನಂಬಿಕೆಗಳನ್ನು ಈ ಪ್ಯಾರಾ ಸ್ಪಷ್ಟವಾಗಿ ಹೇಳುತ್ತಿದೆ. ಇಂತಹ ಪ್ರತಿಗಾಮಿ ಆಲೋಚನೆಗಳನ್ನು ಹೋಗಲಾಡಿಸುವುದು ಶಿಕ್ಷಣದ ಉದ್ದೇಶಗಳಲ್ಲಿ ಒಂದು. ಮಕ್ಕಳ ಮನಸ್ಸಿನಲ್ಲಿ ಇಂತಹ ತಾರತಮ್ಯದ ಆಲೋಚನೆಗಳು ಬರಬಾರದು, ಅವರು ಮುಕ್ತವಾಗಿ ಆಲೋಚಿಸುವ ವ್ಯಕ್ತಿಗಳಾಗಿ ಬೆಳೆಯಬೇಕು ಎಂಬುದು ಶಿಕ್ಷಣದ ಗುರಿ. ಆದರೆ, ಶೈಕ್ಷಣಿಕ ಪ್ರಕ್ರಿಯೆಯ ಬಹುಮುಖ್ಯ ಭಾಗವಾಗಿರುವ ಪರೀಕ್ಷೆಗಳಲ್ಲಿ ಇಂತಹ ಹಿಮ್ಮುಖ ಚಲನೆಯ ಪ್ರಶ್ನೆಗಳು ಇರುತ್ತವೆ ಎನ್ನುವುದು ತೀರಾ ದುರದೃಷ್ಟಕರ. ಹೆಣ್ಣುಮಕ್ಕಳಿಗೆ ಶಿಕ್ಷಣ ಕೊಡಿಸುವುದನ್ನು ಸರ್ಕಾರಗಳು ದಶಕಗಳಿಂದಲೂ ಪ್ರೋತ್ಸಾಹಿಸುತ್ತ ಬಂದಿವೆ. ಹೆಣ್ಣುಮಕ್ಕಳು ಶಿಕ್ಷಣದಿಂದ ವಂಚಿತರಾಗಬಾರದು ಎಂಬ ಕಾರಣಕ್ಕಾಗಿ, ಅವರಿಗಾಗಿ ವಿಶೇಷ ಯೋಜನೆಗಳೂ ಜಾರಿಯಲ್ಲಿ ಇವೆ. ಶಿಕ್ಷಣದ ಮೂಲಕ ಮಹಿಳೆಯರನ್ನು ಸಶಕ್ತರನ್ನಾಗಿಸುವ ಯೋಜನೆಗಳೂ ಇವೆ. ಆದರೆ, ಇಂತಹ ಯತ್ನಗಳ ನಡುವೆ ಈ ಬಗೆಯ ಪ್ರಶ್ನೆಗಳು ಕಪ್ಪುಚುಕ್ಕೆಯಂತೆ ಕಾಣಿಸುತ್ತವೆ. ಸಿಬಿಎಸ್‌ಇ ಪ್ರಶ್ನೆಪತ್ರಿಕೆಗಳಲ್ಲಿ ವ್ಯಾಕರಣ ದೋಷ, ಅಕ್ಷರ ದೋಷ, ಪಠ್ಯದಲ್ಲಿ ಇಲ್ಲದಿದ್ದ ಪ್ರಶ್ನೆಗಳು ಕಾಣಿಸಿಕೊಳ್ಳುವುದು... ಇವೆಲ್ಲ ಇದ್ದಿದ್ದೇ. ಆದರೆ, ಈ ಪ್ಯಾರಾದಲ್ಲಿ ಇದ್ದ ದೋಷ ಇಂಥದ್ದಲ್ಲ. ಈ ಪ್ಯಾರಾ ಹಾಗೂ ಅದಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ರೂಪಿಸಿದ್ದು ಯಾರು ಎಂಬುದನ್ನು ಸಿಬಿಎಸ್‌ಇ ಪತ್ತೆ ಮಾಡಬೇಕು. ಅದು ಹೇಗೆ ಪ್ರಶ್ನೆಪತ್ರಿಕೆಯೊಳಗೆ ನುಸುಳಿಕೊಂಡಿತು ಎಂಬುದನ್ನು ಜನರಿಗೆ ತಿಳಿಸುವ ಕೆಲಸವನ್ನೂ ಮಾಡಬೇಕು. ಮುಂದಿನ ದಿನಗಳಲ್ಲಿ ಇಂಥವು ಮರುಕಳಿಸದಂತೆಯೂ ನೋಡಿಕೊಳ್ಳಬೇಕು. ಶಾಲೆಗೆ ಹೋಗುವ ಮಕ್ಕಳು ಎಲ್ಲರನ್ನೂ ಸಮಾನವಾಗಿ ಕಾಣುವ ದೃಷ್ಟಿಯನ್ನು ಬೆಳೆಸಿಕೊಳ್ಳಬೇಕು ಎಂಬ ಬಯಕೆ ಸಿಬಿಎಸ್‌ಇಯಲ್ಲಿಯೂ ಇರಬೇಕು. ಎಲ್ಲರೂ ಸಮಾನರು ಹಾಗೂ ಲಿಂಗ ಆಧಾರಿತ ತಾರತಮ್ಯ ತಪ್ಪು ಎಂಬ ಲೋಕದೃಷ್ಟಿ ಮಕ್ಕಳಲ್ಲಿ ಬೆಳೆಯದೇ ಇದ್ದರೆ, ಪ್ರಜಾತಂತ್ರ ಎಂಬ ವ್ಯವಸ್ಥೆಗೂ ಅರ್ಥ ಇರುವುದಿಲ್ಲ. ಈ ಎಚ್ಚರವು ಸಿಬಿಎಸ್‌ಇಯಲ್ಲಿ ಸದಾ ಕಾಲ ಇರಬೇಕು.

ದಿನದ ಟ್ವೀಟ್



ತಕ್ಷಣ ವಜಾ ಮಾಡಿ

ಉತ್ತರಪ್ರದೇಶದ ಲಖಿಂಪುರ ಪ್ರಕರಣವು ಪೂರ್ವಯೋಜಿತ ಎಂದು ವಿಶೇಷ ತನಿಖಾ ತಂಡ (ಎಸ್‌ಐಟಿ) ಈಗ ಹೇಳಿದೆ. ನ್ಯಾಯ ನೀಡಿಕೆ ಹಾಗೂ ಬಿಜೆಪಿಯ ಹಿತದೃಷ್ಟಿಯಿಂದ, ಕೇಂದ್ರ ಗೃಹ ಖಾತೆಯ ರಾಜ್ಯ ಸಚಿವ ಅಜಯ್ ಮಿಶ್ರಾ ಅವರನ್ನು ತಕ್ಷಣವೇ ವಜಾ ಮಾಡುವುದು ಸೂಕ್ತ. ಅವರು ಅಧಿಕಾರದಲ್ಲಿ ಮುಂದುವರಿದರೆ ನ್ಯಾಯಯುತ ತನಿಖೆ ಅಸಾಧ್ಯ.

ಶಂಕರ್ ಎಂ. ಬಿದರಿ, ನಿವೃತ್ತ ಪೊಲೀಸ್ ಅಧಿಕಾರಿ

ಕಿಡಿನುಡಿ



ದಕ್ಷಿಣ ಕನ್ನಡ ಜಿಲ್ಲೆಯ ಅಭಿವೃದ್ಧಿಗೆ ಅನುದಾನ ನೀಡದಿದ್ದರೂ ಪರವಾಗಿಲ್ಲ, ಜನರು ನೆಮ್ಮದಿಯಿಂದ ಬದುಕುವಂತೆ ನೋಡಿಕೊಳ್ಳಿ. ಶೇ 95ರಷ್ಟು ಜನರಿಗೆ ಯಾವುದೇ ಜಗಳ ಬೇಕಿಲ್ಲ. ಸಾಮರಸ್ಯದಿಂದ ಬದುಕಲು ಇಷ್ಟಪಡುತ್ತಿದ್ದಾರೆ. ಆದರೆ, ಇತ್ತೀಚಿನ ದಿನಗಳಲ್ಲಿ ಜಿಲ್ಲೆಯಲ್ಲಿ ಮತೀಯ ಗೂಂಡಾಗಿರಿ ಪ್ರಕರಣಗಳು ಹೆಚ್ಚಿವೆ.

ಯು.ಟಿ.ಖಾದರ್, ಕಾಂಗ್ರೆಸ್ ಶಾಸಕ

25 ವರ್ಷಗಳ ಹಿಂದೆ — ಸೋಮವಾರ, 16-12-1996

• **ಕಾಂಗ್ರೆಸ್- ಕೆಸಿಪಿ ವಿಧ್ಯುಕ್ತ ವಿಲೀನ**

ಬೆಂಗಳೂರು, ಡಿ. 15– ಕೊರೆಯುವ ಚಳಿ... ತುಂತುರು ಮಳೆ... ಇದ್ಯಾವುದೂ ಕಾರ್ಯಕರ್ತರ ಉತ್ಸಾಹಕ್ಕೆ ಅಡ್ಡಿಯಾಗಲಿಲ್ಲ. ರಾಜ್ಯದ ವಿವಿಧ ಭಾಗಗಳಿಂದ ಸಾವಿರಾರು ಸಂಖ್ಯೆಯಲ್ಲಿ ಆಗಮಿಸಿದ್ದ ಕಾರ್ಯಕರ್ತರು ಬೆಳಿಗ್ಗೆಯಿಂದಲೇ ಬೆಂಗಳೂರು ಅರಮನೆ ಆವರಣಕ್ಕೆ ಬರಲು ಆರಂಭಿಸಿದ್ದರು. ಡೊಳ್ಳು, ಕೊಂಬು ಕಹಳೆಯೊಂದಿಗೆ ಜೈಕಾರಗಳನ್ನು ಕೂಗುತ್ತಾ ಬಂದ ಕಾರ್ಯಕರ್ತರಿಂದಾಗಿ, ಮೋಡ ಮುಸುಕಿದ ಅರಮನೆ ಆವರಣದಲ್ಲಿ ಒಂದು ರೀತಿಯ ಹಬ್ಬದ ವಾತಾವರಣ ನಿರ್ಮಾಣವಾಗಿತ್ತು.

ಎಸ್. ಬಂಗಾರಪ್ಪ ಅವರ ನೇತೃತ್ವದ ಕರ್ನಾಟಕ ಕಾಂಗ್ರೆಸ್ ಪಕ್ಷವನ್ನು ರಾಷ್ಟ್ರೀಯ ಕಾಂಗ್ರೆಸ್ ಪಕ್ಷದಲ್ಲಿ ವಿಲೀನಗೊಳಿಸಲು ಅರಮನೆ ಆವರಣದಲ್ಲಿ ಏರ್ಪಡಿಸಲಾಗಿದ್ದ ಕಾಂಗ್ರೆಸ್ ಕಾರ್ಯಕರ್ತರ ಬೃಹತ್ ಸಮಾವೇಶದಲ್ಲಿ ಕಂಡುಬಂದ ದೃಶ್ಯ ಇದು.

• **'ಅಪಾಯಕಾರಿ ಬಿಜೆಪಿ' ವಿರುದ್ಧ ಎಚ್ಚರಿಕೆ**

ಬೆಂಗಳೂರು, ಡಿ. 15– ಕಾಂಗ್ರೆಸ್ ಪಕ್ಷವನ್ನು ಬಲಪಡಿಸುವ ಹೊಣೆಯನ್ನು ವಹಿಸಿಕೊಳ್ಳಲು ಯುವ ಕಾರ್ಯಕರ್ತರಿಗೆ ಕರೆ ನೀಡಿದ ಪಕ್ಷದ ಅಧ್ಯಕ್ಷ ಸೀತಾರಾಂ ಕೇಸರಿ ಅವರು, ಅಪಾಯಕಾರಿ ಪಕ್ಷವಾದ ಬಿಜೆಪಿ ಬಗೆಗೆ ಎಚ್ಚರದಿಂದಿರುವಂತೆ ಕಿವಿಮಾತು ಹೇಳಿದರು.

ಕರ್ನಾಟಕ ಕಾಂಗ್ರೆಸ್ ಪಕ್ಷವು ಪುನಃ ಕಾಂಗ್ರೆಸ್ ಪಕ್ಷದ ತೆಕ್ಕೆಗೆ ಬಂದ ಸಂದರ್ಭಕ್ಕೆಂದು ಕರೆದಿದ್ದ ಬೃಹತ್ ಸಮಾವೇಶದಲ್ಲಿ ಮಾತನಾಡಿದರು.

50 ವರ್ಷಗಳ ಹಿಂದೆ — ಗುರುವಾರ, 16-12-1971

• **ಪಾಕ್ ದಳಪತಿಗಳ ಕದನವಿರಾಮ ಭಿಕ್ಷೆ**

ನವದೆಹಲಿ, ಡಿ. 15– ನಮ್ಮ ವಿಜಯೀ ಸೇನೆ ಢಾಕಾ ನಗರದ ಮಧ್ಯಕ್ಕೆ ಕೇವಲ ಒಂದು ಮೈಲಿಯಲ್ಲಿದ್ದಂತೆ ಬಾಂಗ್ಲಾದೇಶದಲ್ಲಿರುವ ಆಕ್ರಮಣಕೋರ ಪಾಕಿಸ್ತಾನಿ ಸೇನೆಯ ಮಹಾದಂಡನಾಯಕ ನಿಯಾಜಿ ಕದನವಿರಾಮ ಕೋರಿ ಭಾರತಕ್ಕೆ ಮೊರೆ ಇಟ್ಟರು.

ನಾಳೆ ಬೆಳಿಗ್ಗೆ 9 ಗಂಟೆಯೊಳಗಾಗಿ ಶಸ್ತ್ರಾಸ್ತ್ರ ಕೆಳಗಿಟ್ಟು ಶರಣಾಗತರಾಗುವಂತೆ ಪಾಕಿಸ್ತಾನಿ ಸೈನಿಕರಿಗೆ ಆದೇಶ ನೀಡುವಂತೆ ನಿಯಾಜಿಯವರಿಗೆ ಭಾರತದ ಮಹಾದಂಡನಾಯಕ ಜನರಲ್ ಮಾಣೆಕ್ ಷಾ ಅವರು ಉತ್ತರ ನೀಡಿದ್ದಾರೆ.

• **ಬಾಂಗ್ಲಾದೇಶಕ್ಕೆ ಪೂರ್ವ ಯುರೋಪ್ ಮನ್ನಣೆ**

ವಿಶ್ವಸಂಸ್ಥೆ, ಡಿ. 15– ವಿಶ್ವಸಂಸ್ಥೆ ಭದ್ರತಾ ಸಮಿತಿಯ ಅಲ್ಪಾವಧಿ ಅಧಿವೇಶನದಲ್ಲಿ ನಿನ್ನೆ ರಾತ್ರಿ ಪೋಲೆಂಡ್ ಮಂಡಿಸಿದ ಕರಡು ನಿರ್ಣಯವೊಂದು, ಪೂರ್ವ ಐರೋಪ್ಯ ರಾಷ್ಟ್ರಗಳು ಬಾಂಗ್ಲಾದೇಶ ಸರ್ಕಾರಕ್ಕೆ ಮಾನ್ಯತೆ ನೀಡಲು ಸಿದ್ಧವಾಗುತ್ತಿವೆ ಎಂಬುದನ್ನು ಸೂಚಿಸುತ್ತದೆ ಎಂದು ವೀಕ್ಷಕರು ಇಲ್ಲಿ ಅಭಿಪ್ರಾಯಪಟ್ಟಿದ್ದಾರೆ.

ಜನರ ಸಿಟ್ಟು ರಟ್ಟೆಗೆ ಬಾರದಂತೆ ತಡೆಯಬೇಕಾದರೆ...

'ಮತ' ಠೇಂಕಾರ; ಜನಹಿತ ದೂರ



ಗತಿಬಿಂಬ

ವೈ.ಗ.ಜಗದೀಶ್

ಚುನಾವಣೆ ವೇಳೆ ಜನರಿಗೆ ಕೊಟ್ಟ ಮಾತಿನಂತೆ ಅಧಿಕಾರ ಕ್ಕೇರಿದಾಗ ನಡೆದುಕೊಳ್ಳಲಾಗದವರು, ಅಭಿವೃದ್ಧಿಯತ್ತ ನಾಡನ್ನು ಕೊಂಡೊಯ್ಯಲಾಗದವರು, ಭ್ರಷ್ಟಾಚಾರ ತಡೆಯುವಲ್ಲಿ ಅಸಹಾಯಕರು ಅಧಿಕಾರದಲ್ಲಿ 'ಶಾಶ್ವತ'ವಾಗಿ ಉಳಿಯಲೇಬೇಕೆಂಬ ಹಟ ತೊಟ್ಟಾಗ ಧರ್ಮ-ದೇವರು-ಜಾತಿ ಹೆಸರಿನ ರಾಜಕಾರಣಕ್ಕೆ ಮುಗಿಬೀಳುತ್ತಾರೆ.

ನಿಕೃಷ್ಟ ದಾರಿದ್ರ್ಯ, ಹಸಿವಿನ ರೌದ್ರಾವತಾರ, ನಿರುದ್ಯೋಗ ತಂದಿತ್ತ ಹತಾಶೆ, ರೋಸಿಹೋಗುವಷ್ಟು ಭ್ರಷ್ಟಾಚಾರ ಕಂಡ ಜನ, ಆಡಳಿತಾರೂಢರ ವಿರುದ್ಧ ತನ್ನಿಂತಾನೇ ಸಿಡಿದೇಳುವುದು ಸಹಜ ಗುಣ. ಜನರ ಸಿಟ್ಟು ರಟ್ಟೆಗೆ ಬಾರದಂತೆ ತಡೆಯಬೇಕಾದರೆ ಜಾತಿಯ ಉನ್ಮಾದವನ್ನೋ ಧರ್ಮದ ಅಮಲನ್ನೋ ಬಿತ್ತಿ, ದಿನವೂ ಅದರ ಸುತ್ತವೇ ಗಿರಕಿ ಹೊಡೆಯುವಂತೆ ಮಾಡುವುದು, 'ಧರ್ಮೋದ್ಧಾರಕ'ನಾಗದಿದ್ದರೆ ದೇಶದ್ರೋಹಿಯ ಪಟ್ಟ ಖಾತರಿ ಎಂಬ ಭಾವನೆ ತುಂಬಿ ಜನರನ್ನು ಧರ್ಮದ ಗುಂಗಿನಲ್ಲಿ ಮುಳುಗುವಂತೆ ಮಾಡುವುದು ಆಳುವವರ್ಗ ತನ್ನ ಹುಟ್ಟಿದಾರಭ್ಯ ಆಚರಿಸಿಕೊಂಡು ಬಂದ ನೀತಿ.

ಎಲ್ಲರನ್ನೂ ಸಮಾನವಾಗಿ ಕಾಣುತ್ತೇನೆ, ಸಂವಿಧಾನದ ಆಶಯಗಳನ್ನು ಅನುಷ್ಠಾನ ಮಾಡುತ್ತೇನೆ ಎಂದು ಪ್ರಮಾಣ ಮಾಡಿ, ಸಂವಿಧಾನವನ್ನೇ ಕಣ್ಣಿಗೊತ್ತಿಗೊಂಡು ಅಧಿಕಾರ ಸ್ವೀಕರಿಸಿದ ಪ್ರಧಾನಿ ನರೇಂದ್ರ ಮೋದಿಯವರ ನಡೆ ಇಂತಹದ್ದೊಂದು ಸಂಶಯಕ್ಕೆ ದಾರಿ ಮಾಡಿಕೊಟ್ಟಿದೆ.


ಪ್ರಧಾನಿಯಾಗಿದ್ದವರು ಧರ್ಮಗುರುಗಳ, ದೇವರ ಕಾಲಿಗೆ ಬೀಳುವುದೇನೂ ಹೊಸತಲ್ಲ. ಆದರೆ, ರಾಮಮಂದಿರ ಶಿಲಾನ್ಯಾಸದ ಕಾರ್ಯಕ್ರಮದಲ್ಲಿ ಕುಟುಂಬದ ಯಜಮಾನನಂತೆ ಹೋಮಕುಂಡದ ಮುಂದೆ ಕೂರುವುದು, ಕಾಶಿಯ ವಿಶ್ವನಾಥ ದೇಗುಲದ ಕಾಮಗಾರಿ ಪೂರ್ಣಗೊಳ್ಳುವ ಮುನ್ನವೇ ತರಾತುರಿಯಲ್ಲಿ ಗಂಗಾಜಲ ತಂದು ಅಭಿಷೇಕ ಮಾಡುವುದು... ಇಂತಹ ನಡೆ ಪ್ರಧಾನಿಯಾಗಿ ಅವರ ಹುದ್ದೆಗೆ ತಕ್ಕನಾದುದಲ್ಲ. ಪ್ರಧಾನಿ ಧರ್ಮಗುರುವಾಗಕೂಡದು. ಆದರೆ, ಉತ್ತರಪ್ರದೇಶ ಸೇರಿದಂತೆ ಉತ್ತರದ ರಾಜ್ಯಗಳ ಚುನಾವಣೆಗಾಗಿ ಕೋಮು ಧ್ರುವೀಕರಣದತ್ತ ಹೆಜ್ಜೆ ಹಾಕಿರುವ ಮೋದಿ ಇಂತಹ ನಾಟಕೀಯ ಸನ್ನಿವೇಶಗಳನ್ನು ಸೃಷ್ಟಿಸುವಲ್ಲಿ ನಿಪುಣರು.

ದೇಶದ ಪ್ರಧಾನಿಯೇ ಒಂದು ಧರ್ಮದ ಓಲೈಕೆ ರಾಜಕಾರಣಕ್ಕೆ ಮುಂದಾದಾಗ ಅದೇ ನಡೆಯನ್ನು ರಾಜ್ಯಗಳಮುಖ್ಯಮಂತ್ರಿಗಳುಪಾಲಿಸುವುದುಅಸಹಜವೇನಲ್ಲ. ಗುಜರಾತ್, ಉತ್ತರಪ್ರದೇಶ ರಾಜ್ಯಗಳು ಗೋಹತ್ಯೆ–ಮತಾಂತರ ನಿಷೇಧಿಸಿ ಕೋಮು ರಾಜಕೀಯದಲ್ಲಿ ಯಶಸ್ವಿಯಾದಂತೆ ಒಂದೂಕಾಲು ವರ್ಷದ ಬಳಿಕ ಚುನಾವಣೆ ನಡೆಯಲಿರುವ ಕರ್ನಾಟಕದಲ್ಲಿ ಕೂಡ ಅದೇ ಪ್ರಯೋಗದತ್ತ ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರ ಮುಂದಡಿ ಇಟ್ಟಿದೆ. ಸಂಪನ್ಮೂಲ ಇಲ್ಲದೆ ಅಭಿವೃದ್ಧಿಯೇ ಸ್ಥಗಿತಗೊಂಡಿದ್ದು ನೀರಾವರಿ, ಕೈಗಾರಿಕೆ, ಮೂಲಸೌಕರ್ಯ ಯೋಜನೆಗಳಾವುವೂ ಮುಂದಕ್ಕೆ ಸಾಗಿಲ್ಲ. ಎಲ್ಲವೂ ನಿಂತೇ ಹೋಗಿ, ಭ್ರಷ್ಟಾಚಾರವೊಂದೇ ವಿಜೃಂಭಿಸುತ್ತಿರುವ ಕಾಲದಲ್ಲಿ ಜನರ ದಿಕ್ಕನ್ನು ಬೇರೆಡೆಗೆ ತಿರುಗಿಸಿ ಮತ ಗಟ್ಟಿ ಮಾಡಿಕೊಳ್ಳುವುದು ಬಿಜೆಪಿಗಿರುವ ಏಕೈಕ ಆಯ್ಕೆಯಾದಂತಿದೆ.

ಹಾಗಾಗಿಯೇ ಗೋಹತ್ಯೆ ನಿಷೇಧ ಕಾಯ್ದೆ ಜಾರಿ ಮಾಡಿದ ಬೆನ್ನಲ್ಲೇ, ಅದರ ಪರಿಣಾಮವೆಂಬಂತೆ ನಡೆಯತೊಡಗಿದ ಮತೀಯ ಗೂಂಡಾಗಿರಿಯನ್ನು ಒಂದರ್ಥದಲ್ಲಿ ಬೊಮ್ಮಾಯಿ ಸಮರ್ಥಿಸಿಕೊಂಡರು. ಬಳಿಕ, ಗೂಂಡಾಗಿರಿ ಪ್ರಕರಣಗಳು ಹೆಚ್ಚಿದವು. ಈಗ ಮತಾಂತರ ನಿಷೇಧ ಮಸೂದೆ ತರಲು ಹೊರಟಿರುವ ಸರ್ಕಾರ, 'ಲವ್ ಜಿಹಾದ್' ತಡೆಗೆ ಮಸೂದೆ ತರುವ ವಿಚಾರವನ್ನೂ ಮುನ್ನೆಲೆಗೆ ತಂದಿದೆ. ಅದೇ ಹೊತ್ತಿಗೆ ಮಕ್ಕಳ ಮನಸ್ಸಿನಲ್ಲಿ ಎಳವೆಯಲ್ಲಿಯೇ ಕೋಮುದ್ವೇಷ ತುಂಬುವ ಕ್ರಮವಾಗಿ, ಪಠ್ಯಪುಸ್ತಕ ಪರಿಷ್ಕರಣೆಯನ್ನೂ ಮಾಡಿಸುತ್ತಿದೆ. ಅಭಿವೃದ್ಧಿಯ ಆಶಯವಾಗಲಿ, ಮಾದರಿ ಕರ್ನಾಟಕ ನಿರ್ಮಾಣದ ಕನಸಾಗಲಿ ಇಲ್ಲದವರು ಮಾತ್ರ ಜನರ ಧಾರ್ಮಿಕ ಭಾವನೆಯನ್ನು ಉದ್ದೀಪನಗೊಳಿಸಿ, ಮತಬ್ಯಾಂಕ್ ಅನ್ನು ಭದ್ರಪಡಿಸಿಕೊಳ್ಳುವ ಕೆಲಸಕ್ಕೆ ಕೈಹಾಕುತ್ತಾರೆ.

ಹಿಂದೆ ಅಧಿಕಾರದಲ್ಲಿದ್ದ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ತರಲು ಹೊರಟಿದ್ದ ಸುಧಾರಣಾ ಕ್ರಮಗಳ ಬೆಳಕಿನಲ್ಲಿ ಇವುಗಳನ್ನು ನೋಡಬೇಕಿದೆ. ವೈಭವದ ಮದುವೆಗೆ ಕಡಿವಾಣ, ಮೌಢ್ಯ ನಿಷೇಧ ಕಾಯ್ದೆ ಜಾರಿ, ಹಿಂದುಳಿದವರ ಮೀಸಲಾತಿ ಪ್ರಮಾಣ ಹೆಚ್ಚಳಕ್ಕೆ ಶಿಫಾರಸು, ಕನ್ನಡಕ್ಕೆ ಪ್ರತ್ಯೇಕ ಬಾವುಟ ನೀಡಬೇಕೆಂಬ ಪ್ರಸ್ತಾವ, ಖಾಸಗಿ ಆಸ್ಪತ್ರೆಗಳ ಲೂಟಿಗೆ ಮೂಗುದಾರ ಹಾಕುವ ಕಾಯ್ದೆ, ಹಸಿದವರಿಗಾಗಿ ಇಂದಿರಾ ಕ್ಯಾಂಟೀನ್ ಹೀಗೆ ಹಲವು ಜನಪರ ಆಲೋಚನೆಗಳು, ಕಾರ್ಯಕ್ರಮಗಳು ಆಗ ಇದ್ದವು. ಲಿಂಗಾಯತರ ವಿರೋಧಕ್ಕೆ ಗುರಿಯಾಗಿ ಅಧಿಕಾರ ಕಳೆದುಕೊಳ್ಳಲು ಕಾರಣವಾದ ಲಿಂಗಾಯತ ಧರ್ಮಕ್ಕೆ ಮಾನ್ಯತೆ ದೊರಕಿಸುವ ಪ್ರಯತ್ನವು ಸದಾಶಯದ ಹೆಜ್ಜೆಯೇ.

ಅಲ್ಪಾವಧಿ ಅಧಿಕಾರದಲ್ಲಿದ್ದ ಎಚ್.ಡಿ.ಕುಮಾರಸ್ವಾಮಿ ಕೂಡ 'ಬಡವರ ಬಂಧು', ಚೀನಾಕ್ಕೆ ಪೈಪೋಟಿ ನೀಡಲು ಕೈಗಾರಿಕಾ ಕ್ಲಸ್ಟರ್ ಸ್ಥಾಪನೆ, ಇಸ್ರೇಲ್ ಮಾದರಿ ಕೃಷಿ ಅನುಷ್ಠಾನದಂತಹ ಯೋಜನೆಗಳಿಗೆ ಚಾಲನೆ ನೀಡಿದ್ದರು. ಬೊಮ್ಮಾಯಿ ಅವರು ಅಧಿಕಾರದ ಚುಕ್ಕಾಣಿ ಹಿಡಿದ ಮೇಲೆ ರೈತರ ಮಕ್ಕಳ ಉನ್ನತ ಶಿಕ್ಷಣಕ್ಕೆ ಶಿಷ್ಯವೇತನ, ವಿದ್ಯಾಭ್ಯಾಸಕ್ಕೆ ನೆರವು, ಅಮೃತ ಯೋಜನೆ, ಹಿರಿಯರು, ಅಂಗವಿಕಲರು, ಮಹಿಳೆಯರ ಮಾಸಾಶನದ ಮೊತ್ತ ಹೆಚ್ಚಿಸುವಂತಹ ಜನಪರ ಕಾರ್ಯಕ್ರಮಗಳನ್ನು ಜಾರಿ ಮಾಡಿದರು. ಆದರೆ, ಅವೆಲ್ಲವನ್ನೂ ಬದಿಗೆ ಸರಿಸುವ ರೀತಿಯಲ್ಲಿ ಕೋಮು ಧ್ರುವೀಕರಣಕ್ಕೆ ಸಚಿವ ಸಂಪುಟದ ಸದಸ್ಯರು ಆದ್ಯತೆ ಕೊಟ್ಟಂತೆ ಕಾಣಿಸುತ್ತಿದೆ. ಇವೆಲ್ಲವೂ ಅಭಿವೃದ್ಧಿಯತ್ತಲಿನ ನಡೆ ಬಿಟ್ಟು ಅಪಾಯದ ಗುಂಡಿಯ ಕಡೆ ನಾಡನ್ನು ಕೊಂಡೊಯ್ಯುವುದರಲ್ಲಿ ಅನುಮಾನ ಬೇಡ.



ಹಾಗಂತ ಕರ್ನಾಟಕದ ಮಟ್ಟಿಗೆ ನಿರಾಶರಾಗಬೇಕಿಲ್ಲ. ಹೈಕೋರ್ಟ್ ನ್ಯಾಯಮೂರ್ತಿಯಾಗಿ ನಿವೃತ್ತರಾದ ಎಚ್.ಎನ್.ನಾಗಮೋಹನ ದಾಸ್ ಹಾಗೂ ಹೋರಾಟಗಾರರಾದ ಕೆ.ಎಸ್.ವಿಮಲಾ, ಅನಂತ ನಾಯ್ಕ್ ತಂಡ ನಡೆಸುತ್ತಿರುವ 'ಸಂವಿಧಾನ ಓದು' ಕಾರ್ಯಕ್ರಮ ಯುವ ಸಮುದಾಯವನ್ನು ಸೆಳೆಯುತ್ತಿದೆ. ಕಿರಿದಾಗಿ ಆರಂಭವಾದ ತೊರೆ ಇಂದು ಹೊಳೆಯಾಗಿ ಹರಿಯುತ್ತಿದೆ. ಸಂವಿಧಾನದ ಬಗ್ಗೆ ಅರಿವು ಮೂಡಿಸುವ ಪುಸ್ತಕ ಲಕ್ಷದಷ್ಟು ಜನರಿಗೆ ತಲುಪಿದೆ. ಕಾಲೇಜು ವಿದ್ಯಾರ್ಥಿಗಳು, ವಕೀಲರು, ರೈತ, ಕಾರ್ಮಿಕ, ಮಹಿಳಾ ಸಂಘಟನೆಗಳು ಈ ಆಂದೋಲನದಲ್ಲಿ ಭಾಗಿಯಾಗಿರುವುದು ಭರವಸೆಯ ಕಿರಣದಂತಿದೆ.

ಕವಿ ಅರುಣ್ ಜೋಳದಕೂಡ್ಲಿಗಿ ಅವರು ಒಂದೂಕಾಲು ವರ್ಷದ ಹಿಂದೆ ಶುರು ಮಾಡಿದ 'ಬಾಬಾ ಸಾಹೇಬರ ಅರಿವಿನ ಬೆಳಗು- ಅಂಬೇಡ್ಕರ್ ಓದು ಸರಣಿ' ಎಂಬ ಕಾರ್ಯಕ್ರಮ ಯುಟ್ಯೂಬ್‌ನಲ್ಲಿ ಕೇಳಲು ಲಭ್ಯ. ಅಂಬೇಡ್ಕರ್ ಚಿಂತನೆ, ಭಾಷಣ, ಲೇಖನಗಳನ್ನು ಓದುವ- ಕೇಳಿಸುವ ಕಾರ್ಯಕ್ರಮ 392 ಕಂತುಗಳನ್ನು ಪೂರೈಸಿದೆ. ಅಂಬೇಡ್ಕರ್ ಚಿಂತನೆಯನ್ನು 282 ಜನ ಓದಿದ್ದಾರೆ. ಏಳು ಲಕ್ಷ ಜನ ಕೇಳಿಸಿಕೊಂಡಿದ್ದಾರೆ.

ಲೇಖಕ ಅರವಿಂದ ಚೊಕ್ಕಾಡಿ ಅವರು ಆಸಕ್ತರ ಜತೆ ಸೇರಿಕೊಂಡು ರಚಿಸಿರುವ ಗಾಂಧಿ ವಿಚಾರ ವೇದಿಕೆಯು ಗಾಂಧಿ ಗ್ರಾಮ ಸಂವಾದ, ಗಾಂಧಿ ಮನೆ ಸಂವಾದ ಏರ್ಪಡಿಸುತ್ತಿದೆ. ಎಂಟು ತಾಲ್ಲೂಕು ಘಟಕಗಳು ರಚನೆಯಾಗಿದ್ದು, ಗ್ರಾಮ ಮತ್ತು ಮನೆಗಳಲ್ಲಿ ಈವರೆಗೆ 30 ಸಂವಾದಗಳನ್ನು ನಡೆಸಿವೆ. ಜಗಳವೇ ತುಂಬಿಕೊಂಡಿರುವ ಹೊತ್ತಿನಲ್ಲಿ ರಚನಾತ್ಮಕ ಸಂವಾದದ ಮೂಲಕ ಚಿಂತನೆಗಳನ್ನು ಜೀವಂತವಾಗಿರಿಸುವ ಯತ್ನವನ್ನು ಈ ವೇದಿಕೆ ಮಾಡುತ್ತಿದೆ.

ಎಲ್ಲವೂ ಮುಗಿದೇ ಹೋಯಿತು ಎಂಬ ಹೊತ್ತಿನೊಳಗೆ ದೇಶವಾಸಿಗಳಿಗೆ ಕಡೆಯ ಆಸರೆಯಾಗಿರುವ ಸಂವಿಧಾನ, ಗಾಂಧಿ, ಅಂಬೇಡ್ಕರ್ ಅವರನ್ನು ಮತ್ತೆ ಮತ್ತೆ ಕಾಣಿಸಿಕೊಡುತ್ತಿರುವ ಈ ಮೂರು ಪರ್ಯಾಯಗಳು, ಕತ್ತಲೆಯೇ ತುಂಬಿರುವ ದಾರಿಯಲ್ಲಿ ಕಿರುದೊಂದಿಗಳಂತಿವೆ. ಅರಿವಿನ ಚೈತನ್ಯ ಹೀಗೆಯೆ ಆರದೇ ಉಳಿದು ಜಗವ ಬೆಳಗಲಿ.

ಕುವೆಂಪು ಅವರು ಹೇಳುವ ಮಾತೊಂದು ನೆನಪಾಗುತ್ತದೆ- 'ಓ ಬನ್ನಿ ಸೋದರರೆ ಬೇಗ ಬನ್ನಿ/ ಗುಡಿ ಚರ್ಚು ಮಸಜೀದಿಗಳ ಬಿಟ್ಟು ಹೊರಬನ್ನಿ/ ಬಡತನವ ಬುಡಮಟ್ಟ ಕೀಳಬನ್ನಿ/... ಸಿಲುಕದಿರಿ ಮತವೆಂಬ ಮೋಹದಜ್ಞಾನಕ್ಕೆ/ ಮತಿಯಿಂದ ದುಡಿಯಿರೈ ಲೋಕಹಿತಕೆ/ ಆ ಮತದ ಈ ಮತದ ಹಳೆಮತದ ಸಹವಾಸ/ ಸಾಕಿನ್ನು ಸೇರಿರೈ ಮನುಜ ಮತಕೆ/ ಓ ಬನ್ನಿ ಸೋದರರೆ ವಿಶ್ವಪಥಕೆ' ಎಂಬ ಆಶಯ ಜೀವ ಪಡೆಯಲಿ.

ಚುರುಮುರಿ



ಕೊರೊನಾ ಮತ್ತು ಕ್ರಿಕೆಟ್

• ಆನಂದ

'ಅದೇನು ಓ! ಮಿಕ್ರಾನೊ, ಒ, ಮಿಕ್ರಾನೋ ಅಥವಾ ಒಮಿಕ್ರಾನೊ' ಹೆಂಡತಿಯ ಪ್ರಶ್ನೆ. 'ಹೆಸರಿನಲ್ಲಿ ಏನಿದೆ?' ಎಂದು ಕೇಳಿದೆ ಥೇಟ್ ಷೇಕ್ಸ್‌ಪಿಯರ್‌ನಂತೆ.

'ಹಾಗಿದ್ದರೆ ಒಮಿಕ್ರಾನ್ ಎಂದು ಕರೆಯಬಹುದು. ಬರೆಯುವುದು ಸುಲಭ' ಅವಳೆಂದಳು. 'ಓಕೆ, ಪರ್ಮಿಷನ್ ಗ್ರ್ಯಾಂಟೆಡ್' ಎಂದೆ ಧಾರಾಳವಾಗಿ. ಕೊರೊನಾದ ಲೇಟೆಸ್ಟ್ ತಳಿಗೂ ಈ ಬಗ್ಗೆ ಏನೂ ಚಿಂತೆ ಇಲ್ಲ.

ಆದರೆ 'ಕೊರಾನಾನೂ ನಮ್ಮ ಕ್ರಿಕೆಟ್ ತರಹಾನೇರಿ..' ಎಂದಾಗ ನನಗೆ ಕೊಹ್ಲಿ ಮೊದಲನೆ ಬಾಲಿಗೇ ಬೌಲ್ಡಾದರೆ ಆಗುವಂತೆ ಆಶ್ಚರ್ಯವಾಯಿತು. 'ಅಮ್ಮಾ ತಾಯಿ, ಕೊರೊನಾ ಎಲ್ಲಿ? ಕ್ರಿಕೆಟ್ ಎಲ್ಲಿ? ಏನು ಸಂಬಂಧ?'

'ಇದೇರಿ, ಸುಮ್ಮನೆ ಟೀವೀಲಿ ಮೂರು ಹೊತ್ತೂ ಮ್ಯಾಚ್ ನೋಡಿದರೆ ಸಾಲದು, ಯೋಚನೇನೂ ಮಾಡಬೇಕು' ಎಂದಳು.

'ಹೌಜಾಟ್' ಎಂದು ನಾನೂ ಕೂಗಿದೆ.

'ಕ್ರಿಕೆಟ್ ಐದು ದಿನಗಳ ಮ್ಯಾಚ್ ಆಗಿತ್ತು. ಕೆರಿ ಪ್ಯಾಕರ್ ಎಂಬ ಬ್ಯುಸಿನೆಸ್‌ಮ್ಯಾನ್ ಬಂದು ಅದನ್ನು ತಲಾ 60 ಓವರ್‌ಗಳ ಒಂದೇ ದಿನದ ಪಂದ್ಯ ಮಾಡಿದಾಗ ಮೊದಲನೇ ರೂಪಾಂತರ ಆಯಿತು. ನಂತರ ಅದು ಮತ್ತೆ ರೂಪಾಂತರಗೊಂಡು 50 ಓವರ್ ಪಂದ್ಯ ಆಯಿತು. ಆಮೇಲೆ ಇನ್ನು ಯಾರೋ ಅದನ್ನು 20-20 ಓವರ್‌ಗೆ ಇಳಿಸಿದರು. ಈಗೀಗ 100 ಬಾಲ್ ಪಂದ್ಯ ಬೇರೆ ಆಗಿದೆ'.

'ಹಾಗೇ ಕೊರೊನಾ ಸಹ ರೂಪಾಂತರಗೊಳ್ತಾನೇ ಇದೆ. ವುಹಾನ್‌ನಲ್ಲಿ ಮೊದಲು ಕಾಣಿಸಿಕೊಂಡಾಗ ಅದು 5 ದಿನಗಳ ಟೆಸ್ಟ್ ಪಂದ್ಯ ಆಗಿತ್ತು. ಈಗೀಗ ಅದೂ 60 ಓವರ್, 50 ಓವರ್, 20 ಓವರ್ ಪಂದ್ಯಗಳಂತೆ ಬೇರೆ ಬೇರೆ ಅವತಾರಗಳನ್ನೆತ್ತಿದೆ' ಎಂಬ ವಿವರಣೆ ನೀಡಿ ಕೊರೊನಾ- ಕ್ರಿಕೆಟ್ ಬಗ್ಗೆ ತನ್ನ ಮನ್ ಕಿ ಬಾತ್ ವಿವರಿಸಿದಳು. 'ವ್ಹಾ, ಕ್ಯಾ ಬಾತ್ ಹೈ' ಎಂದೆ ಕೆಬಿಸಿಯಲ್ಲಿ ಅಮಿತಾಭ್ ಬಚ್ಚನ್ ಹೇಳುವಂತೆ.

'ವ್ಯಾಕ್ಸಿನ್ ಕಂಡುಹಿಡಿದಿದ್ದಾರೆ ನಿಜ. ಅದರೊಟ್ಟಿಗೆ ಅದಕ್ಕೆ ಫ್ಯಾಮಿಲಿ ಪ್ಲಾನಿಂಗ್ ಮಾಡಿಸಿ ಅದು ರೂಪಾಂತರಗೊಳ್ಳದಿರುವ ಹಾಗೆ ಮಾಡಬೇಕಿತ್ತುರೀ' ಎಂದಳು.

'ನಾಳೆ ಅದೂ ಆಗಬಹುದೇನೋ' ಎಂದೆ.

ಚರ್ಚೆ

ಕನ್ನಡ: ಸಮಕಾಲೀನ ಅಗತ್ಯ ಮನಗಾಣೋಣ

ನಮ್ಮ ಹಲವು ಭಾಷೆಗಳು ಅಳಿವಿನ ಅಂಚಿನಲ್ಲಿರುವ ಈಗಿನ ಆತಂಕಕಾರಿ ಸನ್ನಿವೇಶದಲ್ಲಿ, ನಾವು 'ಶುದ್ಧ ಕನ್ನಡ' ಕಟ್ಟಲು ಹೊರಟಿರುವುದು ಎಷ್ಟು ಸರಿ?

• ಡಾ. ಸರ್ಫ್ರಾಜ್ ಚಂದ್ರಗುತ್ತಿ

ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯ ಘಟಕದ ಅಧ್ಯಕ್ಷ ಮಹೇಶ ಜೋಶಿಯವರು 'ಅ'ಕಾರ 'ಹ'ಕಾರ ತಿಳಿಯದ, ಶುದ್ಧ ಕನ್ನಡ ಗೊತ್ತಿಲ್ಲದವರ ಕುರಿತು ಮಾತನಾಡಿದ್ದಾರೆ (ಪ್ರ.ವಾ., ಡಿ. 12). ಜಾಗತೀಕರಣದ ಎದುರಲ್ಲಿ ದೇಶಭಾಷೆಗಳು ಅನೇಕ ಸವಾಲುಗಳನ್ನು ಎದುರಿಸುತ್ತಿರುವ ಈ ಹೊತ್ತು, ಕನ್ನಡದ ಅಸ್ತಿತ್ವವನ್ನು ಉಳಿಸಿಕೊಳ್ಳುವುದು ಹೇಗೆಂಬ ಪ್ರಶ್ನೆ ಹಿಂದೆಂದಿಗಿಂತಲೂ ಇಂದು ಹೆಚ್ಚು ಪ್ರಸ್ತುತವಾಗಿದೆ.

ಇಂತಹ ಬಿಕ್ಕಟ್ಟಿನ ಸಂದರ್ಭದಲ್ಲಿ ಕೆಲವರು 'ಶುದ್ಧ ಕನ್ನಡದಲ್ಲಿ ಮಾತನಾಡಿ- ವ್ಯವಹರಿಸಿ' ಎಂದು ಕರೆ ನೀಡುತ್ತಿದ್ದಾರೆ. ಶುದ್ಧ ಕನ್ನಡದಲ್ಲಿಯೇ ಮಾತನಾಡುವ, ಬರೆಯುವ ಸ್ಪರ್ಧೆಗಳನ್ನೂ ಆಯೋಜಿಸಲಾಗುತ್ತಿದೆ. ನವೆಂಬರ್ ತಿಂಗಳಲ್ಲಿ ಕನ್ನಡಿಗರನ್ನು ಆವರಿಸುವ ಅತ್ಯುತ್ಸಾಹವು ಇದಕ್ಕೆ ನೀರೆರೆದು ಪೋಷಿಸುತ್ತಿದೆ. ತಮ್ಮ ಭಾಷಾ ಬಳಕೆಯಿಂದ ಇಂಗ್ಲಿಷ್ ಪದಗಳನ್ನು ಹೊರಗಿಡುವುದೇ 'ಶುದ್ಧಗನ್ನಡ ಪ್ರಯೋಗ' ಎಂಬ ಭಾವನೆ ಅವರದು.

ಶುದ್ಧ ಕನ್ನಡವನ್ನೇ ಪ್ರಯೋಗಿಸುವ ಈ ಆಲೋಚನೆಗೆ ತುಂಬಾ ಹಳೆಯ ಇತಿಹಾಸವಿದೆ. ಇಂದು ಇಂಗ್ಲಿಷ್ ಪದಬಳಕೆಯನ್ನು ವಿರೋಧಿಸುವ ಹಾಗೆಯೇ ಅಂದು ಸಂಸ್ಕೃತ ಪದಪ್ರಯೋಗವನ್ನು ಹಳಗನ್ನಡ ಕವಿಗಳು ವಿರೋಧಿಸಿದ್ದರು. 'ತಕ್ಕುದೆ ಬೆರೆಸಲ್ಕೆ ಘೃತಮುಮಂ ತೈಲಮುಮಂ' ಎಂದು ನಯಸೇನ ಪ್ರಶ್ನಿಸಿದ್ದ. ಆಂಡಯ್ಯ ಸಂಸ್ಕೃತ ಪದಗಳನ್ನು ಬಹಿಷ್ಕರಿಸಿ 'ಕಬ್ಬಿಗರ ಕಾವ'ವನ್ನು ರಚಿಸಿದ. ಇಂತಹ ಪ್ರಯತ್ನದಲ್ಲಿ ಆತ ಯಶಸ್ವಿಯಾದುದಕ್ಕಿಂತ ವಿಫಲನಾದದ್ದೇ ಹೆಚ್ಚು. ಆದ್ದರಿಂದಲೇ ಆತನ ನಂತರದ ಕವಿಗಳು ಈ ಪರಂಪರೆಯನ್ನು ಮುಂದುವರಿಸಲಿಲ್ಲ. ಜನರೂ ಇಂತಹ ಪ್ರಯೋಗವನ್ನು ಸ್ವಾಗತಿಸಲಿಲ್ಲ.

ಕನ್ನಡ ಭಾಷೆಯ ಸೊಗಸನ್ನು ಕಾಣಲು 'ವಡ್ಡಾರಾಧನೆ' ಓದಬೇಕು ಎನ್ನುತ್ತಾರೆ. ಇಲ್ಲಿಯೂ ಸಂಸ್ಕೃತ, ಪ್ರಾಕೃತ ಮೊದಲಾದ ಅನ್ಯಭಾಷಾ ಪದಗಳು ಬಳಕೆಯಾಗಿವೆ. ಕನ್ನಡ ಕಾವ್ಯ ಪರಂಪರೆಯಲ್ಲಿ ಇಂತಹ ಕನ್ನಡೇತರ ಭಾಷಾ ಪದಪ್ರಯೋಗದ ಬಳಕೆ ಸಮೃದ್ಧವಾಗಿಯೇ ಹರಿದುಬಂದಿದೆ. ಕನ್ನಡದಲ್ಲಿ ಬಳಕೆಯಾಗುತ್ತಿರುವ ಬಹುಪಾಲು ಪದಕೋಶ ಸಂಸ್ಕೃತ ಮೂಲದ್ದು. ಅನ್ಯವನ್ನು ಸ್ವೀಕರಿಸುವ, ಬೇಕಾದುದನ್ನು ಜೀರ್ಣಿಸಿಕೊಳ್ಳುವ ಮನೋಧರ್ಮ ನಮ್ಮ ಸಂಸ್ಕೃತಿಗೆ ಹೊರತಲ್ಲ, ಅಂತೆಯೇ ಭಾಷೆಗೆ ಕೂಡಾ.

ಹಾಗೆಯೇ ಅಂದಿನ ಸಂಸ್ಕೃತದ ಗತ್ತಿನಲ್ಲಿಯೇ ನಮ್ಮ ಬದುಕನ್ನು ಪ್ರವೇಶಿಸಿರುವ ಇಂಗ್ಲಿಷಿನಿಂದ ಸಹ ನಾವು ನಮ್ಮ ನೆಲದ ಜಾಯಮಾನಕ್ಕೆ ಹೊಂದಿಕೊಳ್ಳುವ ಪದಗಳನ್ನೇಕೆ ಸ್ವೀಕರಿಸಬಾರದು? ಕೆಲವು ವರ್ಷಗಳ ಹಿಂದೆ, ಕನ್ನಡದ ಬಳಕೆಯಿಂದ ಇಂಗ್ಲಿಷ್‌ನ ಪದಗಳನ್ನು ಹೊರಗಿಡುವ ಪ್ರಯತ್ನ ನಡೆಯಿತು. ಪೊಲೀಸ್, ಎಂಜಿನಿಯರ್‌ಗಳಿಗೆ ಬದಲು ಆರಕ್ಷಕ, ಅಭಿಯಂತರ ಎಂಬಿತ್ಯಾದಿ ಪದಗಳನ್ನು ಬಳಕೆಗೆ ತರಲು ಪ್ರಯತ್ನಿಸಲಾಯಿತು. ಇಂಗ್ಲಿಷಿಗೆ ಬದಲು ಸಂಸ್ಕೃತ ಪದಗಳನ್ನು ಪ್ರತಿಷ್ಠಾಪಿಸಲಾಯಿತು. ಆದರೆ ಈ ಪ್ರಯೋಗ ಯಶಸ್ವಿಯಾಗಲಿಲ್ಲ. ಮೊಬೈಲನ್ನು ಜಂಗಮವಾಣಿ ಎನ್ನಲಾಯಿತು. ಜನಸಾಮಾನ್ಯರು ಇಂತಹ ಪ್ರಯೋಗಗಳನ್ನು ಒಪ್ಪದೆ, ಆಬಾಲವೃದ್ಧರಾದಿಯಾಗಿ ಇಂದು ಎಲ್ಲರೂ ಮೊಬೈಲ್ ಎಂದೇ ಕರೆಯುತ್ತಿದ್ದಾರೆ.

ತೇಜಸ್ವಿಯವರು ಕಂಪ್ಯೂಟರನ್ನು ಗಣಕಯಂತ್ರ ಎಂದು ಕರೆಯಲು ಒಪ್ಪಿರಲಿಲ್ಲ. ಹೀಗೆ ಕರೆಯುವುದರಲ್ಲಿ ಅರ್ಥವಿಲ್ಲ ಹಾಗೂ ಇಂತಹ ಪ್ರಯೋಗದಿಂದ ಕನ್ನಡವೂ ಶ್ರೀಮಂತವಾಗುವುದಿಲ್ಲ ಎಂದಿದ್ದರು. ಇಂದು ಎಲ್ಲೆಡೆ ಪ್ರಚಲಿತವಾಗಿರುವ ಶಾನುಭೋಗ, ತಹಸೀಲ್ದಾರ್, ಜಿಲ್ಲಾಧಿಕಾರಿ, ಕಚೇರಿ, ದಸ್ತಕತ್, ಸಹಿ, ಮೇಜು, ಕುರ್ಚಿ ಮೊದಲಾದ ನೂರಾರು ಪರ್ಷಿಯನ್ ಪದಗಳು ನಮ್ಮ ವ್ಯಾವಹಾರಿಕ ಕನ್ನಡವನ್ನು ಶ್ರೀಮಂತಗೊಳಿಸಿವೆ. ಕನ್ನಡಾಭಿಮಾನದ ಹೆಸರಲ್ಲಿ ಇವನ್ನೆಲ್ಲಾ ಬಹಿಷ್ಕರಿಸಬಹುದೇ? ಗ್ರೀಕ್, ರೋಮನ್, ಪೋರ್ಚುಗೀಸ್, ಹಿಂದಿ, ಮರಾಠಿ ಮೊದಲಾದ ಅನ್ಯಭಾಷೆಯ ಪದಗಳು ಕನ್ನಡವನ್ನು ಸಮೃದ್ಧಗೊಳಿಸಿವೆ.



ಕೇವಲ ನಾಲ್ಕು ಶತಮಾನಗಳ ಇತ್ತೀಚಿನ ಭಾಷೆಯಾಗಿರುವ ಇಂಗ್ಲಿಷ್ ಜಾಗತಿಕ ಭಾಷೆಯಾಗಿ ಹೇಗೆ ಬೆಳೆಯಿತು? ಪ್ರತಿವರ್ಷವೂ ಜಗತ್ತಿನ ಮೂಲೆ ಮೂಲೆಗಳಿಂದ ತಮ್ಮಲ್ಲಿಲ್ಲದ ವಿಶೇಷವಾದ ಪದಗಳನ್ನು ಸ್ವೀಕರಿಸುತ್ತಾ ಆಕ್ಸ್‌ಫರ್ಡ್ ಶಬ್ದಕೋಶವನ್ನು ಪರಿಷ್ಕರಿಸುತ್ತಾ ಇಂಗ್ಲಿಷನ್ನು ಸಮಕಾಲೀನಗೊಳಿಸಲಾಗುತ್ತದೆ. ಬ್ರಿಟನ್ನಿನ ಕಾಲಿನ್ಸ್ ಪ್ರಕಾಶನವು ಇಂಗ್ಲಿಷನ್ನು ಆಧುನಿಕವಾಗಿ ಬೆಳೆಸಲು ಹೊಸ ಪದಗಳನ್ನು ಆಹ್ವಾನಿಸುತ್ತದೆ. ಹಿಂದೆಂದಿಗಿಂತಲೂ ಕನ್ನಡವು ಇಂದು ವಿಶ್ವಮುಖಿಯಾಗಿ ಬೆಳೆದು ನಿಲ್ಲಲು ಇಂಗ್ಲಿಷಿನಂತೆ ಎಲ್ಲ ದಿಕ್ಕುಗಳಿಗೂ ಕೈಚಾಚಿ ನಿಲ್ಲಬೇಕಾದ ಜರೂರು ಇದೆ. 'ಕನ್ನಡದ ಪುನರುಜ್ಜೀವನ' ಎಂಬ ಲೇಖನದಲ್ಲಿ ಬಿಎಂಶ್ರೀಯವರು, 'ಪುನರುಜ್ಜೀವನ ಎನ್ನುವುದು ಜೀರ್ಣೋದ್ಧಾರವಲ್ಲ. ಹೊಸ ಹೊಸ ನಿರ್ಮಾಣ, ಮರುಹುಟ್ಟು, ಆಳವಾದ ಸಮನ್ವಯ, ಹೊಸದು ಹಳತು, ನಮ್ಮದು ಹೆರರದು ಎಲ್ಲವನ್ನೂ ಹೊಂದಿಕೆ ಮಾಡುವುದು' ಎಂದಿದ್ದರು.

ಇನ್ನು ಕೆಲವೇ ತಲೆಮಾರುಗಳಲ್ಲಿ ಇಂಗ್ಲಿಷ್ ಮಾತ್ರ ಜಗತ್ತಿನ ಏಕಮಾತ್ರ ಭಾಷೆಯಾಗಲಿದೆ ಎಂಬ ಅಭಿಪ್ರಾಯವಿದೆ. ಈಗಾಗಲೇ ಕರ್ನಾಟಕದ ಬಡಗ, ಹಕ್ಕಿಪಿಕ್ಕಿ, ಸೋಲಿಗ, ಕುಡಿಯಾ, ಬಿಲ್ಲಾರ ಮೊದಲಾದ ಬುಡಕಟ್ಟು ಭಾಷೆಗಳು ಅಳಿವಿನ ಅಂಚಿನಲ್ಲಿವೆ. ಇಂತಹ ಆತಂಕಕಾರಿ ಸನ್ನಿವೇಶದಲ್ಲಿ ನಾವು ಅನ್ಯಭಾಷೆಯ ಪದಗಳನ್ನು ಹೆಕ್ಕಿ- ತೆಗೆದುಹಾಕಿ 'ಶುದ್ಧ ಕನ್ನಡ' ಕಟ್ಟಲು ಹೊರಟಿದ್ದೇವೆ. ಇಂತಹವರಿಗೆ ಲೇಖಕ ಚಂಪಾ ನೀಡಿರುವ ಉತ್ತರ- 'ಶುದ್ಧ ಕನ್ನಡ ಶಬ್ದ, ಇದರಲ್ಲಿ ಶುದ್ಧ ಕನ್ನಡ ಒಂದೇ, ಕನ್ನಡ!'

ವಾಚಕರ ವಾಣಿ

ಮರುಸ್ಪರ್ಧೆಗೆ ಬೇಡ ಅವಕಾಶ

ಚುನಾಯಿತ ಪ್ರತಿನಿಧಿಗಳೇ ಮತದಾರರಾಗಿರುವ ವಿಧಾನ ಪರಿಷತ್ ಚುನಾವಣೆಯಲ್ಲಿ ಕೆಲವು ಮತಗಳು ಅಸಿಂಧು ಆಗಿರುವುದು ನಾಚಿಕೆಗೇಡು. ಮತದಾನಪೂರ್ವ ತರಬೇತಿ ನೀಡಿದ್ದರೂ ಇವರಿಗೆ ಮತದಾನ ಮಾಡಲು ಬರುವುದಿಲ್ಲ ಎಂದರೆ ಹೇಗೆ? ಅಸಿಂಧು ಆಗಿರುವ ಮತಗಳ ಮತದಾರರನ್ನು ಚುನಾವಣಾ ಆಯೋಗ ಗುರುತಿಸಿ, ಅವರಿಗೆ ಭವಿಷ್ಯದಲ್ಲಿ ಯಾವುದೇ ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶ ನೀಡಬಾರದು.

ಚಂದ್ರಶೇಖರ ಹುಳ್ಳಿಹಾಳ, ಸಿಂಧನೂರು

ಚಲಾವಣೆಯಲ್ಲಿ ಇಲ್ಲದ ಸವಕಲು ನಾಣ್ಯ

'ಜೀವನ್ಮುಖಿಯಾಗಲಿ ನಮ್ಮ ಜಗತ್ತು' ಎಂಬ ಸತೀಶ್ ಜಿ.ಕೆ. ತೀರ್ಥಹಳ್ಳಿ ಅವರ ಲೇಖನ (ಸಂಗತ, ಡಿ. 15) ಸಮಯೋಚಿತ ಮತ್ತು ಅರ್ಥವತ್ತಾಗಿದೆ. ಆದರೆ ಇದು ಗೋರ್ಕಲ್ಲ ಮೇಲೆ ಮಳೆ ಸುರಿದಂತೆ. ಮನುಷ್ಯ ಸಮಾಜಜೀವಿ ಎನ್ನುವುದು ಸಹ ಈಗ ಚಲಾವಣೆಯಲ್ಲಿ ಇಲ್ಲದ ಸವಕಲು ನಾಣ್ಯವಾಗಿದೆ. ಹಿತವಚನ, ಬುದ್ಧಿವಾದಗಳನ್ನು ಕೇಳಿಸಿಕೊಳ್ಳುವ ವ್ಯವಧಾನ ಯುವಜನರಲ್ಲಿ ಇಲ್ಲ. ಅಂಧ ಪ್ರೀತಿ, ವಾತ್ಸಲ್ಯದಂಥ ಕಾರಣಗಳಿಂದ ಕಿರಿಯರನ್ನು ತಿದ್ದಿ ಬುದ್ಧಿ ಹೇಳುವ ಮನಃಸ್ಥಿತಿ ಹಿರಿಯರಲ್ಲಿಲ್ಲ.

ಈ ಮಾನಸಿಕ ದುಃಸ್ಥಿತಿಯ ಜೊತೆಯಲ್ಲಿ, ಪರಿಸರ ಮಾಲಿನ್ಯ, ಪ್ರಕೃತಿ ವಿಕೋಪ, ಬರ, ಪ್ರವಾಹ, ಸಾಂಕ್ರಾಮಿಕ ರೋಗ, ಸ್ವಾರ್ಥ ರಾಜಕಾರಣಿಗಳಿಂದ ಜನಸಾಮಾನ್ಯರ ಸಂಕಷ್ಟ ಹೆಚ್ಚಾಗಿದೆ. ಇಂತಹ ಸ್ಥಿತಿಯಲ್ಲಿ ನಮಗೆ ಬೇಕಾದ ನೆಮ್ಮದಿ, ಮನಃಶಾಂತಿಯನ್ನು ನಾವೇ ಕಂಡುಕೊಳ್ಳಬೇಕು. ಅದನ್ನು ಯಾರಿಂದಲೂ ನಿರೀಕ್ಷೆ ಮಾಡಲಾಗದು.

ಟಿ.ವಿ.ಬಿ. ರಾಜನ್, ಬೆಂಗಳೂರು

ಜಾಣರು ಜಗುಲಿ ಸೇರುವಂತಾಗಲಿ!

ರಾಜಕೀಯದಿಂದ ದೂರ ಉಳಿದ ವಿವಿಧ ಕ್ಷೇತ್ರಗಳ ಪ್ರಾಜ್ಞರು ರಾಜಕೀಯದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲು ವಿಧಾನ ಪರಿಷತ್ತಿನ ಮೂಲಕ ಒಂದು ವೇದಿಕೆ ಕಲ್ಪಿಸಬೇಕೆಂಬ ದೂರದೃಷ್ಟಿಯಿಂದ ಸಂವಿಧಾನ ರಚನಾಕಾರರು ವಿಧಾನ ಪರಿಷತ್‌ಗೆ ಅವಕಾಶ ಕಲ್ಪಿಸಿದರು. ಆದರೆ ಪ್ರಸ್ತುತ ಸನ್ನಿವೇಶವನ್ನು ನೋಡಿದಾಗ, ಹಿರಿಯರ ಸದನ, ಜಾಣರ ಜಗುಲಿ ಎಂದೆಲ್ಲ ಕರೆಸಿಕೊಳ್ಳುತ್ತಿದ್ದ ವಿಧಾನ ಪರಿಷತ್ ಈಗ ಶ್ರೀಮಂತರ ಸದನ, ಕೆಲವೇ ಕುಟುಂಬಗಳ ಆಸ್ತಿ ಎಂಬಂತೆ ಆಗಿರುವುದು ದುರದೃಷ್ಟಕರ. ಸಂವಿಧಾನದ ಆಶಯದಂತೆ ಇರಬೇಕಿದ್ದ ಪರಿಷತ್ತಿನ ಪಾವಿತ್ರ್ಯ ಮಾಯವಾಗುತ್ತಿದೆ.

ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಇದು ಜನರಿಗೆ ತಪ್ಪು ಸಂದೇಶ ರವಾನೆ ಮಾಡುತ್ತಿದೆ. ಅಭ್ಯರ್ಥಿಗಳು ಗೆಲುವಿಗಾಗಿ ಹಣದ ಹೊಳೆಯನ್ನೇ ಹರಿಸುತ್ತಿದ್ದಾರೆ. ಹೀಗಾದರೆ ಸೂಕ್ತ ಜಾಣರು ಜಗುಲಿ ಸೇರಲಾರರು. ಮುಂಬರುವ ದಿನಗಳಲ್ಲಿ ಮತದಾರರು ಜಾಗೃತರಾಗಬೇಕು, ಇಲ್ಲದಿದ್ದರೆ ವಿಧಾನ ಪರಿಷತ್ತನ್ನು ಕೈಬಿಡಬೇಕು.

ಬಸವಪ್ರಸಾದ ಶಂಕರ ಸಂಕಪಾಳ, ನೇರ್ಲಿ, ಬೆಳಗಾವಿ

ಹಿಂದೂ ಮತ್ತು ಹಿಂದುತ್ವ- ಶಬ್ದಗಳ ಆಟ

ಕಾಂಗ್ರೆಸ್‌ನ ಪ್ರಮುಖ ನಾಯಕ ರಾಹುಲ್ ಗಾಂಧಿ ಅವರು ಕೂದಲು ಸೀಳುವ ತರ್ಕ ಅಥವಾ ಅತಿಜಾಣತನದ ಮಾತುಗಳನ್ನು ಬಳಸಿ ಜೈಪುರದಲ್ಲಿ 'ಭಾರತ ಹಿಂದೂಗಳ ದೇಶ, ... ಹಿಂದುತ್ವವಾದಿಗಳನ್ನು ಉಚ್ಚಾಟಿಸಿ ಹಿಂದೂಗಳ ಆಳ್ವಿಕೆ ನೆಲೆಗೊಳಿಸಬೇಕು' ಎಂದೆಲ್ಲ ಹೇಳಿರುವುದನ್ನು ಕೇವಲ ಅವರ ಚಮತ್ಕಾರದ ಮಾತುಗಳಿಗಾಗಿ ಮೆಚ್ಚಬಹುದೇ ವಿನಾ ವಾಸ್ತವದ ನೆಲೆಯಲ್ಲಿ ಅಲ್ಲ. ಕಾರಣ, ಈ ದೇಶದ ಸಂವಿಧಾನದ ಪ್ರಕಾರ ಭಾರತವು ಹಿಂದೂಗಳ ದೇಶ ಅಲ್ಲವೇ ಅಲ್ಲ. ಹಾಗೆಂದು ಹೇಳಿದರೆ ಅದು ತಪ್ಪಾಗುತ್ತದೆ ಮತ್ತು ಇಲ್ಲಿ ಹಿಂದೂಗಳ ಆಳ್ವಿಕೆ ನೆಲೆಗೊಳ್ಳಬೇಕು ಎನ್ನುವುದೂ ಅಷ್ಟೇ ತರ್ಕಹೀನ. ಭಾರತವು ಹಿಂದೂ, ಜೈನ, ಬೌದ್ಧ, ಸಿಖ್, ಕ್ರೈಸ್ತರು, ಮಹಮ್ಮದೀಯರು, ಪಾರ್ಸಿಗಳು ಹೀಗೆ ಸಕಲ ಜಾತಿ, ಧರ್ಮಗಳನ್ನೊಳಗೊಂಡ ಭಾರತೀಯರ ದೇಶ ಎಂಬುದು ಇಂದು ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗೂ ಗೊತ್ತಿದೆ. ಆದ್ದರಿಂದ ಇದು ಹಿಂದೂಗಳ ದೇಶ ಎನ್ನುವುದು ಎಷ್ಟು ನಿಜವೋ ಮೇಲೆ ಹೆಸರಿಸಲಾದ ಉಳಿದೆಲ್ಲ ಜಾತಿ, ಧರ್ಮಗಳವರ ದೇಶವೂ ಹೌದೆಂಬುದು ಸೂರ್ಯ ಸತ್ಯ.

ಇಲ್ಲಿ ಹಿಂದೂಗಳ ಆಳ್ವಿಕೆ ನೆಲೆಗೊಳ್ಳಬೇಕು ಎಂದರೆ ಅದರ ಹಿಂದೆಯೇ 'ಹಿಂದೂಯೇತರರು ಏನು ಹಿಂದೂಗಳ ಕೈಕೆಳಗೆ ಆಳಿಸಿಕೊಳ್ಳುವುದಕ್ಕೆ ಮಾತ್ರ ಹುಟ್ಟಿದವರೇ' ಎಂಬ ಪ್ರಶ್ನೆ ಏಳುತ್ತದೆ. ಅವರು ಯಾರನ್ನು ಹಿಂದುತ್ವವಾದಿಗಳು ಎಂದು ಕರೆಯುತ್ತಾರೋ ಅವರನ್ನು ಹಿಂದೂಗಳಲ್ಲ ಎಂದು ಯಾವ ತರ್ಕದ ಮೇಲೆ ಇವರು ಹೇಳುತ್ತಾರೆ? ಅವರೂ ಮೂಲತಃ ಹಿಂದೂಗಳೇ. ಹಿಂದೂಗಳ ಕಾರಣವನ್ನೇ ಎಲ್ಲಕ್ಕಿಂತ ಮೇಲೆ ಎತ್ತಿಹಿಡಿಯುವವರಾದ ಕಾರಣ ಭಾರತದಂಥ ಪ್ರಜಾಪ್ರಭುತ್ವವಾದಿ, ಬಹುತ್ವದ ನೆಲೆಯ ದೇಶಕ್ಕೆ ಅವರ ವಾದ ಒಪ್ಪಲಾಗದಂಥದ್ದು ಎಂದಷ್ಟೇ ಹೇಳಬಹುದು.

ಹಿಂದೂ ಇಲ್ಲದೆ ಹಿಂದುತ್ವ ಇಲ್ಲ. ಆದರೆ ಹಿಂದುತ್ವ (ರಾಹುಲರು ಹೇಳುವ ಹಿಂದುತ್ವ) ಇಲ್ಲದೆಯೂ ಹಿಂದೂ ಇರಬಹುದು, ಇರಬಲ್ಲ. ಹಿಂದೂವಿಲ್ಲದ ಹಿಂದುತ್ವ ಎಂದರೆ ಷೇಕ್ಸ್‌ಪಿಯರ್ ಮಹಾಕವಿಯ 'ಮರ್ಚೆಂಟ್ ಆಫ್ ವೆನಿಸ್' ನಾಟಕದಲ್ಲಿ, ಒಂದು ಪೌಂಡ್ ಮಾಂಸವನ್ನು ಆಂಟೋನಿಯೊ ದೇಹದಿಂದ ಕೊಯ್ದುಕೊಳ್ಳುತ್ತೇನೆಂಬ ಶೈಲಾಕನಿಗೆ ಪೋರ್ಷಿಯಾ ಎಂಬ ಲಾಯರ್ ಪಾತ್ರಧಾರಿ ಹೇಳುವ 'ಎ ಪೌಂಡ್ ಆಫ್ ಫ್ಲೆಷ್, ಬಟ್ ನಾಟ್ ಎ ಡ್ರಾಪ್ ಆಫ್ ಬ್ಲಡ್' ಎಂದು ಹೇಳಿದಂಥದ್ದೇ ಚಮತ್ಕಾರಪೂರ್ಣ ವಾದವಾಗುತ್ತದೆ. ಅದು ಶಬ್ದಗಳ ಮೇಲಿನ ಆಟ.

ಹಿಂದೂಗಳನ್ನು ಒಲಿಸಿಕೊಳ್ಳುವ ಭರದಲ್ಲಿ, ಪಾರ್ಸಿ ತಂದೆ, ಹಿಂದೂ ತಾಯಿಯ ಮಗನಾಗಿ ಜನಿಸಿ, ಕ್ರಿಶ್ಚಿಯನ್ ಮಹಿಳೆಯ ಕೈಹಿಡಿದ ಮಾಜಿ ಪ್ರಧಾನಿಯವರ ನಿಜವಾದ ಅರ್ಥದ ಜಾತ್ಯತೀತ ಪುತ್ರನಿಗೆ ಹೀಗೆ ಇದ್ದಕ್ಕಿದ್ದಂತೆ 'ನಾನು ಹಿಂದೂ' ಎಂದು ಘೋಷಿಸಿಕೊಳ್ಳುವ ದರ್ದು ಏನಿದೆ? ತಾನೊಬ್ಬ ನಿಜವಾದ ಜಾತ್ಯತೀತ ದೇಶಭಕ್ತ ಭಾರತೀಯನೆಂಬ ಹೆಮ್ಮೆ ಸಾಲದೇ? ಆ ದರ್ದು ಏನೆಂಬುದು ಎಲ್ಲರಿಗೂ ಗೊತ್ತಿರುವ ಸತ್ಯ.

ಡಾ. ಆರ್.ಲಕ್ಷ್ಮೀನಾರಾಯಣ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಬಾಂಗ್ಲಾ ವಿಮೋಚನೆಗಾಗಿ ಯುದ್ಧ ಗೆದ್ದ ಭಾರತ

• ಜೆ.ಕೆ.ಜಮಾದಾರ

ಆಧುನಿಕ ಪ್ರಪಂಚದ ಯುದ್ಧಗಳ ಇತಿಹಾಸದಲ್ಲಿ ಭಾರತದ ಪ್ರಧಾನಿ ಇಂದಿರಾಗಾಂಧಿ ಮತ್ತು ಇಸ್ರೇಲ್ ಪ್ರಧಾನಿ ಗೋಲ್ಡಾಮೇರ ಅವಿಸ್ಮರಣೀಯರು. ಇಂದಿರಾ ಗಾಂಧಿ ಅವರು ಬಾಂಗ್ಲಾ ವಿಮೋಚನೆಗಾಗಿ 1971 ಡಿಸೆಂಬರ್ 3 ರಿಂದ 16ರವರೆಗೆ ನಡೆಸಿದ ಯುದ್ಧದಲ್ಲಿ ಇತಿಹಾಸ ಸೃಷ್ಟಿಸಿದರು. ಅಲ್ಲದೆ ಜಗತ್ತಿನ ಭೂಗೋಳ ಬದಲಿಸಿದ ಶ್ರೇಯಸ್ಸಿಗೆ ಪಾತ್ರರಾದ ಭಾರತದ ದುರ್ಗೆಯಾದರು. ಗೋಲ್ಡಾಮೇರ ಅವರು ಆರು ದಿನಗಳ ಯುದ್ಧದಲ್ಲಿ ತಮ್ಮ ಸುತ್ತಲಿನ ಆರು ದೇಶಗಳನ್ನು ಸೋಲಿಸಿ ದಾಖಲೆ ಬರೆದರು. ಈ ಇಬ್ಬರು ಮಹಿಳೆಯರ ಸಾಧನೆ ಅದ್ಭುತ, ಅನನ್ಯ, ಅಸಾದೃಶ್ಯ ಮತ್ತು ಅಸಾಧಾರಣ.

ಬಾಂಗ್ಲಾದೇಶ ಉದಯವಾಗಿ ಅರ್ಧ ಶತಮಾನವಾಗುತ್ತಿರುವ ಈ ಸಂದರ್ಭದಲ್ಲಿ ಬಾಂಗ್ಲಾ ವಿಮೋಚನಾ ಯುದ್ಧದ ಸ್ಮರಣೆ ಮಾಡಬೇಕಾಗಿದೆ. ಬಾಂಗ್ಲಾ ವಿಮೋಚನಾ ಯುದ್ಧಕ್ಕಿಂತ ಮೊದಲು, ಈಗ ನಾವು ಬಾಂಗ್ಲಾದೇಶ ಎಂದು ಕರೆಯುವ ಪ್ರದೇಶವು ಪಾಕಿಸ್ತಾನದ ಭಾಗವಾಗಿತ್ತು. ಅದನ್ನು ಪೂರ್ವ ಪಾಕಿಸ್ತಾನವೆಂದು ಕರೆಯಲಾಗುತ್ತಿತ್ತು. 1970ರಲ್ಲಿ ನಡೆದ ಚುನಾವಣೆಯಲ್ಲಿ ಪೂರ್ವ ಪಾಕಿಸ್ತಾನದಲ್ಲಿ ನೆಲೆಯಾಗಿದ್ದ ಶೇಕ್ ಮುಜೀಬರ್ ರಹಮಾನರ ನೇತೃತ್ವದ ಅವಾಮಿ ಲೀಗ್ ಸ್ಪಷ್ಟ ಬಹುಮತ ಪಡೆಯಿತು. ಆದರೆ ಸೇನೆಯ ಮೇಲೆ ಹಿಡಿತ ಹೊಂದಿದ್ದ ಪಾಕಿಸ್ತಾನವು, ಅವಾಮಿ ಲೀಗ್ ಅಧಿಕಾರ ಸ್ವೀಕರಿಸುವುದನ್ನು ಹತ್ತಿಕ್ಕಲು ಢಾಕಾದಲ್ಲಿ 'ಆಪರೇಷನ್ ಸರ್ಚ್‌ಲೈಟ್' ಹೆಸರಿನಲ್ಲಿ ನರಮೇಧ ನಡೆಸಿತು. ಢಾಕಾ ವಿಶ್ವವಿದ್ಯಾಲಯದ ಬುದ್ಧಿಜೀವಿಗಳನ್ನು ಚಿಂತ್ರಹಿಂಸೆ ನೀಡಿ ಕೊಲ್ಲಲಾಯಿತು.

1971ರ ಮಾರ್ಚ್ 25ರಂದು ಪೂರ್ವ ಪಾಕಿಸ್ತಾನವನ್ನು ಸ್ವತಂತ್ರ, ಸಾರ್ವಭೌಮ ಬಾಂಗ್ಲಾದೇಶ ಎಂದು ಘೋಷಿಸಲಾಯಿತು.

ಇದರ ವಿರುದ್ಧ ಪಾಕಿಸ್ತಾನವು ಬಾಂಗ್ಲಾದೇಶದಲ್ಲಿ ಇತಿಹಾಸದಲ್ಲಿ ಕೇಳರಿಯದಂತಹ ಅತ್ಯಾಚಾರ, ಅನಾಚಾರ, ಕೊಲೆ, ಸುಲಿಗೆ ಆರಂಭಿಸಿತು. ಆ ಅವಧಿಯಲ್ಲಿ 10 ಲಕ್ಷದಷ್ಟು ಬಂಗಾಳಿಗಳು ಜೀವ ಉಳಿಸಿಕೊಳ್ಳುವ ಸಲುವಾಗಿ ಭಾರತಕ್ಕೆ ವಲಸೆ ಬಂದರು. 1971ರ ಮಾರ್ಚ್ 26ರಿಂದ ಡಿಸೆಂಬರ್ 16ರಂದು ಬಾಂಗ್ಲಾದೇಶ ಉದಯವಾಗುವವರೆಗೆ ಲಕ್ಷಾಂತರ ನಿರಾಶ್ರಿತರನ್ನು ನೋಡಿಕೊಳ್ಳಬೇಕಾದ ಅನಿವಾರ್ಯ ಭಾರತದ ಹೆಗಲೇರಿತ್ತು.

ಬಾಂಗ್ಲಾದೇಶದ ಜನರು ದೇಶದ ರಕ್ಷಣೆಗಾಗಿ ಪಾಕಿಸ್ತಾನ ಸೇನೆಯ ವಿರುದ್ಧ ಹೋರಾಡಲು ಸಂಘಟಿತರಾದರು. ಈ ಹೋರಾಟಕ್ಕೆ ಭಾರತವು ಎಲ್ಲಾ ರೀತಿಯ ನೆರವು ಮತ್ತು ತರಬೇತಿ ನೀಡಿತು.

ಬಾಂಗ್ಲಾ ವಿಮೋಚನಾ ಯುದ್ಧದ ತುರ್ತು ಸಂದರ್ಭವನ್ನು ಅಂದಿನ ಪ್ರಧಾನಿ ಇಂದಿರಾ ಗಾಂಧಿ ಅವರು ಅತ್ಯಂತ ಚಾಣಾಕ್ಷತನ ಮತ್ತು ರಾಜತಾಂತ್ರಿಕ ನೈಪುಣ್ಯದಿಂದ ನಿರ್ವಹಿಸಿದರು. ರಷ್ಯಾ ಜತೆಗೆ ಮೈತ್ರಿ ಮಾಡಿಕೊಂಡರು. ಅಮೆರಿಕದ ಅಂದಿನ ಅಧ್ಯಕ್ಷ ರಿಚರ್ಡ್ ನಿಕ್ಸನ್ ಆಡಳಿತವು ಆಗ ಪಾಕಿಸ್ತಾನದ ಪರವಾಗಿತ್ತು. ಈ ಸಲುವಾಗಿ ನಿಕ್ಸನ್ ಜತೆಗೆ ಇಂದಿರಾ ಗಾಂಧಿ ಮಾತುಕತೆ ನಡೆಸಿದರು. 'ಭಾರತವು ಅಭಿವೃದ್ಧಿಶೀಲವಾಗಿರಬಹುದು. ಆದರೆ ತನ್ನ ಆತ್ಮಗೌರವ ಮತ್ತು ಸ್ವಾಭಿಮಾನವನ್ನು ಕಾಪಾಡಿಕೊಳ್ಳಲು ಭಾರತಕ್ಕೆ ಬರುತ್ತದೆ' ಎಂದು ನಿಕ್ಸನ್‌ಗೆ ದಿಟ್ಟ ಉತ್ತರ ನೀಡಿದ್ದರು. ಪಾಕಿಸ್ತಾನಕ್ಕೆ ಆಪ್ತವಾಗಿದ್ದ ಚೀನಾ ಸಹ ಯುದ್ಧ ಪ್ರವೇಶಿಸದಂತೆ ಇಂದಿರಾ ಎಚ್ಚರವಹಿಸಿದರು. ಮುಸ್ಲಿಂ ದೇಶಗಳು ತಟಸ್ಥವಾಗಿರುವಂತೆ ನೋಡಿಕೊಂಡರು.



ಬಾಂಗ್ಲಾ ವಿಮೋಚನೆಯ 50ನೇ ವರ್ಷಾಚರಣೆಯಲ್ಲಿ ಪಾಲ್ಗೊಳ್ಳಲು ಢಾಕಾಗೆ ತೆರಳಿರುವ ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರು ಬಂಗಬಂಧು ರಾಷ್ಟ್ರೀಯ ಸ್ಮಾರಕಕ್ಕೆ ಬುಧವಾರ ಭೇಟಿ ನೀಡಿದ್ದರು —ಪಿಟಿಐ ಚಿತ್ರ

ಪಾಕಿಸ್ತಾನವು ಡಿಸೆಂಬರ್ 3ರಂದು ಭಾರತದ ವಾಯುನೆಲೆಗಳ ಮೇಲೆ ದಾಳಿ ನಡೆಸಿತು. ತಕ್ಷಣವೇ ಎಚ್ಚೆತ್ತ ಭಾರತೀಯ ಸೇನೆಯು ಪಾಕಿಸ್ತಾನದ ಮೇಲೆ ದಾಳಿ ಆರಂಭಿಸಿತು. ನೌಕಾಪಡೆ ಮತ್ತು ವಾಯುಪಡೆಗಳೂ ಬಾಂಗ್ಲಾ ವಿಮೋಚನೆಗಾಗಿ ಕಾರ್ಯಾಚರಣೆ ಆರಂಭಿಸಿದವು. ಇದರ ಬೆನ್ನಲ್ಲೇ ಸೋಲೊಪ್ಪಿಕೊಂಡ ಪಾಕಿಸ್ತಾನ ಸೇನೆಯು ಡಿಸೆಂಬರ್ 16ರಂದು ಭಾರತೀಯ ಸೇನೆಗೆ ಶರಣಾಯಿತು.

ಪಾಕಿಸ್ತಾನದ ಲೆಫ್ಟಿನೆಂಟ್ ಜನರಲ್ ಅಮೀರ್ ಅಬ್ದುಲ್ಲಾ ಖಾನ್ ನಿಯಾಜಿ ಅವರು 93,000 ಸೈನಿಕರೊಂದಿಗೆ ಭಾರತೀಯ ಸೇನೆಗೆ ಶರಣಾದರು. ಭಾರತೀಯ ಸೇನೆಯ ಲೆಫ್ಟಿನೆಂಟ್ ಜನರಲ್ ಜಗಜಿತ್ ಸಿಂಗ್ ಅರೋರಾ ಅವರ ಎದುರು ನಿಯಾಜಿ ಶರಣಾಗತಿ ಪತ್ರಕ್ಕೆ ಸಹಿ ಹಾಕಿದರು.

1972ರಲ್ಲಿ ನಡೆದ ಶಿಮ್ಲಾ ಒಪ್ಪಂದದಲ್ಲಿ ಪಾಕಿಸ್ತಾನವು, ಬಾಂಗ್ಲಾದೇಶವನ್ನು ಸ್ವತಂತ್ರ ದೇಶವೆಂದು ಮಾನ್ಯ ಮಾಡಿತು. ಭಾರತಕ್ಕೆ ಶರಣಾಗಿದ್ದ ಪಾಕಿಸ್ತಾನ ಸೇನೆಯ ಸಾವಿರಾರು ಯುದ್ಧಕೈದಿಗಳನ್ನು ನಂತರದ ಐದು ತಿಂಗಳಲ್ಲಿ ಬಿಡುಗಡೆ ಮಾಡಲಾಯಿತು. ಯುದ್ಧಕೈದಿಗಳನ್ನು ಬಿಡುಗಡೆ ಮಾಡುವಲ್ಲಿ ಭಾರತ ಉದಾರವಾಗಿ ನಡೆದುಕೊಂಡಿತೆಂಬ ಟೀಕೆ ವ್ಯಕ್ತವಾದರೂ, ಗೆದ್ದವರು ಯಾವಾಗಲೂ ಉದಾರವಾಗಿ ಇರಬೇಕೆಂಬ ತತ್ವವನ್ನು ಇಂದಿರಾ ಗಾಂಧಿ ಅವರು ಜಗತ್ತಿಗೆ ಸಾರಿದರು. ಈ ಮೂಲಕ ಪ್ರಪಂಚದಾದ್ಯಂತ ಭಾರತದ ಖ್ಯಾತಿ ವಿಜೃಂಭಿಸುವಂತೆ ಮಾಡಿದರು.

ಭಾರತ–ಬಾಂಗ್ಲಾ: ಅರ್ಧ ಶತಮಾನದ ಬಂಧ

ಬಾಂಗ್ಲಾ ವಿಮೋಚನೆಯ 50ನೇ ವರ್ಷಾಚರಣೆಯ ಸಂಭ್ರಮದಲ್ಲಿ, ಭಾರತ–ಬಾಂಗ್ಲಾದೇಶ ನಡುವಿನ ದ್ವಿಪಕ್ಷೀಯ ಮೈತ್ರಿಗೆ ಅರ್ಧ ಶತಮಾನ ಸಂದಿರುವ ಮೈಲಿಗಲ್ಲೂ ಸೇರಿಕೊಂಡಿದೆ. 1971ರ ಡಿಸೆಂಬರ್ 6ರಂದು ಬಾಂಗ್ಲಾದೇಶವನ್ನು ಸಾರ್ವಭೌಮ ದೇಶ ಎಂದು ಮೊದಲು ಪರಿಗಣಿಸಿದ್ದು ಭಾರತ. ಐತಿಹಾಸಿಕ ಮತ್ತು ಭೌಗೋಳಿಕ ದೃಷ್ಟಿಯಿಂದ ಭಾರತ ಹಾಗೂ ಬಾಂಗ್ಲಾದೇಶದ ನಡುವೆ ಸಾಮಾಜಿಕ, ಸಾಂಸ್ಕೃತಿಕ, ಭಾಷಿಕ ಅಂಶಗಳಲ್ಲಿ ನಂಟಿದೆ.

ವಿಮೋಚನೆಯ ನಂತರ ಬಾಂಗ್ಲಾದೇಶಕ್ಕೆ ಪೆಟ್ಟು ನೀಡಿದ್ದು 1975ರಲ್ಲಿ ನಡೆದ ಶೇಕ್ ಮುಜೀಬರ್ ರಹಮಾನ್ ಅವರ ಹತ್ಯೆ. ಇದು ಭಾರತಕ್ಕೂ ಆಘಾತ ನೀಡಿತು. ವಿವಿಧ ರಾಜಕೀಯ ಬದಲಾವಣೆಗಳ ಬಳಿಕ, ಬಾಂಗ್ಲಾದೇಶವು ಸೇನಾ ಆಡಳಿತಕ್ಕೊಳಪಟ್ಟಿದ್ದರಿಂದ ಮೈತ್ರಿ ಮೇಲೆ ಗಂಭೀರ ಪರಿಣಾಮ ಉಂಟಾಯಿತು. 1990ರ ದಶಕದಲ್ಲಿ ಬಾಂಗ್ಲಾ ದೇಶದಲ್ಲಿ ಪ್ರಜಾಪ್ರಭುತ್ವದ ಮರುಸ್ಥಾಪನೆ, ನಂತರದ ದಿನಗಳಲ್ಲಿ ತೆಗೆದುಕೊಂಡ ಪಕ್ವ ನಿರ್ಧಾರಗಳು ಮತ್ತು ಆರ್ಥಿಕತೆಯಲ್ಲಿ ಕಂಡುಬಂದ ಚೇತರಿಕೆ ಮೊದಲಾದ ಅಂಶಗಳು ಢಾಕಾ ಮತ್ತು ದೆಹಲಿ ನಡುವಿನ ಸಂಬಂಧಗಳಲ್ಲಿ ಹೊಸಯುಗಕ್ಕೆ ಕಾರಣವಾದವು.

- ಕೋವಿಡ್ ನಿಯಂತ್ರಿಸುವ ಲಸಿಕೆಗಳು ಸಿದ್ಧವಾದ ತಕ್ಷಣ ಬಾಂಗ್ಲಾ ಸೇರಿದಂತೆ ಅಕ್ಕಪಕ್ಕದ ದೇಶಗಳಿಗೆ ಆದ್ಯತೆ ನೀಡುವುದಾಗಿ ಭಾರತ ಘೋಷಿಸಿತ್ತು
- 2015ರ ಭೂ ಗಡಿ ಒಪ್ಪಂದವು (ಎಲ್‌ಬಿಎ) ಉಭಯ ದೇಶಗಳ ಗಾಢ ಮೈತ್ರಿಗೆ ಪ್ರಮುಖ ನಿದರ್ಶನ. ಪ್ರಾದೇಶಿಕ ಭದ್ರತೆ ಹಾಗೂ ಅಭಿವೃದ್ಧಿಯಲ್ಲಿ ಇದರ ಪಾತ್ರ ಮಹತ್ವದ್ದು
- ಭಾರತದ 72ನೇ ಗಣರಾಜ್ಯೋತ್ಸವ ಪರೇಡ್‌ನಲ್ಲಿ ಬಾಂಗ್ಲಾದೇಶ ಸೇನೆ ಭಾಗಿಯಾಗಿತ್ತು. ಈವರೆಗೆ ಪರೇಡ್‌ನಲ್ಲಿ ಫ್ರಾನ್ಸ್ ಮತ್ತು ಯುಎಇ ಸೇನೆ ಮಾತ್ರ ಭಾಗಿಯಾದ ಶ್ರೇಯ ಹೊಂದಿದ್ದವು
- ಉಭಯ ದೇಶಗಳು ಹಲವು ಬಾರಿ ಜಂಟಿ ಸೇನಾ (ಸಂಪ್ರೀತಿ) ಮತ್ತು ನೌಕಾ ಕಸರತ್ತು (ಮಿಲಾನ್) ನಡೆಸಿವೆ
- ಎರಡೂ ದೇಶಗಳು 54 ನದಿಗಳಲ್ಲಿ ಪಾಲು ಹೊಂದಿವೆ. ದ್ವಿಪಕ್ಷೀಯ ಜಂಟಿ ನದಿ ಆಯೋಗವು (ಜೆಆರ್‌ಸಿ) ನದಿ ವ್ಯವಸ್ಥೆಯಲ್ಲಿ ಉಭಯ ದೇಶಗಳಿಗೂ ಗರಿಷ್ಠ ಪ್ರಯೋಜನಗಳನ್ನು ಒದಗಿಸುವ ಸಂಪರ್ಕ ಕೊಂಡಿಯಾಗಿ 1972ರಿಂದಲೂ ಕೆಲಸ ಮಾಡುತ್ತಿದೆ
- 2011ರಿಂದ ದಕ್ಷಿಣ ಏಷ್ಯಾ ಮುಕ್ತ ವ್ಯಾಪಾರ ವಲಯ (ಎಸ್‌ಎಎಫ್‌ಟಿಎ) ಒಪ್ಪಂದದಡಿ ಭಾರತದ ಜೊತೆ ಸುಂಕರಹಿತ ವ್ಯಾಪಾರ ಮಾಡಲು ಬಾಂಗ್ಲಾಕ್ಕೆ ಅವಕಾಶ ಮಾಡಿಕೊಡಲಾಗಿದೆ
- ಭಾರತದ ಹಲ್ದಿಬಾಡಿ ಮತ್ತು ಬಾಂಗ್ಲಾದ ಚಿಲಾಹಟಿ ನಡುವೆ ರೈಲ್ವೆ ಸಂಪರ್ಕ ಯೋಜನೆಯನ್ನು ಜಂಟಿಯಾಗಿ ಉದ್ಘಾಟಿಸಲಾಯಿತು
- ವಿಶ್ವಸಂಸ್ಥೆಯ ಭದ್ರತಾ ಮಂಡಳಿ ಚುನಾವಣೆಯಲ್ಲಿ ಭಾರತವನ್ನು ಬಾಂಗ್ಲಾದೇಶ ಬೆಂಬಲಿಸಿದೆ

ಬಾಂಗ್ಲಾ ವಿಮೋಚನೆಯ ಹಾದಿ

1947: ಭಾರತದಲ್ಲಿ ಬ್ರಿಟಿಷರ ಅಧಿಪತ್ಯ ಅಂತ್ಯವಾಗಿ, ದೇಶವು ವಿಭಜನೆಯಾಯಿತು. ಬಹುಸಂಖ್ಯಾತ ಮುಸ್ಲಿಮರಿಂದ ಕೂಡಿದ 'ಪಾಕಿಸ್ತಾನ' ಉದಯವಾಯಿತು

1949: ಪಶ್ಚಿಮ ಪಾಕಿಸ್ತಾನದಿಂದ ಪ್ರತ್ಯೇಕಗೊಂಡು ಪೂರ್ವ ಪಾಕಿಸ್ತಾನವನ್ನು ಅಸ್ತಿತ್ವಕ್ಕೆ ತರುವ ಉದ್ದೇಶದಿಂದ 'ಅವಾಮಿ ಲೀಗ್ ಸಂಘಟನೆ' ಹುಟ್ಟಿಕೊಂಡಿತು

1970: ಪೂರ್ವ ಪಾಕಿಸ್ತಾನದಲ್ಲಿ ನಡೆದ ಚುನಾವಣೆಗಳಲ್ಲಿ ಅವಾಮಿ ಲೀಗ್ ಪ್ರಚಂಡ ಜಯಭೇರಿ ಬಾರಿಸಿತು. ಆದರೆ ಫಲಿತಾಂಶವನ್ನು ಒಪ್ಪಲು ಪಶ್ಚಿಮ ಪಾಕಿಸ್ತಾನ ಸಿದ್ಧವಿರಲಿಲ್ಲ. ಇದು ಗಲಭೆಗೆ ಕಾರಣವಾಯಿತು. ಈ ವೇಳೆ ಅಪ್ಪಳಿಸಿದ ದೊಡ್ಡ ಚಂಡಮಾರುತವು ಈ ಭಾಗದ 5 ಲಕ್ಷ ಜನರನ್ನು ಬಲಿ ಪಡೆಯಿತು

1971: ಸ್ವತಂತ್ರ 'ಬಾಂಗ್ಲಾದೇಶ' ಉದಯವನ್ನು ಅವಾಮಿ ಲೀಗ್ ಘೋಷಿಸಿತು. ಆದರೆ ಇದಕ್ಕೆ ಪಶ್ಚಿಮ ಪಾಕಿಸ್ತಾನ ತೀವ್ರ ವಿರೋಧ ವ್ಯಕ್ತಪಡಿಸಿತು. ಆದರೆ ಭಾರತದ ಸೇನಾ ಸಹಕಾರದೊಂದಿಗೆ ನಡೆದ ಯುದ್ಧದಲ್ಲಿ ಪಾಕಿಸ್ತಾನಕ್ಕೆ ಸೋಲಾಯಿತು. ಈ ಯುದ್ಧದಲ್ಲಿ ಭಾರತದ ಬಲಿಷ್ಠ ಸೇನಾ ಸಾಮರ್ಥ್ಯ ಅನಾವರಣಗೊಂಡಿತು

1972: ಶೇಕ್ ಮುಜೀಬರ್ ರಹಮಾನ್ ಅವರು ದೇಶದ ಮೊದಲ ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡರು. ಪ್ರಮುಖ ಉದ್ದಿಮೆಗಳನ್ನು ಅವರು ರಾಷ್ಟ್ರೀಕರಣ ಮಾಡಿದರು ಆದರೆ, 1975ರಲ್ಲಿ ನಡೆದ ಸೇನಾ ದಂಗೆಯಲ್ಲಿ ಅವರ ಹತ್ಯೆಯಾಯಿತು

ಮಂಡಿಯೂರಿ ಶರಣಾಗಿದ್ದ ಪಾಕಿಸ್ತಾನ ಸೇನೆ

ಬಾಂಗ್ಲಾ ವಿಮೋಚನಾ ಯುದ್ಧವನ್ನು ಗೆಲ್ಲುವಲ್ಲಿ ಭಾರತೀಯ ಸೇನೆಯ ಮೂರೂ ಪಡೆಗಳು ಮಹತ್ವದ ಪಾತ್ರ ವಹಿಸಿದ್ದವು. ಬಾಂಗ್ಲಾ ವಿಮೋಚನಾ ಯುದ್ಧದಲ್ಲಿ ಭಾರತೀಯ ಸೇನೆಯ ಪಡೆಗಳು ನೇರವಾಗಿ ಭಾಗಿಯಾಗಿರಲಿಲ್ಲ. ಆದರೆ 1971ರ ಡಿಸೆಂಬರ್ 3ರಂದು ಪಾಕಿಸ್ತಾನ ಸೇನೆಯು ಭಾರತದ 11 ವಾಯನೆಲೆಗಳ ಮೇಲೆ ಬಾಂಬ್ ದಾಳಿ ನಡೆಸಿತು. ತಕ್ಷಣವೇ ಎಚ್ಚೆತ್ತುಕೊಂಡ ಸರ್ಕಾರವು ಪಾಕಿಸ್ತಾನದ ಮೇಲೆ ಪ್ರತಿದಾಳಿಗೆ ಆದೇಶಿಸಿತು. ಕರಾಚಿ ಬಂದರನ್ನು ಗುರಿ ಮಾಡಿಕೊಂಡು ನೌಕಾಪಡೆಯ ಯುದ್ಧನೌಕೆಗಳು ಮತ್ತು ವಾಯುಪಡೆಯ ಬಾಂಬರ್ ವಿಮಾನಗಳು ದಾಳಿ ನಡೆಸಿದವು.

ಈ ದಾಳಿಯಲ್ಲಿ ಪಾಕಿಸ್ತಾನದ ಕರಾಚಿ ಬಂದರು, ಯುದ್ಧನೌಕೆಗಳು ನಾಶವಾದವು. ಪೂರ್ವ ಪಾಕಿಸ್ತಾನದಲ್ಲಿ (ಈಗಿನ ಬಾಂಗ್ಲಾದೇಶ) ಸೇನಾ ಕಾರ್ಯಾಚರಣೆ ನಡೆಸುತ್ತಿದ್ದ ಪಾಕಿಸ್ತಾನದ ಸೇನೆಗೆ ಪೂರೈಸಲು ಸಂಗ್ರಹಿಸಿದ್ದ ಇಂಧನವಿದ್ದ ಟ್ಯಾಂಕರ್ ಹಡಗುಗಳು ನಾಶವಾದವು. ಇದರಿಂದ ಪಾಕಿಸ್ತಾನ ಸೇನೆಗೆ ಇಂಧನ ಪೂರೈಕೆ ಸ್ಥಗಿತವಾಯಿತು. ಇದೇ ವೇಳೆ ಪೂರ್ವ ಪಾಕಿಸ್ತಾನದ ಬಂದರನ್ನು ಭಾರತೀಯ ನೌಕಪಡೆಯ ಯುದ್ಧನೌಕೆ, ವಿಮಾನವಾಹನ ನೌಕೆ ಐಎನ್‌ಎಸ್ ವಿಕ್ರಾಂತ್ ಮತ್ತು ಜಲಾಂತರ್ಗಾಮಿ ನೌಕೆಗಳು ಸುತ್ತುವರಿದವು. ಈ ಮೂಲಕ ಪೂರ್ವ ಪಾಕಿಸ್ತಾನದಲ್ಲಿದ್ದ ಪಾಕಿಸ್ತಾನದ ಸೈನಿಕರು ಪಲಾಯನ ಆಗುವುದನ್ನು ತಡೆಯಲಾಯಿತು.

ಮತ್ತೊಂದೆಡೆ ವಾಯುಪಡೆಯ ಸೀ ಹ್ಯಾಕ್ ಯುದ್ಧವಿಮಾನಗಳು ಢಾಕಾದಲ್ಲಿ ನೆರೆದಿದ್ದ ಪಾಕಿಸ್ತಾನ ಸೇನೆಯ ಶಿಬಿರದ ಮೇಲೆ ಬಾಂಬ್ ದಾಳಿ ನಡೆಸಿದವು. ಮತ್ತೊಂದೆಡೆ ಭೂಸೇನೆಯು ಪೂರ್ವ ಪಾಕಿಸ್ತಾನದ ಗಡಿಯನ್ನು ಸುತ್ತುವರಿಯಿತು. ಈ ಮೂಲಕ ಪಾಕಿಸ್ತಾನ ಸೈನಿಕರ ಶಿಬಿರಗಳನ್ನು ನಾಶ ಮಾಡಲಾಯಿತು. ಅವರಿಗೆ ಮದ್ದುಗುಂಡು, ಆಹಾರ ಮತ್ತು ಇಂಧನ ಪೂರೈಕೆಯಾಗದಂತೆ ತಡೆಯಲಾಯಿತು. ಈ ಎಲ್ಲವನ್ನೂ ಅತ್ಯಂತ ಕ್ಷಿಪ್ರವಾಗಿ ಮಾಡಿದ್ದರಿಂದ ದಿಗ್ಭ್ರಾಂತವಾದ ಪಾಕಿಸ್ತಾನ ಸೇನೆಯು, ಭಾರತೀಯ ಸೇನೆಯ ಎದುರು ಮಂಡಿಯೂರಿತು.

ಆಧಾರ: ರಾಯಿಟರ್ಸ್, ಬಿಬಿಸಿ ವರದಿ: ಜಯಸಿಂಹ ಆರ್., ಅಮೃತಕಿರಣ್ ಬಿ.ಎಂ.

ಸಚಿವ ಪ್ರಲ್ಹಾದ ಜೋಶಿ ಟೀಕೆ
'ವಿಪಕ್ಷಗಳು ಚರ್ಚಿಸದೇ ಓಡಿಹೋಗುತ್ತಿವೆ'

ನವದೆಹಲಿ (ಪಿಟಿಐ): 'ಈಗ ನಡೆಯುತ್ತಿರುವ ಸಂಸತ್ತಿನ ಅಧಿವೇಶನವನ್ನು ಅರ್ಧಕ್ಕೇ ಮೊಟಕುಗೊಳಿಸುವ ಉದ್ದೇಶ ಇಲ್ಲ' ಎಂದು ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ ಅವರು ಬುಧವಾರ ಹೇಳಿದರು.

ಲಖೀಂಪುರ ಖೇರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಸಂಸತ್ತಿನ ಎರಡೂ ಸದನಗಳಲ್ಲಿ ವಿರೋಧ ಪಕ್ಷಗಳು ಪ್ರತಿಭಟನೆ ನಡೆಸಿದ ಕಾರಣ, ಕಲಾಪವನ್ನು ದಿನದಮಟ್ಟಿಗೆ ಮುಂದೂಡಲಾಯಿತು. ಈ ಬಗ್ಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ ಸಚಿವರು, 'ವಿರೋಧ ಪಕ್ಷಗಳು ಸದನ ಬಿಟ್ಟು ಓಡಿಹೋಗುವ ಕೆಲಸ ಮಾಡಬಾರದು' ಎಂದು ಸಂಸತ್ತಿನ ಹೊರಗೆ ಟೀಕಿಸಿದರು.

'ಓಮೈಕ್ರಾನ್ ವೈರಾಣು, ಬೆಲೆ ಏರಿಕೆಯಂತಹ ಗಂಭೀರ ವಿಷಯಗಳ ಬಗ್ಗೆ ಚರ್ಚೆ ನಡೆಸಬೇಕು ಎಂದು ವಿರೋಧ ಪಕ್ಷಗಳು ಒತ್ತಾಯಿಸಿದ್ದವು. ಆದರೆ ಈಗ ಚರ್ಚೆಯಲ್ಲಿ ಭಾಗಿಯಾಗದೇ ಓಡಿಹೋಗುತ್ತಿವೆ. ಬಹುಶಃ ಚರ್ಚೆ ಮಾಡಲು ವಿರೋಧ ಪಕ್ಷಗಳ ಬಳಿ ಏನೂ ಇಲ್ಲದಿರಬಹುದು' ಎಂದು ಅವರು ಲೇವಡಿ ಮಾಡಿದ್ದಾರೆ.



ರಾಜ್ಯಸಭೆಯಲ್ಲಿ ವಿರೋಧ ಪಕ್ಷಗಳ ಸದಸ್ಯರು ಬುಧವಾರ ಪ್ರತಿಭಟನೆ ನಡೆಸಿದರು —ಪಿಟಿಐ ಚಿತ್ರ

ಗೊಗೊಯಿ ವಿರುದ್ಧ ಹಕ್ಕುಚ್ಯುತಿ ಇನ್ನೂ ಕೆಲ ಸದಸ್ಯರ ನೋಟಿಸ್

'ನನಗೆ ಅನ್ನಿಸಿದಾಗ ರಾಜ್ಯಸಭೆಗೆ ಹೋಗುತ್ತೇನೆ' ಎಂದು ಹೇಳಿಕೆ ನೀಡಿದ್ದ ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಮತ್ತು ರಾಜ್ಯಸಭೆ ಸದಸ್ಯ ರಂಜನ್ ಗೊಗೊಯಿ ಅವರ ವಿರುದ್ಧ ಇನ್ನೂ ಕೆಲವು ಪಕ್ಷಗಳ ಸದಸ್ಯರು ಬುಧವಾರ ರಾಜ್ಯಸಭೆಯಲ್ಲಿ ಹಕ್ಕುಚ್ಯುತಿ ನೋಟಿಸ್ ನೀಡಿವೆ.

ಗೊಗೊಯಿ ವಿರುದ್ಧ ಕಾಂಗ್ರೆಸ್ ಮತ್ತು ಟಿಎಂಸಿ ಸದಸ್ಯರು ಸೋಮವಾರ ರಾಜ್ಯಸಭೆಯಲ್ಲಿ ಹಕ್ಕುಚ್ಯುತಿ ನೋಟಿಸ್ ನೀಡಿದ್ದವು. ಬುಧವಾರ ಶಿವಸೇನಾ, ಸಮಾಜವಾದಿ ಪಕ್ಷ, ಎನ್‌ಸಿಪಿ, ಸಿಪಿಐ, ಸಿಪಿಎಂ ಮತ್ತು ಮುಸ್ಲಿಂ ಲೀಗ್ ನೋಟಿಸ್ ನೀಡಿವೆ.

ಈ ಬಗ್ಗೆ ಪ್ರಶ್ನಿಸಿದಾಗ ಗೊಗೊಯಿ ಅವರು, 'ನಾನು ಸೋಮವಾರ ರಾಜ್ಯಸಭೆಗೆ ಹೋಗಿದ್ದೆ. ಇವತ್ತು (ಬುಧವಾರ) ಹೋಗುತ್ತಿಲ್ಲ. ಗುರುವಾರ ಹೋಗುತ್ತೇನೆ. ಕ್ರಮ ತೆಗೆದುಕೊಳ್ಳಲು ಸಮಯವಾಗುತ್ತದೆ' ಎಂದು ಪ್ರತಿಕ್ರಿಯಿಸಿದ್ದಾರೆ.

ಅವರು ರಾಜ್ಯಸಭೆಗೆ ನಾಮನಿರ್ದೇಶಿತರಾದ ದಿನದಿಂದ ಈವರೆಗೆ ಏಳು ಬಾರಿ ಮಾತ್ರ ರಾಜ್ಯಸಭೆಗೆ ಹಾಜರಾಗಿದ್ದಾರೆ.

ಸದನದಲ್ಲಿ ನಡೆದದ್ದು...

- 2018ರಿಂದ 2020ರ ನಡುವೆ ವಿವಿಧ ರಾಜ್ಯಗಳಲ್ಲಿ ದೇಶದ್ರೋಹದ ಒಟ್ಟು 236 ಪ್ರಕರಣಗಳನ್ನು ದಾಖಲಿಸಲಾಗಿದೆ. 199 ಜನರನ್ನು ದೇಶದ್ರೋಹದ ಆರೋಪದಲ್ಲಿ ಬಂಧಿಸಲಾಗಿದೆ. ಇವರಲ್ಲಿ ಏಳು ಜನರಿಗೆ ಶಿಕ್ಷೆಯಾಗಿದೆ ಎಂದು ಗೃಹ ಸಚಿವಾಲಯವು ರಾಜ್ಯಸಭೆಗೆ ಮಾಹಿತಿ ನೀಡಿದೆ
- 2020ರಲ್ಲಿ ದೇಶದ 10 ರಾಜ್ಯಗಳು ಮತ್ತು ಆರು ಕೇಂದ್ರಾಡಳಿತ ಪ್ರದೇಶಗಳಲ್ಲಿ ಕಾನೂನುಬಾಹಿರ ಚಟುವಟಿಕೆ ತಡೆ ಕಾಯ್ದೆ ಅಡಿ ಒಂದೂ ಪ್ರಕರಣ ದಾಖಲಾಗಿಲ್ಲ. ದೇಶದಲ್ಲಿ 2019ರಲ್ಲಿ ಈ ಕಾಯ್ದೆಯ ಅಡಿ ಒಟ್ಟು 1,948 ಪ್ರಕರಣಗಳು ದಾಖಲಾಗಿದ್ದವು. 2020ರಲ್ಲಿ ದಾಖಲಾದ ಪ್ರಕರಣಗಳ ಸಂಖ್ಯೆ 1,321ಕ್ಕೆ ಇಳಿಕೆಯಾಗಿದೆ ಎಂದು ಗೃಹ ಸಚಿವಾಲಯವು ರಾಜ್ಯಸಭೆಗೆ ಮಾಹಿತಿ ನೀಡಿದೆ
- ಜಮ್ಮು–ಕಾಶ್ಮೀರದಲ್ಲಿ ಚುನಾವಣೆ ನಡೆಸುವುದು ಚುನಾವಣಾ ಆಯೋಗದ ವಿವೇಚನೆಗೆ ಬಿಟ್ಟಿದ್ದು. ಆದರೆ ಜಮ್ಮು–ಕಾಶ್ಮೀರಕ್ಕೆ ರಾಜ್ಯದ ಸ್ಥಾನಮಾನವನ್ನು ಮರಳಿ ನೀಡುವುದನ್ನು ಸೂಕ್ತ ಸಮಯದಲ್ಲಿ ಪರಿಗಣಿಸಲಾಗುತ್ತದೆ ಎಂದು ಸರ್ಕಾರವು ಹೇಳಿದೆ
- ಸಂಸದರ ಅಮಾನತು ಬಿಕ್ಕಟ್ಟು ಪರಿಹಾರಕ್ಕೆ ಸಭೆ ಕರೆಯುವಂತೆ ರಾಜ್ಯಸಭೆಯ ಪ್ರತಿಪಕ್ಷ ಮುಖಂಡರು ಸಭಾಧ್ಯಕ್ಷ ಎಂ. ವೆಂಕಯ್ಯ ನಾಯ್ಡು ಅವರನ್ನು ಭೇಟಿ ಮಾಡಿ ಮನವಿ ಮಾಡಿದರು. ಸೂಕ್ತ ಸಮಯದಲ್ಲಿ ಈ ಬಗ್ಗೆ ನಿರ್ಧಾರ ತೆಗೆದುಕೊಳ್ಳುವುದಾಗಿ ಅವರು ಭರವಸೆ ನೀಡಿದರು

ಪಿವಿ ಫ್ಯಾಕ್ಟ್ ಚೆಕ್


ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಹುಟ್ಟುಹಬ್ಬದ ಆಚರಣೆಯ ವಿಡಿಯೊವೊಂದು ವೈರಲ್ ಆಗಿದೆ. ಯುವಕರ ಗುಂಪೊಂದು ಇಬ್ಬರು ಯುವತಿಯರ ಮುಖಕ್ಕೆ ಕೇಕ್ ಮೆತ್ತುತ್ತಾರೆ. ಬಳಿಕ ಅರೆ ಪ್ರಜ್ಞಾವಸ್ಥೆಯಲ್ಲಿದ್ದ ಯುವತಿಯರನ್ನು ಕೋಣೆಯ ಒಳಗೆ ಕರೆದೊಯ್ಯುತ್ತಾರೆ. ಈ ಕೃತ್ಯ ನಡೆಸಿರುವವರು ಮುಸ್ಲಿಂ ಯುವಕರು. ಯುವತಿಯರು ಪ್ರಜ್ಞೆ ಕಳೆದುಕೊಳ್ಳುವಂತೆ ಮಾಡಿ ಅವರ ಆಕ್ಷೇಪಾರ್ಹ ವಿಡಿಯೊಗಳನ್ನು ಚಿತ್ರಿಸಿದ್ದಾರೆ. ಯುವತಿಯರಿಗೆ ಇಸ್ಲಾಂಗೆ ಮತಾಂತರ ಆಗುವಂತೆ ಅವರಿಗೆ ಬೆದರಿಕೆ ಒಡ್ಡಿದ್ದಾರೆ. ಇಂಥ ಘಟನೆಗಳ ಕುರಿತು ಹಿಂದೂಗಳು ಎಚ್ಚರಿಕೆಯಿಂದ ಇರಿ ಎಂದು ಹೇಳಲಾಗಿದೆ.



ಜಾಗೃತಿ ಮೂಡಿಸಲು ತಯಾರಿಸಿರುವ ವಿಡಿಯೊ ಇದಾಗಿದೆ ಎಂದು 'ದಿ ಕ್ವಿಂಟ್' ವರದಿ ಮಾಡಿದೆ. ಯುಟ್ಯೂಬ್‌ನಲ್ಲಿ ಸಂಪೂರ್ಣ ವಿಡಿಯೊ ಇದೆ. ವಿಡಿಯೊದ ಕಡೆಯಲ್ಲಿ 'ವಿಡಿಯೊ ನೋಡಿದ್ದಕ್ಕಾಗಿ ಧನ್ಯವಾದಗಳು. ಈ ಚಾನಲ್‌ನಲ್ಲಿ ಹಾಸ್ಯ, ಅಣಕು ನಾಟಕಗಳನ್ನು ಪೋಸ್ಟ್ ಮಾಡಲಾಗುತ್ತದೆ. ಈ ಕಿರುಚಿತ್ರಗಳು ಕೇವಲ ಅರಿವು ಮೂಡಿಸುವ ಉದ್ದೇಶಕ್ಕಾಗಿ' ಎಂಬ ಘೋಷಣೆಯಿದೆ. ಇದೇ ರೀತಿಯ ಹಲವಾರು ವಿಡಿಯೊಗಳನ್ನು ಆ ಯುಟ್ಯೂಬ್ ಚಾನಲ್ ಪೋಸ್ಟ್ ಮಾಡಿದೆ. ಜಾಗೃತಿ ಮೂಡಿಸಲು ತಯಾರಿಸಲಾಗಿರುವ ವಿಡಿಯೊದ ಕೆಲವು ಭಾಗಗಳನ್ನು ಕತ್ತರಿಸಿ ಪೋಸ್ಟ್ ಮಾಡಿ ಅದಕ್ಕೆ ಕೋಮು ಬಣ್ಣ ನೀಡಲಾಗಿದೆ ಎಂದು ದಿ ಕ್ವಿಂಟ್ ಹೇಳಿದೆ.

ಗುಂಡಣ್ಣ



ದಿನ ಭವಿಷ್ಯ

ಗುರುವಾರ ಡಿಸೆಂಬರ್ 16, 2021

ಶ್ರೀಪ್ಲವ ನಾಮ ಸಂವತ್ಸರ ದಕ್ಷಿಣಾಯಣ ಹೇಮಂತ ಋತು ಮೃಗಶಿರ (ಧನುರ್ಮಾಸ) ಮಾಸ ಶುಕ್ಲಪಕ್ಷ ಪಕ್ಷ ಮಳೆ ನಕ್ಷತ್ರ ಮೂಲ ತ್ರಯೋದಶಿ ಗಂ. 53-43 (ರಾ. 4-10) ಗುರುವಾರ ನಿತ್ಯ ನಕ್ಷತ್ರ ಭರಣಿ ಗಂ. 4-17 (ಬೆ. 8-23) ಶಿವ ನಾಮ ಯೋಗ ಗಂ. 5-3 ಕೌಲವ ಕರಣ ಗಂ. 21-30 ವಿಷ ಗಂ. 37-13 ಅಮೃತಾಭಾವಃ : ರಾಹುಕಾಲ ಮ ಗಂ. 1-30 ರಿಂದ 3-00 ಗುಳಿಕ ಕಾಲ ಬೆ ಗಂ 9-00 ರಿಂದ 10-30 ಯಮಗಂಡ ಕಾಲ ಬೆ ಗಂ 6-00 ರಿಂದ 7-30 : ಸೂರ್ಯೋದಯ: 6-36 ಸೂರ್ಯಾಸ್ತ: 5-51 ಅದೃಷ್ಟ ಸಂಖ್ಯೆ 1, 6

ಮೇಷ: ಬಾಕಿ ಇರುವ ಕೆಲಸಗಳನ್ನು ಯಶಸ್ವಿಯಾಗಿ ಪೂರೈಸುವ ಅವಕಾಶ. ಛಾಯಾಗ್ರಾಹಕರು, ವಿಡಿಯೊ ಗ್ರಾಹಕರುಗಳಿಗೆ ಹೆಚ್ಚಿನ ಅವಕಾಶಗಳು ಮೂಡಿಬರುವ ಸಾಧ್ಯತೆ. ಪುಣ್ಯಕ್ಷೇತ್ರ, ಕುಲದೇವತಾ ದರ್ಶನ ಭಾಗ್ಯ.

ವೃಷಭ: ಮನೆಯವರ ಮನೋಗತಕ್ಕನುಗುಣವಾಗಿ ಹೊಸ ಉದ್ಯಮಗಳನ್ನು ಪ್ರಾರಂಭಿಸಲಿದ್ದೀರಿ. ಸಣ್ಣಪುಟ್ಟ ಸಾಲಗಳಿಂದ ಮುಕ್ತರಾಗುವ ಸಾಧ್ಯತೆ. ಉದ್ಯೋಗದಾತರ ವಿಶೇಷ ಸಹಾಯ ಸಹಕಾರದಿಂದಾಗಿ ತಾಂತ್ರಿಕ ನೈಪುಣ್ಯತೆ.

ಮಿಥುನ: ಗಣ್ಯವ್ಯಕ್ತಿಗಳಿಗೆ ಸಾಮಾಜಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ಸ್ಥಾನಮಾನ ಗೌರವಗಳು ಲಭಿಸಲಿವೆ. ವ್ಯಾಪಾರ ವ್ಯವಹಾರದಲ್ಲಿರುವವರಿಗೆ ಅಧಿಕ ಲಾಭ. ಉನ್ನತ ಹುದ್ದೆಯಲ್ಲಿರುವವರಿಗೆ ಬಡ್ತಿ ಸಾಧ್ಯತೆ.

ಕರ್ಕಾಟಕ: ನಿಮ್ಮ ಮನೋಗತವನ್ನು ವ್ಯಕ್ತಪಡಿಸಲು ಅವಕಾಶ. ಸಂಶೋಧಕರು ಪ್ರಶಂಸೆ ಗೌರವಾದರಗಳಿಗೆ ಪಾತ್ರರಾಗುವ ಸಾಧ್ಯತೆ. ಜನಸಾಮಾನ್ಯರ ಸಮಸ್ಯೆಗಳನ್ನು ಅರಿತು ಸ್ಪಂದಿಸುವುದರಿಂದ ಉತ್ತಮ ಅವಕಾಶ.

ಸಿಂಹ: ಸಹನೆಯಿಂದ ಚಿಂತನೆ ವಿಮರ್ಶೆಯಿಂದಾಗಿ ವೈಯಕ್ತಿಕ ಸಮಸ್ಯೆಗಳೆಲ್ಲವೂ ಸುಲಭವಾಗಿ ಪರಿಹಾರ ಕಂಡುಕೊಳ್ಳುವವು. ಮನೆಯಲ್ಲಿ ನೆಮ್ಮದಿಯ ವಾತಾವರಣ. ಮಿತ್ರರೊಂದಿಗಿನ ಸಮಾಲೋಚನೆ ತೃಪ್ತಿ ತರಲಿದೆ.

ಕನ್ಯಾ: ಮನೆಯಲ್ಲಿ ಸಡಗರ ಸಂಭ್ರಮದ ವಾತಾವರಣ. ವಾಣಿಜ್ಯ ವ್ಯವಹಾರ, ಜಾಹೀರಾತು ಒಪ್ಪಂದಗಳಿಂದ ಲಾಭ ನಿರೀಕ್ಷಿಸಬಹುದು. ಕೆಲಸ ಕಾರ್ಯಗಳಲ್ಲಿ ಹೆಚ್ಚಿನ ಎಚ್ಚರಿಕೆ ವಹಿಸುವುದ ಅಗತ್ಯ. ಶುಭವಾರ್ತೆ ಕೇಳುವಿರಿ.

ತುಲಾ: ಸಮಾಜಸೇವೆಯಿಂದಾಗಿ ಗೌರವಾದರಗಳೊಂದಿಗೆ ಹೆಚ್ಚಿನ ಲಾಭವನ್ನು ತರಲಿದೆ. ಗಣ್ಯರ ಆಕಸ್ಮಿಕ ಸಂಪರ್ಕದಿಂದಾಗಿ ಜೀವನಶೈಲಿಯಲ್ಲಿ ಬದಲಾವಣೆ ಸಾಧ್ಯತೆ. ಆರ್ಥಿಕ ಸ್ಥಿತಿ ಉತ್ತಮಗೊಳ್ಳುವ ಸಾಧ್ಯತೆಗಳು ಕಂಡುಬರುವವು.

ವೃಶ್ಚಿಕ: ಧಾರ್ಮಿಕ ಕ್ಷೇತ್ರದಲ್ಲಿ ಕೆಲಸ ಮಾಡುವವರು ತಮ್ಮ ಕೆಲಸ–ಕಾರ್ಯಗಳಲ್ಲಿ ವಿಶೇಷ ಆಸಕ್ತಿಯಿಂದ ಶ್ರಮ ವಹಿಸುವುದು ಒಳಿತು. ಮಕ್ಕಳ ಬದುಕಿನಲ್ಲಿ ಹೊಸ ತಿರುವನ್ನು ಹೊಂದಲು ಅವಕಾಶ.

ಧನು: ಔದ್ಯೋಗಿಕ ಸಮಸ್ಯೆಗಳು ಪರಿಹಾರವಾಗುವವು. ಮೇಲಧಿಕಾರಿಗಳ ವಿಶ್ವಾಸಕ್ಕೆ ಪಾತ್ರರಾಗುವಿರಿ. ವಿವಾಹಾಕಾಂಕ್ಷಿಗಳಿಗೆ ಉತ್ತಮ ಸಂಬಂಧಗಳು ಕೂಡಿಬರುವ ಸಾಧ್ಯತೆ. ನೂತನ ಉದ್ಯಮ ಆರಂಭಕ್ಕೆ ಸಕಾಲ.

ಮಕರ: ಗೃಹನಿರ್ಮಾಣ ಅಥವಾ ಖರೀದಿ ಸಾಧ್ಯತೆ. ಲೇವಾದೇವಿ ವ್ಯವಹಾರಗಳಲ್ಲಿ ಉತ್ತಮ ಪ್ರಗತಿ. ಪ್ರಯತ್ನಕ್ಕೆ ತಕ್ಕ ಪ್ರತಿಫಲ ಪಡೆಯುವಿರಿ. ಮನೆಯವರೊಂದಿಗೆ ದೇವೀ ದರ್ಶನಕ್ಕಾಗಿ ಮಂದಿರ ದರ್ಶನ ಸಾಧ್ಯತೆ.

ಕುಂಭ: ಉನ್ನತ ವ್ಯಾಸಂಗಕ್ಕಾಗಿ ವಿದೇಶ ಪ್ರಯಾಣ ಸಾಧ್ಯತೆ. ಸಂಗೀತ ಮತ್ತು ಕಲೆಗಳಲ್ಲಿ ಅಭಿರುಚಿ ಹೆಚ್ಚುವ ಸಾಧ್ಯತೆ. ಸಣ್ಣ ಉದ್ಯಮಿಗಳಿಗೆ ಹೆಚ್ಚಿನ ಲಾಭ. ತರಕಾರಿ, ವಸ್ತ್ರ ವ್ಯಾಪಾರಿಗಳಿಗೆ ಸುಯೋಗ. ವ್ಯಾಪಾರ ಕ್ಷೇತ್ರ ಬದಲಾವಣೆ.

ಮೀನ: ಕೆಲಸ–ಕಾರ್ಯಗಳಿಗೆ ಸರಿಯಾದ ಪ್ರೋತ್ಸಾಹ ದೊರೆಯಲಿದೆ. ಉದ್ದೇಶದಲ್ಲಿ ಗಂಭೀರ ಬದಲಾವಣೆಗಳು ಕಂಡುಬರುವುದು. ಮಹಿಳೆಯರಿಗೆ ಹೆಚ್ಚಿನ ಜವಾಬ್ದಾರಿಯೊಂದಿಗೆ ಗೌರವಾದರಗಳು.

ನಿಮ್ಮ ಜನ್ಮದಿನ 16-ಡಿಸೆಂಬರ್ ಇಂದು ಅತ್ಯಂತ ಶುಭದಾಯಕ. ಹಳೆಯ ಬಂಧುಗಳು ಸಮೀಪವರ್ತಿಗಳಾಗಲಿದ್ದಾರೆ. ಬಂಧುಗಳೊಂದಿಗೆ ಸಂತೋಷದಿಂದ ಕಾಲಕಳೆಯುವ ಸಾಧ್ಯತೆ. ಅನಿರೀಕ್ಷಿತ ಆಸ್ತಿ ನಿಮ್ಮ ಪಾಲಿಗೆ ದೊರಕಲಿದೆ. ಆರೋಗ್ಯ ಉತ್ತಮವಾಗಿದ್ದು ಗೃಹ ನಿವೇಶನ ಖರೀದಿಸುವ ಸಾಧ್ಯತೆ. ಮಾನಸಿಕ ಗೊಂದಲಗಳಿಗೆ ಸ್ಪಷ್ಟತೆಯನ್ನು ಕಂಡುಕೊಳ್ಳುವಿರಿ.

ಬೆರಗಿನ ಬೆಳಕು
ಗುರುರಾಜ ಕರಜಗಿ

ಹಳತು-ಹೊಸತು

ತಿಳಿವಾವುದಿಳೆಗೆ ಯುಗಯುಗದ ಬೆಳಕಾಗಿತ್ತೊ |
ಹಳದೆಂದು ನೀನದನು ಕಳೆಯುವೆಯ, ಮರುಳೆ ?||
ತಳಹದಿಯದಲ್ತೆ ನಮ್ಮೆಲ್ಲ ಹೊಸ ತಿಳಿವಿಂಗೆ ? |
ಹಳೆ ಬೇರು ಹೊಸ ತಳಿರು – ಮಂಕುತಿಮ್ಮ || 520||

ಪದ-ಅರ್ಥ: ತಿಳಿವಾವುದಿಳೆಗೆ = ತಿಳಿವು + ಆವುದು + ಇಳೆಗೆ(ಭೂಮಿಗೆ), ಹಳದೆಂದು = ಹಳದು(ಹಳೆಯದು) + ಎಂದು, ತಿಳಿವಿಂಗೆ = ತಿಳಿವಿಗೆ.

ವಾಚ್ಯಾರ್ಥ: ಯುಗಯುಗಗಳಿಂದ ಯಾವ ತಿಳಿವು ಜಗತ್ತಿಗೆ ಬೆಳಕಾಗಿತ್ತೊ, ಅದನ್ನು ಹಳೆಯದೆಂದು ನೀನು ಕಳೆಯುತ್ತೀಯಾ? ನಮ್ಮ ಎಲ್ಲ ಹೊಸ ತಿಳಿವುಗಳಿಗೆ ಅದು ತಳಹದಿಯಲ್ಲವೆ? ಹಳೆ ಬೇರಿದ್ದರೆ ಹೊಸ ಚಿಗುರು ಬಂದೀತು.

ವಿವರಣೆ: ಪ್ರಗತಿ ಎಂದಿದ್ದರೂ ಸದಾ ಚಲನಶೀಲವಾಗಿರುವಂಥದ್ದು. ಪ್ರತಿಕ್ಷಣವೂ ಹಿಂದಿನಿಂದ ಮುಂದಕ್ಕೆ, ಹಳೆಯದರಿಂದ ಹೊಸದಕ್ಕೆ ಅದರ ಗತಿ. ಯಾವುದು ಹೊಸತು, ಯಾವುದು ಹಳೆಯದು? ನಿನ್ನೆ ಹೊಸದಾದದ್ದು ಇಂದು ಹಳತು. ಇಂದಿನ ಹೊಸತು, ನಾಳೆಗೆ ಹಳತು. ಕೆಲವರ ಅಭಿಪ್ರಾಯ, ಹೊಸತು ಮಾತ್ರ ಸತ್ಯ, ಹಳೆಯದೆಲ್ಲ ನಿಷ್ಪ್ರಯೋಜಕ, ಮಿಥ್ಯ. ಮತ್ತೆ ಕೆಲವರು ಹಳೆಯದೆ ಬಂಗಾರ, ಇಂದಿನದು ಕಾಗೆ ಬಂಗಾರ. ಇಂದಿನದಕ್ಕೆ ಸತ್ವ ಇಲ್ಲ, ಎಲ್ಲವೂ ನೆರಳಿಲ್ಲದ ಮರದಂತೆ, ಎನ್ನುತ್ತಾರೆ. ಯಾವುದು ಸರಿ? ಹಳೆಯ ಅಜ್ಜನ ಹೆಗಲ ಮೇಲೆ ಹೊಸ ಮೊಮ್ಮಗನ ಸವಾರಿ. ಹಳೆಯ ಹಿತ್ತಾಳೆಯ ಪಾತ್ರೆಗೆ ಚಮಕಿನ ಕಲಾಯಿ. ಪುರಾತನ ಆಭರಣಗಳನ್ನು ಕರಗಿಸಿ ಹೊಸ ಮಾದರಿಯ ಒಡವೆಗಳು. ಹೊಸ ಹುಮ್ಮಸ್ಸಿನ ಕುದುರೆಗೆ ಹಳೆಯ ಪಳಗಿದ ಲಗಾಮು.


ಹೊಸತು ಎನ್ನುವ ಪದಕ್ಕೆ ವಿರುದ್ಧವಾದದ್ದು ಹಳತು ಎನ್ನುವ ಪದ. ಹೊಸತು ಎಂಬ ಪದದ ಅರ್ಥ ತಿಳಿಯಬೇಕಾದರೆ ಹಳತು ಎಂದರೇನು ಎಂಬುವುದು ಅರ್ಥವಾಗಲೇಬೇಕು. ಸರಿಯಾಗಿ ನೋಡಿದರೆ ಇವೆರಡೂ ಸಾಪೇಕ್ಷ ಪದಗಳೇ. ಒಂದು ಮತ್ತೊಂದಕ್ಕೆ ಆಶ್ರಯ. ಇಂದು ವಿಜ್ಞಾನದ ಜಗತ್ತು ಸೃಷ್ಟಿಸುತ್ತಿರುವ ಬೆರಗಿನ ಪ್ರಪಂಚ ಮೈಮರೆಸುತ್ತದೆ. ಹೊಸ ಹೊಸ ಅನ್ವೇಷಣೆಗಳ ಪ್ರವಾಹದಲ್ಲಿ ಹಿಂದಿನ ನಂಬಿಕೆಗಳು, ಚಿಂತನೆಗಳು ಕೊಚ್ಚಿ ಹೋದಂತೆ ಭಾಸವಾಗುತ್ತಿದೆ. ಹೊಸ ಪ್ರಪಂಚದ ಮೆರುಗನ್ನು ಕಂಡ ತರುಣರಿಗೆ, ಹಳೆಯ ಶಾಸ್ತ್ರಗಳು, ಸಿದ್ಧಾಂತಗಳು ಬರೀ ಮೂಢನಂಬಿಕೆಗಳು, ಬುರುಡೆ ಎನ್ನಿಸುತ್ತವೆ. ಒಂದು ವಿಷಯವನ್ನು ನಾವು ನೆನಪಿಡಬೇಕು. ವಿಜ್ಞಾನ ಕೂಡ ಪ್ರಕೃತಿಯ ನಿಯಮಕ್ಕೆ ಬದ್ಧವಾದವು. ಅವು ಪ್ರಕೃತಿಯನ್ನು ಮೀರುವವಲ್ಲ. ವಿಜ್ಞಾನ ಮಾಡುವುದೆಲ್ಲ ಪ್ರಕೃತಿಯ ಒಳಗಿರುವ ಗುಣ-ಶಕ್ತಿಗಳನ್ನು ಹೊರಗೆ ತರುವ ಪ್ರಯತ್ನ. ಅದು ಮತ್ತೊಂದು ಪ್ರಕೃತಿಯನ್ನು ಸೃಷ್ಟಿ ಮಾಡುವುದಿಲ್ಲ. ನಾವು ಹಳೆಯದೆಂದು ತಿಳಿಯುವ ಸನಾತನವಾದ ವೇದಗಳು, ಉಪನಿಷತ್ತುಗಳು, ವಚನಗಳು, ಸೃಷ್ಟಿಯ ಉಗಮದ ಬಗ್ಗೆ, ಅದರ ಹಿಂದಿರುವ ಶಕ್ತಿಗಳ ಬಗ್ಗೆ ಚಿಂತನೆ ನೀಡಿವೆ. ಅವು ನಮ್ಮ ಇಂದಿನ ತಿಳಿವಳಿಕೆಗೆ ಆಧಾರವಾಗಿವೆ. ಹೊಸ ವಿಜ್ಞಾನ ಮತ್ತು ಹಳೆಯ ಅಧ್ಯಾತ್ಮಗಳ ನಡುವೆ ವಿರೋಧಕ್ಕೆ ಕಾರಣವಿಲ್ಲ. ಪರಮಾರ್ಥದಲ್ಲಿ ಅಧ್ಯಾತ್ಮ, ವ್ಯವಹಾರದಲ್ಲಿ ವಿಜ್ಞಾನ, ಎರಡೂ ಸಮ್ಮಿಳಿತವಾಗಬೇಕು.

ಅದನ್ನೇ ಕಗ್ಗ ಸುಂದರವಾದ ಉಪಮೆಯೊಂದಿಗೆ ತಿಳಿಸುತ್ತದೆ. 'ಹಳೆ ಬೇರು, ಹೊಸ ಚಿಗುರು'. ಬೇರು ಹಳೆಯದಾಗಿದ್ದಾಗ ಅದು ಭೂಮಿಯಿಂದ ಸಾರವನ್ನು ಹೀರಿ, ಮರದ ಕೊಂಬೆ ಕೊಂಬೆಗಳಿಗೆ ರವಾನಿಸಿ ಪೋಷಿಸುತ್ತದೆ. ಆಗ ಚಿಗುರು ಮೂಡುತ್ತದೆ. ಚಿಗುರು ಕಣ್ಣಿಗೆ ಕಂಡರೂ, ಕಾಣದಿಹ ಬೇರು ಅದರ ನಳನಳಿಕೆಗೆ ಕಾರಣವಾಗುತ್ತದೆ. ಹಿಂದೆ ಯಾವುದು ಪ್ರಪಂಚದ ಅರಿವಿಗೆ ಬೆಳಕಾಗಿತ್ತೋ, ಯಾವುದು ಇಂದಿನ ತಿಳಿವಳಿಕೆಗೆ ತಳಹದಿಯಾಗಿದೆಯೊ ಅದನ್ನು ಕಳೆಯುವುದು, ಮರೆಯುವುದು ಮೂರ್ಖತನ. ❖

ಪದಬಂಧ 4809 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಶ್ವಾಸವಿದ್ದರಷ್ಟೇ ಈ ಭರವಸೆ! (3)
3.ಇದು ಮಣ್ಣಿಗೆ ಸಂಬಂಧಿಸಿದ್ದು (3)
6.ಮಧ್ಯವರ್ತಿ ಇಲ್ಲಿದ್ದಾನೆ (3)
7.ಸಾರ್ವಭೌಮನ ರಾಜ್ಯ (3)
8.ಅಷ್ಟದಿಕ್ಪಾಲಕರಲ್ಲಿ ಶ್ರೀಮಂತನೀತ! (3)
10.ಮಾತುಲನಾಡಿದ ನುಡಿ (2)
11.ಮನದಲ್ಲಿಯೇ ಸ್ನಾನ! (3)
13.ಬೀಜ ಬಿತ್ತಲು ಮಾಡಿರುವ ಮಡಿ (2)
14.ಮಧುರವಾದ ತುಟಿ (3)
15.ಶರದೊಳಗಿರುವ ದೇಹ! (3)
16.ಮಂದಿ ಹೊಕ್ಕಿರುವ ಗುಡಿ (3)
17.ಗುಡಿಸಲ ಬಳಿ ಬಂದ ಗಂಡಾನೆ (3)
18.ಏಳು ದಿನ ನಡೆಯುವ ಒಂದು ಉತ್ಸವ (3)

ಮೇಲಿಂದ ಕೆಳಕ್ಕೆ
1.ಜಗತ್ತೇ ತನ್ನ ಸಂಸಾರವೆಂದು ಭಾವಿಸುವ ವ್ಯಕ್ತಿ (5)
2.ಕೊನೆಗೆ ಬೆಲೆಯಿಟ್ಟು ನೀಡಿದ ಸಲಿಗೆ! (3)
3.ಸರದಿಯನ್ನು ಹೀಗೆನ್ನಿ (2)
4.ವಲಸೆಯವರು ನೆಲೆ ನಿಂತ ಪ್ರದೇಶ (4)
5.ರಾಜನ ಅಧಿಕಾರಕ್ಕೆ ಒಳಪಟ್ಟ ಪ್ರದೇಶ (2)
9.ಹೋಲಿಕೆ ಅಥವಾ ಉಪಮೆ (3)
10.ಹಿಮಾಲಯದಲ್ಲಿನ ಸರೋವರ ಮಾಸದಲ್ಲಿ ಕಂಡೀತೆ? (3)
12.ಯುದ್ಧದ ಕೇಸರಿಯಿದು (5)
13.ಕನ್ನಡಿಗನ ಕಾಲ ಬುಡದಲ್ಲಿ ಕಂಡ ಮರ್ಕ್ಯುರಿ! (4)
14.ಅವಸರದಲ್ಲಿಯೇ ರಾಜನನ್ನು ಹುಡುಕಿ! (3)
15.ಕಾಟ ಕೊಡುವ ಗ್ರಹ! (2)
16.ಮಂಗಳವಾರ ಪ್ರತ್ಯಕ್ಷವಾದ ಕೋತಿ (2)



4808ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ವಿನಾಯಕ 3.ಮದನಕೈ 5.ಶಯನ 6.ಮಕರಂದ 8.ವಿಷಯ 10.ನಸುಕು 12.ಸಮರಸ 15.ದುಸ್ತರ 16.ಪರಭಾರೆ 17.ಕುಡುಗೋಲು

ಮೇಲಿಂದ ಕೆಳಕ್ಕೆ: 1.ವಿರಾಮ 2.ಕಶದ 3.ಮನವಿ 4.ಕೈದಿ 7.ಕರತಾಡನ 9.ಯಮಕಿಂಕರ 11.ಕುದುರೆ 12.ಸರಕು 13.ಸವಾಲು 14.ಜಪ

ಸುಡೊಕು 5195

				8			2	
	3							8
6		5		9		4		3
	2		6				3	
5		3	2		1	8		9
	1				9		4	
	6			2				4
3		8	9				5	
	5			3	4			1

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5194 ಸುಡೊಕು

1	8	3	5	2	6	9	4	7
2	9	5	3	4	7	1	8	6
7	6	4	9	8	1	5	2	3
9	1	6	4	7	5	2	3	8
3	4	7	2	9	8	6	1	5
5	2	8	6	1	3	7	9	4
8	3	1	7	5	9	4	6	2
6	5	2	1	3	4	8	7	9
4	7	9	8	6	2	3	5	1

ದೇಶಿ ಷೇರುಪೇಟೆಗಳಲ್ಲಿ ಮಾರಾಟದ ಒತ್ತಡ

ಸತತ ನಾಲ್ಕನೇ ದಿನವೂ ನಕಾರಾತ್ಮಕ ವಹಿವಾಟು

ಮುಂಬೈ (ಪಿಟಿಐ): ಮಾರಾಟದ ಒತ್ತಡಕ್ಕೆ ಒಳಗಾಗಿ ದೇಶದ ಷೇರು-ಪೇಟೆಗಳಲ್ಲಿ ಸತತ ನಾಲ್ಕನೇ ದಿನವೂ ನಕಾರಾತ್ಮಕ ವಹಿವಾಟು ನಡೆಯಿತು. ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು 20 ತಿಂಗಳ ಕನಿಷ್ಠ ಮಟ್ಟಕ್ಕೆ ಇಳಿಕೆ ಆಗಿರುವುದು ಹಾಗೂ ವಿದೇಶಿ ಬಂಡವಾಳ ಹೊರಹರಿವು ಸಹ ವಹಿವಾಟಿನ ಮೇಲೆ ಪರಿಣಾಮ ಬೀರಿವೆ ಎಂದು ವರ್ತಕರು ಹೇಳಿದ್ದಾರೆ.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ 329 ಅಂಶ ಇಳಿಕೆ ಕಂಡು 57,788 ಅಂಶಗಳಲ್ಲಿ ದಿನದ ವಹಿವಾಟು ಅಂತ್ಯವಾಯಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 103 ಅಂಶ ಇಳಿಕೆ ಆಗಿದ್ದು 17,221 ಅಂಶಗಳಿಗೆ ತಲುಪಿದೆ. ಸೆನ್ಸೆಕ್ಸ್‌ನಲ್ಲಿ ಬಜಾಜ್ ಫೈನಾನ್ಸ್ ಷೇರು ಮೌಲ್ಯ ಶೇ 3.10ರಷ್ಟು ಗರಿಷ್ಠ ನಷ್ಟ ಕಂಡಿದೆ.



ಅಮೆರಿಕದ ಕೇಂದ್ರೀಯ ಬ್ಯಾಂಕ್ ಫೆಡರಲ್ ರಿಸರ್ವ್‌ನ ಹಣಕಾಸು ನೀತಿಯ ಕುರಿತಾದ ನಿರೀಕ್ಷೆಗಳು ಷೇರುಪೇಟೆಯಲ್ಲಿ ಆತಂಕ ಸೃಷ್ಟಿಸಿದವು. ಫೆಡರಲ್ ರಿಸರ್ವ್ ಬಾಂಡ್ ಖರೀದಿಸುವುದನ್ನು ಆದಷ್ಟು ಬೇಗನೆ ನಿಲ್ಲಿಸುವ ನಿರೀಕ್ಷೆ ಇದೆ. ಹಣದುಬ್ಬರದ ಒತ್ತಡ ಹೆಚ್ಚಾಗುತ್ತಿ-ರುವುದರಿಂದ 2022ರಲ್ಲಿ ಬಡ್ಡಿದರ ಏರಿಕೆ ಮಾಡುವ ಸಾಧ್ಯತೆಯೂ ಇದೆ ಎಂದು ಜಿಯೋಜಿತ್ ಫೈನಾನ್ಸಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

20 ತಿಂಗಳ ಕನಿಷ್ಠ ಮಟ್ಟಕ್ಕೆ ರೂಪಾಯಿ ಮೌಲ್ಯ

ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು 44 ಪೈಸೆಗಳಷ್ಟು ಕುಸಿತ ಕಂಡು ಒಂದು ಡಾಲರ್‌ಗೆ ₹ 76.32ರಂತೆ ವಿನಿಮಯಗೊಂಡಿತು. ಇದು 20 ತಿಂಗಳ ಕನಿಷ್ಠ ಮಟ್ಟವಾಗಿದೆ. ಈ ತಿಂಗಳಿನಲ್ಲಿ 11 ವಹಿವಾಟು ಅವಧಿಗಳ ಪೈಕಿ 9 ದಿನಗಳಲ್ಲಿ ರೂಪಾಯಿ ಮೌಲ್ಯವು ಒಟ್ಟಾರೆ 119 ಪೈಸೆಗಳಷ್ಟು ಇಳಿಕೆ ಕಂಡಿದೆ.

ಷನಲ್ ಸಿಇಒ ಆಗಿ ಲೀನಾ ನಾಯರ್

ನವದೆಹಲಿ (ಪಿಟಿಐ): ಮಹಾರಾಷ್ಟ್ರದ ಕೊಲ್ಹಾಪುರ ಮೂಲದ ಲೀನಾ ನಾಯರ್ ಅವರು ಫ್ರಾನ್ಸ್‌ನ ಐಷಾರಾಮಿ ಫ್ಯಾಷನ್ ಕಂಪನಿ ಷನಲ್‌ನ ಜಾಗತಿಕ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಯಾಗಿ ಮುಂದಿನ ತಿಂಗಳ ಅಂತ್ಯದ ಹೊತ್ತಿಗೆ ಅಧಿಕಾರ ವಹಿಸಿಕೊಳ್ಳಲಿದ್ದಾರೆ.

ಜಾಗತಿಕ ಮಟ್ಟದ ಕಂಪನಿಗಳ ಮುಖ್ಯ ಸ್ಥಾನಕ್ಕೆ ಏರುತ್ತಿರುವ ಭಾರತ ಮೂಲದವರ ಸಾಲಿಗೆ ಲೀನಾ ಅವರೂ ಸೇರುತ್ತಿದ್ದಾರೆ. ಲೀನಾ ಅವರು ಇದುವರೆಗೆ ಯುನಿಲಿವರ್ ಕಂಪನಿಯ ಅತ್ಯಂತ ಕಿರಿಯ ವಯಸ್ಸಿನ, ಮುಖ್ಯ ಮಾನವ ಸಂಪನ್ಮೂಲ ಅಧಿಕಾರಿಯಾಗಿದ್ದರು. ಯುನಿಲಿವರ್ ಕಂಪನಿಯಲ್ಲಿ ಆ ಹುದ್ದೆಗೆ ಏರಿದ ಮೊದಲ ಮಹಿಳೆ ಇವರು. ಷನಲ್ ಕಂಪನಿ ಸೇರುವ ಕಾರಣಕ್ಕಾಗಿ ಲೀನಾ ಯುನಿಲಿವರ್‌ಗೆ ರಾಜೀನಾಮೆ ನೀಡಿದ್ದಾರೆ. ಲೀನಾ ಅವರು ಬ್ರಿಟಿಷ್ ಪ್ರಜೆ. ಹೊಸ ಹುದ್ದೆಯನ್ನು ವಹಿಸಿಕೊಂಡ ನಂತರ ಲಂಡನ್‌ನಿಂದ ಕರ್ತವ್ಯ ನಿರ್ವಹಿಸಲಿದ್ದಾರೆ.



ಲೀನಾ (ಚಿತ್ರ: ವಿಕಿ ಕಾಮನ್ಸ್)

ಲಖೀಂಪುರ–ಖೇರಿ ಪ್ರಕರಣ; ಕೇಂದ್ರ ಸರ್ಕಾರದ ವಿರುದ್ಧ ಕಾಂಗ್ರೆಸ್ ಕಿಡಿ

ಸಚಿವ ಮಿಶ್ರಾ ವಜಾಕ್ಕೆ ಒತ್ತಾಯ

ನವದೆಹಲಿ (ಪಿಟಿಐ): ಲಖೀಂಪುರ–ಖೇರಿ ಪ್ರಕರಣವು ಪೂರ್ವನಿಯೋಜಿತ ಸಂಚು ಎಂದು ಎಸ್‌ಐಟಿ ಹೇಳಿದ್ದು, ಕೇಂದ್ರ ಸರ್ಕಾರದ ವಿರುದ್ಧ ಕಾಂಗ್ರೆಸ್ ಕಿಡಿಕಾರಿದೆ. ಪ್ರಕರಣದ ಆರೋಪಿ ಆಶಿಶ್ ಮಿಶ್ರಾ ಅವರ ತಂದೆ, ಕೇಂದ್ರ ಸಚಿವ ಅಜಯ್ ಮಿಶ್ರಾ ಅವರನ್ನು ತಕ್ಷಣ ಸಂಪುಟದಿಂದ ವಜಾಗೊಳಿಸುವಂತೆ ಆಗ್ರಹಿಸಿದೆ.

ಲಖೀಂಪುರ ಖೇರಿ ಪ್ರಕರಣದ ಸಂತ್ರಸ್ತರಿಗೆ ನ್ಯಾಯ ಒದಗಿಸಬೇಕಾದರೆ, ಸಚಿವರನ್ನು ಸಂಪುಟದಿಂದ ಕೈಬಿಡಬೇಕು ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಆಗ್ರಹಿಸಿದ್ದಾರೆ. ಪತ್ರಕರ್ತರ ಜೊತೆ ಮಾತನಾಡಿದ ಅವರು, ಸಚಿವರು ರಾಜೀನಾಮೆ ನೀಡಲೇಬೇಕು ಎಂದು ಹೇಳಿದ್ದಾರೆ.

ಸಂಸತ್ತಿನಲ್ಲಿ ಈ ವಿಚಾರವನ್ನು ಚರ್ಚೆಗೆ ಎತ್ತಿಕೊಳ್ಳಲು ಮುಂದಾದರೆ, ಸರ್ಕಾರ ಅದಕ್ಕೆ ಅವಕಾಶ ನೀಡುತ್ತಿಲ್ಲ ಎಂದು ರಾಹುಲ್ ಆರೋಪಿಸಿದರು. ಎಸ್‌ಐಟಿ ಬಹಿರಂಗಪಡಿಸಿ-ರುವ ವಿಚಾರಗಳನ್ನು ಸದನದಲ್ಲಿ ಚರ್ಚಿಸಬೇಕು ಎಂದು ಆಗ್ರಹಿಸಿ ರಾಹುಲ್ ಗಾಂಧಿ ಅವರು ಲೋಕಸಭೆ ಕಾರ್ಯದರ್ಶಿಗೆ ನೋಟಿಸ್ ನೀಡಿದ್ದರು.

ಲೋಕಸಭೆ ಕಲಾಪ ಮುಂದೂಡಿಕೆ: ಲಖೀಂಪುರ–ಖೇರಿ ಪ್ರಕರಣದಲ್ಲಿ ಕೇಂದ್ರ ಸಚಿವ ಅಜಯ್ ಮಿಶ್ರಾ ಅವರನ್ನು ಸಂಪುಟದಿಂದ ವಜಾಗೊಳಿಸಬೇಕು ಎಂದು ಆಗ್ರಹಿಸಿ ಪ್ರತಿಪಕ್ಷಗಳು ಲೋಕಸಭೆಯಲ್ಲಿ ಬುಧವಾರ ಪ್ರತಿಭಟನೆ ನಡೆಸಿದವು. ಗದ್ದಲ ತೀವ್ರಗೊಂಡಿದ್ದರಿಂದ ಕಲಾಪವನ್ನು ದಿನದ ಮಟ್ಟಿಗೆ ಮುಂದೂಡಲಾಯಿತು.

ಬೆಳಿಗ್ಗೆ ಸದನ ಆರಂಭವಾಗುತ್ತಿದ್ದಂತೆ ಸ್ಪೀಕರ್ ಪೀಠದೆದುರು ಸೇರಿದ ಸದಸ್ಯರು, ಭಿತ್ತಿಪತ್ರ ಹಿಡಿದು ಘೋಷಣೆಗಳನ್ನು ಕೂಗಿದರು. ತಮ್ಮ ತಮ್ಮ ಆಸನಗಳಿಗೆ ಮರಳುವಂತೆ ಸ್ಪೀಕರ್ ಸ್ಥಾನದಲ್ಲಿದ್ದ ರಾಜೇಂದ್ರ ಅಗರ್‌ವಾಲ್ ಅವರು ಸದಸ್ಯರಿಗೆ ಸೂಚಿಸಿದರು. ಪ್ರತಿಪಕ್ಷಗಳ ಸದಸ್ಯರು ಸ್ಪೀಕರ್ ಮಾತನ್ನು ಪರಿಗಣಿಸದೆ ಪ್ರತಿಭಟನೆ ಮುಂದುವರಿಸಿದ್ದರಿಂದ ಕಲಾಪವನ್ನು ಮುಂದೂಡಲಾಯಿತು.

> ಲಖೀಂಪುರ ರೈತರ ಹತ್ಯೆ ಘಟನೆಯಿಂದ ಬಿಜೆಪಿ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಸಚಿವರ ಪುತ್ರ ಉದ್ದೇಶಪೂರ್ವಕವಾಗಿ ಈ ಸಂಚು ಮಾಡಿದ್ದಾರೆ
> **ಅಖಿಲೇಶ್ ಯಾದವ್,** ಎಸ್‌ಪಿ ಮುಖ್ಯಸ್ಥ

ಕಾಂಗ್ರೆಸ್, ಎಸ್‌ಪಿ ಪ್ರತಿಭಟನೆ (ಲಖನೌ ವರದಿ): ಮಿಶ್ರಾ ವಜಾಕ್ಕೆ ಆಗ್ರಹಿಸಿ ಉತ್ತರ ಪ್ರದೇಶ ವಿಧಾನಸಭೆಯ ಹೊರಗಡೆ ಕಾಂಗ್ರೆಸ್ ಹಾಗೂ ಸಮಾಜವಾದಿ ಪಕ್ಷಗಳು ಬುಧವಾರ ಪ್ರತಿಭಟನೆ ನಡೆಸಿದವು. ಮಿಶ್ರಾ ಅವರನ್ನು ತಕ್ಷಣ ಕೈಬಿಡುವಂತೆ ಎಸ್‌ಪಿ ಸದಸ್ಯ ರಾಜ್‌ಪಾಲ್ ಕಶ್ಯಪ್ ಆಗ್ರಹಿಸಿದರು.

ಇದೇ ಬೇಡಿಕೆ ಇಟ್ಟುಕೊಂಡು ಕಾಂಗ್ರೆಸ್ ಸದಸ್ಯರು ವಿಧಾನಸಭೆ ಸಂಕೀರ್ಣದವರೆಗೆ ಮೆರವಣಿಗೆ ನಡೆಸಿದರು.




ಉತ್ತರ ಪ್ರದೇಶ ವಿಧಾನಸಭಾ ಸಂಕೀರ್ಣದ ಹೊರಗಡೆ ಕಾಂಗ್ರೆಸ್ ಸದಸ್ಯರು ಬುಧವಾರ ಪ್ರತಿಭಟನೆ ನಡೆಸಿದರು —ಪಿಟಿಐ ಚಿತ್ರ

'ಮಿಶ್ರಾ ಅವರನ್ನು ವಜಾಗೊಳಿಸದೇ ಇರಲು ಇರುವ ಕಾರಣಗಳು ಏನು? ಸರ್ಕಾರವು ಏಕೆ ಅವರನ್ನು ರಕ್ಷಿಸುತ್ತಿದೆ' ಎಂದು ಉತ್ತರ ಪ್ರದೇಶ ಕಾಂಗ್ರೆಸ್ ಘಟಕದ ಮುಖ್ಯಸ್ಥ ಅಜಯ್ ಕುಮಾರ್ ಲಲ್ಲು ಪ್ರಶ್ನಿಸಿದ್ದಾರೆ.

'ಪ್ರಧಾನಿಯವರು ಕಾರ್ಯಕ್ರಮ ನಿರ್ವಹಣೆಯಲ್ಲಿ ನಿರತರಾಗಿದ್ದಾರೆ. ರೈತರಿಗೆ ನ್ಯಾಯ ಸಿಗುವುದು ಯಾವಾಗ' ಎಂದು ಅವರು ಕೇಳಿದ್ದಾರೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,324
ಇಂದಿನ ಅಂತ್ಯ	17,221
▼	103
ದಿನದ ಕನಿಷ್ಠ	17,255

ವಿನಿಮಯ ದರ

$ ಡಾಲರ್	76.32
£ ಪೌಂಡ್	100.70
€ ಯುರೊ	85.70
¥ ಯೆನ್ (100ಕ್ಕೆ)	67

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100 ಮೊಟ್ಟೆಗೆ	₹505
12 ಮೊಟ್ಟೆಗೆ	₹66
ಮೈಸೂರು	
100 ಮೊಟ್ಟೆಗೆ	₹505

ಖಾದ್ಯ ತೈಲ ಮುಂಬೈ



(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1300 (1310)
ಸೋಯಾ (ರಿಫೈನ್ಡ್)	₹1185 (1195)
ಸೂರ್ಯಕಾಂತಿ (ರಿಫೈನ್ಡ್)	₹1260 (1260)
ಪಾಮೋಲಿನ್	₹1152 (1165)

ಪರಸ್ಪರ ಅಂತರ ಕಾಯ್ದುಕೊಳ್ಳಿ

ಸಂಕ್ಷಿಪ್ತ ಸುದ್ದಿ

ಎಸ್‌ಬಿಐ ಎಂಎಫ್ ಐಪಿಒಗೆ ಸಮ್ಮತಿ

ನವದೆಹಲಿ (ಪಿಟಿಐ): ಎಸ್‌ಬಿಐ ಮ್ಯೂಚುವಲ್ ಫಂಡ್ ಕಂಪನಿಯಲ್ಲಿನ ಶೇಕಡ 6ರಷ್ಟು ಷೇರುಗಳನ್ನು ಐಪಿಒ ಮೂಲಕ ಮಾರಾಟ ಮಾಡಲು ಆಡಳಿತ ಮಂಡಳಿಯ ಒಪ್ಪಿಗೆ ದೊರೆತಿದೆ ಎಂದು ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ಬುಧವಾರ ತಿಳಿಸಿದೆ.

ಎಸ್‌ಬಿಐ ಫಂಡ್ಸ್ ಮ್ಯಾನೇಜ್‌ಮೆಂಟ್ ಪ್ರೈ.ಲಿ. ಕಂಪನಿಯನ್ನು ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ಮತ್ತು ವಿಶ್ವದ ಮುಂಚೂಣಿ ನಿಧಿ ನಿರ್ವಹಣಾ ಕಂಪನಿಯಾಗಿರುವ ಫ್ರಾನ್ಸ್‌ನ ಅಮುಂಡಿ ಜಂಟಿಯಾಗಿ ನಡೆಸುತ್ತಿವೆ. ಅಮುಂಡಿ ಕಂಪನಿಯು ಎಸ್‌ಬಿಐ ಫಂಡ್ಸ್ ಮ್ಯಾನೇಜ್‌ಮೆಂಟ್ ಕಂಪನಿಯಲ್ಲಿ ಶೇಕಡ 37ರಷ್ಟು ಷೇರುಗಳನ್ನು ಹೊಂದಿದೆ. ಶೇಕಡ 63ರಷ್ಟು ಷೇರುಗಳನ್ನು ಎಸ್‌ಬಿಐ ಹೊಂದಿದೆ.

ಅಮುಂಡಿ ಕೂಡ ತನ್ನ ಷೇರುಗಳನ್ನು ಐಪಿಒ ಮೂಲಕ ಮಾರಾಟ ಮಾಡಲಿದೆಯೇ ಎಂಬುದು ಸ್ಪಷ್ಟವಾಗಿಲ್ಲ.

ವಾಟ್ಸ್‌ಆ್ಯಪ್ ಮೂಲಕ ದಿನಸಿ ಖರೀದಿ ಅವಕಾಶ

ನವದೆಹಲಿ (ಪಿಟಿಐ): ಜಿಯೊಮಾರ್ಟ್ ಗ್ರಾಹಕರು ದಿನಸಿ, ತರಕಾರಿ ಸೇರಿದಂತೆ ಹಲವು ಅಗತ್ಯ ವಸ್ತುಗಳನ್ನು ವಾಟ್ಸ್‌ಆ್ಯಪ್ ಮೂಲಕವೂ ಆರ್ಡರ್ ಮಾಡಬಹುದಾಗಿದೆ.

ವಾಟ್ಸ್‌ಆ್ಯಪ್‌ನಲ್ಲಿ ಟ್ಯಾಪ್ ಆ್ಯಂಡ್ ಚಾಟ್ ಆಯ್ಕೆ ಮೂಲಕ ದಿನಸಿ ವಸ್ತುಗಳನ್ನು ಆರ್ಡರ್ ಮಾಡಬಹುದು. ಈ ಸೇವೆಯು ಉಚಿತವಾಗಿರಲಿದ್ದು, ಕನಿಷ್ಠ ಇಂತಿಷ್ಟು ಮೌಲ್ಯದ ಖರೀದಿ ನಡೆಸಬೇಕು ಎನ್ನುವ ಮಿತಿ ಇಲ್ಲ ಎಂದು ಕಂಪನಿಯು ತಿಳಿಸಿದೆ.

ವಾಟ್ಸ್‌ಆ್ಯಪ್‌ನ 40 ಕೋಟಿ ಬಳಕೆದಾರರು ಮತ್ತು ರಿಲಯನ್ಸ್‌ನ ರಿಟೇಲ್ ಗ್ರಾಹಕರನ್ನು ಸುಲಭವಾಗಿ ತಲುಪಲು ಈ ಪಾಲುದಾರಿಕೆ ಮಾಡಿಕೊಳ್ಳಲಾಗಿದೆ ಎಂದು ಜಿಯೊಮಾರ್ಟ್ ಹೇಳಿದೆ.

ಜನವರಿಯಿಂದ ಕಾರು ಬೆಲೆ ಏರಿಕೆ: ಟೊಯೋಟ

ನವದೆಹಲಿ (ಪಿಟಿಐ): ತಯಾರಿಕಾ ವೆಚ್ಚ ಹೆಚ್ಚಳವನ್ನು ಸರಿದೂಗಿಸುವ ಸಲುವಾಗಿ ಜನವರಿಯಿಂದ ತನ್ನ ಎಲ್ಲ ವಾಹನಗಳ ಬೆಲೆಯನ್ನು ಹೆಚ್ಚಿಸುವುದಾಗಿ ಟೊಯೋಟ ಕಿರ್ಲೋಸ್ಕರ್ ಮೋಟರ್ (ಟಿಕೆಎಂ) ಕಂಪನಿಯು ಬುಧವಾರ ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

ಸೆಮಿಕಂಡಕ್ಟರ್ ಕ್ಷೇತ್ರ: ₹ 1.76 ಲಕ್ಷ ಕೋಟಿ ಹೂಡಿಕೆ ನಿರೀಕ್ಷೆ

ನವದೆಹಲಿ (ಪಿಟಿಐ): ಸೆಮಿಕಂಡಕ್ಟರ್ ತಯಾರಿಕೆಯನ್ನು ಉತ್ತೇಜಿಸುವ ಉದ್ದೇಶದ ₹ 76 ಸಾವಿರ ಕೋಟಿ ಮೊತ್ತದ ಯೋಜನೆಯಿಂದಾಗಿ ದೇಶದಲ್ಲಿ ₹ 1.76 ಲಕ್ಷ ಕೋಟಿ ಹೂಡಿಕೆ ಆಗಲಿದೆ ಎಂಬ ನಿರೀಕ್ಷೆಯನ್ನು ಕೇಂದ್ರ ಸರ್ಕಾರ ಹೊಂದಿದೆ. ಅಲ್ಲದೆ, ಇದು ದೇಶದಲ್ಲಿ ನೇರವಾಗಿ ಮತ್ತು ಪರೋಕ್ಷವಾಗಿ ಒಟ್ಟು 1.35 ಲಕ್ಷ ಉದ್ಯೋಗ ಸೃಷ್ಟಿಸಲಿದೆ ಎಂಬ ಅಂದಾಜನ್ನು ಕೂಡ ಕೇಂದ್ರ ಹೊಂದಿದೆ.

'ಮುಂದಿನ ನಾಲ್ಕು ವರ್ಷಗಳಲ್ಲಿ ಇಷ್ಟು ಮೊತ್ತ ಹೂಡಿಕೆ ಆಗಬಹುದು ಎಂಬುದು ನಮ್ಮ ನಿರೀಕ್ಷೆ. ಈ ವಿಚಾರವಾಗಿ ಒಂದಿಷ್ಟು ಪ್ರಸ್ತಾವಗಳು ಈಗಾಗಲೇ ಇವೆ' ಎಂದು ಕೇಂದ್ರ ಐ.ಟಿ. ಮತ್ತು ಸಂವಹನ ಸಚಿವ ಅಶ್ವಿನಿ ವೈಷ್ಣವ್ ಅವರು ತಿಳಿಸಿದರು. ಎರಡರಿಂದ ನಾಲ್ಕು ವರ್ಷಗಳಲ್ಲಿ ಬೃಹತ್ ಪ್ರಮಾಣದ ನಾಲ್ಕು ಸೆಮಿಕಂಡಕ್ಟರ್ ತಯಾರಿಕಾ ಘಟಕಗಳು ತಲೆ ಎತ್ತಲಿವೆ ಎಂದರು.

ಮುಖ್ಯಾಂಶಗಳು

- ಸೆಮಿಕಂಡಕ್ಟರ್ ತಯಾರಿಕೆಗೆ ಟಾಟಾ ಸಮೂಹ ಆಸಕ್ತಿ
- ಈಗಾಗಲೇ ಬಂದಿವೆ ಹೂಡಿಕೆ ಪ್ರಸ್ತಾವ

ಸೆಮಿಕಂಡಕ್ಟರ್ ತಯಾರಿಕಾ ಕ್ಷೇತ್ರವನ್ನು ಪ್ರವೇಶಿಸುವ ಉದ್ದೇಶ ತನಗೆ ಇದೆ ಎಂದು ಟಾಟಾ ಸಮೂಹವು ಈಗಾಗಲೇ ಘೋಷಣೆ ಮಾಡಿದೆ. ವೇದಾಂತ ಸಮೂಹ ಕೂಡ ದೇಶದಲ್ಲಿ ಸೆಮಿಕಂಡಕ್ಟರ್ ತಯಾರಿಕಾ ಘಟಕ ಆರಂಭಿಸಲು ಉತ್ಸುಕವಾಗಿದೆ ಎಂದು ಮೂಲಗಳು ತಿಳಿಸಿವೆ.

ಎಲೆಕ್ಟ್ರಾನಿಕ್ಸ್ ಮತ್ತು ಐ.ಟಿ. ಸಚಿವಾಲಯದ ಮೂಲಗಳ ಪ್ರಕಾರ, ಎಲೆಕ್ಟ್ರಾನಿಕ್ ಚಿಪ್ ತಯಾರಿಕಾ ಕ್ಷೇತ್ರದ ಎರಡು ದೊಡ್ಡ ಕಂಪನಿಗಳು ತಲಾ ₹ 30 ಸಾವಿರ ಕೋಟಿಯಿಂದ ₹ 50 ಸಾವಿರ ಕೋಟಿವರೆಗೆ ಹೂಡಿಕೆ ಮಾಡಿ ಘಟಕ ಆರಂಭಿಸುವ ನಿರೀಕ್ಷೆ ಇದೆ. ಇದು ಮುಂದಿನ ನಾಲ್ಕು ವರ್ಷಗಳಲ್ಲಿ ಆಗಬಹುದು ಎಂಬ ಅಂದಾಜು ಇದೆ ಎಂದು ಮೂಲಗಳು ಹೇಳಿವೆ.

ಆಟೊಮೊಬೈಲ್ ಉದ್ಯಮಕ್ಕೆ ಚಿಪ್, ವಿದ್ಯುತ್ ಸಾಧನಗಳನ್ನು ತಯಾರಿಸಿಕೊಡುವ ಒಟ್ಟು 20 ಕಂಪನಿಗಳು ಮುಂದಿನ ಮೂರು ವರ್ಷಗಳಲ್ಲಿ ಕಾರ್ಯ ಆರಂಭಿಸುವ ಸಾಧ್ಯತೆ ಇದೆ. ಇವು ₹ 3 ಸಾವಿರದಿಂದ ₹ 5 ಸಾವಿರದವರೆಗೆ ಹೂಡಿಕೆ ಮಾಡುವ ನಿರೀಕ್ಷೆ ಇದೆ.

ಸೆಮಿಕಂಡಕ್ಟರ್ ಮತ್ತು ಡಿಸ್‌ಪ್ಲೆ ತಯಾರಿಕಾ ವ್ಯವಸ್ಥೆಯ ಅಭಿವೃದ್ಧಿಗೆ ರೂಪಿಸಿರುವ ಯೋಜನೆಯು ಹೆಚ್ಚಿನ ಕೌಶಲ ಬಯಸುವ 35 ಸಾವಿರ ಉದ್ಯೋಗಗಳನ್ನು ಸೃಷ್ಟಿಸಲಿದೆ. ಪರೋಕ್ಷವಾಗಿ ಒಂದು ಲಕ್ಷ ಉದ್ಯೋಗ ಸೃಷ್ಟಿ ಮಾಡಲಿದೆ ಎಂದು ವೈಷ್ಣವ್ ಅವರು ತಿಳಿಸಿದ್ದಾರೆ.

ಒಕ್ಕಲಿಗರ ಸಂಘ: 20 ನಿರ್ದೇಶಕರ ಆಯ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕರ ಸ್ಥಾನಗಳಿಗೆ ನಡೆದ ಚುನಾವಣೆಯ ಮತ ಎಣಿಕೆ ಬುಧವಾರ ನಡೆದಿದ್ದು, ಒಟ್ಟು 35 ಸ್ಥಾನಗಳಲ್ಲಿ 20ರ ಫಲಿತಾಂಶ ಪ್ರಕಟವಾಗಿದೆ.

ಬೆಂಗಳೂರು ನಗರ, ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆಯನ್ನು ಒಳಗೊಂಡಂತೆ 15 ಸ್ಥಾನಗಳ ಫಲಿತಾಂಶ ಬಾಕಿ ಬಾಕಿ ಇದ್ದು, ಮತ ಎಣಿಕೆ ಕಾರ್ಯ ತಡ ರಾತ್ರಿ ತನಕ ಮುಂದುವರಿದಿತ್ತು. ಕೆಂಪೇಗೌಡ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ವೈದ್ಯ ಡಾ. ಅಂಜನಪ್ಪ ಅವರ ಸಿಂಡಿಕೇಟ್ ಸದಸ್ಯರೇ ಹೆಚ್ಚಿನ ಸಂಖ್ಯೆಯಲ್ಲಿ ಮುನ್ನಡೆ ಸಾಧಿಸಿದ್ದಾರೆ. ಕೆಂಚಪ್ಪಗೌಡ ಅವರ ಸಿಂಡಿಕೇಟ್ ಸದಸ್ಯರೂ ಮುನ್ನಡೆಯ-ಲ್ಲಿದ್ದಾರೆ ಎನ್ನಲಾಗಿದೆ. ಉಳಿದ ಜಿಲ್ಲೆಗಳ ಫಲಿತಾಂಶ ಇಂತಿದೆ.

ಕೆ.ವಿ.ಶ್ರೀಧರ್, ಎಂ.ಬಿ. ಮಂಜೇಗೌಡ, ಸಿ.ಜಿ. ಗಂಗಾಧರ್ (ಮೈಸೂರು), ಅಶೋಕ್ ಜಯರಾಮ್, ಮೂಡ್ಯಾ ಚಂದ್ರು, ರಾಘವೇಂದ್ರ, ನಲ್ಲಿಗೆರೆ ಬಾಲು (ಮಂಡ್ಯ), ಸಿ.ಎನ್. ಬಾಲಕೃಷ್ಣ, ಬಾಗೂರು ಮಂಜೇಗೌಡ, ರಘುಗೌಡ (ಹಾಸನ), ಹನುಮಂತರಾಯಪ್ಪ, ಲೋಕೇಶ್ ನಾಗರಾಜಯ್ಯ (ತುಮಕೂರು), ಡಾ. ರಮೇಶ್, ಕೋನಪ್ಪರೆಡ್ಡಿ, ಯಲವಳ್ಳಿ ರಮೇಶ್ (ಕೋಲಾರ), ಹರಪಳ್ಳಿ ರವೀಂದ್ರ (ಕೊಡಗು), ಪೂರ್ಣೇಶ್ (ಚಿಕ್ಕಮಗಳೂರು), ಡಾ. ರೇಣುಕಾಪ್ರಸಾದ್ (ದಕ್ಷಿಣ ಕನ್ನಡ), ಸಿರಿಬೈಲ್ ಧರ್ಮೇಶ್ (ಶಿವಮೊಗ್ಗ), ಜೆ.ರಾಜು (ಚಿತ್ರದುರ್ಗ).

ಜಿಎಸ್‌ಟಿ ಪರಿಹಾರ: ರಾಜ್ಯಕ್ಕೆ ₹1,603 ಕೋಟಿ ಬಿಡುಗಡೆ

ಪ್ರಜಾವಾಣಿ ವಾರ್ತೆ



ನವದೆಹಲಿ: ಕರ್ನಾಟಕಕ್ಕೆ ಜಿಎಸ್‌ಟಿ ಪರಿಹಾರವಾಗಿ ನವೆಂಬರ್ 3ರ ನಂತರ ₹1,603 ಕೋಟಿ ಬಿಡುಗಡೆ ಮಾಡಿರುವುದಾಗಿ ಕೇಂದ್ರ ಹಣಕಾಸು ಖಾತೆ ರಾಜ್ಯ ಸಚಿವ ಪಂಕಜ್ ಚೌಧರಿ ಬುಧವಾರ ಸಂಸತ್ತಿಗೆ ತಿಳಿಸಿದ್ದಾರೆ.

ಬಿಜೆಪಿ ಸಂಸದ ಕೆ.ಸಿ.ರಾಮಮೂರ್ತಿ ಅವರ ಪ್ರಶ್ನೆಗೆ ಲಿಖಿತ ಉತ್ತರ ನೀಡಿರುವ ಸಚಿವರು, ಏಪ್ರಿಲ್ 20ರಿಂದ ಮಾರ್ಚ್ 2021ರ ಅವಧಿಗೆ ಪಾವತಿಸಬೇಕಾದ ಪರಿಹಾರದ ಭಾಗಶಃ ಮೊತ್ತವಾದ ₹10.369 ಕೋಟಿಯನ್ನು ಬಿಡುಗಡೆ ಮಾಡಲಾಗಿದೆ. ಇತ್ತೀಚೆಗೆ ಬಿಡುಗಡೆ ಮಾಡಿರುವುದು ಹೆಚ್ಚುವರಿ ಪರಿಹಾರ ಮೊತ್ತವಾಗಿದೆ ಎಂದು ತಿಳಿಸಿದ್ದಾರೆ.

ಜಿಎಸ್‌ಟಿ (ರಾಜ್ಯಗಳಿಗೆ ಪರಿಹಾರ) ಕಾಯ್ದೆ– 2017ರ ನಿಬಂಧನೆಗಳ ಪ್ರಕಾರ, 2017-18, 2018-19 ಮತ್ತು 2019-20ನೇ ಹಣಕಾಸು ವರ್ಷಗಳಿಗೆ ಸಂಬಂಧಿಸಿದಂತೆ ಕರ್ನಾಟಕಕ್ಕೆ ಈಗಾಗಲೇ ಜಿಎಸ್‌ಟಿ ಪರಿಹಾರ ಪಾವತಿಸಲಾಗಿದೆ ಎಂದು ಅವರು ಹೇಳಿದ್ದಾರೆ.

ಪಂ. ನಿತ್ಯಾನಂದಗೆ ಮಲ್ಲಿಕಾರ್ಜುನ ಮನಸೂರ ಪ್ರಶಸ್ತಿ



ಪಂ. ನಿತ್ಯಾನಂದ ಹಳದಿಪುರ

ಧಾರವಾಡ: ಹಿಂದೂಸ್ತಾನಿ ಗಾಯಕ ಡಾ. ಮಲ್ಲಿಕಾರ್ಜುನ ಮನಸೂರ ನೆನಪಿನ ರಾಷ್ಟ್ರೀಯ ಪ್ರಶಸ್ತಿಯನ್ನು ಈ ಬಾರಿ ಕೊಳಲು ವಾದಕ ಮುಂಬೈನ ಪಂಡಿತ್ ನಿತ್ಯಾನಂದ ಹಳದಿಪುರ ಅವರಿಗೆ ನೀಡಲು ಡಾ. ಮಲ್ಲಿಕಾರ್ಜುನ ಮನಸೂರ ರಾಷ್ಟ್ರೀಯ ಸ್ಮಾರಕ ಟ್ರಸ್ಟ್‌ನ ಸಾಮಾನ್ಯ ಸಭೆ ನಿರ್ಧರಿಸಿದೆ.

ಜಿಲ್ಲಾಧಿಕಾರಿ ನಿತೇಶ್ ಕೆ. ಪಾಟೀಲ ಅವರ ಅಧ್ಯಕ್ಷತೆಯಲ್ಲಿ ಬುಧವಾರ ನಡೆದ ಸಭೆಯಲ್ಲಿ ಹೆಸರು ಅಂತಿಮಗೊಳಿಸಲಾಯಿತು.

ಡಾ. ಮನಸೂರ ಅವರ 111ನೇ ಜನ್ಮದಿನದ ಅಂಗವಾಗಿ ಈ ಪ್ರಶಸ್ತಿ ನೀಡಲಾಗುತ್ತಿದೆ. ಯುವ ಪುರಸ್ಕಾರ-ವನ್ನು ಧಾರವಾಡದ ಹಿಂದೂಸ್ತಾನಿ ಗಾಯಕಿ ಶಿವಾನಿ ಮೀರಜಕರ ಅವರಿಗೆ ನೀಡಲು ಸಭೆ ನಿರ್ಧರಿಸಿತು. ಪ್ರಶಸ್ತಿ ಪ್ರದಾನ ಸಮಾರಂಭವು ಜ. 1ರಂದು ಸಂಜೆ ನಗರದ ಸೃಜನಾ ರಂಗಮಂದಿರ-ದಲ್ಲಿ ನಡೆಯಲಿದೆ.

ರಾಷ್ಟ್ರೀಯ ಪ್ರಶಸ್ತಿಯು ₹1ಲಕ್ಷ ಹಾಗೂ ಯುವ ಪ್ರಶಸ್ತಿ ₹25ಸಾವಿರ ನಗದು ಪುರಸ್ಕಾರ ಹಾಗೂ ಫಲಕವನ್ನು ಒಳಗೊಂಡಿರಲಿದೆ.

ಮುಂಬೈ ಧಾರಣೆ

ಶೇಂಗಾ

15-12-2021

ಜಾವಾ 70/80(ಹೊಸ)	10650-10700
ಜಾವಾ 80/90(ಹೊಸ)	10250-10300
ದಪ್ಪ ಮಧ್ಯಪ್ರದೇಶ(ಹೊಸ)	9950-10000
ದಪ್ಪ ಗುಜರಾತ್(ಹೊಸ)	8600-8700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1310 (1320)
ಒಂದು ವಾರದ ಡೆಲಿವರಿ	1305 (1315)
ಸೋಯಾ ಕಚ್ಚಾ	1140 (1152)
ಪಾಮ್ ವಾರದ ಡೆಲಿವರಿ	1150 (1163)
ಸೂರ್ಯಕಾಂತಿ ಎಣ್ಣೆ ಕಚ್ಚಾ	1180 (1180)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ	47,900 (47,900)
ಬೆಳ್ಳಿ ಕೆ.ಜಿ	60,300 (60,850)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	500-550
ನಡುಗೋಲು	600-650
ರಾಶಿ	700-800
ರಾಶಿ ಉತ್ತಮ	800-900
ಜರಡಿ	1000-1050
ಹೆರಕಿದ್ದು	1200-1300
ಹಸಿರು ಸಾಧಾರಣ	750-850
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1300-1400
ಕಾಳು ಮೆಣಸು	500
ಅಡಿಕೆ	
ಬಂಟ್ವಾಳ	
ಕೋಕ	12500-25000
ಹಳತು	46000-53000
ಕಾರ್ಕಳ	
ಹೊಸತು	40000-45000
ಹಳತು	46000-53000
ಕುಮಟ	
ಚಿಪ್ಪು	24509-41019
ಕೋಕ	21019-34501
ಫ್ಯಾಕ್ಟರಿ	12609-18699
ಹಳೆಚಾಲಿ	48509-50499
ಹೊಸಚಾಲಿ	40509-42800
ಪುತ್ತೂರು	
ಕೋಕ	11000-26000
ಹೊಸತು	27500-45000
ಸಿದ್ದಾಪುರ	
ಬಿಳಿಗೋಟು	24899-38469
ಚಾಲಿ	46099-50509
ಕೋಕ	23911-30609
ಹೊಸಚಾಲಿ	26099-39799
ಕೆಂಪುಗೋಟು	25099-33099
ರಾಶಿ	45809-48089
ತಟ್ಟಿಬೆಟ್ಟೆ	33699-33699
ಶಿರಸಿ	
ಬೆಟ್ಟೆ	35199-44308
ಬಿಳಿಗೋಟು	28099-44800
ಚಾಲಿ	40899-50939
ರಾಶಿ	43299-49809
ಶಿವಮೊಗ್ಗ ಎಪಿಎಂಸಿ	
ಬೆಟ್ಟೆ	47709-53569
ಗೊರಬಲು	17025-38299
ರಾಶಿ	45166-47698
ಸರಕು	50009-72896
ರಾಮನಗರ ರೇಷ್ಮೆ	
ಮಿಶ್ರತಳಿ	350-621
ದ್ವಿತಳಿ	670-862

ಕಾಫಿ

(50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	---	15300	15250	237.15ಸೆಂಟ್ಸ್
ಎಸಿ	---	6500	6450	
ಆರ್‌ಪಿ	---	---	---	ಲಂಡನ್
ಆರ್‌ಸಿ	---	3650	---	2406 ಡಾಲರ್ಸ್

ಈರುಳ್ಳಿ ಧಾರಣೆ



(ಕ್ವಿಂಟಲ್‌ಗೆ)

ದೊಡ್ಡ	₹1500-3600
ಮಧ್ಯಮ	₹1800-2000
ಸಣ್ಣ	₹400-1000



ಶನಿವಾರದಿಂದ ಬೆಂಗಳೂರು ಸಾಹಿತ್ಯ ಉತ್ಸವ • ಪ್ರಚಲಿತ ವಿದ್ಯಮಾನಗಳ ಚರ್ಚೆ

ಬಿಚ್ಚಿಕೊಳ್ಳಲಿದೆ 'ಬಹುಭಾಷಿಕ ಜಗತ್ತು'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಲವು ಆಡುಭಾಷೆಗಳಿಂದ ತುಂಬಿದ ಕನ್ನಡದಲ್ಲಿ ಅದೆಷ್ಟೊಂದು ಕವಲುಗಳು! ಅದಕ್ಕೇ ಅಲ್ಲವೆ, ಪೂರ್ವಸೂರಿಗಳು ನಮ್ಮ ಈ ನುಡಿಯನ್ನು 'ಕನ್ನಡಂಗಳ್' ಎಂದು ಬಹುವಚನದಲ್ಲಿ ಕರೆದಿರುವುದು. ಶನಿವಾರದಿಂದ (ಡಿಸೆ 18ರಿಂದ) ನಡೆಯಲಿರುವ ಎರಡು ದಿನಗಳ ಬೆಂಗಳೂರು ಸಾಹಿತ್ಯ ಉತ್ಸವದಲ್ಲಿ ನಾಡಿನ ಅಂತಹ 'ಬಹುಭಾಷಿಕ ಜಗತ್ತು' ವಿಶೇಷವಾಗಿ ಚರ್ಚೆಗೆ ಒಳಪಡಲಿದೆ.

ಕನ್ನಡ ನಾಡಿನ ಬಹುಭಾಷಿಕ ಸಂಸ್ಕೃತಿಯ ಭವ್ಯ 'ಸೌಧ'ವನ್ನು ಉತ್ಸವದಲ್ಲಿ ನಡೆಯಲಿರುವ ಗೋಷ್ಠಿಗಳು ಕಟ್ಟಿಕೊಡಲಿವೆ ಎನ್ನುವ ವಿಶ್ವಾಸ ಸಂಘಟಕರದ್ದಾಗಿದೆ. ಬೆಂಗಳೂರು ಅಂತಾರಾಷ್ಟ್ರೀಯ ಕೇಂದ್ರದಲ್ಲಿ (ಬಿಐಸಿ) ಈ ಸಲದ ಉತ್ಸವ ನಡೆಯಲಿದೆ.

ಹಿಂದಿ ಹೇರಿಕೆ ಪ್ರಯತ್ನಗಳು ನಡೆದಾಗಲೆಲ್ಲ ಭಾರತದ ಬಹುಭಾಷಿಕತ್ವದ ಕುರಿತು ಚರ್ಚೆಗಳು ಮುನ್ನೆಲೆಗೆ ಬರುತ್ತಲೇ ಇರುತ್ತವೆ. ಬಹುಭಾಷಿಕ ಸಂಸ್ಕೃತಿಯನ್ನು ಹೇಗೆ ಕಾಪಿಟ್ಟುಕೊಳ್ಳುವುದು ಎಂಬ ವಿಷಯವಾಗಿಯೂ ವಿಚಾರ ಮಂಥನಗಳು ನಡೆಯುತ್ತಲೇ ಇರುತ್ತವೆ. ಅದರ ಮುಂದುವರಿದ ಭಾಗವಾಗಿ ಈ ಸಲದ ಉತ್ಸವದ ಮೊದಲ ದಿನ 'ಭಾರತೀಯ ಬಹುಭಾಷಿಕತ್ವದ ಭವಿಷ್ಯ' ಕುರಿತು ಗೋಷ್ಠಿಯನ್ನು ಏರ್ಪಡಿಸಲಾಗಿದೆ. ಹಿರಿಯ ವಿದ್ವಾಂಸ ಪುರುಷೋತ್ತಮ ಬಿಳಿಮಲೆ ಹಾಗೂ ಶಕೀರಾ ಜಬೀನ್ ಬಿ. ಅವರು ಚರ್ಚೆಯನ್ನು ನಡೆಸಿಕೊಡಲಿದ್ದಾರೆ.

ಹಿಂದಿ ಪೂರ್ವಯುಗದ ಬ್ರಜ್, ಅವಧಿ, ರಾಜಸ್ಥಾನಿ, ಬಘೇಲಿ, ಭೋಜಪುರಿ, ಬುಂದೇಲಿ, ಮೈಥಿಲಿ, ಛತ್ತೀಸಗಢಿ, ಗಢವಾಲಿ, ಹರ್ಯಾನ್ವಿ, ಕನೌಜಿ, ಕುಮೌನಿ, ಮಗಧಿ, ಮಾರ್ವಾರಿ ಮೊದಲಾದ ಸುಂದರ ಭಾಷೆಗಳು ತಮ್ಮ ಅಸ್ತಿತ್ವ ಉಳಿಸಿಕೊಳ್ಳಲು ಹುಡುಕಾಟ ನಡೆಸಿರುವ ಹೊತ್ತಿನಲ್ಲಿ ಈ ಚರ್ಚೆ ಮಹತ್ವ ಪಡೆದುಕೊಂಡಿದೆ. ಅಳಿವಿನಂಚಿನಲ್ಲಿರುವ ಭಾಷೆಗಳ ಭವಿಷ್ಯದ ಕುರಿತೂ ಸಂವಾದವನ್ನು ಏರ್ಪಡಿಸಲಾಗಿದೆ. ಮೊದಲ ಗೋಷ್ಠಿಗೆ ಪೂರಕ ಎನಿಸಿರುವ ಈ ಸಂವಾದ ಚರ್ಚೆಗೆ ರಂಗು ತುಂಬಲಿದೆ.

ಕೊರಗ ಹಾಗೂ ಕೊಂಕಣಿ ಭಾಷೆಗಳ ಕುರಿತೂ ವಿಶೇಷ ಚರ್ಚೆಗಳು ನಡೆಯಲಿವೆ. ಅದರಲ್ಲೂ 'ಕೊಂಕಣಿ: ಒಂದು ಭಾಷೆ, ಹಲವು ಲಿಪಿ' ಗೋಷ್ಠಿ ಕುತೂಹಲವನ್ನು ಕೆರಳಿಸಿದೆ. ಈ ಸಾಲಿನ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಸಾಹಿತಿ ದಾಮೋದರ ಮಾವಜೋ, ಮೆಲ್ವಿನ್ ರೊಡ್ರಿಗಸ್ ಹಾಗೂ ವಿವೇಕ ಶಾನಭಾಗ ಚರ್ಚೆಯಲ್ಲಿ ಪಾಲ್ಗೊಳ್ಳಲಿದ್ದಾರೆ.

ಕೊಡಗು ಹಾಗೂ ತುಳುನಾಡಿನ ಪರಂಪರೆ ಕುರಿತ ಚರ್ಚೆ ಉತ್ಸವದ ಬಹುತ್ವವನ್ನು ಮತ್ತಷ್ಟು ಹೆಚ್ಚಿಸಿದೆ. ಕಲ್ಯಾಣ ಕರ್ನಾಟಕದಲ್ಲಿ ಬಳಕೆಯಲ್ಲಿರುವ ದಖನಿ ಉರ್ದು ಭಾಷೆಯ ಸೊಗಡನ್ನು ಎಂ.ಎನ್. ಸಯೀದ್ ಮತ್ತು ಕಾರ್ತಿಕ್ ಎಂ. ಅವರು ಕಟ್ಟಿಕೊಡಲಿದ್ದಾರೆ. ಪ್ರಚಲಿತ ಜಗತ್ತಿನ ಸಾಹಿತ್ಯದ ವಿದ್ಯಮಾನ ಎನಿಸಿದ 'ಡಿಜಿಟಲ್ ಸಾಹಿತ್ಯ ಕ್ರಾಂತಿ' ವಿಶೇಷವಾಗಿ ಚರ್ಚೆಗೆ ಒಳಪಡಲಿದೆ. ಬನಶಂಕರಿ ಕುಲಕರ್ಣಿ, ಎಸ್. ಶ್ರೀನಿವಾಸ ಶೆಟ್ಟಿ, ರೋಹಿಣಿ ರಂಗನಾಥನ್, ಕೆ.ವಿ. ಕಸ್ತೂರಿ ರಾಮ್ ಮತ್ತು ಪ್ರತಿಭಾ ನಂದಕುಮಾರ್ ಈ ಗೋಷ್ಠಿಯಲ್ಲಿ ಭಾಗವಹಿಸಲಿದ್ದಾರೆ.


ದಾಮೋದರ ಮಾವಜೋ


ಸಾನಿಯಾ ಮಿರ್ಜಾ

ಪ್ರವೇಶ ಉಚಿತ

ಉತ್ಸವದ ಗೋಷ್ಠಿಗಳಿಗೆ ಉಚಿತ ಪ್ರವೇಶ ಕಲ್ಪಿಸಲಾಗಿದೆ. ಕೋವಿಡ್‌ನ ಮಾರ್ಗಸೂಚಿ ಪಾಲಿಸುವುದು ಕಡ್ಡಾಯ. ಮೊದಲು ಬಂದವರಿಗೆ ಆದ್ಯತೆ ಮೇಲೆ ಪ್ರವೇಶ ಸಿಗಲಿದೆ. ಗೋಷ್ಠಿಗಳ ನೇರಪ್ರಸಾರ ಇರುವುದಿಲ್ಲ. ಕೆಲವು ದಿನಗಳ ಬಳಿಕ ಯುಟ್ಯೂಬ್‌ನಲ್ಲಿ ಗೋಷ್ಠಿಗಳ ಪೂರ್ಣ ಚಿತ್ರೀಕರಣವನ್ನು ಅಪ್‌ಲೋಡ್ ಮಾಡಲಾಗುತ್ತದೆ ಎಂದು ಉತ್ಸವದ ಸಂಚಾಲಕರಲ್ಲಿ ಒಬ್ಬರಾದ ವಿ.ರವಿಚಂದರ್ ಹೇಳುತ್ತಾರೆ.

ವಿಮರ್ಶಕ ರಾಜೇಂದ್ರ ಚೆನ್ನಿ ಅವರು 'ಸಕಲ ಜೀವಾತ್ಮರ ಲೇಸನ್ನೇ ಬಯಸುತ್ತಾ' ಸಂವಾದದಲ್ಲಿ ಪಾಲ್ಗೊಳ್ಳಲಿದ್ದಾರೆ. ಹಾಲಕ್ಕಿ ಕನ್ನಡದ ವೈಶಿಷ್ಟ್ಯವನ್ನು ಅಕ್ಷರ ಕೃಷ್ಣಮೂರ್ತಿ ಹಾಗೂ ಫಲ್ಗುಣ ಗೌಡ ತೆರೆದಿಡಲಿದ್ದಾರೆ.

ಭಾನುವಾರದ ಮೊದಲ ಗೋಷ್ಠಿಯಲ್ಲಿ 'ಕತೆಯೊಂದು ಆತ್ಮಕತೆಯ ಹೌದು' ಎಂಬ ವಿಷಯವಾಗಿ ಕತೆಗಾರರಾದ ಜೋಗಿ ಮತ್ತು ಜಿ.ಎನ್. ಮೋಹನ್ ನಡೆಸುವ ಸಂವಾದ ಕುತೂಹಲ ಮೂಡಿಸಿದೆ. ಹವ್ಯಕ ಕನ್ನಡದ ಸೊಗಡು-ಸೊಲ್ಲು ಕುರಿತು ತಾಳ್ತಜೆ ವಸಂತಕುಮಾರ್ ಮತ್ತು ಪಾದೇಕಲ್ಲು ವಿಷ್ಣುಭಟ್ಟ ವಿಚಾರ ಮಂಡಿಸಲಿದ್ದಾರೆ. ಸಂಕೇತಿ ಕುರಿತು ದೀಪಾ ಗಣೇಶ್, ಬ್ಯಾರಿ ಕುರಿತು ಬಿ.ಎಂ. ಹನೀಫ್, ಎಸ್.ಎಂ. ಇಸ್ಮಾಯಿಲ್, ನವಾಯತಿ ಕುರಿತು ಸಯ್ಯದ್ ಜಮೀರುಲ್ಲಾ ಷರೀಫ್, ಸಯ್ಯದ್ ಗೌಸ್ ಮತ್ತು ಕುಂದಾಪ್ರ ಕನ್ನಡ ಕುರಿತು ಪಂಜು ಗಂಗೊಳ್ಳಿ, ಎಸ್.ಎ. ಕೃಷ್ಣಯ್ಯ, ಸುಶೀಲಾ ಪುನೀತ್ ಚರ್ಚೆ ನಡೆಸಲಿದ್ದಾರೆ.

'ನಾಡಿನ ಬಹುಭಾಷಿಕ ಜಗತ್ತಿನ ಮೇಲೆ ಬೆಳಕು ಚೆಲ್ಲುವುದು ಈ ಗೋಷ್ಠಿಗಳ ಮುಖ್ಯ ಉದ್ದೇಶವಾಗಿದೆ' ಎನ್ನುತ್ತಾರೆ ಸಂಘಟನಾ ಸಮಿತಿಯ ಸದಸ್ಯರಲ್ಲಿ ಒಬ್ಬರಾದ ಪ್ರತೀಕ ಬಿಲ್ಲಾಳ.

ಕೋವಿಡ್ ನಂತರದ ಕಾಲಘಟ್ಟದ ಸಿನಿಮಾ ಚಟುವಟಿಕೆ, 'ಲವ್ ಗೇಮ್ಸ್': ರೊಮ್ಯಾನ್ಸ್ ಇನ್ ರಿಯಲ್ ಲೈಫ್', 'ಮೆಸ್ಸಿ ವುಮೆನ್: ರೈಟಿಂಗ್ಸ್ ಕಾಂಪ್ಲೆಕ್ಸ್ ಫಿಮೇಲ್ ಕ್ಯಾರೆಕ್ಟರ್ಸ್' ಸೇರಿದಂತೆ ವಿವಿಧ ಗೋಷ್ಠಿಗಳು ನಡೆಯಲಿವೆ. ಸಾನಿಯಾ ಮಿರ್ಜಾ ಚರ್ಚೆಯಲ್ಲಿ ಪಾಲ್ಗೊಳ್ಳಲಿದ್ದಾರೆ.

ಬಿಜೆಪಿಯಲ್ಲಿ ಬಿರುಗಾಳಿ ಎಬ್ಬಿಸಿದ ಬೆಳಗಾವಿ ಸೋಲು

ಪ್ರಜಾವಾಣಿ ವಾರ್ತೆ

ಬೆಳಗಾವಿ: ವಿಧಾನಪರಿಷತ್ ಚುನಾವಣೆಯಲ್ಲಿ ಬೆಳಗಾವಿ ದ್ವಿಸದಸ್ಯ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಮಹಾಂತೇಶ ಕವಟಗಿಮಠ ಅವರ ಸೋಲು ಕಮಲಪಾಳಯದಲ್ಲಿ ಬಿರುಗಾಳಿ ಎಬ್ಬಿಸಿದೆ.

ಚುನಾವಣೆಯಲ್ಲಿ ಅಧಿಕೃತ ಅಭ್ಯರ್ಥಿ ಕವಟಗಿಮಠ ಸೋತಿದ್ದು, ಪಕ್ಷೇತರರಾಗಿ ಸ್ಪರ್ಧಿಸಿದ್ದ ಲಖನ್ ಜಾರಕಿಹೊಳಿ ಗೆಲುವು ಕಂಡಿದ್ದಾರೆ. ಕವಟಗಿಮಠ ಸೋಲಿನಲ್ಲಿ ಜಾರಕಿಹೊಳಿ ಕುಟುಂಬದ ಬಾಲಚಂದ್ರ ಜಾರಕಿಹೊಳಿ ಮತ್ತು ರಮೇಶ ಜಾರಕಿಹೊಳಿ ಮಾತ್ರವಲ್ಲದೆ, ಪಕ್ಷದ ಇತರ ಶಾಸಕರು ಮತ್ತು ಸಂಸದರ ಪಾತ್ರ ಇರುವ ಬಗ್ಗೆಯೂ ಬಿಜೆಪಿಯಲ್ಲಿ ಚರ್ಚೆ ಆರಂಭವಾಗಿದೆ.

ಮಂಗಳವಾರ ರಾತ್ರಿಯೇ ಬಿಜೆಪಿ ನಾಯಕ ಬಿ.ಎಸ್.ಯಡಿಯೂರಪ್ಪ ಅವರನ್ನು ಭೇಟಿಯಾಗಿದ್ದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಈ ವಿಷಯ ಪ್ರಸ್ತಾಪಿಸಿದ್ದಾರೆ ಎಂದು ಮೂಲಗಳು ಹೇಳಿವೆ.

ಸುದ್ದಿಗಾರರ ಜತೆ ಬುಧವಾರ ಮಾತನಾಡಿದ ಯಡಿಯೂರಪ್ಪ, ಕವಟಗಿಮಠ ಅವರ ಸೋಲಿನ ಬಗ್ಗೆ ಆಂತರಿಕವಾಗಿ ವಿಚಾರಣೆ ನಡೆಸಿ ಮುಖ್ಯಮಂತ್ರಿಯರವರೇ ಸೂಕ್ತ ತೀರ್ಮಾನ ತೆಗೆದುಕೊಳ್ಳುತ್ತಾರೆ ಎಂದು ಹೇಳಿದರು.

'ಈ ಕ್ಷೇತ್ರದಲ್ಲಿ ಇಷ್ಟೊಂದು ಶಾಸಕರು, ಸಂಸದರು ಮತ್ತು ಮಂತ್ರಿಗಳೂ ಇದ್ದರೂ ಪಕ್ಷದ ಅಭ್ಯರ್ಥಿ ಸೋಲಲು ಕಾರಣಗಳೇನು ಎಂಬುದನ್ನು ಕಂಡುಕೊಳ್ಳಬೇಕಿದೆ. ಈ ವಿಚಾರವಾಗಿ ಬೊಮ್ಮಾಯಿ ನನ್ನ ಜತೆ ಮಾತನಾಡಿದ್ದಾರೆ. ಸಮಗ್ರ ವಿಚಾರಣೆ ನಡೆಸಿ ವಾಸ್ತವಿಕ ಸ್ಥಿತಿ ಏನೆಂಬುದನ್ನು ತಿಳಿದುಕೊಳ್ಳಬೇಕಾಗಿದೆ. ಯಾರು ಯಾರು ಸಹಕಾರ ಕೊಟ್ಟಿಲ್ಲ ಎಂಬುದನ್ನು ಪತ್ತೆ ಮಾಡುತ್ತೇವೆ' ಎಂದು ಯಡಿಯೂರಪ್ಪ ಹೇಳಿದರು.

ಕಾರ್ಯಕರ್ತರು ಉತ್ತರ ಕೊಟ್ಟಿದ್ದಾರೆ: 'ಚುನಾವಣೆ ಎಂದ ಮೇಲೆ ತಂತ್ರ, ಪ್ರತಿತಂತ್ರ ಸಹಜ. ನಾವು ಕೂಡ ಗೆಲುವಿಗಾಗಿ ರಣತಂತ್ರ ರೂಪಿಸಿದ್ದೆವು. ನಮ್ಮ ನಾಯಕರೆಲ್ಲರೂ ಜೊತೆಯಾಗಿ ನಿಂತಿದ್ದರು. ಆ ಮೂಲಕ, ಗೆಲುವು ಸಾಧಿಸುವಲ್ಲಿ ಯಶಸ್ವಿಯಾಗಿದ್ದೇವೆ. ನಮ್ಮ ಕಾರ್ಯಕರ್ತರು ಯಾರಿಗೆ ಉತ್ತರ ಕೊಡಬೇಕಾಗಿತ್ತೋ ಅವರಿಗೆ ಕೊಟ್ಟಿದ್ದಾರೆ' ಎಂದು ಪರೋಕ್ಷವಾಗಿ ರಮೇಶ ಜಾರಕಿಹೊಳಿ ಅವರನ್ನು ಉದ್ದೇಶಿಸಿ ಕಾಂಗ್ರೆಸ್ ಶಾಸಕಿ ಲಕ್ಷ್ಮೀ ಹೆಬ್ಬಾಳ್ಕರ ಕುಟುಕಿದರು.

ವಿಧಾನಪರಿಷತ್ ಚುನಾವಣೆಯಲ್ಲಿ ಗೆದ್ದ ಸಹೋದರ ಚನ್ನರಾಜ ಹಟ್ಟಿಹೊಳಿ ಜೊತೆ ಸುವರ್ಣ ವಿಧಾನಸೌಧಕ್ಕೆ ಬಂದ ಅವರು, 'ಯಾರನ್ನೋ ಸೋಲಿಸಬೇಕೆಂದು ನಾವು ಸ್ಪರ್ಧೆ ಮಾಡಿರಲಿಲ್ಲ. ಒಗ್ಗಟ್ಟಿನಿಂದ ಕೆಲಸ ಮಾಡಿದ್ದೇವೆ. ಹೀಗಾಗಿ ಗೆದ್ದಿದ್ದೇವೆ' ಎಂದರು.

'ಮೂರು ದಿನಗಳಲ್ಲಿ ಚಿತ್ರಣ ಬದಲಾಯಿತು'

ಬೆಳಗಾವಿ: 'ಬಿಜೆಪಿ ಅಭ್ಯರ್ಥಿ ಸೋಲಿನ ಬಗ್ಗೆ ಇನ್ನು ಕೆಲವೇ ದಿನಗಳಲ್ಲಿ ಮಾತನಾಡುತ್ತೇನೆ. ಮತದಾನಕ್ಕೂ ಮೊದಲಿನ ಕೊನೆಯ ಮೂರು–ನಾಲ್ಕು ದಿನಗಳಲ್ಲಿ ಸಾಕಷ್ಟು ಬೆಳವಣಿಗೆಗಳು ನಡೆದವು. ಚಿತ್ರಣವೇ ಬದಲಾಯಿತು. ಇದರಿಂದ ಸೋಲಾಯಿತು. ಈ ಬಗ್ಗೆ ವರಿಷ್ಠರ ಜತೆ ಮಾತನಾಡಿದ್ದೇನೆ' ಎಂದು ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ಹೇಳಿದರು.

ಪತ್ರಕರ್ತರೊಂದಿಗೆ ಬುಧವಾರ ಮಾತನಾಡಿದ ಅವರು, 'ಚುನಾವಣೆಯಲ್ಲಿ ಬಿಜೆಪಿ ಗೆಲ್ಲಬೇಕಿತ್ತು. ಆದರೆ ಸೋತಿದ್ದೇಕೆ ಎನ್ನುವುದನ್ನು ಪಕ್ಷದ ಆಂತರಿಕ ವೇದಿಕೆಯಲ್ಲಿ ಚರ್ಚೆ ಮಾಡಿ ಆತ್ಮಾವಲೋಕನ ಮಾಡಿಕೊಳ್ಳುತ್ತೇವೆ. ಲಖನ್ ಕೊನೆಯ ಮೂರು ದಿನ ನಮ್ಮ ಕೈಗೆ ಸಿಗಲಿಲ್ಲ. ಹೀಗಾಗಿ ಚಿತ್ರಣ ಬದಲಾಯಿತು' ಎಂದರು.

'ಲಖನ್ ಬಿಜೆಪಿ ಸೇರುತ್ತಾರೆಯೋ, ಪಕ್ಷೇತರರಾಗಿಯೇ ಉಳಿಯುತ್ತಾರೆಯೋ ಎನ್ನುವುದು ಅವರಿಗೆ ಬಿಟ್ಟ ವಿಚಾರ' ಎಂದರು.

ಬಿಜೆಪಿ ಸೋಲನ್ನು ತಲೆಗೆ ಕಟ್ಟುತ್ತಿದ್ದಾರೆಯೇ ಎಂಬ ಪ್ರಶ್ನೆಗೆ, 'ಗುಡ್ಡಕ್ಕೆ ಶಕ್ತಿ ಹೊರುವ ತಾಕತ್ತು ಇದೆ ಬಿಡಿ. ನನ್ನ ವಿರುದ್ಧ ಸಂಚು ನಡೆದಿರುವ ಬಗ್ಗೆ ನನಗೆ ಖಚಿತ ಮಾಹಿತಿ ಇಲ್ಲ. ಮಾಹಿತಿ ಸಿಕ್ಕ ಬಳಿಕ ಮಾತನಾಡುತ್ತೇನೆ. ಸೋಲಿನ ಪಟ್ಟವನ್ನು ಲೀಡರ್ ಆದವರಿಗೇ ಕಟ್ಟುತ್ತಾರೆ' ಎಂದು ಹೇಳಿದರು.

'ಜಿಲ್ಲೆಯಲ್ಲಿ ನಾನು ಕಾಂಗ್ರೆಸ್ ಅನ್ನು ಸೋಲಿಸುತ್ತೇನೆ ಎಂದು ಹಟಕ್ಕೆ ಬಿದ್ದಿದ್ದುದು ನಿಜ. ಆದರೆ ಆ ಪಕ್ಷ ಗೆದ್ದಿದೆ. ಅದರ ಬಗ್ಗೆ ಚರ್ಚೆ ಮಾಡುವ ಅವಶ್ಯಕತೆ ಇಲ್ಲ' ಎಂದರು.



ಟಿಕಾಯತ್ ನಿರ್ಗಮನ

ಕೇಂದ್ರ ಸರ್ಕಾರ ಕೃಷಿ ಕಾಯ್ದೆಗಳನ್ನು ಹಿಂಪಡೆದ ಹಿನ್ನೆಲೆಯಲ್ಲಿ ದೆಹಲಿಯ ಪ್ರತಿಭಟನಾ ಸ್ಥಳದಿಂದ ಬಿಕೆಯು ನಾಯಕ ರಾಕೇಶ್ ಟಿಕಾಯತ್ ನಿರ್ಗಮಿಸಿದರು. ಈ ವೇಳೆ ಅವರೊಂದಿಗಿದ್ದ ಬೆಂಬಲಿಗರು ಸಂಭ್ರಮಿಸಿದರು –ಪಿಟಿಐ ಚಿತ್ರ

'ವರುಣ್ ಸಿಂಗ್ ಸೇವೆ ಸ್ಮರಣೀಯ'

ನವದೆಹಲಿ (ಪಿಟಿಐ): ತಮಿಳುನಾಡಿನ ಕೂನೂರಿನಲ್ಲಿ ನಡೆದಿದ್ದ ವಾಯುಪಡೆ ಹೆಲಿಕಾಪ್ಟರ್ ಪತನದಲ್ಲಿ ಬದುಕುಳಿದು, ಈಗ ನಿಧನರಾಗಿರುವ ಗ್ರೂಪ್ ಕ್ಯಾಪ್ಟನ್ ವರುಣ್ ಸಿಂಗ್ ಅವರಿಗೆ ಪ್ರಧಾನಿ ನರೇಂದ್ರ ಮೋದಿ ಮತ್ತು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಸಂತಾಪ ಸೂಚಿಸಿದ್ದಾರೆ.

'ಗ್ರೂಪ್ ಕ್ಯಾಪ್ಟನ್ ವರುಣ್ ಸಿಂಗ್ ಹೆಮ್ಮೆ, ಶೌರ್ಯ ಮತ್ತು ಅತ್ಯಂತ ವೃತ್ತಿಪರತೆಯಿಂದ ದೇಶಕ್ಕೆ ಸೇವೆ ಸಲ್ಲಿಸಿದ್ದಾರೆ. ಅವರ ನಿಧನದಿಂದ ತೀವ್ರ ನೋವುಂಟಾಗಿದೆ. ಅವರು ದೇಶಕ್ಕೆ ಸಲ್ಲಿಸಿರುವ ಸೇವೆಯನ್ನು ದೇಶ ಎಂದಿಗೂ ಮರೆಯುವುದಿಲ್ಲ. ಅವರ ಕುಟುಂಬ ಮತ್ತು ಸ್ನೇಹಿತರಿಗೆ ಸಂತಾಪಗಳು' ಎಂದು ಟ್ವೀಟ್ ಮಾಡಿದ್ದಾರೆ.

'ಗ್ರೂಪ್ ಕ್ಯಾಪ್ಟನ್ ವರುಣ್ ಸಿಂಗ್ ನಿಧನರಾದ ಸುದ್ದಿ ತಿಳಿದು ಪದಗಳಲ್ಲಿ ವ್ಯಕ್ತಪಡಿಸಲಾಗದಷ್ಟು ನೋವಾಗಿದೆ. ಕಡೇ ಉಸಿರಿರುವವರೆಗೂ ಹೋರಾಡಿದ ಅವರು ನಿಜವಾದ ಹೋರಾಟಗಾರರು. ಅವರ ಕುಟುಂಬಕ್ಕೆ ನನ್ನ ತೀವ್ರ ಸಂತಾಪಗಳು. ಈ ಸಂಕಟದ ಸಮಯದಲ್ಲಿ ನಾವು ಅವರ ಕುಟುಂಬದ ಜೊತೆ ದೃಢವಾಗಿ ನಿಲ್ಲುತ್ತೇವೆ' ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಟ್ವೀಟ್ ಮಾಡಿದ್ದಾರೆ.

ವರುಣ್ ಸಿಂಗ್ ಅವರು ಮೂಲತಃ ಉತ್ತರ ಪ್ರದೇಶದ ಗಾಜಿಯಾಪುರದವರು. ಸದ್ಯ ಅವರ ಕುಟುಂಬ ಮಧ್ಯಪ್ರದೇಶದ ಭೋಪಾಲ್‌ನಲ್ಲಿ ನೆಲೆಸಿದೆ. ಅವರು ಪತ್ನಿ, 11 ವರ್ಷ ವಯಸ್ಸಿನ ಮಗ, ಎಂಟು ವರ್ಷ ವಯಸ್ಸಿನ ಮಗಳು ಮತ್ತು ತಂದೆ, ನಿವೃತ್ತ ಸೇನಾಧಿಕಾರಿ ಕರ್ನಲ್ ಕೆ.ಪಿ. ಸಿಂಗ್‌ರನ್ನು ಅವರು ಅಗಲಿದ್ದಾರೆ.

ವರುಣ್ ಸಿಂಗ್ ಅವರ ಮೃತದೇಹವನ್ನು ಬೆಂಗಳೂರಿನ ಯಲಹಂಕ ವಾಯುನೆಲೆಯಿಂದ ಭೋಪಾಲ್‌ಗೆ ಗುರುವಾರ ಬೆಳಗ್ಗೆ 10 ಗಂಟೆಗೆ ಒಯ್ಯಲಾಗುವುದು. ಡಿ.17ರಂದು ಅಂತಿಮ ಸಂಸ್ಕಾರ ನೆರವೇರಿಸುವ ನಿರೀಕ್ಷೆ ಇದೆ ಎಂದು ವಾಯುಪಡೆ ಮೂಲಗಳು ತಿಳಿಸಿವೆ.

ಲೋಕೋಪಯೋಗಿ ಇಲಾಖೆ ಎಂಜಿನಿಯರ್ ನೇಮಕಾತಿ ಪರೀಕ್ಷೆ

'ಬ್ಲೂ ಟೂತ್' ಬಳಕೆ: ಅಭ್ಯರ್ಥಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕೋಪಯೋಗಿ ಇಲಾಖೆಯ ಸಹಾಯಕ ಎಂಜಿನಿಯರ್ (ಎಇ) ಹಾಗೂ ಕಿರಿಯ ಎಂಜಿನಿಯರ್ (ಜೆಇ) ಹುದ್ದೆಗಳ ನೇಮಕಾತಿಗಾಗಿ ನಡೆದ ಪರೀಕ್ಷೆ ವೇಳೆ 'ಬ್ಲೂ ಟೂತ್' ಎಲೆಕ್ಟ್ರಾನಿಕ್ ಉಪಕರಣ ಬಳಸುತ್ತಿದ್ದ ಅಭ್ಯರ್ಥಿಯೊಬ್ಬರು ಮೇಲ್ವಿಚಾರಕರ ಕೈಗೆ ಸಿಕ್ಕಿಬಿದ್ದಿದ್ದಾರೆ.

'ಕರ್ನಾಟಕ ಲೋಕಸೇವಾ ಆಯೋಗದಿಂದ (ಕೆಪಿಎಸ್‌ಸಿ) ಬುಧವಾರ ಪರೀಕ್ಷೆ ನಡೆಸಲಾಗುತ್ತಿತ್ತು. ಅಕ್ರಮವಾಗಿ ಉಪಕರಣ ಬಳಸಿ ಪ್ರಶ್ನೆಗಳಿಗೆ ಉತ್ತರ ಬರೆಯುತ್ತಿದ್ದ ಆರೋಪಿ ವೀರಣ್ಣಗೌಡ ಡಿ. ಚಿಕ್ಕೇಗೌಡ (30) ಎಂಬುವರನ್ನು ಮೇಲ್ವಿಚಾರಕರೇ ಹಿಡಿದುಕೊಟ್ಟಿದ್ದಾರೆ. ಅವರನ್ನು ಬಂಧಿಸಿ ಕಾನೂನು ಕ್ರಮ ಜರುಗಿಸಲಾಗಿದೆ' ಎಂದು ಅನ್ನಪೂರ್ಣೇಶ್ವರಿನಗರ ಠಾಣೆ ಪೊಲೀಸರು ಹೇಳಿದರು.

'ಆರೋಪಿ ವಿರುದ್ಧ ಪರೀಕ್ಷೆ ಮೇಲ್ವಿಚಾರಕರು ದೂರು ನೀಡಿದ್ದಾರೆ. ಕ್ರಿಮಿನಲ್ ಪಿತೂರಿ (ಐಪಿಸಿ 120 ಬಿ), ನಂಬಿಕೆ ದ್ರೋಹ (ಐಪಿಸಿ 406) , ವಂಚನೆ (ಐಪಿಸಿ 420), ನಕಲಿ ದಾಖಲೆಗಳನ್ನು ಅಸಲಿ ಎಂದು ಬಳಸಿದ (ಐಪಿಸಿ 471) ಆರೋಪದಡಿ ಹಾಗೂ ಕರ್ನಾಟಕ ಶಿಕ್ಷಣ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಪ್ರಕರಣದಲ್ಲಿ ಮತ್ತಷ್ಟು ಮಂದಿ ಕೈವಾಡವಿರುವ ಮಾಹಿತಿ ಇದ್ದು, ಆರೋಪಿಯ ವಿಚಾರಣೆ ಮುಂದುವರಿಸಲಾಗಿದೆ' ಎಂದೂ ತಿಳಿಸಿದರು.

ಉಪಕರಣದ ಶಬ್ದದಿಂದ ಸಿಕ್ಕಿಬಿದ್ದ: 'ಅನ್ನಪೂರ್ಣೇಶ್ವರಿನಗರ ಠಾಣೆ ವ್ಯಾಪ್ತಿ ಸೇಂಟ್ ಜಾನ್ಸ್ ಪ್ರೌಢಶಾಲೆ ಕೇಂದ್ರದಲ್ಲಿ ಬುಧವಾರ ಪರೀಕ್ಷೆ ನಡೆಸಲಾಗುತ್ತಿತ್ತು. ಕಲಬುರ್ಗಿಯ ಆರೋಪಿ ವೀರಣ್ಣಗೌಡ, ಪರೀಕ್ಷೆಗೆ ಹಾಜರಾಗಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಪರೀಕ್ಷೆ ಆರಂಭವಾಗುತ್ತಿದ್ದಂತೆ ಅಭ್ಯರ್ಥಿಗಳಿಗೆ ಪ್ರಶ್ನೆಪತ್ರಿಕೆ ಹಾಗೂ ಒಎಮ್‌ಆರ್ ನೀಡಲಾಗಿತ್ತು. ಉತ್ತರ ಬರೆಯಲು ಆರಂಭಿಸಿದ್ದ ಆರೋಪಿ, ಉಪಕರಣ ಆನ್ ಮಾಡಿದಾಗ 'ಬೀಪ್' ಶಬ್ದ ಬಂದಿತ್ತು. ಪರೀಕ್ಷೆ ಕೊಠಡಿ ಮೇಲ್ವಿಚಾರಕರು ಪರಿಶೀಲಿಸಿದಾಗಲೇ ಉಪಕರಣ ಪತ್ತೆ ಆಯಿತು' ಎಂದೂ ತಿಳಿಸಿವೆ.

ಜಾಮರ್‌ನಿಂದಾಗಿ ಆನ್ ಆಗದ ಉಪಕರಣ: 'ಆರೋಪಿ ವೀರಣ್ಣಗೌಡ ಹಾಗೂ ಇತರರು, ಸಂಘಟಿತರಾಗಿ ಕೃತ್ಯ ಎಸಗುತ್ತಿದ್ದ ಸಂಗತಿ ಗೊತ್ತಾಗಿದೆ. ಉಳಿದ ಆರೋಪಿಗಳ ಪತ್ತೆಗೂ ಕ್ರಮ ಕೈಗೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ನೀಲಿ ಬಣ್ಣದ ಬನಿಯನ್‌ನಲ್ಲಿ ಬ್ಲೂ ಟೂತ್ ಅಳವಡಿಸಿದ್ದ ಆರೋಪಿ, ಕಿವಿಯೊಳಗೆ ಮೈಕ್ರೊಸ್ಪೀಕರ್ ಹಾಕಿಕೊಂಡಿದ್ದರು. ಉಪಕರಣ ಒತ್ತಿದರೆ, ಹೊರಗಿನ ವ್ಯಕ್ತಿಗಳು ಹೇಳುತ್ತಿದ್ದ ಉತ್ತರಗಳು ಕಿವಿಯಲ್ಲಿ ಕೇಳಿಸುತ್ತಿದ್ದವು. ಆದರೆ, ಈ ಬಾರಿ ಪರೀಕ್ಷೆ ಕೇಂದ್ರದಲ್ಲಿ ಜಾಮರ್ ಅಳವಡಿಸಿದ್ದರಿಂದ ಉಪಕರಣ ಆನ್ ಆಗಿರಲಿಲ್ಲ. ಆರೋಪಿ, ಜೋರಾಗಿ ಉಪಕರಣ ಒತ್ತಿದ್ದರಿಂದ ಶಬ್ದ ಬಂದಿತ್ತು' ಎಂದೂ ತಿಳಿಸಿವೆ.

'ದೂರದಲ್ಲಿ ಕುಳಿತ ಕೆಲವರು, ಆರೋಪಿಗೆ ಕಿವಿಯಲ್ಲಿ ಉತ್ತರ ಹೇಳಲು ಸಜ್ಜಾಗಿದ್ದರು. ಆದರೆ, ಅದು ಯಶಸ್ವಿಯಾಗಿಲ್ಲ. ಇದೇ ರೀತಿಯಲ್ಲೇ ಮತ್ತಷ್ಟು ಅಭ್ಯರ್ಥಿಗಳು ಬ್ಲೂ ಟೂತ್ ಉಪಕರಣ ಬಳಸಿರುವ ಮಾಹಿತಿಯೂ ಇದೆ' ಎಂದೂ ಹೇಳಿದರು.


ವಶಕ್ಕೆ ಪಡೆದ 'ಬ್ಲೂ ಟೂತ್' ಉಪಕರಣ


ವೀರಣ್ಣಗೌಡ

'ಕೇಂದ್ರ ಬದಲಿಸಿದರೂ ಅಕ್ರಮ'

'ಬ್ಲೂ ಟೂತ್ ಉಪಕರಣ ಬಳಸಿ ಪರೀಕ್ಷೆಯಲ್ಲಿ ಅಕ್ರಮ ಎಸಗುವ ಬಗ್ಗೆ ಕೆಪಿಎಸ್‌ಸಿ ಅಧಿಕಾರಿಗಳಿಗೆ ಈ ಹಿಂದೆಯೇ ಅನುಮಾನ ಬಂದಿತ್ತು. ಹೀಗಾಗಿ, ಪರೀಕ್ಷೆ ಕೇಂದ್ರಗಳನ್ನು ಬದಲಾಯಿಸಲಾಗಿತ್ತು. ಅಭ್ಯರ್ಥಿಗಳಿಗೆ ಅವರ ಜಿಲ್ಲೆಯ ಬದಲು ಬೇರೆ ಜಿಲ್ಲೆಯಲ್ಲಿ ಪರೀಕ್ಷೆ ಬರೆಯುವಂತೆ ಮಾಡಲಾಗಿತ್ತು. ಇಷ್ಟಾದರೂ ಅಭ್ಯರ್ಥಿಯೊಬ್ಬರು ಅಕ್ರಮ ಎಸಗಿದ್ದಾರೆ' ಎಂದೂ ಪೊಲೀಸ್ ಮೂಲಗಳು ಹೇಳಿವೆ.

ರಾಷ್ಟ್ರಪತಿ ಕೋವಿಂದ, ಬಾಂಗ್ಲಾ ಪ್ರಧಾನಿ ಭೇಟಿ

ಢಾಕಾ (ಪಿಟಿಐ): ಬಾಂಗ್ಲಾದೇಶದ ಪ್ರಧಾನಿ ಶೇಖ್ ಹಸೀನಾ ಅವರು ಬುಧವಾರ ರಾಷ್ಟ್ರಪತಿ ರಾಮನಾಥ್ ಕೋವಿಂದ ಅವರನ್ನು ಭೇಟಿ ಮಾಡಿದರು. ದ್ವಿಪಕ್ಷೀಯ ಸಹಕಾರ ಕುರಿತು ಉಭಯ ನಾಯಕರು ಚರ್ಚಿಸಿದರು.

ಬಾಂಗ್ಲಾದೇಶಕ್ಕೆ ಮೂರು ದಿನಗಳ ಪ್ರವಾಸ ಕೈಗೊಂಡಿರುವ ರಾಷ್ಟ್ರಪತಿ ರಾಮನಾಥ್ ಕೋವಿಂದ ಅವರಿಗೆ ಬುಧವಾರ ಇಲ್ಲಿ ಭವ್ಯ ಸ್ವಾಗತ ಕೋರಲಾಯಿತು.

ಏರ್ ಇಂಡಿಯಾದ ವಿಶೇಷ ವಿಮಾನದ ಮೂಲಕ ಇಲ್ಲಿನ ಹಜರತ್ ಶಾಜಲಾಲ್ ಅಂತರರಾಷ್ಟ್ರೀಯ ವಿಮಾನನಿಲ್ದಾಣದಲ್ಲಿ ಬಂದಿಳಿದ ರಾಷ್ಟ್ರಪತಿ ಕೋವಿಂದ್, ಪತ್ನಿ ಸವಿತಾ ಕೋವಿಂದ್ ಹಾಗೂ ಪುತ್ರಿ ಸ್ವಾತಿ ಅವರಿಗೆ, ಬಾಂಗ್ಲಾದೇಶ ಅಧ್ಯಕ್ಷ ಎಂ.ಅಬ್ದುಲ್ ಹಮೀದ್ ಹಾಗೂ ಪತ್ನಿ ರಶೀದಾ ಖಾನಮ್ ದಂಪತಿ ಸ್ವಾಗತ ಕೋರಿದರು.

ರಾಷ್ಟ್ರಪತಿಗಳೊಂದಿಗೆ ಉನ್ನತ ಅಧಿಕಾರಿಗಳ ನಿಯೋಗವೂ ತೆರಳಿದೆ.

1971ರಲ್ಲಿ ಬಾಂಗ್ಲಾದೇಶವು ಪಾಕಿಸ್ತಾನದಿಂದ ಸ್ವಾತಂತ್ರ್ಯ ಪಡೆಯಿತು. ಈ ಹಿನ್ನೆಲೆಯಲ್ಲಿ ಆಯೋಜಿಸಿರುವ ಸ್ವಾತಂತ್ರ್ಯದ ಸ್ವರ್ಣ ಮಹೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವ ಸಂಬಂಧ ರಾಷ್ಟ್ರಪತಿ ಕೋವಿಂದ ಅವರು ಇಲ್ಲಿಗೆ ಆಗಮಿಸಿದ್ದಾರೆ.

ಪಿಎಂಎಲ್‌ಎ: 'ಜನರನ್ನು ಜೈಲಿಗೆ ಕಳಿಸುವ ಅಸ್ತ್ರವಾಗಿ ಬಳಸಲಾಗದು'

ನವದೆಹಲಿ (ಪಿಟಿಐ): ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆಯನ್ನು (ಪಿಎಂಎಲ್‌ಎ) ಜಾರಿ ನಿರ್ದೇಶನಾಲಯವು (ಇ.ಡಿ) ವಿವೇಚನೆ ಇಲ್ಲದೆ ಬಳಸುತ್ತಿರುವುದರಿಂದ ಕಾನೂನಿನ ಮೌಲ್ಯದ ಮೇಲೆ ಪರಿಣಾಮ ಬೀರುತ್ತಿದೆ ಎಂದು ಸುಪ್ರೀಂಕೋರ್ಟ್ ಬುಧವಾರ ಅಸಮಾಧಾನ ವ್ಯಕ್ತಪಡಿಸಿದೆ.

'ಜನರನ್ನು ಜೈಲಿಗೆ ಕಳುಹಿಸಲು ಇದನ್ನು ಅಸ್ತ್ರವಾಗಿ ಬಳಸಲು ಆಗುವುದಿಲ್ಲ' ಎಂದು ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ ಅವರ ನೇತೃತ್ವದ ಪೀಠ ಹೇಳಿತು. ಜಾರ್ಖಂಡ್ ಮೂಲದ ಹಣ ವರ್ಗಾವಣೆ ಕಂಪನಿಯೊಂದರ ಪ್ರಕರಣದ ವಿಚಾರಣೆ ಸಂದರ್ಭದಲ್ಲಿ ಪೀಠ ಈ ಕುರಿತು ಅಭಿಪ್ರಾಯ ವ್ಯಕ್ತಪಡಿಸಿತು.

'ಇ.ಡಿಯು ಈ ಕಾಯ್ದೆಯನ್ನೇ ದುರ್ಬಲಗೊಳಿಸುತ್ತಿದೆ' ಎಂದು ಬೇಸರ ವ್ಯಕ್ತಪಡಿಸಿದ ಪೀಠ, ಈ ಪ್ರಕರಣವಷ್ಟೇ ಅಲ್ಲದೆ, ₹1,000, ₹100ರ ಹಣ ವರ್ಗಾವಣೆ ಪ್ರಕರಣಗಳ ವಿರುದ್ಧವೂ ಈ ಕಾಯ್ದೆ ಬಳಸಲಾಗುತ್ತಿದೆ. ಈ ಕಾಯ್ದೆಯನ್ನು ಅಸ್ತ್ರವಾಗಿ ಬಳಸಿ, ಎಲ್ಲರನ್ನು ಕಂಬಿಯ ಹಿಂದೆ ಕಳುಹಿಸಲು ಆಗುವುದಿಲ್ಲ' ಎಂದು ಪೀಠ ಹೇಳಿತು.

ಎಟಿಎಸ್ ಕಸ್ಟಡಿಗೆ ಸುರೇಶ್ ಪೂಜಾರಿ

ಮುಂಬೈ: ಮುಂಬೈ ಮತ್ತು ಕರ್ನಾಟಕದಲ್ಲಿ ಹಲವು ಸುಲಿಗೆ ಪ್ರಕರಣಗಳಲ್ಲಿ ಬೇಕಾಗಿದ್ದ, 15 ವರ್ಷಗಳಿಂದ ತಲೆಮರೆಸಿಕೊಂಡಿದ್ದ ಗ್ಯಾಂಗ್‌ಸ್ಟರ್ ಸುರೇಶ್ ಪೂಜಾರಿಯನ್ನು ಫಿಲಿಪ್ಪಿನ್ಸ್‌ನಿಂದ ಭಾರತಕ್ಕೆ ಗಡಿಪಾರು ಮಾಡಲಾಗಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಬುಧವಾರ ತಿಳಿಸಿದ್ದಾರೆ.

ಮಹಾರಾಷ್ಟ್ರದ ಭಯೋತ್ಪಾದನಾ ನಿಗ್ರಹ ದಳ (ಎಟಿಎಸ್) ಬುಧವಾರ ದೆಹಲಿಯಲ್ಲಿ ಪೂಜಾರಿ ಅವರನ್ನು ತನ್ನ ಕಸ್ಟಡಿಗೆ ತೆಗೆದುಕೊಂಡಿತು.

ಶಿವಾತ್ಮಾನಂದ ಸರಸ್ವತಿ ಸ್ವಾಮೀಜಿ ಇನ್ನಿಲ್ಲ



ಬೆಂಗಳೂರು: ಚಿಕ್ಕಬಳ್ಳಾಪುರ ಜಿಲ್ಲೆ ನಂದಿ ಗ್ರಾಮದ ಜ್ಞಾನಾನಂದ ಆಶ್ರಮದ ಶಿವಾತ್ಮಾನಂದ ಸರಸ್ವತಿ ಸ್ವಾಮೀಜಿ (58) ಅವರು ಅನಾರೋಗ್ಯದಿಂದಾಗಿ ನಗರದ ಅಪೋಲೊ ಆಸ್ಪತ್ರೆಯಲ್ಲಿ ಬುಧವಾರ ನಿಧನರಾದರು.

ಅವರು ಅರೆಮಾದನಹಳ್ಳಿಯ ವಿಶ್ವಕರ್ಮ ಜಗದ್ಗುರು ಪೀಠದ ಶಿವಸುಜ್ಞಾನತೀರ್ಥ ಸ್ವಾಮಿಯವರಿಂದ 10 ವರ್ಷಗಳ ಹಿಂದೆ ಸನ್ಯಾಸ ದೀಕ್ಷೆ ಸ್ವೀಕರಿಸಿದ್ದರು. ಇದಕ್ಕೂ ಮುನ್ನ ಹೃಷಿಕೇಷದ ಆರ್ಷ ವಿದ್ಯಾಗುರುಕುಲದಲ್ಲಿ ಸ್ವಾಮಿ ದಯಾನಂದ ಸರಸ್ವತಿ ಅವರ ಬಳಿ 12 ವರ್ಷ ವೇದಾಧ್ಯಯನ ನಡೆಸಿದ್ದರು. ಬಳಿಕ ಹಿಮಾಲಯದಲ್ಲಿ ಧಾರ್ಮಿಕ ವ್ರತಾಚರಣೆಯಲ್ಲಿ ತೊಡಗಿದ್ದರು. ವೇದವೇದಾಂತಾಚಾರ್ಯ ಎಂಬ ಗೌರವಕ್ಕೆ ಪಾತ್ರರಾಗಿದ್ದ ಇವರು ವಿಶ್ವಕರ್ಮ ಸಮುದಾಯದ ಅಭಿವೃದ್ಧಿಗಾಗಿ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದರು. ದೇಶದ ವಿವಿಧ ಕಡೆ ವಿಶ್ವಕರ್ಮ ವಿಶ್ವವಿದ್ಯಾಲಯಗಳ ಸ್ಥಾಪನೆಗೂ ಮಾರ್ಗದರ್ಶನ ಮಾಡಿದ್ದರು.

ಶ್ರೀಶ್ರೀ ರವಿಶಂಕರ ಗುರೂಜಿ ಅವರ ಆರ್ಟ್ ಆಫ್ ಲಿವಿಂಗ್ ಆಶ್ರಮದಲ್ಲಿ 2016ರಲ್ಲಿ ಅಖಿಲ ಭಾರತ ಸಾಧು ಸಂತರ ಸಮಾವೇಶವು ಇವರ ನೇತೃತ್ವದಲ್ಲೇ ನಡೆದಿತ್ತು. ಬಳಿಕ ಗುಜರಾತ್ ಡಾಕೋರ್‌ನಲ್ಲಿ 2017ರಲ್ಲಿ ನಡೆದಿದ್ದ ಅಖಿಲ ಭಾರತ ಸಾಧು ಸಂತರ ಎರಡನೇ ಸಮಾವೇಶಕ್ಕೂ ನೇತೃತ್ವ ವಹಿಸಿದ್ದರು. ಅಲ್ಲಿ ಇವರಿಗೆ 'ರಾಷ್ಟ್ರ ಸಂತ' ಬಿರುದು ಪ್ರದಾನ ಮಾಡಲಾಗಿತ್ತು.

ಋಗ್ವೇದದ ವಿಶ್ವಕರ್ಮ ಸೂಕ್ತಗಳ ಕುರಿತ 'ದಿ ಯುನಿವರ್ಸಲ್ ಟ್ರುತ್' ಎಂಬ ಕೃತಿಯನ್ನು ಇಂಗ್ಲಿಷ್‌ನಲ್ಲಿ, 'ಸನ್ಯಾಸ ಪರಂಪರೆ' ಎಂಬ ಕೃತಿಯನ್ನು ಕನ್ನಡದಲ್ಲಿ ರಚಿಸಿದ್ದರು. ಐದು ವೇದಗಳ ಸಮಗ್ರ ವಿವರಗಳನ್ನು ಒಳಗೊಂಡ ಸಾವಿರ ಪುಟಗಳ 'ವೇದ ಭಗವಾನ್' ಕೃತಿಯು ಪ್ರಕಟಣೆಗೆ ಸಜ್ಜಾಗಿತ್ತು. ಸ್ವಾಮೀಜಿಯವರ ಅಂತಿಮ ದರ್ಶನಕ್ಕೆ ಆಶ್ರಮದಲ್ಲಿ ಗುರುವಾರ (ಡಿ. 16) ಬೆಳಿಗ್ಗೆಯಿಂದ ವ್ಯವಸ್ಥೆ ಮಾಡಲಾಗಿದೆ. ಮಧ್ಯಾಹ್ನ 3 ಗಂಟೆಗೆ ಅಂತಿಮ ಸಂಸ್ಕಾರ ನಡೆಯಲಿದೆ ಎಂದು ವಿಶ್ವಕರ್ಮ ಸಮಾಜದ ಮುಖಂಡರು ತಿಳಿಸಿದ್ದಾರೆ.

ಕೋಲ್ಕತ್ತದ ದುರ್ಗಾ ಪೂಜೆಗೆ ಪಾರಂಪರಿಕ ಸ್ಥಾನ

ಕೋಲ್ಕತ್ತ (ಪಿಟಿಐ): ಕೋಲ್ಕತ್ತದ ದುರ್ಗಾ ಪೂಜಾ ಹಬ್ಬಕ್ಕೆ ಯುನೆಸ್ಕೊ ಬುಧವಾರ ಪಾರಂಪರಿಕ ಸ್ಥಾನಮಾನ ನೀಡಿದೆ.

ದುರ್ಗಾ ಪೂಜೆಯನ್ನು 'ಅಮೂರ್ತ ಪರಂಪರೆ ಪಟ್ಟಿ'ಗೆ ಯುನೆಸ್ಕೊ ಸೇರಿಸಿದೆ.

ಈ ನಿರ್ಧಾರವನ್ನು ಶ್ಲಾಘಿಸಿ ಪ್ರಧಾನಿ ನರೇಂದ್ರ ಮೋದಿ ಮತ್ತು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಟ್ವೀಟ್ ಮಾಡಿದ್ದಾರೆ.


ಪಶ್ಚಿಮ ಗೋದಾವರಿ ಜಿಲ್ಲೆಯ ಜಂಗಾರೆಡ್ಡಿಗುಡೆಂ ಬಳಿ ಬುಧವಾರ ನದಿಗೆ ಬಿದ್ದ ಆಂಧ್ರಪ್ರದೇಶ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್‌ನಿಂದ ಪ್ರಯಾಣಿಕರನ್ನು ಸ್ಥಳೀಯರು ಹೊರ ತೆಗೆದರು –ಪಿಟಿಐ ಚಿತ್ರ

ಬಸ್ ನದಿಗೆ ಉರುಳಿ 9 ಸಾವು

ಅಮರಾವತಿ (ಪಿಟಿಐ): ಪಶ್ಚಿಮ ಗೋದಾವರಿ ಜಿಲ್ಲೆಯ ಜಂಗಾರೆಡ್ಡಿಗುಡೆಂ ಬಳಿ ಬುಧವಾರ ಆಂಧ್ರಪ್ರದೇಶ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ ನದಿಗೆ ಬಿದ್ದ ಪರಿಣಾಮ ಚಾಲಕ ಸೇರಿದಂತೆ ಒಂಬತ್ತು ಜನರು ಸಾವನ್ನಪ್ಪಿದ್ದಾರೆ. ಅಪಘಾತದಲ್ಲಿ ಗಾಯಗೊಂಡಿರುವ 12 ಪ್ರಯಾಣಿಕರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.


ಬಸ್‌ನಲ್ಲಿ ಒಟ್ಟು 45 ಪ್ರಯಾಣಿಕರು ಮತ್ತು ಇಬ್ಬರು ಸಿಬ್ಬಂದಿ ಇದ್ದರು. ಘಟನಾ ಸ್ಥಳಕ್ಕೆ ಧಾವಿಸಿದ ಸ್ಥಳೀಯ ಜನರು ಕೆಲವರನ್ನು ರಕ್ಷಿಸಿ ಸುರಕ್ಷಿತವಾಗಿ ಹೊರತೆಗೆದರು. ಬಸ್ ನದಿಗೆ ಧುಮುಕಿದಾಗ ಕಿಟಕಿಯ ಗಾಜುಗಳು ತಗುಲಿ ಕೆಲವು ಪ್ರಯಾಣಿಕರಿಗೆ ಸಣ್ಣಪುಟ್ಟ ಗಾಯಗಳಾಗಿವೆ.

ಬಸ್ ತೆಲಂಗಾಣದ ಅಶ್ವರಾವ್‌ಪೇಟೆಯಿಂದ ಜಂಗಾರೆಡ್ಡಿಗುಡೆಂಗೆ ತೆರಳುತ್ತಿದ್ದಾಗ ಈ ದುರ್ಘಟನೆ ಸಂಭವಿಸಿದೆ.

'ರಾಜ್ಯ ಸರ್ಕಾರ ಮೃತರ ಕುಟುಂಬಕ್ಕೆ ತಲಾ ₹ 5 ಲಕ್ಷ ಪರಿಹಾರ ಘೋಷಿಸಿದೆ.

'ಮುಂದಿನ ನಮ್ಮ ಗುರಿ ಮಥುರಾ ಪಡೆಯುವುದು'

'ಘರ್ ವಾಪಸಿ'ಗೆ ಮೋಹನ್ ಭಾಗವತ್ ಕರೆ



ಲಖನೌ: ಹಿಂದೂ ಧರ್ಮದಿಂದ ಅನ್ಯ ಧರ್ಮಗಳಿಗೆ ಮತಾಂತರ ಆಗಿರುವವರನ್ನು ಪುನಃ ಹಿಂದೂ ಧರ್ಮಕ್ಕೆ ಕರೆತರಲು (ಘರ್ ವಾಪಸಿ) ಹಿಂದೂಗಳು ಪ್ರತಿಜ್ಞೆ ಮಾಡಬೇಕು ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಸರಸಂಘಚಾಲಕ ಮೋಹನ್ ಭಾಗವತ್ ಕರೆ ನೀಡಿದರು.

ಚಿತ್ರಕೂಟದಲ್ಲಿ ನಡೆಯುತ್ತಿರುವ 'ಹಿಂದೂ ಮಹಾಕುಂಭ'ದಲ್ಲಿ ಅವರು ಬುಧವಾರ ಮಾತನಾಡಿದರು.

ಮಹಾಕುಂಭದಲ್ಲಿ ಪಾಲ್ಗೊಂಡಿರುವ ಸ್ವಾಮೀಜಿಗಳು ಮತ್ತು ದಾರ್ಶನಿಕರು 'ಲವ್ ಜಿಹಾದ್, ಮತಾಂತರ'ಕ್ಕೆ ಸಂಬಂಧಿಸಿದಂತೆ ಕಳವಳ ವ್ಯಕ್ತಪಡಿಸಿ, ಹಿಂದೂ ಸಂಸ್ಕೃತಿ ಮತ್ತು ಸಂಪ್ರದಾಯವನ್ನು ರಕ್ಷಿಸುವಂತೆ ಅವರು ಆಗ್ರಹಿಸಿದರು.

ಸ್ವಾಮೀಜಿಗಳನ್ನು ಉದ್ದೇಶಿಸಿ ಮಾತನಾಡಿದ ಭಾಗವತ್, ಹಿಂದೂಗಳಲ್ಲಿ ಏಕತೆ ತರಬೇಕಾದ ಅಗತ್ಯವಿದ್ದು, ಜಾತೀಯತೆ ಮತ್ತು ಇತರ ಸಾಮಾಜಿಕ ಪಿಡುಗುಗಳನ್ನು ಹೋಗಲಾಡಿಸಬೇಕಾದ ಅಗತ್ಯವಿದೆ ಎಂದು ಪ್ರತಿಪಾದಿಸಿದರು.

'ಮತಾಂತರ ಆಗಿರುವವರನ್ನು ಮರಳಿ ಹಿಂದೂ ಧರ್ಮಕ್ಕೆ ಕರೆತರಲು ಎಲ್ಲರೂ ಪ್ರತಿಜ್ಞೆ ಮಾಡಬೇಕಿದೆ. ಜತೆಗೆ ಹಿಂದೂಗಳು ಮತಾಂತರ ಆಗದಂತೆಯೂ ನೋಡಿಕೊಳ್ಳಬೇಕಿದೆ. ಹಿಂದೂ ಸಹೋದರಿಯರ ಘನತೆಯನ್ನು ಕಾಪಾಡುವ ಪ್ರತಿಜ್ಞೆಯನ್ನು ನಾವೆಲ್ಲರೂ ಮಾಡಬೇಕಿದೆ' ಎಂದರು.

ಮಥುರಾದ ಶ್ರೀಕೃಷ್ಣ ಜನ್ಮಭೂಮಿಯನ್ನು ಹಿಂದೂಗಳಿಗೆ ಮರಳಿ ನೀಡಬೇಕು ಎಂದು ಆಗ್ರಹಿಸಿದ ರಾಮಭದ್ರಾಚಾರ್ಯರು, 'ನಾವು ಈಗಾಗಲೇ ಎ (ಅಯೋಧ್ಯೆ) ಮತ್ತು ಕೆ (ಕಾಶಿ) ಹೊಂದಿದ್ದೇವೆ. ಈಗ ನಮಗೆ ಎಂ (ಮಥುರಾ) ಬೇಕು' ಎಂದು ಅವರು ಹೇಳಿದರು.

ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಹಾಕಿ: ಸುಲಭವಾಗಿ ಮಣಿದ ಬಾಂಗ್ಲಾದೇಶ

ದಿಲ್‌ಪ್ರೀತ್ ಹ್ಯಾಟ್ರಿಕ್; ಭಾರತ ಜಯಭೇರಿ



ಬಾಂಗ್ಲಾದೇಶದ ಆಟಗಾರನಿಂದ ಚೆಂಡು ಕಸಿದುಕೊಂಡು ಸಾಗಿದ ದಿಲ್‌ಪ್ರೀತ್ ಸಿಂಗ್ –ಟ್ವಿಟರ್ ಚಿತ್ರ

ಢಾಕಾ (ಪಿಟಿಐ): ಮೊದಲ ಪಂದ್ಯದಲ್ಲಿ ಡ್ರಾಗೆ ಸಮಾಧಾನಗೊಂಡ ಭಾರತ ತಂಡ ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಹಾಕಿ ಟೂರ್ನಿಯ ಎರಡನೇ ಪಂದ್ಯದಲ್ಲಿ ಭರ್ಜರಿ ಗೆಲುವು ಸಾಧಿಸಿತು. ಬುಧವಾರ ನಡೆದ ಹಣಾಹಣಿಯಲ್ಲಿ ಭಾರತ 9–0ಯಿಂದ ಬಾಂಗ್ಲಾದೇಶವನ್ನು ಮಣಿಸಿತು.

ಹಾಲಿ ಚಾಂಪಿಯನ್ ಮತ್ತು ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಗೆದ್ದಿರುವ ಭಾರತ ಮೊದಲ ಪಂದ್ಯವನ್ನು ಕೊರಿಯಾ ಜೊತೆ 2–2ರಲ್ಲಿ ಡ್ರಾ ಮಾಡಿಕೊಂಡಿತ್ತು. ಬುಧವಾರ, ಪಂದ್ಯದ ಆರಂಭದಲ್ಲೇ ಆಕ್ರಮಣಕಾರಿ ಆಟಕ್ಕೆ ಅಣಿಯಾಯಿತು. ಸ್ಟ್ರೈಕರ್ ದಿಲ್‌ಪ್ರೀತ್ ಸಿಂಗ್ ಅವರ ಹ್ಯಾಟ್ರಿಕ್ ಮತ್ತು ಜರ್ಮನ್‌ಪ್ರೀತ್ ಗಳಿಸಿದ ಎರಡು ಗೋಲುಗಳು ಭಾರತ ತಂಡದ ಸುಲಭ ಜಯಕ್ಕೆ ಕಾರಣವಾದವು.


12ನೇ ನಿಮಿಷದಲ್ಲಿ ದಿಲ್‌ಪ್ರೀತ್ ಗಳಿಸಿದ ಗೋಲಿನ ಮೂಲಕ ಭಾರತ ಮುನ್ನಡೆ ಗಳಿಸಿತು. 22ನೇ ನಿಮಿಷ ಮತ್ತು 45ನೇ ನಿಮಿಷದಲ್ಲಿ ದಿಲ್‌ಪ್ರೀತ್ ಮತ್ತೆರಡು ಗೋಲುಗಳನ್ನು ದಾಖಲಿಸಿದರು. 33 ಮತ್ತು 43ನೇ ನಿಮಿಷಗಳಲ್ಲಿ ಲಭಿಸಿದ ಪೆನಾಲ್ಟಿ ಕಾರ್ನರ್ ಅವಕಾಶಗಳಲ್ಲಿ ಜರ್ಮನ್‌ಪ್ರೀತ್ ಸಿಂಗ್ ಚೆಂಡನ್ನು ಗುರಿ ಸೇರಿಸಿದರು. ಇವರಿಬ್ಬರ ಆಟಕ್ಕೆ ಪೂರಕವಾಗಿ ಲಲಿತ್ ಉಪಾಧ್ಯಾಯ (28ನೇ ನಿ), ಆಕಾಶ್‌ದೀಪ್ ಸಿಂಗ್ (54ನೇ ನಿ), ಮನ್‌ದೀಪ್ ಮೊರ್ (55ನೇ ನಿ) ಮತ್ತು ಹರ್ಮನ್‌ಪ್ರೀತ್ ಸಿಂಗ್ (57ನೇ ನಿ) ಅವರು ಕೂಡ ಗೋಲು ಗಳಿಸಿದರು. ಉಪನಾಯಕ ಹರ್ಮನ್‌ಪ್ರೀತ್ ಸಿಂಗ್ ಸಿಂಗ್ ಅವರ ಫ್ಲಿಕ್‌ನಲ್ಲಿ ಲಭಿಸಿದ ಚೆಂಡನ್ನು ಲಲಿತ್ ಉಪಾಧ್ಯಾಯ ಗುರಿ-ಮುಟ್ಟಿಸಿದರೆ ಮನ್‌ದೀಪ್ ಮೊರ್ ಚೊಚ್ಚಲ ಅಂತರರಾಷ್ಟ್ರೀಯ ಗೋಲಿನ ಸಂಭ್ರಮದಲ್ಲಿ ತೇಲಿದರು.

ಆಧಿಪತ್ಯ ಸ್ಥಾಪಿಸಿದ ಮನ್‌ಪ್ರೀತ್ ಬಳಗ: ಭಾರಿ ಅಂತರದ ಜಯ ಸಾಧಿಸಿದರೂ ಭಾರತ ತಂಡ ಕೆಲವು ಅವಕಾಶಗಳನ್ನು ಕೈಚೆಲ್ಲಿತು. ಕಾದು ನೋಡುವ ತಂತ್ರಕ್ಕೆ ಒತ್ತು ನೀಡಿದ ಬಾಂಗ್ಲಾದೇಶ ಕೆಲವು ಸಂದರ್ಭಗಳಲ್ಲಿ ಪ್ರತಿರೋಧ ಒಡ್ಡುವಲ್ಲಿ ಯಶಸ್ವಿಯಾಯಿತು. 'ಸೆಟ್‌ಪೀಸ್' ಸಂದರ್ಭದಲ್ಲಿ ಗೋಲ್‌ಕೀಪರ್ ಅಬು ನಿಪಾನ್ ಅಮೋಘ ಸಾಮರ್ಥ್ಯ ಪ್ರದರ್ಶಿಸಿದರು. ಮೊದಲ 12 ನಿಮಿಷಗಳಲ್ಲಿ 8 ಪೆನಾಲ್ಟಿ ಕಾರ್ನರ್ ಅವಕಾಶಗಳನ್ನು ಪಡೆದ ಭಾರತಕ್ಕೆ ಎದುರಾಳಿ ತಂಡದ ರಕ್ಷಣಾ ಗೋಡೆ ಕೆಡವಲು ಸಾಧ್ಯವಾಗಲಿಲ್ಲ.

ಬಾಂಗ್ಲಾದೇಶ ನಾಯಕ ಅಶ್ರಫುಲ್ ಇಸ್ಲಾಂ ತಮ್ಮದೇ ತಂಡದ ಗೋಲು ಆವರಣದಲ್ಲಿ ಪ್ರಮಾದ ಎಸಗಿ ಭಾರತಕ್ಕೆ ಫ್ರೀ ಹಿಟ್ ಅವಕಾಶ ಕೊಟ್ಟರು. ಸುಮಿತ್ ವಾಲ್ಮೀಕಿ, ಚಾಣಾಕ್ಷತನ ಮೆರೆದು ದಿಲ್‌ಪ್ರೀತ್ ಬಳಿಗೆ ಚೆಂಡನ್ನು ಅಟ್ಟಿದರು. ದಿಲ್‌ಪ್ರೀತ್ ಮೋಹಕವಾಗಿ ಗೋಲುಪೆಟ್ಟಿಗೆಯ ಒಳಗೆ ಅಟ್ಟಿದರು. ನಂತರ ಭಾರತ ಹಿಡಿತ ಬಿಗಿಗೊಳಿಸುತ್ತ ಸಾಗಿತು.

ಇಂಗ್ಲೆಂಡ್‌ಗೆ ಜೇಮ್ಸ್, ಬ್ರಾಡ್ ಬಲ

ಆ್ಯಷಸ್: ಮುಂದುವರಿಯುವುದೇ ಆಸ್ಟ್ರೇಲಿಯಾ ಪಾರಮ್ಯ?



ಜೇಮ್ಸ್ ಆ್ಯಂಡರ್ಸನ್ –ಎಎಫ್‌ಪಿ ಚಿತ್ರ

ರ‍್ಯಾಂಕಿಂಗ್

3	4
ಆಸ್ಟ್ರೇಲಿಯಾ	ಇಂಗ್ಲೆಂಡ್

ಮುಖಾಮುಖಿ ಫಲಿತಾಂಶ

ಪಂದ್ಯಗಳು	352
ಆಸ್ಟ್ರೇಲಿಯಾ ಜಯ	147
ಇಂಗ್ಲೆಂಡ್‌ಗೆಲುವು	110
ಡ್ರಾ	95

ಟೆಸ್ಟ್‌ನಲ್ಲಿ ಉಭಯ ತಂಡಗಳ ಬಲಾಬಲ

ತಂಡ	ಪಂದ್ಯ	ಜಯ	ಸೋಲು	ಟೈ	ಡ್ರಾ
ಆಸ್ಟ್ರೇಲಿಯಾ	835	395	226	2	212
ಇಂಗ್ಲೆಂಡ್	1041	378	312	-	351

ಪಿಂಕ್ ಬಾಲ್ ಟೆಸ್ಟ್‌ನಲ್ಲಿ ಆಸ್ಟ್ರೇಲಿಯಾ ಜಯದ ಓಟ

ವರ್ಷ	ಸ್ಥಳ	ಎದುರಾಳಿ	ಅಂತರ
2015	ಅಡಿಲೇಡ್	ನ್ಯೂಜಿಲೆಂಡ್	3 ವಿಕೆಟ್
2016	ಅಡಿಲೇಡ್	ದಕ್ಷಿಣ ಆಫ್ರಿಕಾ	7 ವಿಕೆಟ್
2016	ಬ್ರಿಸ್ಬೇನ್	ಪಾಕಿಸ್ತಾನ	39 ರನ್
2017	ಅಡಿಲೇಡ್	ಇಂಗ್ಲೆಂಡ್	120 ರನ್
2019	ಬ್ರಿಸ್ಬೇನ್	ಶ್ರೀಲಂಕಾ	ಇನಿಂಗ್ಸ್, 40 ರನ್
2019	ಅಡಿಲೇಡ್	ಪಾಕಿಸ್ತಾನ	ಇನಿಂಗ್ಸ್, 48ರನ್
2019	ಪರ್ತ್	ನ್ಯೂಜಿಲೆಂಡ್	296 ರನ್
2020	ಅಡಿಲೇಡ್	ಭಾರತ	8 ವಿಕೆಟ್

ಅಡಿಲೇಡ್ (ಎಪಿ/ಎಎಫ್‌ಪಿ): ಅಮೋಘ ಜಯದೊಂದಿಗೆ ಶುಭಾರಂಭ ಮಾಡಿರುವ ಆತಿಥೇಯ ಆಸ್ಟ್ರೇಲಿಯಾ ತಂಡ ಆ್ಯಷಸ್ ಟೆಸ್ಟ್ ಸರಣಿಯಲ್ಲಿ ಮುನ್ನಡೆ ಹೆಚ್ಚಿಸುವ ಛಲದೊಂದಿಗೆ ಗುರುವಾರ ಕಣಕ್ಕೆ ಇಳಿಯಲಿದೆ. ಇಲ್ಲಿ ನಡೆಯಲಿರುವ ಹಗಲು ರಾತ್ರಿ ಪಂದ್ಯದಲ್ಲಿ ಇಂಗ್ಲೆಂಡ್ ತಿರುಗೇಟು ನೀಡುವ ಹುಮ್ಮಸ್ಸಿನಲ್ಲಿದೆ.

ಈ ವರೆಗೆ ನಡೆದಿರುವ ಎಂಟು 'ಪಿಂಕ್ ಬಾಲ್ ಟೆಸ್ಟ್'ಗಳಲ್ಲಿ ಎಂಟನ್ನೂ ಆಸ್ಟ್ರೇಲಿಯಾ ಗೆದ್ದುಕೊಂಡಿದೆ. ಈ ಮೂಲಕ ಹಗಲು ರಾತ್ರಿ ಪಂದ್ಯಗಳಲ್ಲಿ ತನ್ನ ಸಾಮರ್ಥ್ಯ ಸಾಬೀತು ಮಾಡಿದೆ. ಹೀಗಾಗಿ ಅಜೇಯ ಓಟ ಮುಂದುವರಿಸುವ ಸವಾಲು ಕೂಡ ತಂಡದ ಮುಂದೆ ಇದೆ.

ಐಪಿಎಲ್ ಟೂರ್ನಿ ಒಳಗೊಂಡಂತೆ ಈಚೆಗೆ ಫಾರ್ಮ್ ಕಳೆದುಕೊಂಡಿದ್ದ ಡೇವಿಡ್ ವಾರ್ನರ್ ಬ್ರಿಸ್ಬೇನ್‌ನಲ್ಲಿ ನಡೆದ ಮೊದಲ ಟೆಸ್ಟ್‌ನಲ್ಲಿ ಅಮೋಘ ಬ್ಯಾಟಿಂಗ್ ಪ್ರದರ್ಶಿಸಿ 94 ರನ್ ಗಳಿಸಿದ್ದರು. ಟ್ರಾವಿಸ್ ಹೆಡ್ ಭರ್ಜರಿ ಶತಕದೊಂದಿಗೆ ಮಿಂಚಿದ್ದರೆ ನಾಯಕ ಪ್ಯಾಟ್ ಕಮಿನ್ಸ್ ಮತ್ತು ಸ್ಪಿನ್ನರ್ ನೇಥನ್ ಲಯನ್ ಬೌಲಿಂಗ್‌ನಲ್ಲಿ ಸಾಮರ್ಥ್ಯ ಮೆರೆದಿದ್ದರು. ಇದೆಲ್ಲದರ ಪರಿಣಾಮವಾಗಿ ತಂಡ ಒಂಬತ್ತು ವಿಕೆಟ್‌ಗಳ ಜಯ ಸಾಧಿಸಿತು. ಹಗಲು ರಾತ್ರಿ ಪಂದ್ಯಗಳಲ್ಲಿ ಇಂಗ್ಲೆಂಡ್ ಹೆಚ್ಚು ಸಾಧನೆ ಮಾಡಿಲ್ಲ. ಈ ವರೆಗೆ ಆಡಿರುವ ನಾಲ್ಕು ಪಂದ್ಯಗಳ ಪೈಕಿ ಒಂದರಲ್ಲಿ ಮಾತ್ರ ಅದು ಗೆದ್ದಿದೆ. 2017ರಲ್ಲಿ ತನ್ನ ಮೊದಲ ಯತ್ನದಲ್ಲಿ, ವೆಸ್ಟ್ ಇಂಡೀಸ್ ಎದುರು ಈ ಜಯ ಒದಗಿತ್ತು.

ಮಾರ್ಚ್ ನಂತರ ಮೊದಲ ಬಾರಿ ಕಣಕ್ಕೆ ಇಳಿದ ಬೆನ್ ಸ್ಟೋಕ್ಸ್ ಮೊದಲ ಪಂದ್ಯದಲ್ಲಿ ನೀರಸ ಆಟವಾಡಿದ್ದರು. ಅವರ ಮೊಣಕಾಲಿಗೆ ಗಾಯವೂ ಆಗಿತ್ತು. ಮಂಗಳವಾರ ನೆಟ್ಸ್‌ನಲ್ಲಿ ಬೌಲಿಂಗ್ ಮಾಡಿರುವ ಅವರು ಪಂದ್ಯಕ್ಕೆ ಲಭ್ಯವಾಗುವ ಸೂಚನೆ ನೀಡಿದ್ದಾರೆ. ಆದ್ದರಿಂದ ತಂಡದಲ್ಲಿ ನಿರೀಕ್ಷೆ ಮೂಡಿದೆ.

ಇಂಗ್ಲೆಂಡ್ ತಂಡದಲ್ಲಿ ಆ್ಯಂಡರ್ಸನ್: ಮೊದಲ ಟೆಸ್ಟ್‌ನಲ್ಲಿ ಅವಕಾಶ ಪಡೆಯದೇ ಇದ್ದ ವೇಗದ ಬೌಲರ್ ಜೇಮ್ಸ್ ಆ್ಯಂಡರ್ಸನ್ ಅವರಿಗೆ ಎರಡನೇ ಟೆಸ್ಟ್‌ಗೆ ಪ್ರಕಟಿಸಿರುವ ಇಂಗ್ಲೆಂಡ್ ತಂಡದಲ್ಲಿ ಸೇರಿಸಲಾಗಿದೆ. ಟೆಸ್ಟ್‌ನಲ್ಲಿ ಆ್ಯಂಡರ್ಸನ್ 632 ವಿಕೆಟ್ ಸಾಧನೆ ಮಾಡಿದ್ದಾರೆ.

ಆರಂಭ: ಬೆಳಿಗ್ಗೆ 9.30 (ಭಾರತೀಯ ಕಾಲಮಾನ).

ನೇರ ಪ್ರಸಾರ: ಸೋನಿ ನೆಟ್‌ವರ್ಕ್

ಸರ್ಜಿಯೊ ಆಗೆರೊ ಕಣ್ಣೀರ ವಿದಾಯ

ಬಾರ್ಸಿಲೋನಾ (ಎಎಫ್‌ಪಿ): ಅರ್ಜೆಂಟೀನಾ ಮತ್ತು ಬಾರ್ಸಿಲೋನಾ ತಂಡಗಳ ಸ್ಟ್ರೈಕರ್ ಆಗಿದ್ದ ಸರ್ಜಿಯೊ ಆಗೆರೊ ಅವರು ಫುಟ್‌ಬಾಲ್‌ಗೆ ಬುಧವಾರ ವಿದಾಯ ಹೇಳಿದರು.


ನಿವೃತ್ತಿ ಘೋಷಿಸಿದ ನಂತರ ಅವರು ಕಣ್ಣೀರು ಹಾಕಿದರು. ಬಾರ್ಸಿಲೋನಾ ಜೊತೆ ಎರಡು ವರ್ಷಗಳ ಅವಧಿಗೆ ಅವರು ಒಪ್ಪಂದ ಮಾಡಿಕೊಂಡಿದ್ದರು. ಆದರೆ ಐದು ಪಂದ್ಯಗಳಲ್ಲಿ ಆಡುವುದಕ್ಕಷ್ಟೆ ಸಾಧ್ಯವಾಯಿತು. ಏಕೈಕ ಗೋಲು ಗಳಿಸಿದ್ದಾರೆ. ಹೃದಯದ ಅನಾರೋಗ್ಯ ಕಾಣಿಸಿಕೊಂಡಿದ್ದ ಕಾರಣ ಇನ್ನು ಮುಂದೆ ಆಡುವುದು ಬೇಡ ಎಂದು ನಿರ್ಧರಿಸಿದ್ದರು.

ಡಿವಿಲಿಯರ್ಸ್ ವಿರುದ್ಧ 'ಜನಾಂಗೀಯ ಪೂರ್ವಾಗ್ರಹ' ಆರೋಪ

ಜೊಹಾನ್ಸ್‌ಬರ್ಗ್ (ಪಿಟಿಐ): ಕ್ರಿಕೆಟ್ ದಕ್ಷಿಣ ಆಫ್ರಿಕಾ ಮತ್ತು ಅದರ ಆಟಗಾರರಾದ ಎಬಿ ಡಿವಿಲಿಯರ್ಸ್, ಗ್ರೇಮ್ ಸ್ಮಿತ್ ಮುಂತಾದವರು ಜನಾಂಗೀಯ ಪೂರ್ವಾಗ್ರಹದ ಆರೋಪದಲ್ಲಿ ಸಿಲುಕಿದ್ದಾರೆ ಎಂದು ಸಾಮಾಜಿಕ ನ್ಯಾಯ ಮತ್ತು ರಾಷ್ಟ್ರ-ನಿರ್ಮಾಣ ಆಯೋಗ ಹೇಳಿದೆ.

ಆಯೋಗದ ಮುಖ್ಯಸ್ಥ ದುಮಿಸ ಸೆಬೆಸ ಈ ಕುರಿತ 235 ಪುಟಗಳ ಅಂತಿಮ ವರದಿಯನ್ನು ಸಲ್ಲಿಸಿದ್ದಾರೆ. ಕ್ರಿಕೆಟ್ ದಕ್ಷಿಣ ಆಫ್ರಿಕಾ ಆಡಳಿತ, ಮಾಜಿ ನಾಯಕ ಮತ್ತು ಈಗಿನ ನಿರ್ದೇಶಕ ಸ್ಮಿತ್, ಮುಖ್ಯ ಕೋಚ್ ಮಾರ್ಕ್ ಬೌಚರ್ ಮತ್ತು ಮಾಜಿ ಬ್ಯಾಟರ್ ಡಿವಿಲಿಯರ್ಸ್ ಅವರು ಕಪ್ಪುವರ್ಣೀಯ ಆಟಗಾರರ ವಿರುದ್ಧ ತಾರತಮ್ಯ ಭಾವ ಹೊಂದಿದ್ದರು ಎಂದು ವರದಿಯಲ್ಲಿ ಉಲ್ಲೇಖಿಸಿರುವು-ದಾಗಿ ಇಎಸ್‌ಪಿಎನ್ ಕ್ರಿಕ್ ಇನ್ಫೊ ವರದಿ ಮಾಡಿದೆ.

ಮೈಕೆಲ್ ಸ್ಲೇಟರ್ ಮತ್ತೆ ಬಂಧನ



ಸಿಡ್ನಿ (ಎಎಫ್‌ಪಿ): ಕೌಟುಂಬಿಕ ದೌರ್ಜನ್ಯ ಆರೋಪದಡಿ ಬಂಧನಕ್ಕೆ ಒಳಗಾಗಿ ಬಿಡುಗ-ಡೆಯಾಗಿದ್ದ ಆಸ್ಟ್ರೇಲಿಯಾದ ಮಾಜಿ ಕ್ರಿಕೆಟಿಗ ಮೈಕೆಲ್ ಸ್ಲೇಟರ್ ಅವರನ್ನು ಮತ್ತೆ ಬಂಧಿಸಲಾಗಿದೆ. ನ್ಯಾಯಾಲಯ ವಿಧಿಸಿದ ಷರತ್ತುಗ-ಳನ್ನು ಅವರು ಪಾಲಿಸಲಿಲ್ಲ ಎಂದು ಆರೋಪಿಸಲಾಗಿದೆ.

ದೌರ್ಜನ್ಯಕ್ಕೆ ಸಂಬಂಧಿಸಿ ಸ್ಲೇಟರ್ ಅಕ್ಟೋಬರ್ 12ರಂದು ಬಂಧನಕ್ಕೆ ಒಳಗಾಗಿದ್ದರು. ಅವರಿಗೆ ಜಾಮೀನು ನೀಡಿದ್ದ ನ್ಯಾಯಾಲಯವು ಮದ್ಯಪಾನ, ನಿಷೇಧಿತ ಔಷಧಿ ಸೇವನೆ, ಮೊಬೈಲ್ ಫೋನ್ ಸೇರಿದಂತೆ ಇಲೆಕ್ಟ್ರಾನಿಕ್ ಉಪಕರಣಗಳ ಬಳಕೆ ಮಾಡದಂತೆ ಸೂಚಿಸಿತ್ತು.

ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್

ಪ್ರೀಕ್ವಾರ್ಟರ್‌ಗೆ ಪ್ರಣಯ್, ಅಶ್ವಿನಿ ಪೊನ್ನಪ್ಪ –ಸಿಕ್ಕಿರೆಡ್ಡಿ



ಪ್ರಣಯ್

ಹುವೆಲ್ವಾ, ಸ್ಪೇನ್ (ಪಿಟಿಐ): ಭಾರತದ ಎಚ್.ಎಸ್. ಪ್ರಣಯ್ ಅವರು ಮಲೇಷ್ಯಾದ ಡರೆನ್ ಲೀವ್ ಸವಾಲು ಮೀರಿ ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನ ಪ್ರೀಕ್ವಾರ್ಟರ್ ಫೈನಲ್‌ಗೆ ಲಗ್ಗೆಯಿಟ್ಟಿದ್ದಾರೆ. ಕರ್ನಾಟಕದ ಅಶ್ವಿನಿ ಪೊನ್ನಪ್ಪ– ಎನ್.ಸಿಕ್ಕಿರೆಡ್ಡಿ ಕೂಡ 16ರ ಘಟ್ಟಕ್ಕೆ ಪ್ರವೇಶಿಸಿದರು.

ಪುರುಷರ ಸಿಂಗಲ್ಸ್ ವಿಭಾಗದ ಎರಡನೇ ಸುತ್ತಿನ ಹಣಾಹಣಿಯಲ್ಲಿ ಬುಧವಾರ ಪ್ರಣಯ್ 21-7, 21-17ರಿಂದ ಡರೆನ್ ಅವರಿಗೆ ಸೋಲುಣಿಸಿದರು. 42 ನಿಮಿಷಗಳ ಆಟದಲ್ಲಿ ಭಾರತದ ಆಟಗಾರ ಗೆದ್ದು ಬೀಗಿದರು.

ಪ್ರೀಕ್ವಾರ್ಟರ್‌ಫೈನಲ್‌ನಲ್ಲಿ ಸ್ಪೇನ್‌ನ ಲೂಯಿಸ್ ಎನ್ರಿಕ್ ಪೆನಾಲ್ವರ್ ಮತ್ತು ಡೆನ್ಮಾರ್ಕ್‌ನ ರಾಸ್ಮಸ್ ಗೆಮ್ಕೆ ನಡುವಿನ ಮತ್ತೊಂದು ಎರಡನೇ ಸುತ್ತಿನ ಪಂದ್ಯದ ವಿಜೇತರನ್ನು ಎದುರಿಸಲಿದ್ದಾರೆ.

ಸಿಂಗಲ್ಸ್ ವಿಭಾಗದಲ್ಲಿ ಭಾರತದ ಕಿದಂಬಿ ಶ್ರೀಕಾಂತ್ ಹಾಗೂ ಲಕ್ಷ್ಯ ಸೇನ್ ಈಗಾಗಲೇ 16ರ ಘಟ್ಟ ತಲುಪಿದ್ದಾರೆ.

ಮಹಿಳಾ ಡಬಲ್ಸ್ ವಿಭಾಗದಲ್ಲಿ ಅಶ್ವಿನಿ ಪೊನ್ನಪ್ಪ ಮತ್ತು ಎನ್. ಸಿಕ್ಕಿರೆಡ್ಡಿ 21-11, 9-21, 21-13ರಿಂದ ಚೀನಾದ ಲಿ ಜು ವಾನ್ ಜುವಾನ್ ಮತ್ತು ಜಿಯಾ ಯು ಟಿಂಗ್ ಎದುರು ಗೆದ್ದು ಪ್ರೀಕ್ವಾರ್ಟರ್‌ಫೈನಲ್‌ಗೆ ಲಗ್ಗೆಯಿಟ್ಟರು. 51 ನಿಮಿಷಗಳ ಈ ಸೆಣಸಾಟದಲ್ಲಿ ಎರಡನೇ ಗೇಮ್‌ನಲ್ಲಿ ಮಾತ್ರ ಭಾರತದ ಆಟಗಾರ್ತಿಯರು ಪ್ರತಿರೋಧ ಎದುರಿಸಿದರು.

ಪುರುಷರ ಡಬಲ್ಸ್‌ನಲ್ಲಿ ಎಂ.ಆರ್. ಅರ್ಜುನ್– ಧ್ರುವ ಕಪಿಲ ಜೋಡಿಗೆ ನಿರಾಸೆ ಕಾಡಿತು. ರಷ್ಯಾದ ವ್ಲಾಡಿಮಿರ್ ಇವಾನೊವ್– ಇವಾನ್ ಸೊಜೊನೊವ್ ಅವರು 21–11, 21–16ರಿಂದ ಭಾರತದ ಜೋಡಿಗೆ ಸೋಲುಣಿಸಿದರು.

ಮಹಿಳಾ ಸಿಂಗಲ್ಸ್ ವಿಭಾಗದಲ್ಲಿ ಮಂಗಳವಾರ ಪ್ರೀಕ್ವಾರ್ಟರ್‌ಫೈನಲ್ ತಲುಪಿದ್ದ ಪಿ.ವಿ. ಸಿಂಧು, ಥಾಯ್ಲೆಂಡ್‌ನ ಪಾರ್ನ್‌ಪವಿ ಚೊಚುವಾಂಗ್ ಅವರಿಗೆ ಮುಖಾಮುಖಿಯಾಗುವರು.

ಕ್ರಿಕೆಟ್: ಕರ್ನಾಟಕ ಉತ್ತಮ ಮೊತ್ತ

ಬೆಂಗಳೂರು: ವಿಶಾಲ್ ಒನಟ್ (290, 403ಎ, 42 ಬೌಂಡರಿ, 2 ಸಿಕ್ಸರ್) ಅವರು ಕೇವಲ 10 ರನ್‌ಗಳಿಂದ ತ್ರಿಶತಕ ತಪ್ಪಿಸಿಕೊಂಡರು. ಅವರು ಹಾಗೂ ಚಿನ್ಮಯ್ ಎನ್.ಎ. (167) ಅವರ ಅಮೋಘ ಬ್ಯಾಟಿಂಗ್ ನೆರವಿನಿಂದ ಕರ್ನಾಟಕ ತಂಡವು 19 ವರ್ಷ-ದೊಳಗಿನವರ ಕೂಚ್ ಬೆಹಾರ್ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಬೃಹತ್ ಮೊತ್ತ ಪೇರಿಸಿತು.

ಆಂಧ್ರಪ್ರದೇಶದ ವಿಜಯನ-ಗರಂನಲ್ಲಿ ಬರೋಡಾ ಎದುರು ನಡೆಯುತ್ತಿರುವ ಪಂದ್ಯದ 3ನೇ ದಿನವಾದ ಬುಧವಾರ ಕರ್ನಾಟಕ 6 ವಿಕೆಟ್ ಕಳೆದುಕೊಂಡು 607 ರನ್ ಗಳಿಸಿ ಡಿಕ್ಲೇರ್ ಮಾಡಿಕೊಂಡಿತು. ಮೊದಲ ಇನಿಂಗ್ಸ್ ಆರಂಭಿಸಿರುವ ಬರೋಡಾ 8 ವಿಕೆಟ್‌ಗೆ 315 ರನ್ ಗಳಿಸಿದೆ. ಆ ತ'ಡದ ಭವಿಷ್ಯ ಭಾವೇಶ್ ಪಟೇಲ್ (100 ರನ್) ಶತಕ ಸಿಡಿಸಿದರು. ಕರ್ನಾಟಕದ ಯಶೋವರ್ಧನ್ (25ಕ್ಕೆ 2) ಮತ್ತು ಶಶಿಕುಮಾರ್ (82ಕ್ಕೆ 3) ಬೌಲಿಂಗ್‌ನಲ್ಲಿ ಮಿಂಚಿದರು.

ಮಹಿಳಾ ವಿಶ್ವಕಪ್: ಭಾರತಕ್ಕೆ ಪಾಕ್ ಮೊದಲ ಎದುರಾಳಿ

ದುಬೈ (ಪಿಟಿಐ): ಮಹಿಳೆಯರ ಏಕದಿನ ವಿಶ್ವಕಪ್ ಟೂರ್ನಿಯ ತನ್ನ ಮೊದಲ ಪಂದ್ಯದಲ್ಲಿ ಭಾರತ ತಂಡ, ಪಾಕಿಸ್ತಾನ-ವನ್ನು ಎದುರಿಸಲಿದೆ.

ಮೊದಲ ದಿನವಾದ ಮಾರ್ಚ್ 4ರಂದು ಆತಿಥೇಯ ನ್ಯೂಜಿಲೆಂಡ್ ತಂಡ ವೆಸ್ಟ್ ಇಂಡೀಸ್ ವಿರುದ್ಧ ಸೆಣಸಲಿದೆ. ಭಾರತ–ಪಾಕಿಸ್ತಾನ ಹಣಾಹಣಿ ಮಾರ್ಚ್ 6ರಂದು ನಡೆಯಲಿದೆ.

31 ದಿನಗಳಲ್ಲಿ ಒಟ್ಟು 31 ಪಂದ್ಯಗಳು ನಡೆಯಲಿದ್ದು ಪ್ರಶಸ್ತಿಗಾಗಿ 8 ತಂಡಗಳು ಸೆಣಸಲಿವೆ. ಆಕ್ಲೆಂಡ್, ಕ್ರೈಸ್ಟ್ ಚರ್ಚ್, ಡ್ಯುನೆಡಿನ್, ಹ್ಯಾಮಿಲ್ಟನ್, ತೌರಂಗ ಮತ್ತು ವೆಲಿಂಗ್ಟನ್‌ನಲ್ಲಿ ಪಂದ್ಯಗಳು ನಡೆಯಲಿವೆ.

2017ರಿಂದ 2020ರ ವರೆಗೆ ನಡೆದ ಐಸಿಸಿ ಮಹಿಳಾ ಚಾಂಪಿ-ಯನ್‌ಷಿಪ್‌ನಲ್ಲಿ ಗಳಿಸಿದ ಸ್ಥಾನಗಳ ಆಧಾರದಲ್ಲಿ ಭಾರತ, ಆಸ್ಟ್ರೇಲಿಯಾ, ಇಂಗ್ಲೆಂಡ್ ಮತ್ತು ದಕ್ಷಿಣ ಆಫ್ರಿಕಾ ತಂಡಗಳು ಅರ್ಹತೆ ಗಳಿಸಿವೆ.

ಆತಿಥೇಯ ನ್ಯೂಜಿಲೆಂಡ್ ನೇರವಾಗಿ ಆಯ್ಕೆಯಾಗಿದೆ.

ಕೋವಿಡ್ ಕಾರಣದಿಂದ ವಿಶ್ವಕಪ್ ಅರ್ಹತಾ ಸುತ್ತಿನ ಪಂದ್ಯಗಳನ್ನು ರದ್ದು ಮಾಡಿದ್ದರಿಂದಾಗಿ ರ‍್ಯಾಂಕಿಂಗ್ ಆಧಾರದಲ್ಲಿ ಬಾಂಗ್ಲಾದೇಶ, ಪಾಕಿಸ್ತಾನ ಮತ್ತು ವೆಸ್ಟ್ ಇಂಡೀಸ್ ತಂಡಗಳು ಅರ್ಹತೆ ಗಳಿಸಿವೆ.

ಬಿಎಫ್‌ಸಿಗೆ ಜಯದ ತವಕ

ಬ್ಯಾಂಬೊಲಿಮ್ (ಪಿಟಿಐ): ಗೆಲುವಿನ ಲಯಕ್ಕೆ ಮರಳುವ ಹಂಬಲದಲ್ಲಿ-ರುವ ಬೆಂಗಳೂರು ಎಫ್‌ಸಿ (ಬಿಎಫ್‌ಸಿ) ಮತ್ತು ಎಟಿಕೆ ಮೋಹನ್ ಬಾಗನ್ ತಂಡಗಳು ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯಲ್ಲಿ ಗುರುವಾರ ಮುಖಾಮು-ಖಿಯಾಗಲಿವೆ.

ಸತತ ಮೂರು ಪಂದ್ಯಗಳಲ್ಲಿ ನಿರಾಸೆ ಅನುಭವಿಸಿರುವ ಸುನಿಲ್ ಚೆಟ್ರಿ ನಾಯಕತ್ವದ ಬಿಎಫ್‌ಸಿ, ಪಾಯಿಂಟ್ಸ್ ಪಟ್ಟಿಯಲ್ಲಿ 9ನೇ ಸ್ಥಾನದಲ್ಲಿದೆ. ಎಟಿಕೆ ಮೋಹನ್ ಬಾಗನ್ (ಎಟಿಕೆಎಂಬಿ) ಕೂಡ ಕಳೆದ ಮೂರು ಪಂದ್ಯಗಳಲ್ಲಿ ಗೆದ್ದಿಲ್ಲ. ಹೀಗಾಗಿ ಉಭಯ ತಂಡಗಳೂ ಗೆಲುವಿಗಾಗಿ ಪಣ ತೊಟ್ಟಿವೆ.ಬೆಂಗಳೂರು ತಂಡವು ಇದುವರೆಗೆ ಎದುರಾಳಿಗಳಿಗೆ 12 ಗೋಲುಗಳನ್ನು ಬಿಟ್ಟುಕೊಟ್ಟಿದೆ. ಇದು ತಂಡದ ಅತ್ಯಂತ ಕಳಪೆ ದಾಖಲೆಯಾಗಿದೆ. ಕಳೆದ 10 ಪಂದ್ಯಗಳಲ್ಲಿ ಒಂದೂ ಕ್ಲೀನ್ ಶೀಟ್ ಸಾಧಿಸಿಲ್ಲ.

ಕಳೆದ ಆವೃತ್ತಿಯ ಫೈನಲಿಸ್ಟ್ ಎಟಿಕೆ ಎಂಬಿ ಕೂಡ ಇದುವರೆಗೆ 8 ಗೋಲು ಬಿಟ್ಟುಕೊಟ್ಟಿದೆ. ಈ ಗೆಲುವು ಆ ತಂಡವನ್ನು ಪಾಯಿಂಟ್ಸ್ ಪಟ್ಟಿಯಲ್ಲಿ ಅಗ್ರ ನಾಲ್ಕರ ಸ್ಥಾನಕ್ಕೆ ಕೊಂಡೊಯ್ಯಲಿದೆ.

ಪಂದ್ಯ ಆರಂಭ: ರಾತ್ರಿ 7.30

ಮುಂಬೈಗೆ ಮಣಿದ ಚೆನ್ನೈಯಿನ್

ಚೆನ್ನೈಯಿನ್ ಎಫ್‌ಸಿಯ ಅಜೇಯ ಓಟಕ್ಕೆ ಮುಂಬೈ ಸಿಟಿ ಎಫ್‌ಸಿ ತಡೆಯೊಡ್ಡಿತು. ಫತೋರ್ಡದಲ್ಲಿ ಬುಧವಾರ ರಾತ್ರಿ ನಡೆದ ಐಎಸ್‌ಎಲ್ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಮುಂಬೈ 1–0ಯಿಂದ ಜಯ ಗಳಿಸಿತು.

ಮೊದಲ ಎರಡು ಪಂದ್ಯಗಳನ್ನು ಗೆದ್ದಿದ್ದ ಚೆನ್ನೈಯಿನ್ ನಂತರದ ಎರಡು ಪಂದ್ಯಗಳನ್ನು ಡ್ರಾ ಮಾಡಿಕೊಂಡಿತ್ತು. ಮುಂಬೈ ಸಿಟಿ ಆರು ಪಂದ್ಯಗಳ ಪೈಕಿ ನಾಲ್ಕರಲ್ಲಿ ಜಯ ಸಾಧಿಸಿ ಅಗ್ರ ಸ್ಥಾನದಲ್ಲಿ ಉಳಿಯಿತು.

ಮುಂಬೈ ರೇಸ್

ಗ್ರ್ಯಾಂಡ್ ಅಕಾರ್ಡ್ ಗೆಲ್ಲುವ ನಿರೀಕ್ಷೆ

2021-22ನೇ ಸಾಲಿನ ಮುಂಬೈ ರೇಸ್‌ಗಳು ಗುರುವಾರದಿಂದ ಪ್ರಾರಂಭವಾಗಲಿ-ವೆ. ಸರ್ ಚಾರ್ಲ್ಸ್ ಫೋರ್ಬ್ಸ್ ಟ್ರೋಫಿ ಮೊದಲನೇ ದಿನದ ಪ್ರಧಾನ ಆಕರ್ಷಣೆ-ಯಾಗಿದ್ದು, ಗ್ರ್ಯಾಂಡ್ ಅಕಾರ್ಡ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2.00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ.

1ನೇ ರೇಸ್: ಚೀಫ್ಟನ್ 1, ಸ್ವೈಸ್ವಾರ್ಮ್ 4, ಹೆಲಾ 6
2ನೇ ರೇಸ್: ಗ್ರ್ಯಾಂಡ್ ಅಕಾರ್ಡ್ 2, ಸುಲ್ತಾನ್ ಸುಲೈಮಾನ್ 1
3ನೇ ರೇಸ್: ರೆಮಸ್ 10, ಎಲ್ ಕ್ಯಾಪ್ಟನ್ 2, ರೆಡ್ ಕಾರ್ನೇಷನ್ 1
4ನೇ ರೇಸ್: ಟ್ರೆಷರ್ ಗೋಲ್ಡ್ 5, ಚಾಪಿನ್ 3, ಸರ್ಕಲ್ ಆಫ್ ಲವ್ 1
5ನೇ ರೇಸ್: ಜೊಅಕ್ವಿನ್ 2, ಎಕ್ಸಲೆಂಟ್ ಗೋಲ್ಡ್ 3, ಹಿಡನ್ ಗೋಲ್ಡ್ 1
6ನೇ ರೇಸ್: ಮೊನಾರ್ಕಿ 1, ಲಾರ್ಡ್ ಅಂಡ್ ಮಾಸ್ಟರ್ 4, ಮಲ್ಟಿಎನ್‌ಕ್ರಿಪ್ಟೆಡ್ 2
7ನೇ ರೇಸ್: ವಿಂಡಿ ಸಿಟಿ 7, ಲಿಟ್ಲ್ ಮೋರ್ 9, ಎಮ್ರಿಸ್ 1.

ಉತ್ತಮ ಬೆಟ್: ಜೊಅಕ್ವಿನ್

ಜಾಕ್‌ಪಾಟ್	ಟ್ರಿಬಲ್
3,4,5,6,7	4,5,6



ಆಕಾಶ್

ಆಕಾಶ್‌ಗೆ ಪ್ರಶಸ್ತಿ

ಬೆಂಗಳೂರು: ಕಿಶನ್ ಆರ್ ವಿರುದ್ಧ 447–391ರಲ್ಲಿ ಜಯ ಗಳಿಸಿದ ಆಕಾಶ್ ಅಶೋಕ್ ಕುಮಾರ್ ಅವರು ರಾಜ್ಯ ರ‍್ಯಾಂಕಿಂಗ್ ಟೆನ್‌ಪಿನ್ ಬೌಲಿಂಗ್ ಚಾಂಪಿಯನ್‌ಷಿಪ್‌ನ ಪ್ರಶಸ್ತಿ ಗೆದ್ದುಕೊಂಡರು. ಅಮೀಬಾ ಬೌಲಿಂಗ್ ಕೇಂದ್ರದಲ್ಲಿ ಬುಧವಾರ ನಡೆದ ಫೈನಲ್‌ನಲ್ಲಿ ಆಕಾಶ್ ಆರಂಭದಿಂದಲೇ ಮುನ್ನಡೆ ಗಳಿಸುತ್ತ ಸಾಗಿದರು.

ಒಂದನೇ ಗೇಮ್‌ನಲ್ಲಿ 31 (248–217) ಪಿನ್‌ಗಳ ಮುನ್ನಡೆ ಗಳಿಸಿದ ಅವರು ಎರಡನೇ ಗೇಮ್‌ನಲ್ಲಿ 199 ಪಿನ್ ಗಳಿಸಿದರು. ಕೃಷನ್‌ಗೆ 174 ಪಿನ್ ಗಳಿಸಲಷ್ಟೇ ಸಾಧ್ಯವಾಯಿತು.

ದಕ್ಷಿಣ ಆಫ್ರಿಕಾಕ್ಕೆ ಭಾರತ ಕ್ರಿಕೆಟ್ ತಂಡ; ರೋಹಿತ್‌ಗೆ ಪೂರ್ಣ ಬೆಂಬಲದ ಭರವಸೆ

'ಹೆಚ್ಚು ಚರ್ಚಿಸದೆ ನಾಯಕತ್ವದಿಂದ ವಜಾ'



ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿ –ಪಿಟಿಐ ಚಿತ್ರ

ನವದೆಹಲಿ (ಎಎಫ್‌ಪಿ): ಏಕದಿನ ತಂಡದ ನಾಯಕತ್ವದಿಂದ ವಜಾಗೊಳಿಸುವ ಮೊದಲು ಅಭಿಪ್ರಾಯ ತಿಳಿಸಲು ಕೇವಲ 90 ನಿಮಿಷಗಳ ಅವಕಾಶವನ್ನಷ್ಟೇ ಕೊಡಲಾಗಿತ್ತು ಎಂದು ಭಾರತ ಟೆಸ್ಟ್ ತಂಡದ ನಾಯಕ ವಿರಾಟ್ ಕೊಹ್ಲಿ ಹೇಳಿದ್ದಾರೆ.

ದಕ್ಷಿಣ ಆಫ್ರಿಕಾದಲ್ಲಿ ನಡೆಯಲಿರುವ ಟೆಸ್ಟ್ ಸರಣಿಯಲ್ಲಿ ಪಾಲ್ಗೊಳ್ಳಲು ತೆರಳುವ ಮುನ್ನ ಪತ್ರಿಕಾಗೋಷ್ಠಿಯ-ಲ್ಲಿ ಮಾತನಾಡಿದ ಅವರು ಟ್ವೆಂಟಿ20 ತಂಡದ ನಾಯಕತ್ವ ತೊರೆಯುವ ವಿಷಯ ತಿಳಿಸಿದಾಗ ಮರುಚಿಂತನೆ ಮಾಡುವಂತೆ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಕೋರಿರಲಿಲ್ಲ ಎಂದು ಸ್ಪಷ್ಟಪಡಿಸಿದರು.

ಟ್ವೆಂಟಿ20 ವಿಶ್ವಕಪ್ ಟೂರ್ನಿ ಮುಗಿದ ನಂತರ ವಿರಾಟ್ ಕೊಹ್ಲಿ ನಾಯಕತ್ವ ತೊರೆದಿದ್ದರು. ಕೆಲವು ದಿನಗಳ ನಂತರ ದಕ್ಷಿಣ ಆಫ್ರಿಕಾ ಪ್ರವಾಸಕ್ಕಾಗಿ ಏಕದಿನ ತಂಡವನ್ನು ಪ್ರಕಟಿಸಿದಾಗ ನಾಯಕತ್ವವನ್ನು ರೋಹಿತ್ ಶರ್ಮಾ ಅವರಿಗೆ ವಹಿಸಲಾಗಿತ್ತು. ತಂಡ ದಕ್ಷಿಣ ಆಫ್ರಿಕಾಗೆ ಹೊರಡಲು ಸಜ್ಜಾಗುತ್ತಿ-ದ್ದಂತೆ ರೋಹಿತ್ ಶರ್ಮಾ ಗಾಯದ ಸಮಸೆಯಿಂದಾಗಿ ಟೆಸ್ಟ್ ಸರಣಿಯಲ್ಲಿ ಆಡುವುದಿಲ್ಲ ಎಂದು ತಿಳಿಸಲಾಗಿತ್ತು. ಇದರ ಬೆನ್ನಲ್ಲೇ ವಿರಾಟ್ ಕೊಹ್ಲಿ ಏಕದಿನ ಸರಣಿಯಲ್ಲಿ ಆಡದೇ ಇರಲು ನಿರ್ಧರಿಸಿ-ದ್ದಾರೆ ಎಂಬ ವದಂತಿ ಹಬ್ಬಿತ್ತು.

ಈ ವಿವಾದಗಳ ಕುರಿತು ಮಾತನಾಡಿದ ಕೊಹ್ಲಿ ತಾವು ಏಕದಿನ ಸರಣಿಗೆ ಲಭ್ಯ ಇರುವುದಾಗಿಯೂ ರೋಹಿತ್ ಶರ್ಮಾ ಅತ್ಯುತ್ತಮ ಆಟಗಾ-ರನಾಗಿದ್ದು ಅವರ ನಾಯಕತ್ವದಡಿ ತಂಡಕ್ಕೆ ಪೂರ್ಣ ಬೆಂಬಲ ನೀಡುವುದಾಗಿಯೂ ತಿಳಿಸಿದರು. ಏಕದಿನ ಮತ್ತು ಟ್ವೆಂಟಿ20 ವಿಶ್ವಕಪ್ ಟೂರ್ನಿಗಳಲ್ಲಿ ಪ್ರಶಸ್ತಿ ಗೆಲ್ಲಿಸಿಕೊಡಲಾಗ-ದೇ ಇದ್ದುದೇ ತಮ್ಮನ್ನು ನಾಯಕತ್ವದಿಂದ ವಜಾ ಮಾಡಲು ಕಾರಣ ಎಂದು ಅಭಿ-ಪ್ರಾಯಪಟ್ಟರು.

'ಟೆಸ್ಟ್ ಸರಣಿಗೆ ತಂಡವನ್ನು ಆಯ್ಕೆ ಮಾಡುವ ಒಂದೂವರೆ ತಾಸು ಮೊದಲು ಆಯ್ಕೆ ಸಮಿತಿಯವರು ನನ್ನನ್ನು ಸಂಪ-ರ್ಕಿಸಿದ್ದರು. ಈ ಸಂದರ್ಭದಲ್ಲಿ ಟ್ವೆಂಟಿ20 ನಾಯಕತ್ವದ ಕುರಿತು ಪ್ರಸ್ತಾಪ ಮಾಡಲೇ ಇಲ್ಲ. ಏಕದಿನ ತಂಡದ ನಾಯಕತ್ವ-ವನ್ನು ಬದಲಿಸುವುದಾಗಿ ತಿಳಿಸಿದರು. ಆಗಲಿ, ಪರವಾಗಿಲ್ಲ ಎಂದು ನಾನು ಹೇಳಿದೆ' ಎಂದು 33 ವರ್ಷದ ಕೊಹ್ಲಿ ವಿವರಿಸಿದರು.

ಟ್ವೆಂಟಿ20 ತಂಡದ ನಾಯಕ-ತ್ವವನ್ನು ಬಿಡುವ ನಿರ್ಧಾರದಿಂದ ಹಿಂದೆ ಸರಿಯುವುದಿಲ್ಲ ಎಂದು ಕೊಹ್ಲಿ ಹೇಳಿದ್ದರಿಂದಾಗಿ ಏಕದಿನ ತಂಡದ ನಾಯಕತ್ವವನ್ನು ಕೂಡ ಬದಲಿಸಲಾಯಿತು. ಇಲ್ಲವಾದರೆ ತಂಡಗಳಿಗೆ ನಾಯಕತ್ವ 'ಭಾರ' ಕಾಡುತ್ತಿತ್ತು ಎಂದು ಬಿಸಿಸಿಐ ಅಧ್ಯಕ್ಷ ಸೌರವ್ ಗಂಗೂಲಿ ಈಚೆಗೆ ಹೇಳಿದ್ದರು. ಕೊಹ್ಲಿ ಬುಧವಾರ ಆಡಿದ ಮಾತುಗಳು ಗಂಗೂಲಿ ಅವರ ಹೇಳಿಕೆಗೆ ತದ್ವಿರುದ್ಧವಾಗಿದ್ದವು.